ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ

ಆದ

ಯೋಗವಾಸಿಷ್ಠ

ಸಂಪುಟ ೧೦

ಉಪಶಮ ಪ್ರಕರಣ

[illegible]ವುಡು ಕನ್ನಡಿಸಿದುದು.

ಶ್ರೀ ಶ್ರೀನಿವಾಸ ಪ್ರೆಸ್, ಬೆಂಗಳೂರು ಸಿಟಿ.
೧೯೪೮

ಯೋಗವಾಸಿಷ್ಠ

ಸಂಪುಟ ೧೦

ಉಪಶಮ ಪ್ರಕರಣ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೦.

ಉಪಶಮ ಪ್ರಕರಣ

ದೇವುಡು ಕನ್ನಡಿಸಿದುದು

ಶ್ರೀ ಶ್ರೀನಿವಾಸ ಪ್ರೆಸ್
ನಂ. ೬, ಟ್ಯಾಂಕ್ ಬಂಡ್ ರೋಡ್, ಕಳಾಸಿಪಾಳ್ಯ
ಬೆಂಗಳೂರು ಸಿಟಿ
೧೯೪೮

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರು ಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲ ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ"ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠಸಿದ್ಧಾಂತವೂ ಶಾಂಕರಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ: ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನ ಮಾಡುತ್ತಾರೆ.

ಭೋಗೈಕಪರಾಯಣವಾದ ಆಧುನಿಕ ನಾಗರಿಕತೆಯ ದೇಶಗಳಲ್ಲಿಯೇ ಹುಟ್ಟಿಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲಪನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜ ವೈಭವವೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು ವ್ಯವಹಾರ, ಉತ್ಪತ್ತಿ, ಸ್ಥಿತಿ, ಉಪಶಮುಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ–ಅನುವಾದ ಸಹಿತವಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವತಂತ್ರವು. ಅವಶ್ಯವೆಂದು ತೋರಿದ ಕಡೆಗಳಲ್ಲಿಯೂ ಗ್ರಂಥಾಂತರಗಳಲ್ಲಿ ಹೇಳಿರುವುದು ಓದುಗರ ಗಮನಕ್ಕೆ ಬಂದು ಓದಿದ ವಿಷಯವು ದೃಢವಾಗಲೆಂದೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರಲ್ಲಿ

ವಿದ್ಯಾವಂತರಾಗಬೇಕೆಂಬ ಆಸೆ ಬಲವಾಗುತ್ತಿದೆ. ಕಲಿತ ವಿದ್ಯೆಗಳೆಲ್ಲವೂ ಸಾರ್ಥಕವಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಲೇಬೇಕೆಂಬ ಪ್ರಾಚೀನರ ಉಪದೇಶವಿಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ. ಇಂತಹ ಸಂಧಿಕಾಲದಲ್ಲಿ ಗ್ರಂಥವು ಸುಲಭ ಕನ್ನಡದಲ್ಲಿ ಬರುವುದು ಕನ್ನಡಲೋಕದ ಸುದೈವ. ಕಾವ್ಯಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ ಸುಲಭವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ: ಶ್ರದ್ಧೆಯೊಂದಿದ್ದರೆ ಸಾಕು: ಅದರಿಂದ ಈ ಗ್ರಂಥದಿಂದ ಆಗುವ ಲೋಕೋಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ. ಅವರು. ಈ ಗ್ರಂಥದ ಪಠನ ಪಾಠನಗಳಿಂದ ಲಭಿಸುವ ಶ್ರೇಯಸ್ಸೆಲ್ಲವೂ ಮಹಾಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರಮೋಪಕಾರವನ್ನು ನೆನೆದು ಸಮಸ್ತಸನ್ಮಂಗಳಾನಿಭವಂತು ಎಂದು ಹರಕೆಹೊರುತ್ತಾನೆ.

ಬೆಂಗಳೂರು
೧೪-೮-೧೯೪೮

ದೇವುಡು

ವಿಷಯಸೂಚಿಕೆ

|| ಶ್ರೀಃ ||

ಯೋಗವಾಸಿಷ್ಠಃ

ಉಪಶಮ ಪ್ರಕರಣಂ ಪಂಚಮಂ

ಪ್ರಥಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಅಥ ಸ್ಥಿತಿಪ್ರಕರಣಾದನಂತರಮಿದಂ ಶೃಣು ।
ಉಪಶಮಪ್ರಕರಣಂ ಜ್ಞಾತಂ ನಿರ್ವಾಣಕಾರಿ ಯತ್ ॥ ೧ ॥

ಶ್ರೀ ವಾಲ್ಮೀಕಿರುವಾಚ :—

ಶರತ್ತಾರಕಿತಾಕಾಶಸ್ತಿಮಿತಾಯಾಂ ಸುಸಂಸದಿ ।
ಕಥಯತ್ಯೇವಮಾಹ್ಲಾದಿ ವಸಿಷ್ಠೇ ಪಾವನಂ ವಚಃ ॥ ೨ ॥

ಶ್ರೀ

ಉಪಶಮ ಪ್ರಕರಣ

ಮೊದಲನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧. ಸ್ಥಿತಿ ಪ್ರಕರಣವಾದಮೇಲೆ ಇದನ್ನು ಕೇಳು. ಈ ಉಪಶಮ ಪ್ರಕರಣವನ್ನು ತಿಳಿದುದೇ ಆದರೆ ಇದು ನಿರ್ವಾಣವನ್ನು ದೊರಕಿಸಿಕೊಡುವುದು.

ಶ್ರೀ ವಾಲ್ಮೀಕಿಯು ಹೇಳಿದನು :—

೨. ಶರತ್ಕಾಲದಲ್ಲಿ ನಕ್ಷತ್ರಗಳಿಂದ ಕೂಡಿದ್ದರೂ ಶಾಂತವಾಗಿರುವ ಆಕಾಶದಂತೆ ಆ ರಾಜಸಭೆಯೆಲ್ಲವೂ ಇತ್ತು. ವಸಿಷ್ಠ ಮುನಿಯು ಆಹ್ಲಾದಕರವೂ ಪಾವನವೂ ಆದ (ತತ್ತ್ವೋಪದೇಶ) ವಾಕ್ಯಗಳನ್ನು ನುಡಿಯುತ್ತಿದ್ದನು.

ಶ್ರವಣಾರ್ಥಿತ್ವಮೌನಸ್ಥಪಾರ್ಥಿವೇ ಸಂಸದಂತರೇ ।
ನಿರ್ವಾತ ಇವ ನಿಸ್ಪಂದಕಮಲೇ ಕಮಲಾಕರೇ ॥ ೩ ॥

ವಿಲಾಸಿನೀಷು ಸಂಶಾಂತಮದಮೋಹಬಲಾಸು ಚ ।
ಶಮಮಂತಃ ಪ್ರಯಾಂತೀಷು ಚಿರಪ್ರವ್ರಜಿತಾಸ್ವಿವ ॥ ೪ ॥

ಕರಾಂಭೋರುಹಹಂಸೇಷು ಸ್ಥಿತೇಷು ಶ್ರವಣಾದಿವ ।
ಮುಕ್ತಘುರ್ಘುರವಾದೇಷು ವಾಯಸೇಷು ತರಾವಿವ ॥ ೫ ॥

ನಾಸಾಗ್ರಪರಿವಿಶ್ರಾಂತತರ್ಜನ್ಯಂಗುಲಿಕೋಟಿಷು ।
ವಿಚಾರಯತ್ಸು ವಿಜ್ಞಾನಕಲಾಂ ತಜ್ಞೇಷು ರಾಜಸು ॥ ೬ ॥

---

೩. ಆ ಸಭೆಯಲ್ಲಿದ್ದ ರಾಜರೆಲ್ಲರೂ ವಸಿಷ್ಠೋಪದೇಶವನ್ನು ಕೇಳಬೇಕೆಂಬ ಶ್ರದ್ಧೆಯಿಂದ ಮೌನವಾಗಿದ್ದರು. (ಅದನ್ನು ನೋಡಿದರೆ) ಗಾಳಿಯಿಲ್ಲದಿರುವಾಗ ನಿಶ್ಚಲವಾಗಿರುವ ಕಮಲಗಳನ್ನುಳ್ಳ ಸರೋವರದಂತೆ ಇತ್ತು.

೪. ಅಲ್ಲಿದ್ದ ವಿಲಾಸಿನಿಯರಿಗೂ ಮದ ಮೋಹಗಳು ಶಾಂತವಾಗಿ, ಬಹು ಕಾಲದಿಂದ ಯೋಗಿನಿಯರಾಗಿರುವವರಿಗೆ ಆಗುವಂತೆ, ಅವರ ಹೃದಯದಲ್ಲಿ ಶಮವು ತಾಂಡವವಾಡಿತು.

೫. (ಅವರು ಸ್ತಬ್ಧರಾಗಿರಲು, ಅವರ ಕೈಯಲಿ ಸ್ಥಿರವಾಗಿದ್ದ ಚಾಮರಗಳು) ಕರಕಮಲಗಳಲ್ಲಿ ಹಂಸಗಳು ವಸಿಷ್ಠೋಪದೇಶಗಳನ್ನು ಕೇಳಿ ಹಾಗೆಯೇ ಸಮಾಧಿಸ್ಥ ನಾದುವೋ ಎಂಬಂತಿತ್ತು. ಕಾಗೆಗಳು ಮರಗಳಲ್ಲಿಸುಮ್ಮನಿರುವಂತೆ, ಕೈಯ ಬಳೆಗಳು ನಿಶ್ಶಬ್ದವಾಗಿದ್ದುವು.

೬. ತತ್ವಜ್ಞರಾದ ರಾಜರು ಮೂಗಿನಮೇಲೆ ಬೆರಳನ್ನಿಟ್ಟುಕೊಂಡು (ವಾಸಿಷ್ಠ) ವಿಜ್ಞಾನ ಸೌಂದರ್ಯವನ್ನು ಭಾವಿಸುತ್ತಿದ್ದರು.

ರಾಮೇ ವಿಕಾಸಮಾಯಾತೇ ಪ್ರಭಾತ ಇವ ಪಂಕಜೇ ।
ಪರಿತ್ಯಕ್ತತಮಃಪೀಠೇ ಸೂರ್ಯೋದಯ ಇವಾಂಬರೇ ॥ ೭ ॥

ಆಕರ್ಣಯತಿ ವಾಸಿಷ್ಠೀರ್ಗಿರೌ ದಶರಥೇ ರಸಾತ್ ।
ಕಲಾಪಿನೀವ ಜೀಮೂತನಿರ್ಹ್ರಾದಾನ್ಮುಕ್ತವರ್ಷಣಾತ್ ॥ ೮ ॥

ಆಹೃತ್ಯ ಸರ್ವಭೋಗೇಭ್ಯೋ ಮನೋ ಮರ್ಕಟಚಂಚಲಂ ।
ಶ್ರವಣಂ ಪ್ರತಿ ಯತ್ನೇನ ಸಾರಣೇ ಮಂತ್ರಿಣಿ ಸ್ಥಿತೇ ॥ ೯ ॥

ವಸಿಷ್ಠೋಕ್ತ್ಯಾ ಪರಿಜ್ಞಾತಸ್ವಾತ್ಮಸೀಂದುಕಲಾಮಲೇ ।
ಲಕ್ಷ್ಮಣೇ ವಿಲಸಲ್ಲಕ್ಷ್ಮ್ಯೇ ಶಿಕ್ಷಾಬಲವಿಚಕ್ಷಣೇ ॥ ೧೦ ॥

ಶತ್ರುಘ್ನೇ ಶತ್ರುದಲನೇ ಚೇತಸಾ ಪೂರ್ಣತಾಂ ಗತೇ ।
ಆಲಮಾನಂದಮಾಯಾತೇ ರಾಕಾಚಂದ್ರೋಪಮೇ ಸ್ಥಿತೇ ॥ ೧೧ ॥

---

೭. ಶ್ರೀರಾಮನು ಪ್ರಭಾತದಲ್ಲಿ ಅರಳುವ ಪಂಕಜದಂತೆ ವಿಕಸಿತ (ಬುದ್ಧಿ) ಯಾದನು: ಸೂರ್ಯೋದಯವಾಗಲು ಆಕಾಶವೆಲ್ಲವೂ ಅಂಧಕಾರ ಶೂನ್ಯವಾಗುವಂತೆ (ಆತನಿಗೂ ಅಜ್ಞಾನ ನಿವೃತ್ತಿಯಾಯಿತು.)

೮. ಮಳೆಗರೆಯುತ್ತಿರುವ ಮೋಡದ ಗರ್ಜನೆಯನ್ನು ಆಲೈಸುವ ನವಿಲಿನಂತೆ ದಶರಥನು ವಸಿಷ್ಠವಾಕ್ಯಗಳನ್ನು ವಿಶ್ವಾಸದಿಂದ ಶ್ರದ್ಧೆಯಿಂದ ಕೇಳುತ್ತಿದ್ದನು.

೯. ಚಪಲವಾದ ಕಪಿಯಂತಿರುವ ಮನಸನ್ನು ಸಮಸ್ತ ವಿಷಯಗಳಿಂದಲೂ ಉಪಸಂಹಾರ ಮಾಡಿ ಸಾರಣನೆಂಬ ಮಂತ್ರಿಯು ಪ್ರಯತ್ನ ಪುರಸ್ಸರವಾಗಿ ಶ್ರವಣಕ್ಕಾಗಿ ಸ್ಥಿರನಾಗಿ ಕುಳಿತಿದ್ದನು.

೧೦. ಗುರುಶಿಕ್ಷೆಯಿಂದ ವಿಚಕ್ಷಣನಾದ ಲಕ್ಷ್ಮಣನು ವಸಿಷ್ಠವಾಕ್ಯದಿಂದ ಆತ್ಮಸ್ವರೂಪವನ್ನು ನಿರ್ಮಲವಾದ ಚಂದ್ರಕಲೆಯನ್ನು ಕಾಣುವಂತೆ ಕಂಡು ಅದರ ಧ್ಯಾನದಲ್ಲಿದ್ದನು.

೧೧. ಶತ್ರು ಸಂಹಾರಕನಾದ ಶತ್ರುಘ್ನನು ತನ್ನ ಹೃದಯದಲ್ಲಿ ಪೂರ್ಣತ್ವವನ್ನು ಹೊಂದಿ, ಆನಂದವನ್ನು ಅನುಭವಿಸಿ, ಪೂರ್ಣಚಂದ್ರನಂತೆ ಇದ್ದನು.

ಸುಮಿತ್ರೇ ಮಂತ್ರಿತಾಂ ಯಾತೇ ಮಾನಸೇ ದುಃಖಶೀಲಿತೇ ।
ವಿಕಾಸಿಹೃದಯೋ ಜಾತೇ ತತ್ಕಾಲ ಇವ ಪಂಕಜೇ ॥ ೧೨ ॥

ತತ್ರಸ್ಥೇಷು ತಥಾನ್ಯೇಷು ತದಾ ಮುನಿಷು ರಾಜಸು ।
ಸುಧೌತಚಿತ್ತರತ್ನೇಷು ಪ್ರೋಲ್ಲಸತ್ಸ್ವಿವ ಚೇತಸಾ ॥ ೧೩ ॥

ಉದಭೂತ್ಪೂರಯನ್ನಾಶಾಃ ಕಲ್ಪಾಭ್ರರವಮಾಂಸಲಃ ।
ಅಥ ಮಧ್ಯಾಹ್ನಶಂಖಾನಾಮಬ್ಧಿಘೋಷಸಮಃ ಸ್ವನಃ ॥ ೧೪ ॥

ಮಹತಾ ತೇನ ಶಬ್ದೇನ ತಿರೋಧಾನಂ ಮುನೇರ್ಗಿರಃ ।
ಯಯುರ್ಜಲದನಾದೇನ ಕೋಕಿಲಧ್ವನಯೋ ಯಥಾ ॥ ೧೫ ॥

ಮುನಿರಂತರಯಾಂಚಕ್ರೇ ಸ್ವಾಂ ವಾಚಮಥ ಸಂಸದಿ ।
ಚಿತಸಾರೋ ಗುಣಃ ಕೇನ ಮಹತಾ ಸಮುದೀರ್ಯತೇ ॥ ೧೬ ॥

---

೧೨. ಸುಮಿತ್ರನೆಂಬ ಮಂತ್ರಿಯು, ದುಃಖಶೀಲವಾದ ತನ್ನ ಮನಸ್ಸು ವಸಿಷ್ಠೋಪದೇಶದಿಂದ ಮಿತ್ರನಾಗಲು, ಕಮಲದಂತೆ ಅರಳಿದ ಹೃದಯವುಳ್ಳವನಾದನು.

೧೩. ಅಲ್ಲಿದ್ದ ಇತರ ರಾಜರೂ ಮುನಿಗಳೂ ತಮ್ಮ ತಮ್ಮ ಚಿತ್ತವೆಂಬ ರತ್ನಗಳನ್ನು ಚೆನ್ನಾಗಿ ತೊಳೆದುಕೊಂಡು, ಮನಸ್ಸಿನಲ್ಲಿ ಸಂತೋಷಪೂರ್ಣರಾದರು.

೧೪. ಆಗ, ದಿಕ್ಕುಗಳನ್ನೆಲ್ಲ ತುಂಬುತ್ತ, ಪ್ರಳಯಕಾಲದ ಮೇಘದ ಧ್ವನಿಯಂತಿದ್ದರೂ ಮನೋಹರವಾಗಿ, ಸಮುದ್ರಘೋಷ ಸಮಾನವಾದ ಮಧ್ಯಾಹ್ನ ಶಂಖಧ್ವನಿಯು ಮೊಳಗಿತು.

೧೫. ಆ ಮಹಾಶಬ್ದದಿಂದ, ಕೋಕಿಲಧ್ವನಿಯು ಮೇಘ ಗರ್ಜನದಿಂದ ಮುಳುಗುವಂತೆ, ವಸಿಷ್ಠ ವಚನಗಳು ನಿಂತುವು.

೧೬. ವಸಿಷ್ಠ ಮಹರ್ಷಿಯು ಸಭೆಯಲ್ಲಿ ಮಾತನಾಡುತ್ತಿದ್ದುದನ್ನು ನಿಲ್ಲಿಸಿದನು. ಯಾವ ಮಹನೀಯನು ತಾನೇ ತನ್ನ ಗುಣಕ್ಕೆ ಪ್ರಕಾಶವಿಲ್ಲದಿರುವಾಗ ಅವನ್ನು ಪ್ರಕಟಿಸುವನು ?

ಮುಹೂರ್ತಮಾತ್ರಂ ವಿಶ್ರಮ್ಯ ಶ್ರುತ್ವಾ ಮಧ್ಯಾಹ್ನನಿಃಸ್ವನಂ ।
ಘನೇ ಕೋಲಾಹಲೇ ಶಾಂತೇ ರಾಮಂ ಮುನಿರುವಾಚ ಹ ॥ ೧೭ ॥

ಶ್ರೀವಸಿಷ್ಠ ಉವಾಚ :—

ರಾಮಾದ್ಯತನಮೇತಾವದಾಹ್ನಿಕಂ ಕಥಿತಂ ಮಯಾ ।
ಪ್ರಾತರನ್ಯತ್ತು ವಕ್ಷ್ಯಾಮೋ ವಕ್ತವ್ಯಮರಿಮರ್ದನ ॥ ೧೮ ॥

ಇದಂ ನಿಯತಿತಃ ಪ್ರಾಪ್ತಂ ಕರ್ತವ್ಯಂ ತದ್ದ್ವಿಜನ್ಮನಾಂ ।
ಮಧ್ಯಾಹ್ನಮುಪಪನ್ನಂ ಯತ್ಕರ್ತವ್ಯಂ ನಾವಸೀದತಿ ॥ ೧೯ ॥

ತ್ವಮಪ್ಯುತ್ತಿಷ್ಠ ಸುಭಗ ಸಮಸ್ತಾಚಾರಸತ್ಕ್ರಿಯಾಂ ।
ಆಚರಾಚಾರಚತುರ ಸ್ನಾನದಾನಾರ್ಜನಾದಿಕಾಂ ॥ ೨೦ ॥

---

೧೭. ಮಧ್ಯಾಹ್ನ ಶಂಖಧ್ವನಿಯನ್ನು ಕೇಳಿ ವಸಿಷ್ಠನು ಒಂದು ಮುಹೂರ್ತ ಮಾತ್ರ ಸುಮ್ಮನಿದ್ದು ಘನವಾದ ಆ ಕೋಲಾಹಲವೆಲ್ಲವೂ ಶಾಂತವಾದಮೇಲೆ ರಾಮನನ್ನು ಕುರಿತು ಹೀಗೆ ಹೇಳಿದನು :—

ಶ್ರೀ ವಸಿಷ್ಠನು ಹೇಳಿದನು :—

೧೮. ರಾಮ, ಈ ದಿನ ಇಷ್ಟು ಹೇಳಿರುವೆನು, ಮುಂದೆ ಹೇಳಬೇಕಾದುದನ್ನು ನಾಳೆ ಹೇಳೋಣ.

೧೯. ಮಧ್ಯಾಹ್ನವಾಯಿತು. ದ್ವಿಜರಿಗೆ ನಿಯಾಮಕವಾಗಿರುವ ಕಾರ್ಯಗಳನ್ನು ಮಾಡುವ ಕಾಲವಿದು. ಕರ್ತವ್ಯಕ್ಕೆ ಲೋಪ ಬರಬಾರದು.

೨೦. ನೀನೂ ಕೂಡ ಏಳು. ಎಲೈ ಸೌಭಾಗ್ಯವಂತನೆ, ಸಮಸ್ತವಾದ ಆಚಾರಾದಿ ಸತ್ಕ್ರಿಯೆಗಳನ್ನೂ ಸ್ನಾನ ದಾನ ಅರ್ಚನಾದಿಗಳನ್ನೂ ಆಚಾರ ಚತುರನೇ, ಆಚರಿಸು.

ಇತ್ಯುಕ್ತ್ವಾ ಮುನಿರುತ್ತಸ್ಥೌ ಸಮಂ ದಶರಥಃ ಪ್ರಭುಃ ।
ಸಸದಾಃ ಸೇಂದುರಾದಿತ್ಯ ಉದಯಾದ್ರಿತಟಾದಿವ ॥ ೨೧ ॥

ತಯೋರುತ್ತಿಷ್ಠತೋಃ ಸರ್ವಾ ಸಭೋತ್ಥಾತುಮಕಂಪತ್ ।
ಮಂದವಾತಪರಾಮೃಷ್ಟಾ ನಲಿನೀವಾಲಿಲೋಚನಾ ॥ ೨೨ ॥

ಉತ್ತಸ್ಥೌ ಸಾವತಂಸೋತ್ಥಭೃಂಗಮಂಡಲಮಂಡಿತಾ ।
ಕರಿಸೇನೇವ ಸಂಧ್ಯಾದ್ರಾವಾಲೋಲಕರಪುಷ್ಕರಾ ॥ ೨೩ ॥

ಪರಸ್ಪರಾಂಗ ಸಂಘಟ್ಟಚೂರ್ಣಿತಾಂಗದಮಂಡಲೀ ।
ರತ್ನಪೂರ್ಣಾರುಣಾಂಭೋದಸಂಧ್ಯಾಸಮಯಸೂಚನೀ ॥ ೨೪ ॥

---

೨೧. ಎಂದು ಹೇಳಿ ವಸಿಷ್ಠ ಮುನೀಂದ್ರನು ಮೇಲಕ್ಕೆ ಎದ್ದನು. ಜೊತೆಯಲ್ಲಿಯೇ ದಶರಥನೂ ಏಳಲು ಉದಯಾದ್ರಿತಟದಲ್ಲಿ ಸೂರ್ಯನು ಚಂದ್ರನೊಡನೆ ಎದ್ದಂತಾಯಿತು. ಸಭಾ ಜನರೂ ಎದ್ದರು.

೨೨. ಅವರಿಬ್ಬರೂ ಏಳುತ್ತಲೂ ಸರ್ವ ಸಭೆಯೂ ಎದ್ದಿತು. ಅದನ್ನು ನೋಡಿದರೆ, ದುಂಬಿಗಳೆಂಬ ಕಣ್ಣುಗಳಿಂದ ಕೂಡಿರುವ ಕಮಲದ ಲತೆಯು ಸಣ್ಣ ಗಾಳಿಯಿಂದ ಅಲೆದಂತಾಯಿತು.

೨೩. ಸಭಾ ಜನರು ಮುಡಿದಿದ್ದ ಮಾಲಿಕೆಗಳಿಂದ ಭೃಂಗಗಳು ಎದ್ದುವು. ವಿಂಧ್ಯಾದ್ರಿ ತಟದಲ್ಲಿ ಸೊಂಡಿಲನ್ನು ಅಲ್ಲಾಡಿಸಿಕೊಂಡು ಆನೆಯ ಹಿಂಡು ಏಳುವಂತೆ ಸಭಿಕರು ಎದ್ದರು.

೨೪. ಒಬ್ಬರಿಗೊಬ್ಬರಿಗೆ ತಗುಲಿ ಆಭರಣಗಳು ಚೂರುಚೂರಾಗಿ ಬಿದ್ದು ರತ್ನಗಳು ಚೆಲ್ಲಾಡಿ ಸಂಜೆಯ ಕಾಲದ ಮೋಡಗಳು ಚೂರಾಗಿ ಬಿದ್ದುವೋ ಎಂಬಂತಿತ್ತು.

ಸತತದುತ್ತಂಸವಿಭ್ರಾಂತಭೃಂಗೋಪಹಿತ ಘುಂಘುಮಾ ।
ಮುಕುಟೋದ್ದಾಮವಿದ್ಯೋತ ಶಕ್ರಚಾಪೀಕೃತಾಂಬರಾ ॥ ೨೫ ॥

ಕಾಂತಾಲತಾಹಸ್ತದಲ ಚಾರುಚಾಮರಮಂಜರೀ ।
ವನಲೇಖೇವ ವಿಕ್ಷುಬ್ಧವರ ವಾರಣಮಂಡಲಾ ॥ ೨೬ ॥

ಕಚತ್ಕಟಕಭಾ ರಕ್ತೀಕೃತಾನ್ಯೋನ್ಯ ತತಾಂಬರಾ ।
ವಾತವ್ಯಾಧೂತಪುಷ್ಪೇವ ಮಂದಾರವನಮಾಲಿಕಾ ॥ ೨೭ ॥

ಕರ್ಪೂರಕಣನೀಹಾರರಜಿತಾಮಲವಾರಿದಾ ।
ಶರದ್ದಿಕ್ತಟಮಾಲೇವ ಪ್ರಸ್ನಾತಾಶೇಷಭೂಮಿಕಾ ॥ ೨೮ ॥

---

೨೫. ಧರಿಸಿದ ಮಾಲಿಕೆಗಳು ಜಾರುತ್ತಿರಲು, ಅವುಗಳಿಂದ ಎದ್ದ ದುಂಬಿಗಳು ಘುಂಘುಂಗಾನ ಮಾಡುತ್ತಿದ್ದುವು. ತಲೆಯ ಕಿರೀಟಗಳ ರತ್ನಕಾಂತಿಯಿಂದ ಆಕಾಶದಲ್ಲಿ ಇಂದ್ರಧನುಸ್ಸು ಕಾಣುತ್ತಿತ್ತು.

೨೬. ಅಲ್ಲಿದ್ದ (ಚಾಮರಧಾರಿಣಿಯರಾದ) ಹೆಣ್ಣುಗಳೆಂಬ ಲತೆಗಳ ಕೈಗಳೆಂಬ ದಳಗಳಲ್ಲಿ ಮನೋಹರವಾದ ಚಾಮರಗಳೆಂಬ ಪುಷ್ಪಮಂಜರಿಗಳು ಹಾರಾಡುತ್ತಿರಲು, ಚೆದರಿರುವ ಆನೆಗಳು ಓಡಾಡುತ್ತಿರುವ ವನರಾಜಿಯಂತಿತ್ತು.

೨೭. ಆ ಸಭಾ ಜನರ ರತ್ನ ಕಟಕಗಳ ಕಾಂತಿಯಿಂದ ಅವರ ವಸ್ತ್ರಗಳೆಲ್ಲವೂ ಕೆಂಪಾಗಿ ವಾಯುವಿಗೆ ಸಿಕ್ಕಿ ಅಲ್ಲಾಡಿದ ಹೂಗಳಿಂದ ಉದುರಿದ ಪರಾಗದಿಂದ ಕೆಂಪಾಗಿರುವ ಮಂದಾರ ವೃಕ್ಷಗಳ ಪಂಕ್ತಿಯೋ ಎಂಬಂತಿತ್ತು.

೨೮. ಆ ಸಭಾ ಮಂಟಪದಿಂದ ಮೇಲಕ್ಕೆ ಹಾರಿದ ಕರ್ಪೂರ ಧೂಳಿಯು ಅಂತರಿಕ್ಷದಲ್ಲಿ ಮೋಡವಾದಂತೆ ಇರಲು, (ಕಾಶಪುಷ್ಪಗಳಿಂದಲೂ ಸಣ್ಣ ಮಂಜಿನಿಂದಲೂ ಕೂಡಿರುವ) ಶರತ್ಕಾಲದ ದಿಕ್ತಟಗಳೂ ಭೂಮಿಯೂ ಇದ್ದಂತೆ ಇತ್ತು.

ಲೋಲಾಮೌಳಿಮಣಿಪ್ರಾಂತ ಪಾಟಲಾಂಬರಕೋಟರಾ ।
ಸಂಧ್ಯೇವಾ ಫುಲ್ಲನೀಲಾಂಚ ಕಾರ್ಯಸಂಹಾರಕಾರಿಣೀ ॥ ೨೯ ॥

ರತ್ನಾಂಶುಸಲಿಲಾಪೂರ ಮುಖಪದ್ಮನಿರಂತರಾ ।
ಪದ್ಮಿನೀವಾಲಿವನಿತಾ ನೂಪುರಾರವಸಾರಸಾ ॥ ೩೦ ॥

ಸಂತತಾ ಸಾ ಸಭೋತ್ತಸ್ಥೌ ಭೂಭೃಚ್ಛತಸಮಾಕುಲಾ ।
ಭೂತಸಂತತಿಸಂಭ್ರಾಂತಾ ಸೃಷ್ಟಿರ್ನವಮಿವೋದಿತಾ ॥ ೩೧ ॥

ಪ್ರಣಮ್ಯಾಥ ನೃಪಂ ಭೂಪಾ ನಿರ್ಯಯುರ್ನೃಪಮಂದಿರಾತ್ ।
ಶಕ್ರಚಾಪೀಕೃತಾ ರತ್ನೈರಂಬುಧೇರಿವ ವೀಚಯಃ ॥ ೩೨ ॥

---

೨೯. ಸುಂದರವಾದ ಕಿರೀಟ ರತ್ನಗಳ ಕಾಂತಿಯಿಂದ ಆಕಾಶವು ಪಾಟಲ ವರ್ಣವಾಗಿ ಕನ್ನೈದಿಲೆಗಳು ಅರಳಿರುವ ಸಂಜೆಯಂತೆ ಶೋಭಿಸಿತು. ಆದಕ್ಕೆ ತಕ್ಕಂತೆ ಆ ಕಾಲವೂ ಸಂಜೆಯಂತೆಯೇ ಸರ್ವ ಕಾರ್ಯಗಳನ್ನೂ ಉಪಸಂಹಾರ ಮಾಡುವುದಾಯಿತು.

೩೦. ರತ್ನಕಾಂತಿಯೆಂಬ ನೀರಿನಿಂದ ತುಂಬಿ, ಮುಖಪದ್ಮಗಳೆಂಬ ಕಮಲ ಗಳಿಂದ ಇಟ್ಟಣಿಸಿ, ನೂಪುರ ಧ್ವನಿಗಳೆಂಬ ಸಾರಸ ಕೂಜಿತಗಳಿರಲು. ಆ ಸಭಾ ಮಂಟಪವು ಕಮಲದ ಕೊಳದಂತಾಯಿತು.

೩೧. ನಾನಾ ಭೂತ ಸಂತತಿಗಳಿಂದ ಕೂಡಿ, ನೂರಾರು ಭೂಭೃತ್ತು (ರಾಜರು: ಪರ್ವತಗಳು) ಗಳಿಂದ ಕೂಡಿ ಒಂದೇ ಸಮನಾಗಿ ಹುಟ್ಟಿರುವ ಸೃಷ್ಟಿ ಯಂತೆ, ಸಭೆಯು ಎದ್ದಿತು.

೩೨. ಮಾಂಡಲಿಕರೆಲ್ಲರೂ ದಶರಥನಿಗೆ ನಮಸ್ಕಾರಮಾಡಿ ಅರಮನೆಯಿಂದ ಹೊರಟರು. (ಅದನ್ನು ಕಂಡರೆ) ರತ್ನಗಳಿಂದ ಚೆಲ್ಲುವ ಕಾಂತಿಯಿಂದ ಇಂದ್ರ- ಧನುವನ್ನು ರಚಿಸುತ್ತಾ ಸಮುದ್ರದಿಂದ ಹೊರಡುವ ತರಂಗಗಳೋ ಎನ್ನುವಂತಿತ್ತು.

ಸುಮಂತ್ರೋ ಮಂತ್ರಿಣಶ್ಚೈವ ವಸಿಷ್ಠಮಥ ಭೂಮಿಪಂ ।
ಪ್ರಣಮ್ಯ ಜಗ್ಮುಃ ಸ್ನಾನಾಯ ರಸವಿಜ್ಞಾನಕೋವಿದಾಃ ॥ ೧೩ ॥

ವಾಮದೇವಾದಯಶ್ಚಾನ್ಯೇ ವಿಶ್ವಾಮಿತ್ರಾದಯಸ್ತಥಾ ।
ವಸಿಷ್ಠಂ ಪುರತಃ ಕೃತ್ವಾ ತಸ್ಥುರಾವರ್ಜನೋನ್ಮುಖಾಃ ॥ ೧೪ ॥

ರಾಜಾ ದಶರಥಸ್ತತ್ರ ಪೂಜಯಿತ್ವಾ ಮುನಿವ್ರಜಂ ।
ತದ್ವಿಸೃಷ್ಟೋ ಜಗಾಮಾಥ ಸ್ವಕಾರ್ಯಾರ್ಥಮರಿಂದಮಃ ॥ ೧೫ ॥

ವನಂ ವನಾಸ್ಪದಾ ಜಗ್ಮುರ್ವ್ಯೋಮ ವ್ಯೋಮನಿವಾಸಿನಃ ।
ನಗರಂ ನಾಗರಾಶ್ಚೈವ ಪ್ರಾತರಾಗಮನಾಯ ತೇ ॥ ೧೬ ॥

ಮಹೀಪತಿವಸಿಷ್ಠಾಭ್ಯಾಂ ಪ್ರಣಯಾತ್ಪ್ರಾರ್ಥಿತಃ ಪ್ರಭುಃ ।
ವಸಿಷ್ಠಸದ್ಮನಿ ನಿಶಾಂ ವಿಶ್ವಾಮಿತ್ರೋಽತ್ಯವಾಹಯತ್ ॥ ೧೭ ॥

---

೧೩. ಸುಮಂತ್ರನೂ ಮಂತ್ರಿಗಳೂ ವಸಿಷ್ಠನನ್ನೂ ಭೂಪತಿಯನ್ನೂ ಬೀಳ್ಕೊಂಡು, ಉಪದೇಶಾಮೃತದ ಸವಿಯನ್ನು ಸ್ಮರಿಸುತ್ತಾ ಸ್ನಾನಾದಿಗಳಿಗಾಗಿ ತೆರಳಿದರು.

೧೪. ವಾಮದೇವ ವಿಶ್ವಾಮಿತ್ರಾದಿಗಳು, ವಸಿಷ್ಠನನ್ನು ಮುಂದುಮಾಡಿಕೊಂಡು ಹೊರಡಲು ಸಿದ್ಧರಾದರು.

೧೫. ದಶರಥರಾಜನು ಮುನಿ ಸಮೂಹವನ್ನು ಪೂಜೆಮಾಡಿ, ಅವರನ್ನು ಬೀಳ್ಕೊಟ್ಟು, ಶತ್ರುಮರ್ದನಾದ ಆತನು ಸ್ವಕಾರ್ಯಾರ್ಥವಾಗಿ ತೆರಳಿದನು.

೧೬. ವನವಾಸಿಗಳು ವನಕ್ಕೂ, ವ್ಯೋಮ ನಿವಾಸಿಗಳು ವ್ಯೋಮಕ್ಕೂ, ನಗರ ವಾಸಿಗಳು ನಗರಕ್ಕೂ, ಬೆಳಗ್ಗೆ ಬರುವೆವೆಂದು ಹೇಳಿ ಹೋದರು.

೧೭. ದಶರಥನೂ ವಸಿಷ್ಠನೂ ವಿಶ್ವಾಸದಿಂದ ಪ್ರಾರ್ಥಿಸಲು, ವಿಶ್ವಾಮಿತ್ರ ಮುನೀಂದ್ರನು ವಸಿಷ್ಠರ ಆಶ್ರಮದಲ್ಲಿಯೇ ಆ ರಾತ್ರಿಯನ್ನು ಕಳೆದನು.

ವಸಿಷ್ಠಃ ಸಹ ವಿಪ್ರೇಂದ್ರೈಃ ಪಾರ್ಥಿವೈರ್ಮುನಿಭಿಸ್ತಥಾ |
ಉಪಾಸ್ಯಮಾನೋ ರಾಮಾದ್ಯೈಃ ಸರ್ವೈರ್ದಶರಥಾತ್ಮಜೈಃ || ೩೮ ||

ಜಗಾಮ ಸ್ವಾಶ್ರಮಂ ಶ್ರೀಮಾನ್ಸರ್ವಲೋಕನಮಸ್ಕೃತಃ |
ಅನುಯಾತಃ ಸುರೌಘೇನ ಬ್ರಹ್ಮಲೋಕಮಿವಾಂಜಸಃ || ೩೯ ||

ತಸ್ಮಾತ್ಪ್ರದೇಶಾದ್ರಾಮಾದೀನ್ಸ್ವನರ್ದಶರಥಾತ್ಮಜಾನ್ |
ಸರ್ವಾನ್ವಿಸರ್ಜಯಾಮಾಸ ಪಾದೋಪಾಂತೇ ನತಾನಸೌ || ೪೦ ||

ನಭಶ್ಚರಾನ್ಧರಣಿಚರಾ ನಧಶ್ಚರಾ
ನ್ವಿಸೃಜ್ಯ ಸಂಸ್ತುತಗುಣಗೋಚರಾಂಶ್ಚ ತಾನ್ ||
ಯಥಾಕ್ರಮಂ ಸ್ವಗೃಹಮುದಾರಸತ್ವವಾಂ
ಶ್ಚಕಾರ ತಾಂ ದ್ವಿಜಜನ ವಾಸರಕ್ರಿಯಾಂ || ೪೧ ||

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ
ದೇವದೂತೋಕ್ತೇ ಮೋಕ್ಷೋಪಾಯೇಷು ಉಪಶಮಪ್ರಕರಣೇ
ಆಹ್ನಿಕವರ್ಣನಂ ನಾಮ ಪ್ರಥಮಃ ಸರ್ಗಃ ||

೩೮-೯. ವಸಿಷ್ಠಮುನಿಯು ವಿಪ್ರೇಂದ್ರರಿಂದಲೂ, ಪಾರ್ಥಿವರಿಂದಲೂ, ಮುನಿಗಳಿಂದಲೂ, ರಾಮಾದಿ ದಶರಥ ಪುತ್ರರಿಂದಲೂ, ಸೇವೆಯನ್ನು ಕೈಗೊಂಡು, ಎಲ್ಲರಿಂದಲೂ, ನಮಸ್ಕಾರಮಾಡಿಸಿಕೊಳ್ಳುತ್ತಾ, ದೇವತೆಗಳ ಸಮೂಹವು ತನ್ನ ಹಿಂದೆ ಬರುತ್ತಿರಲು, ತನ್ನ ಲೋಕಕ್ಕೆ ಹೋಗುವ ಬ್ರಹ್ಮನಂತೆ ತನ್ನ ಆಶ್ರಮಕ್ಕೆ ತೆರಳಿದನು.

೪೦. ಅಲ್ಲಿಯವರೆಗೂ ಬಂದು ಕಾಲಿಗೆ ನಮಸ್ಕಾರಮಾಡಿದ ರಾಮಾದಿಗಳೆಲ್ಲರನ್ನೂ ವಸಿಷ್ಠನು ಕಳುಹಿಸಿಕೊಟ್ಟನು.

೪೧. ಮಹಾಸತ್ವಶಾಲಿಯಾದ ವಸಿಷ್ಠನು, ನಭಶ್ಚರ, ಧರಣಿಚರ ಪಾತಾಳಚರರೇ ಮೊದಲಾದ ಆ ಗುಣ ಸಂಪನ್ನರನ್ನೆಲ್ಲ ಕಳುಹಿಸಿಕೊಟ್ಟು, ತನ್ನ ಆಶ್ರಮದಲ್ಲಿ ಬ್ರಾಹ್ಮಣೋಚಿತವಾದ ಕರ್ಮಗಳನ್ನು ನೆರವೇರಿಸಿದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಆಹ್ನಿಕ ವರ್ಣನ"ವೆಂಬ ಮೊದಲನೆಯ ಸರ್ಗವು.

ದ್ವಿತೀಯಃ ಸರ್ಗಃ

ಶ್ರೀವಾಲ್ಮೀಕಿರುವಾಚ :—

ತೇ ಸಮೇತ್ಯ ಗೃಹಂ ಗತ್ವಾ ರಾಜಪುತ್ರಾಃ ಶಶಿತ್ವಿಷಃ |
ಚಕ್ರುಃ ಸರ್ವಮಶೇಷೇಣ ಸ್ವಸದ್ಮಸು ದಿನಕ್ರಮಂ || ೧ ||

ವಸಿಷ್ಠೋ ರಾಘವಶ್ಚೈವ ರಾಜಾನೋ ಮುನಯೋ ದ್ವಿಜಾಃ |
ಇತಿ ಚಕ್ರುಃ ಸ್ವಕಾರ್ಯಾಣಿ ತಥಾ ಸ್ವಗೃಹವೀಥಿಷು || ೨ ||

ಸಸ್ನುಃ ಕಮಲಕಲ್ಹಾರ ಕುಸುಮೋತ್ಪಲಹಾರಿಷು |
ಜಲಾಶಯೇಷು ಚಕ್ರಾಹ್ವಹಂಸಸಾರಸರಾಜಿಷು || ೩ ||

ಗೋಭೂತಿಲಹಿರಣ್ಯಾನೀ ಶಯನಾನ್ಯಾಸನಾನಿಚ |
ದದುರ್ದಾನಾನಿ ವಿಪ್ರೇಭ್ಯೋ ಭಾಜನಾನ್ಯಂಶುಕಾನಿ ಚ || ೪ ||

ಎರಡನೆಯ ಸರ್ಗವು

ಶ್ರೀ ವಾಲ್ಮೀಕಿಯು ಹೇಳಿದನು :—

೧–೬. ಚಂದ್ರನಂತಿರುವ ಆ ದಶರಥರಾಜ ಪುತ್ರರೂ ತಮ್ಮ ತಮ್ಮ ಅರಮನೆಗಳಿಗೆ ಹೋಗಿ ನಿತ್ಯಕರ್ಮಗಳನ್ನು ನಿಶ್ಶೇಷವಾಗಿ ಆಚರಿಸಿದರು. ಹಾಗೆಯೇ ವಸಿಷ್ಠ, ದಶರಥ, ರಾಜರು, ಮುನಿಗಳು, ದ್ವಿಜರು (ಆದಿಯಾಗಿ) ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ವಿಹಿತ ಕರ್ಮಗಳನ್ನು ನೆರವೇರಿಸಿದರು. ಕಮಲ ಮುಂತಾದುವುಗಳಿಂದ ಮನೋಹರವಾಗಿ, ಚಕ್ರವಾಕಾದಿ ಪಕ್ಷಿಗಳಿಂದ ತುಂಬಿರುವ ಕೊಳಗಳಲ್ಲಿ ಮಿಂದರು. ಗೋ, ಭೂಮಿ, ಮುಂತಾದ ನಾನಾ ದಾನಗಳನ್ನು ಬ್ರಾಹ್ಮಣರಿಗೆ ಕೊಟ್ಟರು. ಕನಕ ರತ್ನಗಳಿಂದ ಚಿತ್ರ ವಿಚಿತ್ರವಾಗಿ ನಿರ್ಮಿತವಾಗಿರುವ

ಹೇಮರತ್ನವಿಚಿತ್ರೇಷು ಸ್ವೇಷು ಚಾಮರಸದ್ಮಸು ।
ಆನರ್ಚುರಚ್ಯುತೇಶಾನ ಹುತಾಶಾರ್ಕಾದಿಕಾನ್ಸುರಾನ್ ॥ ೫ ॥

ಪುತ್ರಪೌತ್ರಸುಹೃದ್ಭೃತ್ಯ ಬಂಧುಮಿತ್ರಗಣೈಃ ಸಹ ।
ತತ ಆಸ್ವಾದಯಾಮಾಸುರ್ಭೋಜನಾನ್ಯುಚಿತಾನಿ ವೈ ॥ ೬ ॥

ಏತಸ್ಮಿನ್ಸಮಯೇ ಚಾಸ್ಮಿನ್ನಗರೇ ದಿವಸೋಽಭವತ್ ।
ತನುರಷ್ಟಾಂಗಶೇಷತ್ವಾದ್ದೃಷ್ಟೋ ಸ ಚ ಮನೋಹರಃ ॥ ೭ ॥

ಸಾಯಂತನದಿನಾಂತಂ ತೇ ತತ್ಕಾಲೋಚಿತಚೇಷ್ಟಯಾ
ಅನಯನ್ನಂಶುಭಿಃ ಸಾರ್ಧಂ ಯಾವದಸ್ತಂ ಯಯೌ ರವಿಃ ॥ ೮ ॥

ಸಂಧ್ಯಾಂ ವವಂದಿರೇ ಸುಷ್ಠು ಚೇಪುಶ್ಚೈವಾಘಮರ್ಷಣಂ ।
ಪೇಠುಃ ಸ್ತೋತ್ರಾಣಿ ಪುಣ್ಯಾನಿ ಜಗುರ್ಗಾಥಾ ಮನೋಹರಾಃ ॥ ೯ ॥

ತತಶ್ಚಾಭ್ಯುದಿತಾ ಶ್ಯಾಮಾ ಕಾಮಿನೀಶೋಕಹಾರಿಣೀ ।
ಕ್ಷೀರೋದಾದಿವ ಮಾಹೇಂದ್ರೀ ಚಂದ್ರಾವಶ್ಯಾಯದಾಯಿನಿ ॥ ೧೦ ॥

ದೇವರ ಮನೆಗಳಲ್ಲಿ ಕುಳಿತು ಅಚ್ಯುತ, ಈಶ್ವರ, ಅಗ್ನಿ, ಸೂರ್ಯ ಮೊದಲಾದ ದೇವತೆಗಳನ್ನು ಪೂಜಿಸಿದರು. ಪುತ್ರ ಪೌತ್ರ, ಇಷ್ಟ, ಬಂಧು, ಮಿತ್ರ, ಭೃತ್ಯಗಣಗಳೊಡನೆ ಸುಖ ಭೋಜನ ಮಾಡಿದರು.

೭-೯. ಆವೇಳೆಗೆ ಆ ನಗರದಲ್ಲಿ ಹಗಲು ಒಂದು ಝಾಮ ಮಾತ್ರ ಉಳಿದು ಮನೋಹರವಾಯಿತು. ಆಗ, ಸೂರ್ಯನು ಕಿರಣಗಳೊಡನೆ ಅಸ್ತವಾಗುವುದರೊಳಗೆ ಎಲ್ಲರೂ ಸಂಧ್ಯಾ ಕರ್ಮಗಳನ್ನು ಮಾಡಿ ಮುಗಿಸಿದರು. ಸಂಧ್ಯಾವಂದನೆಯನ್ನು ಚೆನ್ನಾಗಿ ಮಾಡಿ ಅಘಮರ್ಷಣ ಜಪಗಳನ್ನು ಮುಗಿಸಿ, ಮನೋಹರವಾದ ಗೀತಗಳನ್ನು ಹಾಡಿದರು.

೧೦. ಅನಂತರ ರಾತ್ರಿಯು, ಚಂದ್ರನನ್ನೂ ಹಿಮವನ್ನೂ ಕೊಡುತ್ತ ಕಾಮಿನಿಯರ ಶೋಕವನ್ನು ಅಪಹರಿಸುತ್ತ, ಕ್ಷೀರಸಮುದ್ರದಿಂದ ಎದ್ದು ಬಂದ ಮಹೇಂದ್ರಲಕ್ಷ್ಮಿಯೋ ಎಂಬಂತೆ ಪ್ರಕಟವಾಯಿತು.

ಶನೈರಾಸ್ತೀರ್ಣಪುಷ್ಪೇಷು ಕೀರ್ಣಕರ್ಪೂರಮುಷ್ಟಿಷು ।
ದೀರ್ಘೇಂದುಬಿಂಬರಮ್ಯೇಷು ತಸ್ಥುಸ್ಸ್ವಲ್ಪೇಷು ರಾಘವಾಃ ॥ ೧೧ ॥

ಅಥ ರಾಮಾದೃತೇಽನ್ಯೇಷಾಂ ತತ್ರ ತದ್ವ್ಯವಹಾರಿಣೀ ।
ವ್ಯತೀಯಾಯ ಶನೈಃ ಶ್ಯಾಮಾ ಮುಹೂರ್ತ ಇವ ಶೋಭನಾ ೧೨ ॥

ತಸ್ಥೌ ರಾಮಸ್ತು ತಾಮೇವ ವಾಸಿಷ್ಠೀಂ ವಚನಾವಲೀಂ ।
ಚಿಂತಯನ್ಮಧುರೋದಾರಾಂ ಕರಿಣೀಂ ಕಲಭೋ ಯಥಾ ॥ ೧೩ ॥

ಕಿಮಿದಂ ನಾಮ ಸಂಸಾರಭ್ರಮಣಂ ಕಿಮಿಮೇ ಜನಾಃ ।
ಭೂತಾನಿ ಚ ವಿಚಿತ್ರಾಣಿ ಕಿಮಾಯಾಂತಿ ಪ್ರಯಾಂತಿ ಕಿಂ ॥ ೧೪ ॥

೧೧–೧೨. ಆಗ, ಹೂವನ್ನು ಹಾಸಿ, ಪಚ್ಚಕರ್ಪೂರವನ್ನು ಹರಡಿರುವ, ದೀರ್ಘೇಂದು ಬಿಂಬಗಳೆಂಬಂತೆ ರಮ್ಯವಾಗಿರುವ ಶಯ್ಯೆಗಳನ್ನು ರಾಘವರು ಸೇರಿದರು. ರಾಮನೊಬ್ಬನು ವಿನಾ ಮಿಕ್ಕೆಲ್ಲರಿಗೂ ಆ ರಾತ್ರಿಯು ತತ್ಕಾಲೋಚಿತ ವಾದ ವಿಲಾಸಾದಿಗಳಿಂದ ಒಂದು ಮುಹೂರ್ತದಷ್ಟು ಅಲ್ಪವಾಗಿ, ಸುಖವಾಗಿ, ಕಳೆದುಹೋಯಿತು.

೧೩. ರಾಮನು, ತರುಣ ಗಜವು ಕರಿಣಿಯನ್ನೇ ಕುರಿತು ಚಿಂತಿಸುವಷ್ಟು ಘನವಾಗಿ, ವಸಿಷ್ಠರು ಆಡಿದ ಮಧುರವೂ ಉದಾರವೂ ಆದ ವಾಕ್ಯಗಳನ್ನೇ ನೆನೆದುಕೊಳ್ಳುತ್ತಿದ್ದನು.

(ಆನೆಗೆ ಸ್ಪರ್ಶಸುಖವು ಇತರ ಪ್ರಾಣಿಗಳಿಗಿಂತ ಹೆಚ್ಚು. ಗಂಡಾನೆಗೆ ಹೆಣ್ಣಾನೆ ಯನ್ನು ಮುಟ್ಟುತ್ತಿದ್ದ ಹಾಗೆಯೇ ಮೈಮರೆಯುವಷ್ಟು ಆನಂದವಾಗುವುದು ಎಂದು ತಜ್ಞರ ಮತವು.)

೧೪. ಈ ಸಂಸಾರವೆಂಬ ಭ್ರಾಂತಿಯು ಯಾವುದು ? ಈ ಜನರು ಎನ್ನುವುದು ಏನು ? ನಾನಾವಿಧವಾದ ಪ್ರಾಣಿಗಳು ಬರುವುವು ಹೋಗುವುವು ಎಂಬ ಈ ವಿಚಿತ್ರಗಳೇನು ?

ಮನಸಃ ಕೀದೃಶಂ ರೂಪಂ ಕಥಂ ಚೈತತ್ಪ್ರಶಾಮ್ಯತಿ ।
ಮಾಯೇಯಂ ಸಾ ಕಿಮುತ್ಥಾ ಸ್ಯಾತ್ಕಥಂ ಚೈವ ನಿವರ್ತತೇ ॥ ೧೫ ॥

ನಿವೃತ್ತಯಾನಯಾ ಕಃ ಸ್ಯಾದ್ಗುಣೋ ದೋಷೋಽಥ ವಾ ಭವೇತ್ ।
ಕಥಮಾತ್ಮನಿ ಚೈವಾಯಂ ತತೇ ಸಂಕೋಚ ಆಗತಃ ॥ ೧೬ ॥

ಕಿಮುಕ್ತಂ ಸ್ಯಾದ್ಭಗವತಾ ಮುನಿನಾ ಮನಸಃ ಕ್ಷಯೇ ।
ಕಿಂಚೇಂದ್ರಿಯಜಯೇ ಪ್ರೋಕ್ತಂ ಕಿಮುಕ್ತಮಥವಾತ್ಮನಿ ॥ ೧೭ ॥

ಜೀವಶ್ಚಿತ್ತಂ ಮನೋ ಮಾಯೇತ್ಯೇವಮಾದಿಭಿರಾತತೈಃ ।
ರೂಪೈರಾತ್ಮೈವ ಸಂಸಾರಂ ತನೋತೀಮಮಸನ್ಮಯಂ ॥ ೧೮ ॥

---

೧೫. ಮನಸ್ಸಿನ ರೂಪವೆಂಥದು ? ಇದು ಶಾಂತವಾಗುವುದೆಂತು ? ಈ (ಪ್ರಸಿದ್ಧವಾಗಿ ಕಣ್ಣಿಗೆ ಕಾಣುತ್ತಿದ್ದರೂ) ಆ (ಅನಿರ್ವಚನೀಯವಾದ) ಮಾಯೆಯು ಹೇಗೆ ಹುಟ್ಟಿತು ? ಹೇಗೆ ನಿವೃತ್ತಿಯಾಗುವುದು ?

೧೬. ಈ ಮಾಯಾವೃತ್ತಿಯಿಂದ ಗುಣವೋ ? ದೋಷವೋ ? (ತಾನೇ ತಾನಾಗಿರುವ) ಆತ್ಮನಲ್ಲಿ (ಮಾಯೆಯೆಂಬ) ಈ ಕಿರಿಯತನವು ಹೇಗೆ ಬಂತು ?

೧೭. ಈ ಮನಸ್ಸು ಕ್ಷಯವನ್ನು ಹೊಂದುವುದು ಹೇಗೆ ? ಇಂದ್ರಿಯಗಳನ್ನು ಗೆಲ್ಲುವುದು ಹೇಗೆ ? ಆತ್ಮನನ್ನು ಪಡೆಯುವುದು ಹೇಗೆ ? ಈ ವಿಚಾರವಲ್ಲಿ ಭಗವಂತನಾದ ವಸಿಷ್ಟನು ಏನು ಹೇಳಿದನು ?

೧೮. (ಆ ವಸಿಷ್ಠನು ಹೇಳಿದಂತೆ) ಜೀವ, ಚಿತ್ತ, ಮನಸ್ಸು, ಮಾಯೆ, ಎಂದು ಮೊದಲಾಗಿ ವಿಸ್ತಾರವಾಗಿ ಹರಡಿರುವ ರೂಪಗಳಿಂದ ಆತ್ಮನೇ ಈ ಅಸತ್ಯವಾದ ಸಂಸಾರವನ್ನು ಹರಡಿರುವನು.

ಏಭಿರೇವಂ ಮನೋಮಾತ್ರತಂತುಬದ್ಧೈಃ ಕ್ಷಯಂ ಗತೈಃ ।
ದುಃಖೋಪಶಾಂತಿರೇತಾನಿ ಸುಚಿಕಿತ್ಸ್ಯಾನಿ ನಃ ಕಥಂ ॥ ೧೯ ॥

ಭೋಗಾಭ್ರಮಾಲಾವಲಯಾಂ ಧೀಬಲಾಕಾಮಿಮಾಂ ಕಥಂ ।
ಪೃಥಕ್ಕರೋತಿ ಪಯಸೋ ಧಾರಾಂ ಹಂಸ ಇವಾಂಭಸಃ ॥ ೨೦ ॥

ಭೋಗಾಸ್ತ್ಯಕ್ತುಂ ನ ಶಕ್ತ್ಯಂತೇ ತತ್ತ್ಯಾಗೇನ ವಿನಾ ವಯಂ ।
ಪ್ರಭವಾನೋ ನ ವಿಪದಾಮಹೋ ಸಂಕಟಮಾಗತಂ ॥ ೨೧ ॥

ಮನೋಮಾತ್ರಮಿದಂ ಪ್ರಾಪ್ಯಂ ತಚ್ಚೈವೇದಂ ಪ್ರಯೋಜನಂ ।
ಸಂಪನ್ನಂ ನೋ ಗಿರಿಗುರು ಮೌರ್ಖ್ಯಾದ್ಯಕ್ಷಃ ಶಿಶೋರಿವ ॥ ೨೨ ॥

---

೧೯. ಮನಸ್ಸೆಂಬ ತಂತುವಿನಿಂದ ಬದ್ಧವಾಗಿರುವ ಈ (ಜೀವ,) ಮೊದಲಾದವೆಲ್ಲವೂ ಕ್ಷಯವಾಗಿ ಹೋದರೆ, ದುಃಖವು ಉಪಶಾಂತವಾಗುವುದು. ಆದರೆ, ಇವುಗಳನ್ನು ಪರಿಹರಿಸುವುದೆಂತು ?

೨೦. ನನ್ನ ಬುದ್ಧಿಯೆಂಬ ಹೆಣ್ಣುಬಕವು ಭೋಗಗಳೆಂಬ ಮೇಘಮಾಲೆಗಳ ಮಂಡಲವನ್ನು ಹಿಡಿದು ಸುತ್ತುತ್ತಿರುವುದು. ನೀರಿನಿಂದ ಹಾಲನ್ನು ಪ್ರತ್ಯೇಕಿಸುವ ಹಂಸದಂತೆ, ನಾನೆಂತು ಈ ಬುದ್ಧಿಯನ್ನು (ವಿಷಯಗಳಿಂದ) ಬಿಡಿಸುವೆನು ?

೨೧ ಭೋಗಗಳನ್ನು ಬಿಡಲು ಆಗುವುದಿಲ್ಲ. ಭೋಗಗಳನ್ನು ಬಿಡದೆ ನಾವು ವಿಪತ್ತುಗಳನ್ನು ಗೆಲ್ಲುವಂತಿಲ್ಲ. ಆಹಹ ! ಎಂತಹ ಸಂಕಟವು ಬಂದಿತು !

೨೨. ಪರಮಪದವಾದರೋ ಮನೋಗೋಚರವಾದುದು. ಮನಸ್ಸಾದರೋ, ಬಾಲಕನಿಗೆ ಕಾಣಿಸುವ ಭೇತಾಳದಂತೆ, ಬೆಟ್ಟಕ್ಕಿಂತ ಭಾರವಾಗಿ, ಬಾಹ್ಯ ವಿಷಯದಲ್ಲಿ ಪ್ರವರ್ತಿಸುವುದೇ ಪರಮ ಪ್ರಯೋಜನವೆಂದುಕೊಂಡಿರುವುದು.

ಪರಮಾಂ ಶಾಂತಿಮಾಗತ್ಯ ಗತಸಂಸಾರಸಂಭ್ರಮಾ |
ಬಾಲೇವ ಲಬ್ಧದಯಿತಾ ಕಂಚಿತ್ಪ್ರಾಪ್ಸ್ಯತಿ ನೋ ಮತಿಃ || ೨೩ ||

ಕದೋಪಶಾಂತಸಂರಂಭಂ ವಿಗತಾಶೇಷಕೌತುಕಂ |
ಅಪಾಪಮಾತ್ಮವಿಶ್ರಾಂತಂ ಮಮ ಸ್ಯಾತ್ಪಾವನಂ ಮನಃ || ೨೪ ||

ಕಲಾಕಲಾಪಸಂಪೂರ್ಣಾಚ್ಛಶಾಂಕಾದಪಿ ಶೀತಲೇ |
ಪದೇ ಸುರೂಢಂ ವಿಶ್ರಮ್ಯ ಭ್ರಮಿಷ್ಯಾಮಿ ಕದಾ ಜಗತ್ || ೨೫ ||

ಕಲನಾಪೇಲವಂ ರೂಪಮುತ್ಸೃಜ್ಯಾಲೀನಮಾತ್ಮನಿ |
ಕದೈಷ್ಯತಿ ಮನಃಶಾಂತಿ ಮಂಭಸೀವ ತರಂಗಕಃ || ೨೬ ||

---

೨೩. ನನ್ನ ಬುದ್ಧಿಯಾದರೊ, (ವಸಿಷ್ಠೋಪದೇಶದಿಂದ) ಉತ್ತಮವಾದ ಶಾಂತಿಯನ್ನು ಪಡೆದು ಸಂಸಾರ ಸಂಬಂಧವಾದ ಭ್ರಮೆಯನ್ನೆಲ್ಲ ತೊರೆದು, ಪ್ರಿಯ ಕಾಂತನನ್ನು ಸೇರಿದ ಕಾಂತೆಯಂತೆ, ಮತ್ತೇನನ್ನೂ ಬಯಸದಿರಬೇಕು ಎನ್ನುತ್ತಿರುವುದು.

೨೪. ಯಾವಾಗ ನನ್ನ ಮನಸ್ಸು, ಎಲ್ಲ ಕಾರ್ಯಗಳನ್ನೂ ತೊರೆದು, ಕುತೂಹಲವನ್ನೆಲ್ಲ ಬಿಟ್ಟು, ಪಾಪಶೂನ್ಯವಾಗಿ, ಪವಿತ್ರವಾಗಿ ಆತ್ಮನಲ್ಲಿ ಶಾಂತವಾದೀತು ! (ಸಂರಂಭ–ಕ್ರೋಧಃ ಕೌತುಕ–ಕಾಮ ....ತಾ. ಪ್ರ.).

೨೫. ಕಲಾಪರಿಪೂರ್ಣನಾದ ಪೂರ್ಣಚಂದ್ರನಿಗಿಂತಲೂ ಶಾಂತವಾಗಿರುವ ಆ ಪರಮಪದದಲ್ಲಿ ಚೆನ್ನಾಗಿ ನೆಲಸಿದವನಾಗಿ, ನಾನು ಜಗತ್ತಿನಲ್ಲಿ ಸಂಚರಿಸುವುದು ಯಾವಾಗ ?

(ಹಿಂದೆ ವೈರಾಗ್ಯ ಪ್ರಕರಣದಲ್ಲಿ ಹೇಳಿರುವ " ಧಿಯಾ ದೃಷ್ಟೇ ತತ್ತ್ವೇ ರಮಣಮಟನಂ ಜಾಗತಮಿದಂ " ಎಂಬುದನ್ನು ಸ್ಮರಿಸಿಕೊಳ್ಳಿ.)

೧೬. ಕಲ್ಪನೆಯಾದುದರಿಂದ ಪೇಲವ (ತುಚ್ಛ)ವಾದ ರೂಪ (ಜಾಲ) ವನ್ನು ಬಿಟ್ಟು, ಮನಸ್ಸು, ಜಲದಲ್ಲಿ ಲೀನವಾಗುವ ತರಂಗದಂತೆ, ಆತ್ಮನಲ್ಲಿ ಎಂದಿಗೆ ಶಾಂತವಾಗುವುದು ?

ತೃಷ್ಣಾತರಂಗಾಕುಲಿತಮಾಶಾಮಕರಮಾಲಿನಂ ।
ಕದಾ ಸಂಸಾರಜಲಧಿಂ ತೀರ್ತ್ವಾ ಸ್ಯಾಮಹಮಜ್ವರಃ ॥ ೨೭ ॥

ಕದೋಪಶಮಶುದ್ಧಾಸು ಪದವೀಷು ವಿಚಕ್ಷಣಾಃ ।
ಮುಮುಕ್ಷೂಣಾಂ ನಿವತ್ಸ್ಯಾಮೋ ನಿಃಶೋಕಂ ಸಮದರ್ಶನಾಃ ॥ ೨೮ ॥

ಸಂತಾಪಿತಸಮಸ್ತಾಂಗಃ ಸರ್ವಧಾತುಭಯಂಕರಃ ।
ಸಂಸೃತಿಜ್ವರ ಆದೀರ್ಘಃ ಕದಾ ನಾಶಮುಪೈಷ್ಯತಿ ॥ ೨೯ ॥

ನಿರ್ವಾತದೀಪಲೇಖೇವ ಕದಾ ಚಿತ್ತಂ ಗತವ್ಯಥಂ ।
ಶಮಮೇಷ್ಯತಿ ಹೇ ಬುದ್ಧೇ ಸುಪ್ರಕಾಶಘನಾಂತರಂ ॥ ೩೦ ॥

---

೨೭. ತೃಷ್ಣೆಯೆಂಬ ತರಂಗಗಳಿಂದ ಆಕುಲಿತವಾಗಿಯೂ ಆಶೆಯೆಂಬ ಮಕರ ಸಮೂಹಗಳುಳ್ಳುದಾಗಿಯೂ ಇರುವ ಸಂಸಾರ ಸಾಗರವನ್ನು ಎಂದಿಗೆ ದಾಟಿ ನಾನು ಅಜ್ವರನಾಗುವೆನು ? (ಜ್ವರ = ಮನಸ್ಸಿನ ಉದ್ವೇಗ)

೨೮. ನಾವು ಅದೆಂದಿಗೆ ಶೋಕವನ್ನು ನೀಗಿ, ವಿವೇಕವನ್ನೂ, ಸಮದೃಷ್ಟಿಯನ್ನೂ ಪಡೆದು, ಮುಮುಕ್ಷುಗಳು ನಡೆಯುವ ಉಪಶಾಂತಿ ಶುದ್ಧವಾದ ಹಾದಿಗಳಲ್ಲಿ ನಡೆದೇವು !

೨೯. ಅಂಗಾಂಗಗಳನ್ನೆಲ್ಲ ಸಂತಾಪಗೊಳಿಸುತ್ತ, ರಕ್ತ ಮಾಂಸಾದಿ ಸಮಸ್ತ ಧಾತುಗಳಿಗೂ ಭಯವನ್ನುಂಟುಮಾಡುತ್ತಿರುವ, ಬಹು ಕಾಲದ, ಈ ಸಂಸಾರವೆಂಬ ಜ್ವರವು ಎಂದಿಗೆ ನಾಶವಾಗುವುದು ?

೩೦. ಎಲೌ ಬುದ್ಧಿಯೆ, ಗಾಳಿಯಿಲ್ಲದ ಕಡೆ ಬೆಳಗುವ (ನಿಶ್ಚಲವಾದ) ದೀಪ ಲೇಖೆಯಂತೆ ನನ್ನ ಮನಸ್ಸು ನಿಶ್ಚಿಂತವಾಗಿ ಜ್ಞಾನ ಸ್ವರೂಪವಾದ ಬ್ರಹ್ಮದಿಂದ ಬೆಳಗುತ್ತಿರುವುದಾಗಿ ಯಾವಾಗ ಶಾಂತಿಯನ್ನು ಪಡೆಯುವುದು !

ಕದೇಂದ್ರಿಯಾಣಿ ದುಃಖೇಭ್ಯಃ ಸಂಸರಿಷ್ಯಂತಿ ಹೇಲಯಾ ।
ದುರೀಹಾದಗ್ಧದೇಹಾನಿ ಗರುತ್ಮಂತ ಇವಾರ್ಣವಾನ್ ॥ ೩೧ ॥

ಅಯಂ ಸೋಽಹಂ ರುದನ್ಮೂಢ ಇತಿ ವ್ಯರ್ಥಾಹಿತೋ ಭ್ರಮಃ ।
ಶರದೀವಾಸಿತೋ ಮೇಘಃ ಕದಾ ನಾಶಮುಪೈಷ್ಯತಿ ॥ ೩೨ ॥

ಮಂದಾರವನಲೇಖಾಸು ಯಾ ಮತಿಃ ಸಾ ತೃಣಾಯತೇ ।
ಯಾಚೇ ತತ್ಪರಮಾತ್ಮೀಯಂ ಸಂಪ್ರಾಪ್ಸ್ಯಾಮಃ ಕದಾ ವಯಂ ॥ ೩೩ ॥

ವೀತರಾಗ ಜನಪ್ರೋಕ್ತಾ ನಿರ್ಮಲಾ ಜ್ಞಾನದೃಷ್ಟಯಃ ।
ಕಚ್ಚಿತ್ಪದಂ ತ್ವಯಿ ಮನಃ ಕರಿಷ್ಯಂತೀತಿ ಮೇ ವದ ॥ ೩೪ ॥

---

೩೧. ತಮ್ಮ ದುರಾಶೆಗಳಿಂದ ನನ್ನ ದೇಹವನ್ನು ಸುಡುತ್ತಿರುವ ಈ ಇಂದ್ರಿಯಗಳು, ಸಮುದ್ರವನ್ನು ದಾಟಿಹೋಗುವ ಗರುಡಪಕ್ಷಿಗಳಂತೆ, ಯಾವಾಗ ಸುಲಭವಾಗಿ ಈ ಸಂಸಾರ ದುಃಖಗಳನ್ನು ದಾಟಿಯಾವು !

೩೨. "ಈ ದೇಹವೇ ನಾನು ! ಆಗಿದ್ದ ಅವನೇ ನಾನು ! ಅಳುತ್ತಿರುವೆನು ! ಮೂಢನಾಗಿರುವೆನು" ಇತ್ಯಾದಿ ವ್ಯರ್ಥ ಭ್ರಾಂತಿಯೆಲ್ಲವೂ ಎಂದಿಗೆ ಶರತ್ಕಾಲದ ಬಿಳಿಮೋಡಗಳಂತೆ ನಾಶವಾದೀತು !

೩೩. ಮಂದಾರ ವನಗಳಲ್ಲಿ ವಿಹರಿಸುವುದೂ ಕೂಡ ತೃಣವಾಗಿ ಕಾಣುತ್ತಿರುವುದಲ್ಲ ! ನನಗೆ ಆತ್ಮಪದವೊಂದೇ ಬೇಕಾಗಿರುವುದು ! ಅದನ್ನು ನಾನು ಯಾವಾಗ ಹೊಂದುವೆನು !

೩೪. ಎಲೆ ಮನಸ್ಸೇ, ವಿರಕ್ತರಾದ ಮಹಾತ್ಮರು ಬೋಧಿಸುವ ನಿರ್ಮಲ ಜ್ಞಾನ ದೃಷ್ಟಿಗಳು ಎಂದಾದರೂ ನಿನ್ನಲ್ಲಿ ನೆಲೆಯಾಗುವುವೆ ? ಹೇಳು.

ಹಾ ತಾತ ಮಾತಃ ಪುತ್ರೇತಿ ಗಿರಾಮಾಸಾಮಹಂ ಪುನಃ ।
ಭಾಜನಂ ಚಿತ್ತ ಮಾಭೂವಂ ಭೋಜನಂ ದುಃಖಭೋಗಿನಾಂ ॥ ೩೫ ॥

ಹೇ ಬುದ್ಧೇ ಭಗಿನಿ ಭ್ರಾತುರರ್ಥಿತಾಂ ಪೂರಯಾಶು ಮೇ ।
ಆವಯೋರ್ದುಃಖಮೋಕ್ಷಾಯ ವಿಚಾರಯ ಮುನೇರ್ಗಿರಃ ॥ ೩೬ ॥

ತ್ವಾಂ ಪಾದಪತಿತಃ ಪ್ರೀತ್ಯಾ ವಾಚೇ ಸತಿ ಸುತೇ ಮತೇ ।
ತೇನ ಭವ್ಯೇ ಭವೋಚ್ಛೇದಭೂತಯೇ ಸುಸ್ಥಿರಾ ಭವ ॥ ೩೭ ॥

ವಸಿಷ್ಠಮುನಿನಾ ಪ್ರೋಕ್ತಾ ವಿರಕ್ತಾಃ ಪ್ರಥಮಂ ಗಿರಃ ।
ತತೋ ಮುಮುಕ್ಷೋರಾಚಾರ ಉತ್ಪತ್ತೀನಾಂ ಕ್ರಮಸ್ತತಃ ॥ ೩೮ ॥

---

೩೫. ಅಪ್ಪಾ! ಅಮ್ಮಾ! ಮಗನೇ! ಎಂಬ ಮಾತುಗಳಿಗೆ ನಾನು ಮತ್ತೆ ಗುರಿಯಾಗದೆ, ಎಲೆ ಚಿತ್ತವೆ, ದುಃಖಗಳೆಂಬ ಹಾವುಗಳಿಗೆ ಆಹಾರವಾಗದೆ ಇರುವುದಾಗಲಿ.

೩೬. ಸಹೋದರಿಯಾದ ಬುದ್ಧಿಯೇ, ನಿನ್ನ ಸಹೋದರನಾದ ನನ್ನ ಪ್ರಾರ್ಥನೆಯನ್ನು ಸಲ್ಲಿಸು. ನಮ್ಮಿಬ್ಬರ ದುಃಖವೂ ಮುಗಿಯಲಿ, ಮುನೀಂದ್ರರ ವಚನವನ್ನು ವಿಚಾರಮಾಡು.

೩೭. ಎಲೆ ಸುಪುತ್ರಿಯಾದ ಮತಿಯೇ, ನಿನ್ನ ಕಾಲಿಗೆ ಬಿದ್ದು ಪ್ರೀತಿಯಿಂದ ಕೇಳಿಕೊಳ್ಳುವೆನು. ಜನ್ಮ ದುಃಖವನ್ನು ಕಳೆಯುವುದೆಂಬ ಸಂಪತ್ತನ್ನು ಪಡೆಯಬೇಕಾಗಿರುವುದು. ಆದರಿಂದ, ಎಲೇ ಭದ್ರೆಯೇ, ಸ್ಥಿರಳಾಗು.

೩೮–೯. ವಸಿಷ್ಠ ಮುನಿಯು ಮೊದಲು ವೈರಾಗ್ಯ ವಚನಗಳನ್ನೂ, ಅನಂತರ ಮುಮುಕ್ಷುವಿನ ಆಚಾರವನ್ನೂ, ಉತ್ಪತ್ತಿ ಕ್ರಮವನ್ನೂ, ಸ್ಥಿತಿ ಪ್ರಕರಣ

ತತಃ ಸ್ಥಿತಿಪ್ರಕರಣಂ ಸಮಂ ದೃಷ್ಟಾಂತಸುಂದರಂ ।
ವಿಜ್ಞಾನಗರ್ಭಸುಲಭಂ ಯಥಾವತ್ಸ್ಮರ ಹೇ ಮತೇ ॥ ೩೯ ॥

ಕೃತಮತಿಶತಶೋ ವಿಚಾರಿತಂ ಯ
ದ್ಯದಿ ತದುಪೈತಿ ನ ಮಾನಸಸ್ಯ ಬುದ್ಧಿಃ ।
ಭವತಿ ತದಫಲಂ ಶರದ್ಘನಾಭಂ
ಸತತಮತೋ ಮತಿರೇವ ಕಾರ್ಯಸಾರಃ ॥ ೪೦ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ಉಪದೇಶಾನುವರ್ಣನಂ" ನಾಮ ದ್ವಿತೀಯಃ ಸರ್ಗಃ

ವನ್ನೂ, ಅನೇಕ ದೃಷ್ಟಾಂತಗಳಿಂದ ಸುಂದರವೂ ಅನೇಕ ಅನುಭವಗಳಿಂದ ಸುಲಭವೂ ಆಗಿರುವಂತೆ ಹೇಳಿರುವುದನ್ನೆಲ್ಲ, ಎಲೌ ಬುದ್ಧಿಯೆ, ಯಥಾವತ್ತಾಗಿ ಸ್ಮರಿಸಿಕೊ.

೪೦. ಮನಸ್ಸು ನೂರಾರುಸಲ ವಿಚಾರ ಮಾಡಿದ್ದರೂ ಬುದ್ಧಿಯು ಒಪ್ಪದೇ ಹೋದರೆ ಅದೆಲ್ಲವೂ ವಿಫಲವಾಗುವುದು. ಶರತ್ಕಾಲದ ಮೋಡದ ಹಾಗಾಗುವುದು. ಅದರಿಂದ, ಬುದ್ಧಿಯೇ ಕಾರ್ಯಕ್ಕೆ ಮುಖ್ಯವಾದುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ಉಪದೇಶಾನುವರ್ಣನ" ಎಂಬ ಎರಡನೆಯ ಸರ್ಗವು.

ತೃತೀಯಃ ಸರ್ಗಃ

ಶ್ರೀ ವಾಲ್ಮೀಕಿರುವಾಚ :—

ತಸ್ಯೈವಂಪ್ರಾಯಯಾ ತತ್ರ ತತಯೋದಾರಚಿಂತಯಾ ।
ಸಾ ವ್ಯತೀಯಾಯ ರಜನೀ ಪದ್ಮಸ್ಯೇವಾರ್ಕಕಾಂಕ್ಷಿಣಃ ॥ ೧ ॥

ಕಿಂಚಿತ್ತಮಃಕಡಾರಾಸು ಕಿಂಚಿದಪ್ಯರುಣಾಸು ಚ ।
ನಭೋವಿರಲತಾರಾಸು ದಿಕ್ಷು ಸಂಮಾರ್ಜಿತಾಸ್ವಿವ ॥ ೨ ॥

ಪ್ರಭಾತತೂರ್ಯಘೋಷೇಣ ಸಮಮಿಂದುಸಮಾನನಃ ।
ಉತ್ತಸ್ಥೌ ರಾಘವಃ ಶ್ರೀಮಾನ್ಪದ್ಮಃ ಪದ್ಮಾಕರಾದಿವ ॥ ೩ ॥

ಮೂರನೆಯ ಸರ್ಗವು

ಶ್ರೀ ವಾಲ್ಮೀಕಿಯು ಹೇಳಿದನು:—

೧. ಸೂರ್ಯನನ್ನು ಬಯಸುವ ಪದ್ಮದಂತೆ, ರಾಮನು ಹೀಗೆ ದೀರ್ಘವಾಗಿ, (ಆತ್ಮಜ್ಞಾನವನ್ನು ಕುರಿತು) ಹಂಬಲಿಸುತ್ತಿದ್ದ ಹಾಗೆಯೇ ರಾತ್ರಿಯು ಕಳೆದು ಹೋಯಿತು.

೨-೩. ದಿಕ್ಕುಗಳಲ್ಲಿ ಇನ್ನೂ ಕತ್ತಲು ಉಳಿದೇ ಇರುವಾಗ, ಇನ್ನೂ ಮುಂಬೆಳಗು ಕಾಣಿಸಿಕೊಳ್ಳುತ್ತಿದ್ದಾಗ, ನಕ್ಷತ್ರಗಳು ಮುಳುಗುತ್ತಿದ್ದಾಗ, ಎಲ್ಲವೂ ಗುಡಿಸಿದಂತೆ ನಿರ್ಮೂಲವಾಗುತ್ತಿದ್ದಾಗ, ಕೊಳದಲ್ಲಿರುವ ಕಮಲವು ಅರಳುವಂತೆ, ಶ್ರೀರಾಮನು ಬೆಳಗಿನ ಮಂಗಳವಾದ್ಯಗಳು ಆಗುತ್ತಿರುವ ಹಾಗೆಯೇ ಎದ್ದನು.

ಪ್ರಾತಃಸ್ನಾನವಿಧಿಂ ಕೃತ್ವಾ ಸಂಪಾದ್ಯ ಭ್ರಾತೃಭಿಃ ಪುನಃ ।
ಪ್ರಹಿತಾಲ್ಪಪರೀವಾರೋ ವಸಿಷ್ಠಸದನಂ ಯಯೌ ॥ ೪ ॥

ಸಮಾಧಿಸಂಸ್ಥಮೇಕಾಂತೇ ಮುನಿಮಾತ್ಮಪರಾಯಣಂ ।
ದೂರ ಏವಾನನಾಮಾಸೌ ರಾಮೋ ವಿನತಕಂಧರಃ ॥ ೫ ॥

ತಂ ಪ್ರಣಮ್ಯಾಂಗಣೇ ತಸ್ಥುಸ್ತಸ್ಮಿಂಸ್ತೇ ವಿನಯಾನ್ವಿತಾಃ ।
ಯಾವತ್ತಮಪನಾಲೂನಂ ವ್ಯಕ್ತಂ ದಿಙ್ಮುಖಮಂಡಲಂ ॥ ೬ ॥

ರಾಜಾನೋ ರಾಜಪುತ್ರಾಶ್ಚ ಋಷಯೋ ಬ್ರಾಹ್ಮಣಾಸ್ತತಃ ।
ಆಯಯುಃ ಸದನಂ ಮೌನಂ ಬ್ರಹ್ಮಲೋಕಮಿವಾಮರಾಃ ॥ ೭ ॥

ತದ್ವಸಿಷ್ಠಸ್ಯ ಸದನಂ ಬಭೂವ ಜನಸಂಕುಲಂ ।
ಹಸ್ತ್ಯಶ್ವರಥಸಂಬಾಧಂ ಪಾರ್ಥಿವಾಚಾರಶೋಭನಂ ॥ ೮ ॥

---

೪. ಪ್ರಾತಃಕರ್ಮಗಳನ್ನೆಲ್ಲ ನೆರವೇರಿಸಿಕೊಂಡು, ತಮ್ಮಂದಿರನ್ನು ಕರೆದುಕೊಂಡು ಮಿತ ಪರಿವಾರದೊಡನೆ ವಸಿಷ್ಠರ ಅರಮನೆಗೆ ಬಂದನು.

೫. ಏಕಾಂತದಲ್ಲಿ ಆತ್ಮಾನುಸಂಧಾನ ಮಾಡುತ್ತ ಕುಳಿತಿದ್ದ ವಸಿಷ್ಠರನ್ನು ಕಂಡು ರಾಮನು ತಲೆಬಾಗಿ ದೂರದಿಂದಲೇ ನಮಸ್ಕರಿಸಿದನು.

೬. ಮಿಕ್ಕವರೂ ವಿನಯದಿಂದ ಆತನಿಗೆ ನಮಸ್ಕಾರಮಾಡಿ ಕತ್ತಲೆಯಡಗಿ ದಿಕ್ಕುಗಳೆಲ್ಲವೂ ಪ್ರಕಾಶವಾಗುವವರೆಗೂ ಅಂಗಳದಲ್ಲಿಯೇ ನಿಂತಿದ್ದರು.

೭. ದೇವತೆಗಳು ಬ್ರಹ್ಮಲೋಕಕ್ಕೆ ಬರುವಂತೆ, ರಾಜರೂ ರಾಜಪುತ್ರರೂ ಋಷಿಗಳೂ ಬ್ರಾಹ್ಮಣರೂ ಆ ಮುನೀಂದ್ರನ ಮನೆಗೆ ಬಂದರು.

೮. ಜನಗಳ ಗುಂಪುಗಳಿಂದಲೂ, ಆನೆ ಕುದುರೆ ರಥಗಳ ಗುಂಪುಗಳಿಂದಲೂ ಕೂಡಿ ಆ ವಸಿಷ್ಠರ ಮನೆಯು ರಾಜರ ಅರಮನೆಯಂತೆ ಶೋಭಿಸಿತು.

ಕ್ಷಣಾದ್ವಸಿಷ್ಠೋ ಭಗವಾನ್ವಿರರಾಮ ಸಮಾಧಿತಃ |
ಆಚಾರೇಣೋಪಚಾರೇಣ ಜಗ್ರಾಹ ಪ್ರಣತಂ ಜನಂ ॥ ೯ ॥

ತಥಾನುಯಾತೋ ಮುನಿಭಿರ್ವಿಶ್ವಾಮಿತ್ರಾನ್ವಿತೋ ಮುನಿಃ |
ಆರುರೋಹ ರಥಂ ಶ್ರೀಮಾನ್ಸಹಸಾಬ್ಜಮಿವಾಬ್ಜಜಃ ॥ ೧೦ ॥

ಯಯೌ ಗೃಹಂ ದಾಶರಥಂ ಸೈನ್ಯೇನ ಮಹತಾ ವೃತಃ |
ಬ್ರಹ್ಮೇವ ಶಕ್ರನಗರಂ ಸಮಸ್ತಸುರಮಾಲಿತಃ ॥ ೧೧ ॥

ವಿವೇಶಾವನತಾಂ ತತ್ರ ರಮ್ಯಾಂ ದಾಶರಥೀಂ ಸಭಾಂ |
ಹಂಸಯೂಥಾನುವಲಿತೋ ರಾಜಹಂಸ ಇವಾಬ್ಜಿನೀಂ ॥ ೧೨ ॥

---

೯. ಭಗವಾನ್ ವಸಿಷ್ಠರೂ ಕೂಡಲೇ ಸಮಾಧಿಯಿಂದ ಬಹಿರ್ಮುಖರಾಗಿ ತಮಗೆ ನಮಸ್ಕಾರಮಾಡಿದವರನ್ನೆಲ್ಲ ಯಥಾಯೋಗ್ಯವಾಗಿ ಉಪಚಾರಾದಿಗಳಿಂದ ಸತ್ಕರಿಸಿದರು.

೧೦. ಅನಂತರ ವಿಶ್ವಾಮಿತ್ರರೊಡಗೂಡಿ, ಇತರ ಮುನಿಗಳೂ ಜೊತೆಯಲ್ಲಿ ಬರುತ್ತಿರಲು, ಬ್ರಹ್ಮನು ಕಮಲಾಸನವನ್ನು ಏರುವಂತೆ, ರಥವನ್ನು ಏರಿದರು.

೧೧. ಸಮಸ್ತ ಸುರ ಪರಿವಾರಗಳೊಡನೆ ಬ್ರಹ್ಮನು ಅಮರಾವತಿಗೆ ಬರುವಂತೆ, ಮಹತ್ಸೈನ್ಯ ಸಮಾವೃತನಾಗಿ ದಶರಥನ ಅರಮನೆಗೆ ಬಂದರು.

೧೨. ಹಂಸಗಣಸಮೇತವಾದ ರಾಜಹಂಸವು ಪದ್ಮಸರಸ್ಸನ್ನು ಪ್ರವೇಶಿಸುವಂತೆ, ಆ ವಸಿಷ್ಠರು ಬಗ್ಗಿ ನಮಸ್ಕರಿಸುತ್ತಿರುವ ದಶರಥರಾಜನ ಸಭೆಯನ್ನು ಪ್ರವೇಶಿಸಿದರು.

ತ್ರೀಣಿ ತತ್ರ ಸದಾನ್ಯಾಶು ತದಾ ದಶರಥೋ ನೃಪಃ ।
ನಿರ್ಜಗಾಮ ಮಹಾವೀರಃ ಸಿಂಹಾಸನಸಮುತ್ಥಿತಃ ॥ ೧೩ ॥

ವಿವಿಶುಸ್ತತ್ರತೇ ಸರ್ವೇ ನೃಪಾ ದಶರಥಾದಯಃ ।
ವಸಿಷ್ಠಾದ್ಯಾಶ್ಚ ಮುನಯೋ ಋಷಯೋ ಬಾಹ್ಮಣಾಸ್ತಥಾ ॥ ೧೪ ॥

ಮಂತ್ರಿಣಶ್ಚ ಸುಮಂತಾದ್ಯಾಃ ಸೌಮ್ಯಾದ್ಯಾಶ್ಚ ವಿಪಶ್ಚಿತಃ ।
ರಾಜಪುತ್ರಾಶ್ಚ ರಾಮಾದ್ಯಾ ಮಂತ್ರಿಪುತ್ರಾಃ ಶುಭಾದಯಃ ॥ ೧೫ ॥

ಅಮಾತ್ಯಾದ್ಯಾಃ ಪ್ರಕೃತಯಃ ಸುಹೋತ್ರಾದ್ಯಾಶ್ಚ ನಾಗರಾಃ ।
ಮಾಲವಾದ್ಯಾಸ್ತಥಾ ಭೃತ್ಯಾಃ ಪೌರಾದ್ಯಾಶ್ಚೈವ ಮಾಲಿನಃ ॥ ೧೬ ॥

ಅಥ ತೇಷೂಪವಿಷ್ಟೇಷು ಸ್ವೇಷು ಸ್ವೇಷ್ವಾಸನೇಷು ಚ ।
ಸರ್ವೇಷ್ವೇವೋಪವಿಷ್ಟೇಷು ವಸಿಷ್ಠೋನ್ಮುಖದೃಷ್ಟಿಷು ॥ ೧೭ ॥

---

೧೩. ಮಹಾವೀರನಾದ ದಶರಥ ರಾಜೇಂದ್ರನು ಸಿಂಹಾಸನದಿಂದ ಎದ್ದು ಅವರನ್ನು ಎದುರುಗೊಳ್ಳಲು ಮೂರು ಹೆಜ್ಜೆ ಮುಂದೆ ಬಂದನು.

೧೪–೧೬. ದಶರಥನೇ ಮೊದಲಾದ ಭೂಪಾಲರೂ, ವಸಿಷ್ಠಾದಿ ಮುನೀಂದ್ರರೂ, ಋಷಿ ಬ್ರಾಹ್ಮಣರೂ, ಸುಮಂತ್ರಾದಿ ಮಂತ್ರಿಗಳೂ, ಸೌಮ್ಯ ಮೊದಲಾದ ವಿದ್ವಾಂಸರೂ, ರಾಮಾದಿ ರಾಜಪುತ್ರರೂ, ಶುಭಾದಿ ಮಂತ್ರಿ ಪುತ್ರರೂ, ಅಮಾತ್ಯಾದಿ ರಾಜಪುರುಷರೂ, ಸುಹೋತ್ರಾದಿ ನಾಗರರೂ, ಮಾಳವಾದಿ ಭೃತ್ಯಗಣಗಳೂ ಆ ಸಭೆಯನ್ನು ಸಾಲುಸಾಲಾಗಿ ಪ್ರವೇಶಿಸಿದರು.

೧೭. ಅವರೆಲ್ಲರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತು ವಸಿಷ್ಠರನ್ನೇ ನೋಡುತ್ತಿದ್ದರು.

ಸಭಾ ಕಲಕಲೇ ಶಾಂತೇ ಮೌನಸಂಸ್ಥೇಷು ವಂದಿಷು |
ನೃತ್ತಾಸು ಸ್ಥಿತಿವಾರ್ತಾಸು ಸೌಮ್ಯೇ ತಸ್ಮಿನ್ಸಭಾಂತರೇ ॥ ೧೮ ॥

ಸ್ಫುರತ್ಪವನಮಾಲಾಸು ಶತ್ಸ್ವಂಭೋಜಕೋಟರಾತ್ |
ಪರಾಗೇಷು ವಿಲೋಲೇಷು ಮುಕ್ತಾದಾಮಸು ಚಂಚಲಂ ॥ ೧೯ ॥

ಬೃಹತ್ಕುಸುಮದೋಲಾಭ್ಯಃ ಪ್ರಸೃತಾಭ್ಯಃ ಸಮಂತತಃ |
ವಾತಿ ಮಾಂಸಲಮಾಮೋದಮಾದಾಯ ಮಧುರಾನಿಲೇ ॥ ೨೦ ॥

ವಾತಾಯನೇಷು ಮೃದುಷು ಕುಸುಮಾಕೀರ್ಣಭೂಮಿಷು |
ಪರ್ಯಂಕೇಷೂಪವಿಷ್ಟಾಸು ಪಶ್ಯಂತೀಷು ಪುರಂಧ್ರಿಷು ॥ ೨೧ ॥

ಜಾಲಾಗತಾರ್ಕಕರಲೋಲವಿಲೋಚನಾಸು
ರತ್ನಪ್ರಭಾನಿಕರಪಿಂಗಲಕೋಮಲಾಸು ॥

---

೧೮. ಸಭೆಯಲ್ಲಿ ಸದ್ದೆಲ್ಲವೂ ಅಡಗಿತು. ಸ್ತುತಿ ಪಾಠಕರೂ ಸುಮ್ಮನಿದ್ದರು. ಪರಸ್ಪರ ಯೋಗಕ್ಷೇಮಗಳನ್ನು ಕೇಳಿದುದೂ ಆಯಿತು. ಸಭೆಯೆಲ್ಲವೂ ಸೌಮ್ಯವಾಯಿತು.

೧೯. ಗಾಳಿಯು ಸಣ್ಣಗೆ ಬೀಸುತ್ತ ಕಮಲದಲ್ಲಿದ್ದ ಪರಾಗವನ್ನು ಎತ್ತಿ ಚಂಚಲವಾದ ಮುಕ್ತಹಾರಗಳ ಮೇಲೆ ಚೆಲ್ಲುತ್ತಿತ್ತು.

೨೦. ಹೂಗಾಳಿಯು ಸಭಾ ಮಂದಿರದ ಸುತ್ತಲೂ ಇದ್ದ ದೊಡ್ಡ ದೊಡ್ಡ ಕುಸುಮಕರಂಡಗಳಿಂದ ಸುಖವಾದ ಸುವಾಸನೆಯನ್ನು ಹೊತ್ತು ತರುತ್ತಿತ್ತು.

೨೧. ಅಂತಃಪುರ ಸ್ತ್ರೀಯರು ಕಿಟಕಿಗಳಲ್ಲಿ ಹೂವಿನ ಮಂಚಗಳಲ್ಲಿ ಕುಳಿತು ನೋಡುತ್ತಿದ್ದರು.

ಸಂತ್ಯಕ್ತಚಾಪಲಲವಂ ಚಪಲಾಸು ತಾಸು |
ಮೌನಸ್ಥಿತಾಸು ಸಿತಚಾಮರಧಾರಿಣೀಷು || ೨೨ ||

ಮುಕ್ತಾಫಲಪ್ರತಿಫಲಪ್ರತಿಮಾರ್ಕರಶ್ಮಿ
ರಾಗೋದರಾಸ್ವಜಿರಭೂಮಿಸು ಪುಷ್ಪಕೌಘಂ ||
ನಾಸಾದಯತ್ಯಭಿನವಾತಪಬಿಂಬ ಬುದ್ಧ್ಯಾ |
ಭ್ರಾಂತೇ ಭ್ರಮತ್ಯಲಿಕುಲೇ ನಭಸೀವ ಮೇಘೇ || ೨೩ ||

ಪುಣ್ಯೈರ್ವಸಿಷ್ಠವದನಪ್ರಸೃತಂ ಶ್ರುತಂ ಯತ್
ತತ್ಸಂತತಿಪ್ರಸೃತವಿಸ್ಮಯಮಾರ್ಯಲೋಕೇ ||
ತತ್ಸಂಗಮೇ ಮೃದುಪದಾಕ್ಷರಮುಗ್ಧವಾಕ್ಯ
ಮನ್ಯೋನ್ಯಮಾಪ್ಸಿತಮನಲ್ಪಗುಣಾಭಿರಾಮಂ || ೨೪ ||

---

೨೨. ಹೊರಗಿನಿಂದ ಬರುತ್ತಿರುವ ಸೂರ್ಯಕಿರಣಗಳಿಂದ ಅಲೆಯುತ್ತಿರುವ ಕಣ್ಣುಗಳುಳ್ಳವರಾದರೂ ಭೂಷಣ ರತ್ನಕಾಂತಿಗಳಿಂದ ಮನೋಹರೆಯರಾಗಿ, ಆ ಚಾಮರಧಾರಿಣಿಯರು ಏನೂ ಚೇಷ್ಟೆಯಿಲ್ಲದೆ ಸ್ಥಿರವಾಗಿಯೂ ಮೌನವಾಗಿಯೂ ನಿಂತಿದ್ದರು.

೨೩. ಮುತ್ತುಗಳ ಪ್ರತಿಬಿಂಬದಂತೆ ಹೊಳೆಯುತ್ತ ಸೂರ್ಯಕಿರಣಗಳು ಅಲ್ಲಿಲ್ಲ ಹರಡಿರಲು, ಆಕಾಶದಲ್ಲಿ ತಿರುಗುವ ಮೇಘಗಳಂತೆ, ಭ್ರಮರಗಳು ಅಲ್ಲಿ ಸುತ್ತಿ ಸುತ್ತಿ ಬರುತ್ತ, ಕೇಸರಿ ಬಣ್ಣವನ್ನು ಮುಕ್ಕುಳಿಸಿದಂತಿರುವ ಸಭೆಯಲ್ಲಿರುವ ಹೂಗಳನ್ನೇ ಸೂರ್ಯಬಿಂಬವೆಂದು ಭಾವಿಸಿಕೊಂಡು ಮುತ್ತುತ್ತಿರಲಿಲ್ಲ.

೨೪. “ಪೂರ್ವಪುಣ್ಯದಿಂದ ವಸಿಷ್ಠರ ಉಪದೇಶವನ್ನು ಕೇಳಿದೆವು. ಅದು ಎಷ್ಟು ವಿಸ್ಮಯಕಾರಕವಾಗಿತ್ತು” ಎಂದು ಅಲ್ಲಿ ನೆರೆದಿದ್ದ ಸತ್ಪುರುಷರೆಲ್ಲರೂ ಒಬ್ಬರಿಗೆ ಒಬ್ಬರು ಮೃದುವಾಗಿ, ಸುಂದರವಾಗಿ, ಪ್ರಶಂಸಾ ವಾಕ್ಯಗಳನ್ನು ಹೇಳಿಕೊಳ್ಳುತ್ತಿದ್ದರು.

ದಿಗ್ಭ್ಯಃ ಪುರಾಚ್ಚ ಗಗನಾಚ್ಚ ವನಾಚ್ಚ ಸಿದ್ಧ
ವಿದ್ಯಾಧರಾರ್ಯಮುನಿವಿಪ್ರಗಣೇ ವಸಿಷ್ಠಂ ||
ಮೌನಪ್ರಣಾಮಮಭಿತಃ ಪ್ರವಿಶತ್ಯಶಬ್ದಂ |
ಸೋಪಾಂಶು ಗೌರವವತಾ ಸಹ ಜಾತವಾರ್ತೇ || ೨೫ ||

ಉನ್ನಿದ್ರಕೋಕನದಕೋಮಲಕೋಶಕೃಷ್ಟ
ಮುಗ್ನಾಲಿಜಾಲಮಕರಂದಸುವರ್ಣರಾಗೈಃ ||
ಆಪಿಂಗಲೇ ಮರುತಿ ವಾತಿ ವಿಲೋಲಘಂಟಾ
ಟಂಕಾರಗೀತ ವಿನಿಪೀತ ನಿಶಾಂತಗೀತೇ || ೨೬ ||

ಅಗುರುತಗರಧೂಮೇ ಚಂದನಾಮೋದಮಿಶ್ರೇ |
ಸರಸಕುಸುಮದಾಮೋದ್ದಾಮಗಂಧಾಂಕಿತಾಭ್ರೇ ||

---

೨೫. ದಿಕ್ಕು ದಿಕ್ಕುಗಳಿಂದಲೂ, ಪಟ್ಟಣ, ಅಂತರಿಕ್ಷ, ವನಗಳಿಂದಲೂ ಬಂದಿರುವ ಸಿದ್ಧ ವಿದ್ಯಾಧರ, ಮುನಿ, ವಿಪ್ರಗಣಗಳೆಲ್ಲವೂ ವಸಿಷ್ಠರಿಗೆ ಮೌನವಾಗಿ ಪ್ರಣಾಮ ಮಾಡಿ, ಅಲ್ಲಿದ್ದ ದೊಡ್ಡವರೊಡನೆ ಗದ್ದಲವಾಗದಂತೆ ಮಾತನಾಡಿಕೊಳ್ಳುತ್ತಿದ್ದರು.

೨೬. ಆಗತಾನೇ ಅರಳಿದ ಕಮಲಗಳಿಂದ ಹಾರಿಬಂದ ದುಂಬಿಗಳ ಮೈಯ್ಯಿಂದ ಉದುರಿದ ಪರಾಗಗಳಿಂದ ಚಿನ್ನದ ಬಣ್ಣವನ್ನು ಪಡೆದ ಮಂದ ಮಾರುತವು ಸಭಾ ಗೃಹದ ಕಿರು ಗಂಟೆಗಳನ್ನು ಅಲ್ಲಾಡಿಸಿ, ಪ್ರಾತಃಕಾಲ ಗಾನವನ್ನೆಲ್ಲ ಮುಚ್ಚಿಬಿಡುತ್ತಿತ್ತು.

೨೭. ಅಲ್ಲಿ ಅಗಿಲು ಮೊದಲಾದ ಧೂಪಗಳ ಧೂಮವು ವ್ಯಾಪಿಸಿತ್ತು. ಅಲ್ಲಿದ್ದವರು ಲೇಪಿಸಿಕೊಂಡಿದ್ದ ಚಂದನಾದಿಗಳ ಪರಿಮಳವೂ ಧರಿಸಿಕೊಂಡಿದ್ದ ಸರಸ ಕುಸುಮ ಮಾಲೆಗಳ ಸುವಾಸನೆಯೂ ತುಂಬಿತ್ತು. ಆ ಸಭೆಯ ಮೇಲ್ಕಟ್ಟಿನ

ಸರತಿ ಸತಿ ವಿತಾನಾಂಭೋರುಹಾವೋದಲೇಶ್ರೈ
ಶ್ಚಲಕುಸುಮರಜೋಂಕೇ ಶಬ್ದವಿಜ್ಞಾತಭೃಂಗಂ ॥ ೨೭ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ಸಭಾ ಸಂಸ್ಥಾನ ವರ್ಣನಂ" ನಾಮ ತ್ರಿತೀಯಃ ಸರ್ಗಃ ।

ಹೂಗಳಿಂದ ಪರಾಗವು ಸುರಿಯುತ್ತಿತ್ತು. ಇವುಗಳ ನಡುವೆ ಹಾರಾಡುತ್ತಿದ್ದ ದುಂಬಿಗಳನ್ನು ಅವುಗಳ ಶಬ್ದಮಾತ್ರದಿಂದಲೇ ತಿಳಿಯಬೇಕಾಗಿತ್ತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಸಭಾಸಂಸ್ಥಾನ ವರ್ಣನ" ವೆಂಬ ಮೂರನೆಯ ಸರ್ಗವು.

ಚತುರ್ಥಃ ಸರ್ಗಃ

ಶ್ರೀ ವಾಲ್ಮೀಕಿರುವಾಚ :—

ಮೇಘಗಂಭೀರಯಾ ವಾಚಾ ವಿಸ್ರಬ್ಧ ಪದಸುಂದರಂ।
ಇದಂ ದಶರಥೋ ವಾಕ್ಯಮುವಾಚ ಮುನಿನಾಯಕಂ ॥ ೧ ॥

ಭಗವನ್ ಹ್ಯಸ್ತನೇನ ತ್ವಂ ವಾಕ್ಯಸಂದರ್ಭಜನ್ಮನಾ ।
ಕಚ್ಚಿನ್ನ ಕ್ಲಾಂತೋಽಸಿ ಖೇದೇನ ತಪಃಕಾರ್ಶಾತಿಶಾಯಿನಾ ॥ ೨ ॥

ಹ್ಯಸ್ತನೋಕ್ತೋ ಯ ಆನಂದೀ ವಿವಿಕ್ತೋ ವಚಸಾಂ ಗಣಃ ।
ಅಮೃತಾವರ್ಷಣೇನೇವ ತೇನೈವಾಶ್ವಾಸಿತಾ ವಯಂ ॥ ೩ ॥

ನಾಲ್ಕನೆಯ ಸರ್ಗವು

ಶ್ರೀ ವಾಲ್ಮೀಕಿಯು ಹೇಳಿದನು :—

೧. ದಶರಥ ಮಹಾರಾಜನು ಮೇಘಧ್ವನಿಯಂತೆ ಗಂಭೀರವಾದ, ಕಂಠದಿಂದ ಅತಿ ಸ್ಪಷ್ಟವಾದ ಮಾತುಗಳಿಂದ ಸುಂದರವಾದ, ಈ ವಾಕ್ಯವನ್ನು ವಸಿಷ್ಠರಿಗೆ ಹೇಳಿದನು.

೨. ಭಗವಂತನೆ, ನಿನ್ನೆಯ ಉಪನ್ಯಾಸದಿಂದ ನಿನಗೆ ತಪಸ್ಸುಮಾಡುವುದಕ್ಕಿಂತ ಹೆಚ್ಚಿನ ಆಯಾಸವು ಆಯಿತು. ಆ ಆಯಾಸವು ಇವೊತ್ತು ಇಲ್ಲ ತಾನೆ?

೩. ನಿನ್ನೆಯದಿನ ನೀನು ಆನಂದಜನಕವೂ ಸ್ಪಷ್ಟಾರ್ಥವೂ ಆದ ಉಪದೇಶವನ್ನು ಮಾಡಿದೆ. ಅದನ್ನು ಕೇಳಿ ನಾವು ಅಮೃತವರ್ಷದಿಂದ ಆದಷ್ಟು ಆನಂದವನ್ನು ಪಡೆದೆವು.

ಚಂದ್ರಾಂಶವ ಇವೋತ್ಸಾರ್ಯ ತಮಾಂಸ್ಯಮೃತನಿರ್ಮಲಾಃ |
ಅಂತಃಶೀತಲಯಂತ್ಯೇತಾ ಮಹತಾ ಮಮಲಾ ಗಿರಃ ||೪||

ಅಪೂರ್ವಾಹ್ಲಾದದಾಯಿನ್ಯ ಉಚ್ಚೈಸ್ತರಪದಾಶ್ರಯಾಃ |
ಅತಿಮೋಹಾಪಹಾರಿಣ್ಯಃ ಸೂಕ್ತಯೋ ಹಿ ಮಹೀಯಸಾಂ ||೫||

ಆತ್ಮರತ್ನಾವಲೋಕೈಕದೀಪಿಕಾ ಸರಸಾತ್ಮಿಕಾ |
ಯಸ್ಮಾದ್ಯುಕ್ತಿಲತೋದೇತಿ ಸ ವಂದ್ಯಃ ಸುಜನದ್ರುಮಃ ||೬||

ದುರೀಹಿತಂ ದುರ್ವಿಹಿತಂ ಸರ್ವಂ ಸಜ್ಜನಸೂಕ್ತಯಃ |
ಪ್ರಮಾರ್ಜಯಂತಿ ಶೀತಾಂಶೋಸ್ತಮಃ ಕಾಂಡಮಿವಾಂಘ್ರಯಃ ||೭||

---

೪. ಮಹಾತ್ಮರ ನಿರ್ಮಲವಾದ ವಾಕ್ಯಗಳು ಚಂದ್ರ ಕಿರಣಗಳಂತೆ, ಅಮೃತದಂತೆ ಶುದ್ಧವಾಗಿದ್ದು ಅಂಧಕಾರವನ್ನು ಓಡಿಸಿ ಅಂತರಂಗದಲ್ಲಿ ತಂಪನ್ನುಂಟುಮಾಡುವುವು.

೫ ಮಹಾತ್ಮರ ವಚನಗಳು ಅಪೂರ್ವವಾದ ಆನಂದವನ್ನು ಉಂಟುಮಾಡುವುವು: ಅತ್ಯುತ್ತಮ ಪದವಿಯನ್ನು ತೋರಿಸುವುವು: ಅತಿಯಾಗಿದ್ದ ಮೋಹವನ್ನು ಕಳೆಯುವುವು.

೬. ಆತ್ಮವೆಂಬ ರತ್ನವನ್ನು ತೋರಿಸುವ ಒಂದೇ ಒಂದು ದೀಪವಾಗಿರುವ, ಸರಸವಾದ ಯುಕ್ತಿ ಎಂಬ ಲತೆಯು ಉದಯಿಸುವುದಕ್ಕೆ ಕಾರಣವಾದ ಸಜ್ಜನ ದ್ರುಮಕ್ಕೆ ವಂದನೆಯು.

೭. ಚಂದ್ರನ ಕಿರಣಗಳು ತಮಸ್ಸನ್ನು ತೊಡೆದುಹಾಕುವಂತೆ, ಸಜ್ಜನರ ವಾಕ್ಯಗಳು ದುರಭಿಪ್ರಾಯಗಳನ್ನೂ ದುಷ್ಕಾರ್ಯಗಳನ್ನೂ ಸಂಪೂಣವಾಗಿ ತೊಡೆದುಹಾಕುವುವು.

ತೃಷ್ಣಾಲೋಭಾದಯೋಽಸ್ಮಾಕಂ ಸಂಸಾರನಿಗಡಾ ಮುನೇ ।
ತವೋಕ್ತ್ಯಾ ತನುತಾಂ ಯಾತಾಃ ಶರದೀವಾಸಿತಾಂಬುದಾಃ ॥ ೮ ॥

ಸಂಪ್ರವೃತ್ತಾ ವಯಂ ದ್ರಷ್ಟುಮಾತ್ಮಾನಮುಪಕಲ್ಮಷಂ ।
ರಸಾಂಜನಾನೀತದೃಶೋ ಜಾತ್ಯಂಧಾ ಇವ ಕಾಂಚನಂ ॥ ೯ ॥

ಸಂಸಾರವಾಸನಾನಾಮ್ನೀ ಮಿಹಿಕಾ ಹೃದಯಾಂಬರೇ ।
ಪ್ರವೃತ್ತಾ ತನುತಾಂ ಗಂತುಂ ತ್ವದುಕ್ತಿಶರದೇವ ನಃ ॥ ೧೦ ॥

ಮುನೇ ಮಂದಾರಮಂಜರ್ಯಸ್ತರಂಗಾ ವಾಮೃತಾಂಭಸಃ ।
ನ ತಥಾ ಹ್ಲಾದಯತ್ಯಂತರ್ಯಥೋದಾರಧಿಯಾಂ ಗಿರಃ ॥ ೧೧ ॥

---

೮. ಶರತ್ಕಾಲದಲ್ಲಿ ತೆಳುವಾಗುವ ಕರಿಯ ಮೋಡಗಳಂತೆ, ನಿನ್ನ ಮಾತನ್ನು ಕೇಳಿದ ನಮಗೆ, ನಮ್ಮ ತೃಷ್ಣಾಲೋಭ ಮೊದಲಾದ ಸಂಸಾರ ಶೃಂಖಲೆಗಳು ಸವೆದು ಹೋದುವು.

೯. ರಸಾಂಜನದಿಂದ ದೃಷ್ಟಿಯನ್ನು ಪಡೆದ ಹುಟ್ಟು ಕುರುಡರು ಚಿನ್ನವನ್ನು ನೋಡ ಹೊರಡುವಂತೆ ನಾವೂ ಈಗ ಶುದ್ಧನಾದ ಆತ್ಮನ ದರ್ಶನವನ್ನು ಬಯಸಿರುವೆವು.

೧೦. ನಮ್ಮ ಹೃದಯದಲ್ಲಿದ್ದ ಸಂಸಾರವೆಂಬ ಹಿಮದ ಗುಂಪು ತಮ್ಮ ಸೂಕ್ತಿಗಳೆಂಬ ಶರತ್ಕಾಲದ ಪ್ರಭಾವದಿಂದಲೋ ಎಂಬಂತೆ ತೆಳುವಾಗುತ್ತಿರುವುವು.

೧೧. ಮಹಾಮುನಿಯೇ, ಜ್ಞಾನಿಗಳ ಮಾತುಗಳಿಂದ ಅಂತಃಕರಣವು ತಣಿಯುವಂತೆ, ಕಲ್ಪವೃಕ್ಷದ ಹೂ ಗೊಂಚಲುಗಳಿಂದಲೂ ಅಮೃತತರಂಗಗಳಿಂದಲೂ ತಣಿಯುವುದಿಲ್ಲ.

ಯದ್ಯದ್ರಾಘವ ಸಂಯಾತಿ ಮಹಾಜನಸಪರ್ಯಯಾ ।
ದಿನಂ ತದಿಹ ಸಾಲೋಕಂ ಶೇಷಾಸ್ತ್ವಂಧಾ ದಿನಾ ಲಯಾಃ ॥ ೧೨ ॥

ರಾಮ ರಾಜೀವಪತ್ರಾಕ್ಷ ಪ್ರಕೃತಾರ್ಥಮಿಹಾವ್ಯಯಂ ।
ಮುನಿವರಾಬೋಧಯ ಪುನಃ ಪ್ರಸಾದೇ ಸಮವಸ್ಥಿತಂ ॥ ೧೩ ॥

ಇತ್ಯುಕ್ತೋ ಭೂಭೃತಾ ತತ್ರ ರಾಮಾಭಿಮುಖಮಾಸ್ಥಿತಃ ।
ಉವಾಚೇರಮುದಾರಾತ್ಮಾ ವಸಿಷ್ಠೋ ಭಗವಾನ್ಮುನಿಃ ॥ ೧೪ ॥

ಶ್ರೀ ವಸಿಷ್ಠ ಉವಾಚ :—

ರಾಘವ ಸ್ವಕುಲೈಕೇಂದೋ ಯನ್ಮಯೋಕ್ತಂ ಮಹಾಮತೇ ।
ಕಚ್ಚಿತ್ಸ್ಮರಸಿ ವಾಕ್ಯಾರ್ಥಂ ಪೂರ್ವಾಪರವಿಚಾರಿತಂ ॥ ೧೫ ॥

---

೧೨. ರಾಮ, ಮಹಾಪುರುಷರ ಸೇವೆಯಿಂದ ಕಳೆದ ದಿವಸವೇ ದಿವಸವು. ಮಿಕ್ಕವೆಲ್ಲ ತಾಮಸಗಳು, ವ್ಯರ್ಥಗಳು.

೧೩. ರಾಜೀವ ಲೋಚನನಾದ ರಾಮನೆ, ಅನುಗ್ರಹಿಸಲು ಸಿದ್ಧರಾಗಿ ಬಂದಿರುವ ವಸಿಷ್ಠ ಮಹರ್ಷಿಯನ್ನು ಅವಶೇಷವಾಗಿರುವ ಪ್ರಕೃತಾರ್ಥವನ್ನು ಕುರಿತು ಕೇಳುವನಾಗು.

೧೪. ಮಹಾರಾಜನು ಹೀಗೆ ಹೇಳಲು ಭಗವಂತನಾದ ವಸಿಷ್ಠಮಹರ್ಷಿಯು ರಾಮನ ಕಡೆಗೆ ತಿರುಗಿ ಹೀಗೆ ಹೇಳಿದನು :—

ಶ್ರೀ ವಸಿಷ್ಠನು ಹೇಳಿದನು :—

೧೫. ರಘುವಂಶಕ್ಕೆ ಚಂದ್ರನಂತಿರುವ ಎಲೈ ರಾಮನೇ, ಮಹಾಮತಿಯಾದ ನೀನು ಇದುವರೆಗೆ ಹೇಳಿದುದನ್ನೆಲ್ಲ ಪೂರ್ವೋತ್ತರಗಳೊಡನೆ ಚೆನ್ನಾಗಿ ಚಿಂತಿಸಿರುವೆಯಾ ?

ಉತ್ಪತ್ತೀನಾಂ ವಿಚಿತ್ರಾಣಾಂ ಸತ್ತ್ವಾದಿಗುಣಭೇದತಃ ।
ಕಚ್ಚಿತ್ಸ್ಮರಸಿ ಸರ್ವಾಸಾಂ ವಿಭಾಗಮರಿಮರ್ದನ ॥ ೧೬ ॥

ಕಚ್ಚಿತ್ಸರ್ವಮಸರ್ವಂ ಚ ಸದಸಚ್ಚ ಸದೋದಿತಂ ।
ರೂಪಂ ಸ್ಮರಸಿ ವೇತ್ಸ್ಯೇವ ವಿವಿಕ್ತಂ ಪರಮಾತ್ಮನಃ ॥ ೧೭ ॥

ಯಥೇದಮುದಿತಂ ವಿಶ್ವಂ ವಿಶ್ವೇಶಾದೇವ ಚೇಶ್ವರಾತ್ ।
ಕಚ್ಚಿತ್ಸ್ಮರಸಿ ತತ್ಸಾಧೋ ಸಾಧುವಾದೈಕಭಾಜನ ॥ ೧೮ ॥

ರೂಪಂ ಕಚ್ಚಿದವಿದ್ಯಾಯಾ ಬಲಾದ್ಭಂಗುರಮಾತತಂ ।
ಅನಂತಮಂತವಚ್ಚೈವ ಸಮ್ಯಕ್ಸ್ಮರಸಿ ಸನ್ಮತೇ ॥ ೧೯ ॥

ಚಿತ್ತಮೇವ ನರೋ ನಾನ್ಯದಿತಿ ಯುಕ್ತ್ಯತಿಪಾದಿತಂ ।
ಲಕ್ಷಣಾದಿವಿಚಾರೇಣ ಕಚ್ಚಿತ್ಸ್ಮರಸಿ ಸಾಧು ತತ್ ॥ ೨೦ ॥

---

೧೬. ಶತ್ರುಮರ್ದನನೆ, ಸತ್ವ, ರಜಸ್, ತಮೋಗುಣಭೇದದಿಂದ ಆಗುವ ವಿಚಿತ್ರ ಚಿತ್ರವಾದ ಸೃಷ್ಟಿಯೆಲ್ಲವೂ ನೆನಪಿನಲ್ಲಿರುವುದೆ ?

೧೭. ಸರ್ವಜಗದ್ರೂಪವಾಗಿದ್ದರೂ ಶೂನ್ಯವಾಗಿ, ಸತ್ತಾಗಿರುವಂತೆ ತೋರಿದರೂ ಅಸತ್ತಾಗಿ, ಯಾವಾಗಲೂ ಇದ್ದೇ ಇರುವುದಾದ ಪರಮಾತ್ಮನ ಸ್ವರೂಪವೂ ಚೆನ್ನಾಗಿ ಮನಸ್ಸಿಗೆ ಬಂತೆ ?

೧೮. ಎಲೈ ಸಾಧುವೆ, ಸಾಧುವೆಂದೆನ್ನಿಸಿಕೊಳ್ಳಲು ಯೋಗ್ಯನಾದವನೆ, ಸರ್ವೇಶ್ವರನಾದ ಪರಮಾತ್ಮನಿಂದ ಈ ಜಗತ್ತು ಹೇಗೆ ಉದಯಿಸಿತು ಎಂಬುದು ಅರ್ಥವಾಯಿತೆ ?

೧೯. ಪೌರುಷ ಮಾಡಿದರೆ ಮುರಿದು ಬೀಳುವ ಅವಿದ್ಯೆಯ ವಿಶ್ವರೂಪವನ್ನೂ, ಅದು ಅನಂತವಾಗಿರುವಂತೆ ತೋರಿದರೂ ಸಾಂತವಾಗಿರುವುದನ್ನೂ, ಎಲೈ ಸದ್ಬುದ್ಧಿಯೇ, ಮನಸ್ಸಿನಲ್ಲಿ ಧರಿಸಿದೆಯಾ ?

೨೦. ಲಕ್ಷಣ ಪ್ರಮಾಣಗಳಿಂದ ಮನುಷ್ಯನು ಎಂಬುದು ಚಿತ್ತವೇ ಹೊರತು ಬೇರೆಯಲ್ಲ ಎಂದು ಪ್ರತಿಪಾದಿಸಿದುದನ್ನು ಅರಿತುಕೊಂಡೆಯಾ ?

ವಾಕ್ಯಾರ್ಥಶ್ಚಾಖಿಲಃ ಕಚ್ಚಿತ್ತ್ವಯಾ ರಾಮ ವಿಚಾರತಃ |
ಹ್ಯಸ್ತನಸ್ಯ ವಿಚಾರಸ್ಯ ರಾತ್ರೌ ಹೃದಿ ನಿವೇಶಿತಃ || ೨೧ ||

ಭೂಯೋಭೂಯಃ ಪರಾಮೃಷ್ಟಂ ಹೃದಯೇ ಸುನಿಯೋಜಿತಂ |
ಪ್ರಯೋಜನಂ ಫಲತ್ಯುಚ್ಚೈರ್ನ ಹೇಲಾಹತಸಂಸ್ಥಿತೈಃ || ೨೨ ||

ಭಾಜನಂ ತ್ವಂ ವಿವಿಕ್ತಾನಾಂ ವಚಸಾಂ ಶುದ್ಧಿಶಾಲಿನಾಂ |
ವಿವಿಕ್ತಹೃದಯಃ ಕಂಠೇ ಮುಕ್ತಾನಾಮಿವ ರಾಘವ || ೨೩ ||

ಶ್ರೀ ವಾಲ್ಮೀಕಿರುವಾಚ :—

ಕಮಲಾಸನಪುತ್ರೇಣ ಮುನಿನಾ ಸ ಮಹೌಜಸಾ |
ಏವಂ ವಿತೀರ್ಣಾವಸರೋ ರಾಮೋ ವಾಕ್ಯಮುವಾಚ ಹ || ೨೪ ||

---

೨೧. ಇದುವರೆಗಿನ ವಾಕ್ಯಾರ್ಥವನ್ನೆಲ್ಲ ವಿಚಾರಮಾಡಿ ನೋಡಿದೆಯಾ? ನಿನ್ನೆಯ ದಿನದ ವಿಚಾರವನ್ನು ರಾತ್ರಿ ಅನುಸಂಧಾನಮಾಡಿದೆಯಾ?

೨೨. ಉಪದೇಶವು ಮತ್ತೆ ಮತ್ತೆ ಪರಾಮರ್ಶಮಾಡಿ, ಹೃದಯದಲ್ಲಿ ಚೆನ್ನಾಗಿ ಧರಿಸಿಕೊಂಡರೆ, ಉತ್ತಮವಾದ ಪ್ರಯೋಜನವನ್ನು ಕೊಡುವುದು. ಅನಾದರದಿಂದ ನೋಡುವವನಿಗೆ ಅದು ನಿಷ್ಫಲವಾಗುವುದು.

೨೩. ವಿಶಾಲವಾದ ಎದೆಯುಳ್ಳವನು ಕತ್ತಿನಲ್ಲಿ ಮುಕ್ತಾಸರವನ್ನು ಧರಿಸಲು ಯೋಗ್ಯನಾಗಿರುವಂತೆ, ನೀನೂ ಉತ್ತಮವಾದ ಉದಾರವಾದ, ಪರಿಶುದ್ಧವಾದ, ಉಪದೇಶಕ್ಕೆ ಪಾತ್ರನಾಗಿರುವೆ.

ಶ್ರೀ ವಾಲ್ಮೀಕಿಯು ಹೇಳಿದನು:—

೨೪. ಬ್ರಹ್ಮಮಾನಸಪುತ್ರನೂ ಮಹಾತೇಜಸ್ವಿಯೂ ಆದ, ವಸಿಷ್ಠ ಮಹರ್ಷಿಯು ಹೀಗೆ ಕೇಳಲು ರಾಮನು ಹೇಳಿದನು:—

ಶ್ರೀ ರಾಮ ಉವಾಚ :—

ಭಗವನ್ಸರ್ವಧರ್ಮಜ್ಞ ತವೈವೈತದ್ವಿಜೃಂಭಿತಂ |
ಯದಹಂ ಪರಮೋದಾರೋ ಬುದ್ಧವಾನ್ವಚನಂ ತವ ॥ ೨೫ ॥

ಯದಾದಿಶಸಿ ತತ್ಸರ್ವಂ ತಥೈವ ನ ತದನ್ಯಥಾ |
ಅಪಾಸ್ತನಿದ್ರೇಣ ಮಯಾ ವಾಕ್ಯಾರ್ಥೋ ಹೃದಿ ಚಿಂತಿತಃ ॥ ೨೬ ॥

ಭವಾಂಧಕಾರಕ್ಷತಯೇ ಭವತೋಕ್ತಿವಿವಸ್ವತಾ |
ಹ್ಯಃಪ್ರಸಾದಿತಮಾಹ್ಲಾದಿ ವಾಗ್ರಶ್ಮಿಪಟಲಂ ಪ್ರಭೋ ॥ ೨೭ ॥

ತದತೀತಮುದೀನಾತ್ಮನ್ ಸರ್ವಮಂತಃಕೃತಂ ಮಯಾ |
ರಮ್ಯಂ ಪುಣ್ಯಂ ಪವಿತ್ರಂ ಚ ರತ್ನವೃಂದಮಿವಾಸ್ಥಿತಂ ॥ ೨೮ ॥

ಶ್ರೀರಾಮನು ಹೇಳಿದನು :—

೨೫. ಸರ್ವಧರ್ಮಜ್ಞನಾದ ಭಗವಂತನೆ, ನಿನ್ನ ಉತ್ತಮವಾದ ಉಪದೇಶವು ನನಗೆ ಅರ್ಥವಾದುದೂ ಕೂಡ ನಿನ್ನ ಪ್ರಭಾವದಿಂದಲೇ!

೨೬. ಎಲ್ಲವೂ ನೀನು ಹೇಳಿದಂತಿರುವುದೇ ಹೊರತು ಅನ್ಯಥಾ ಇಲ್ಲ ಎಂಬುದನ್ನು ರಾತ್ರಿಯೆಲ್ಲ ನಿದ್ರೆಯನ್ನೂ ಬಿಟ್ಟು ಮನನಮಾಡಿ ತಿಳಿದುಕೊಂಡೆನು.

೨೭. ಸಂಸಾರವೆಂಬ ಅಂಧಕಾರವು ತೊಲಗಲೆಂದು ನಿನ್ನ ಉಪದೇಶವೆಂಬ ಸೂರ್ಯನಿಂದ ಆನಂದಕರವಾದ ವಾಕ್ಯಗಳೆಂಬ ಕಿರಣಗಳನ್ನು ಅನುಗ್ರಹಿಸಿದೆ.

೨೮. ಅದರಿಂದ, ಎಲೆ ಅದೀನಾತ್ಮನಾದ ಮಹರ್ಷಿಯೆ, ರಮ್ಯವೂ ಪುಣ್ಯವೂ ಪವಿತ್ರವೂ ಆದ ನಿನ್ನ ಉಪದೇಶವನ್ನೆಲ್ಲ ರತ್ನಸಮೂಹವನ್ನು ಭದ್ರವಾಗಿಡುವಂತೆ ನನ್ನ ಅಂತಃಕರಣದಲ್ಲಿ ತುಂಬಿಟ್ಟುಕೊಂಡಿರುವೆನು.

ಹಿತಾನುಬಂಧಿ ಹೃದ್ಯಂಚ ಪುಣ್ಯಮಾನಂದಸಾಧನಂ ।
ಶಿರಸಾ ಧ್ರಿಯತೇ ಕೈರ್ನೋ ಸಿದ್ಧೈಸ್ತ್ವದನುಶಾಸನಂ ॥ ೨೯ ॥

ಪ್ರತಿಕ್ಷಿಪಂತಃ ಸಂಸಾರಮಿಹಿಕಾವರಣಂ ವಯಂ ।
ಪ್ರಸನ್ನಾಸ್ತ್ವತ್ಪ್ರಸಾದೇನ ವರ್ಷಾಂತ ಇವ ವಾಸರಾಃ ॥ ೩೦ ॥

ಆಪಾತಮಧುರಾರಂಭಂ ಮಧ್ಯೇ ಸೌಭಾಗ್ಯವರ್ಧನಂ ।
ಅನುತ್ತಮಫಲೋದರ್ಕಂ ಪುಣ್ಯಂ ತ್ವದನುಶಾಸನಂ ॥ ೩೧ ॥

ಪಿಕಾಸಿ ಸಿತಮಮ್ಲಾನಮಾಹ್ಲಾದಿತಶುಭಾಶುಭಂ ।
ತ್ವದ್ವಚಃ ಕುಸುಮಂ ನಿತ್ಯಂ ಶ್ರೀಮತ್ಫಲದಮಸ್ತು ನಃ ॥ ೩೨ ॥

---

೨೯. ಹಿತಪ್ರದವಾಗಿ, ಮುದ್ದಾಗಿ, ಪುಣ್ಯವಾಗಿ, ಆನಂದಸಾಧನವಾಗಿ, ಇರುವ ನಿನ್ನ ಈ ಅನುಶಾಸನವನ್ನು ಸಿದ್ಧಪುರುಷರೂ ಕೂಡ ಶಿರಸ್ಸಿನಲ್ಲಿ ಧರಿಸುವರು.

೩೦. ವರ್ಷರ್ತುವಿನ ಕೊನೆಯ ದಿವಸಗಳಂತೆ, ನಾವೂ ಸಂಸಾರವೆಂಬ ಹಿಮಸಂತತಿಯನ್ನು ನಿನ್ನ ಅನುಗ್ರಹದಿಂದ ಕಳೆಯಬಲ್ಲವರಾದೆವು.

೩೧. ಪುಣ್ಯಕರವಾದ ನಿನ್ನ ಅನುಶಾಸನವು ಶ್ರವಣಕಾಲದಲ್ಲಿಯೂ ಮಧುರವಾಗಿರುವುದು. ಮನನಾದಿಕಾಲದಲ್ಲಿಯೂ ಶಮಾದಿ ಸೌಭಾಗ್ಯವನ್ನು ವೃದ್ಧಿಗೊಳಿಸುವುದು. ಮುಂದೆ ಉತ್ತರ ಕಾಲದಲ್ಲಿ ಅನುತ್ತಮವಾದ ಫಲಕ್ಕೆ ಕಾರಣವಾಗುವುದು.

೩೨. ಸರ್ವದಾ ಅರಳುತ್ತಲೇ ಇದ್ದು, ಶುಭ್ರವಾಗಿದ್ದು, ಬಾಡುವುದು ಎನ್ನುವುದೇ ಇಲ್ಲದೆ, ಶುಭಾಶುಭಗಳೆರಡನ್ನೂ ಆಹ್ಲಾದಪಡಿಸುತ್ತ ಇರುವ ನಿನ್ನ ಉಪದೇಶವೆಂಬ ಕುಸುಮವು ನಮಗೆ ನಿತ್ಯವೂ ಉತ್ತಮವಾದ ಫಲವನ್ನು ಕೊಡಲಿ.

ಸಕಲಶಾಸ್ತ್ರವಿಚಾರವಿಶಾರದ ।
ಪ್ರಸೃತಪುಣ್ಯಜಲೈಕಮಹಾಹ್ರದ ॥
ಭಜ ಭೃಶಂ ವಿತತವ್ರತ ಸಂಪ್ರತಿ
ಪ್ರಸೃತತಾಂ ಹಿತಕಿಲ್ಬಿಷ ಸಂತತಿಂ ॥ ೩೩ ॥

ಇತ್ಯಾರ್ಷೇ ಶ್ರೀ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ
ದೇವದೂತೋಕ್ತೇ ಮೋಕ್ಷೋಪಾಯೇಷು ಉಪಶಮಪ್ರಕರಣೇ
“ರಾಘವಪ್ರಶ್ನೋ” ನಾಮ ಚತುರ್ಥಃ ಸರ್ಗಃ

---

೩೩. ಸಕಲಶಾಸ್ತ್ರ ವಿಚಾರಗಳಲ್ಲಿಯೂ ವಿಶಾರದನಾದ ಮಹರ್ಷಿಯೆ, ಪುಣ್ಯವೆಂಬ ಜೀವನದಿಯ ಮಹಾಹ್ರದ (ಮಡು) ಸ್ವರೂಪನೆ, ಮಹಾ ನಿಯಮಸಂಪನ್ನನೆ, ಪಾಪ ಪರಿಹಾರಕವಾದ ನಿನ್ನ ಉಪದೇಶವನ್ನು ಇನ್ನು ಮುಂದುವರಿಸುವವನಾಗು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
“ರಾಘವಪ್ರಶ್ನ” ಎಂಬ ನಾಲ್ಕನೆಯ ಸರ್ಗವು.

ಪಂಚಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಇದಮುತ್ತಮಸಿದ್ಧಾಂತಸುಂದರಂ ಸಂದರಾಕೃತೇ ।
ಉಪಶಾಂತಿಪ್ರಕರಣಂ ಶೃಣುಷ್ವಾವಹಿತೋ ಹಿತಂ ॥ ೧ ॥

ದೀರ್ಘಸಂಸಾರಮಾಯೇಯಂ ರಾಮ ರಾಜಸತಾಮಸೈಃ ।
ಧಾರ್ಯತೇ ಜಂತುಭಿರ್ನಿತ್ಯಂ ಸುಸ್ತಂಭೈರಿವ ಮಂಡಪಃ ॥ ೨ ॥

ಸತ್ವಸ್ಥಜಾತಿಭಿರ್ಧೀರೈಸ್ತಾದೃಶೈರ್ಗುಣಬೃಂಹಿತೈಃ ।
ಹೇಲಯಾ ತ್ಯಜ್ಯತೇ ಪಕ್ವಾ ಮಾಯೇಯಂ ತ್ವಗಿವೋರಗೈಃ ॥ ೩ ॥

ಐದನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಸುಂದರ ರೂಪನಾದ ರಾಮನೆ, ಉತ್ತಮ ಸಿದ್ಧಾಂತ ಸುಂದರವಾಗಿ ಹಿತವಾಗಿರುವ ಈ ಉಪಶಾಂತಿ ಪ್ರಕರಣವನ್ನು ಒಂದೇ ಮನಸ್ಸಿನಿಂದ ಕೇಳು.

೨. ಮಂಟಪವು ಭದ್ರವಾಗಿ ಕಂಭಗಳ ಮೇಲಿರುವಂತೆ, ಈ ಸಂಸಾರ ಮಾಯೆಯು ರಾಜಸ ತಾಮಸ ಗುಣಜಂತುಗಳಿಂದ ಸ್ಥಿರವಾಗಿರುವುದು.

೩. ಪಕ್ವವಾಗಿರುವ ಪೊರೆಯನ್ನು ಹಾವುಗಳು ಕಳಚುವಂತೆ, ಸತ್ವಗುಣ ಸಂಪನ್ನರಾಗಿ ಗುಣವಂತರಾಗಿರುವ ನಿನ್ನಂತಹ ಧೀರರು ಈ ಮಾಯೆಯನ್ನು ಸುಲಭವಾಗಿ ನೀಗಿಕೊಳ್ಳುವರು.

ಯೇ ಸತ್ತ್ವಜಾತಯಃ ಪ್ರಾಜ್ಞಾಸ್ತಥಾ ರಾಜಸಸಾತ್ತ್ವಿಕಾಃ |
ವಿಚಾರಯಂತಿ ತೇ ಸಾಧೋ ಜಗತ್ಪೂರ್ವಪರಂಪರಾಂ || ೪ ||

ಶಾಸ್ತ್ರಸಜ್ಜನಸತ್ಕಾರ್ಯಸಂಗೇನೋಪಹತೈನಸಾಂ |
ಸಾರಾವಲೋಕಿನೀ ಬುದ್ಧಿರ್ಜಾಯತೇ ದೀಪಿಕೋಪಮಾ || ೫ ||

ಸ್ವಯಮೇವ ವಿಚಾರೇಣ ವಿಚಾರ್ಯಾತ್ಮಾನಮಾತ್ಮನಾ |
ಯಾವನ್ನಾಧಿಗತಂ ಜ್ಞೇಯಂ ನ ತಾವದಧಿಗಮ್ಯತೇ || ೬ ||

ಪ್ರಜ್ಞಾವತಾಂ ನಯವತಾಂ ಧೀರಾಣಾಂ ಕುಲಶಾಲಿನಾಂ |
ಜಾತ್ಯಾ ರಾಜಸಸತ್ತ್ವಾನಾಂ ಮುಖ್ಯಸ್ತ್ವಂ ರಘುನಂದನ || ೭ ||

---

೪. ಪ್ರಾಜ್ಞರಾದ ಶುದ್ಧ ಸತ್ತ್ವಸಂಪನ್ನರೂ, ಹಾಗೆಯೇ ರಾಜಸಾತ್ವಿಕರೂ* ಜಗತ್ತಿನ ಮೂಲವು ಯಾವುದು ಎಂಬುದನ್ನು ವಿಚಾರಿಸುವರು.

೫. ಶಾಸ್ತ್ರ, ಸಜ್ಜನ, ಸತ್ಕರ್ಮಸಂಗಗಳಿಂದ ಪಾಪವೆಲ್ಲವೂ ನಿವೃತ್ತಿಯಾಗಲು, ತತ್ವವಿಚಾರವನ್ನು ಗ್ರಹಿಸಬಲ್ಲ, ದೀಪದಂತೆ ಪ್ರಕಾಶಮಾನವಾದ ಬುದ್ಧಿಯು ಹುಟ್ಟುವುದು.

೬. ತನ್ನಲ್ಲಿ ತಾನೇ ವಿಚಾರಮಾಡಿಕೊಳ್ಳುತ್ತ ತನ್ನ ಆತ್ಮ ಸ್ವರೂಪವನ್ನು ತಾನೇ ತಿಳಿದುಕೊಳ್ಳುವವರೆಗೆ, ಬ್ರಹ್ಮಪದವು ಸಿಕ್ಕುವುದೇ ಇಲ್ಲ.

೭. ರಘುನಂದನ, ನೀನು ಪ್ರಾಜ್ಞರೂ ನೀತಿವಂತರೂ ಧೀರರೂ ಸತ್ಕುಲಪ್ರಸೂತರೂ ಆದ ರಾಜಸಸಾತ್ವಿಕರಲ್ಲಿ ಶ್ರೇಷ್ಠನಾಗಿರುವೆ.

---

* ಇದೇ ಪ್ರಕರಣ ಸರ್ಗ ೬, ಶ್ಲೋಕ ೬, ಮತ್ತೆ ಮುಂದೆ ನೋಡಿ.

ಸ್ವಯಮಾಲೋಕಯ ಪ್ರಾಜ್ಞ ಸಂಸಾರಾರಂಭದೃಷ್ಟಿಷು ।
ಕಿಂ ಸತ್ಯಂ ಕಿಮಸತ್ಯಂ ವಾ ಭವ ಸತ್ಯಪರಾಯಣಃ ॥ ೮ ॥

ಆದಾವಂತೇ ಚ ಯನ್ನಾಸ್ತಿ ಕೀದೃಶೀ ತಸ್ಯ ಸತ್ಯತಾ ।
ಆದಾವಂತೇ ಚ ಯನ್ನಿತ್ಯಂ ತತ್ಸತ್ಯಂ ನಾಮ ನೇತರತ್ ॥ ೯ ॥

ಆದ್ಯಂತಾಸನ್ಮಯೇ ಯಸ್ಯ ವಸ್ತುನ್ಯಾಸಜ್ಜತೇ ಮನಃ ।
ತಸ್ಯ ಮುಗ್ಧಪಶೋರ್ಜಂತೋರ್ವಿವೇಕಃ ಕೇನ ಜನ್ಯತೇ ॥ ೧೦ ॥

ಜಾಯತೇ ಮನ ಏವೇಹ ಮನ ಏವ ವಿವರ್ಧತೇ ।
ಸಮ್ಯಗ್ದರ್ಶನದೃಷ್ಟ್ಯಾ ತು ಮನ ಏವ ಹಿ ಮುಚ್ಯತೇ ॥ ೧೧ ॥

---

೮. ಸಂಸಾರ ಕಾರ್ಯಗಳಲ್ಲಿ, ಎಲೈ ಪ್ರಾಜ್ಞನೆ, ನೀನು ಸತ್ಯಪರಾಯಣನಾಗಿ ಯಾವುದು ಸತ್ಯ, ಯಾವುದು ಅಸತ್ಯ ಎಂಬುದನ್ನು ನೀನೇ ವಿಚಾರಮಾಡಿ ನೋಡು ವವನಾಗು.

೯. ಆದಿಯಲ್ಲಿಯೂ ಅಂತ್ಯದಲ್ಲಿಯೂ ಯಾವುದು ಇರುವುದಿಲ್ಲವೋ ಅದರ ಸತ್ಯತೆ ಎಂಥದು ? ಆದಿಯಲ್ಲಿಯೂ ಅಂತ್ಯದಲ್ಲಿಯೂ ಯಾವುದು ಇರುವುದೋ ಅದೇ ಸತ್ಯವು. ಇನ್ನು ಯಾವುದೂ ಅಲ್ಲ.

೧೦. ಆದಿಯಲ್ಲಿಯೂ ಅಂತ್ಯದಲ್ಲಿಯೂ ಇಲ್ಲದಿರುವ ವಸ್ತುವಿನಲ್ಲಿ ಮನಸ್ಸನ್ನು ಇಟ್ಟುಕೊಂಡಿರುವ ಮೂಢ ಪಶುಪ್ರಾಯನಾದವನಿಗೆ ಯಾವನು ತಾನೇ ವಿವೇಕವನ್ನು ತೋರಿಸಿಕೊಡಬಲ್ಲನು ?

೧೧. ಹುಟ್ಟುವುದು ಎನ್ನುವುದೂ ಮನಸ್ಸೇ ! ಬೆಳೆಯುವುದೂ ಮನಸ್ಸೇ ! ಸಮ್ಯಗ್ದರ್ಶನ (ಜ್ಞಾನ) ವುಂಟಾದರೆ ಇಲ್ಲವಾಗುವುದೂ ಮನಸ್ಸೇ !

ಶ್ರೀ ರಾಮ ಉವಾಚ :—

ಜ್ಞಾತಮೇತನ್ಮಯಾ ಬ್ರಹ್ಮನ್ ಯಥಾಸ್ಮಿನ್ ಭುವನತ್ರಯೇ ।
ಮನಏವ ಹಿ ಸಂಸಾರೀ ಜರಾಮರಣಭಾಜನಂ ॥ ೧೨ ॥

ಯಸ್ತಸ್ಯೋತ್ತರಣೋಪಾಯಸ್ತನ್ಮೇ ಬ್ರೂಹಿ ಸುನಿಶ್ಚಿತಂ ।
ಹಾರ್ದಂ ತಮಸ್ತ್ವಯಾರ್ಕೇಣ ರಾಘವಾಣಾಂ ವಿನಾಶ್ಯತೇ ॥ ೧೩ ॥

ಶ್ರೀ ವಸಿಷ್ಠ ಉವಾಚ :—

ಪೂರ್ವಂ ರಾಘವ ಶಾಸ್ತ್ರೇಣ ವೈರಾಗ್ಯೇಣ ಪರೇಣ ಚ ।
ತಥಾ ಸಜ್ಜನಸಂಗೇನ ನೀಯತಾಂ ಪುಣ್ಯತಾಂ ಮನಃ ॥ ೧೪ ॥

ಸೌಜನ್ಯೋಪಹಿತಂ ಚೇತೋ ಯದಾ ವೈರಾಗ್ಯಮಾಗತಂ ।
ತದಾನುಗಮ್ಯಾ ಗುರವೋ ವಿಜ್ಞಾನಗುರವೋಽಪಿ ಯೇ ॥ ೧೫ ॥

ಶ್ರೀ ರಾಮನು ಹೇಳಿದನು :—

೧೨. ಈ ತ್ರಿಭುವನಗಳಲ್ಲಿಯೂ ಮನಸ್ಸೇ ಸಂಸಾರ ಕಾರಣವು; ಮನಸ್ಸೇ ಜರಾಮರಣಗಳನ್ನೆಲ್ಲ ಅನುಭವಿಸುವುದು ಎಂಬುದನ್ನು ತಿಳಿದೆನು.

೧೩. ಎಲೈ ಮಹರ್ಷಿಯೆ, ರಘುಕುಲದವರಿಗೆ ಅಜ್ಞಾನವನ್ನು ಕಳೆಯುವ ಸೂರ್ಯನೆ, ಆ ಮನಸ್ಸನ್ನು ನಿಗ್ರಹಿಸುವ ಉಪಾಯವನ್ನು ಖಚಿತವಾಗಿ ನನಗೆ ತಿಳಿಯುವಂತೆ ಹೇಳು !

ಶ್ರೀ ವಸಿಷ್ಠನು ಹೇಳಿದನು :—

೧೪. ರಾಘವ, ಮೊದಲು ಶಾಸ್ತ್ರದಿಂದಲೂ ವೈರಾಗ್ಯದಿಂದಲೂ ಸಜ್ಜನ ಸಂಗದಿಂದಲೂ ಮನಸ್ಸು ಪವಿತ್ರವಾಗುವಂತೆ ಮಾಡಿಕೊಳ್ಳಬೇಕು.

೧೫. ಮನಸ್ಸು ಸಾಧುವಾಗಿ ವೈರಾಗ್ಯಸಂಪನ್ನವಾದಾಗ ಶಾಸ್ತ್ರವನ್ನೂ ಅನುಭವವನ್ನೂ ಬಲ್ಲ ಗುರುಗಳನ್ನು ಆಶ್ರಯಿಸಬೇಕು.

ತತಸ್ತಸ್ಮ್ಯೋಪದಿಷ್ಟೇನ ಕ್ರತ್ವಾ ಧ್ಯಾನಾರ್ಚನಾದಿಕಂ ।
ಕ್ರಮೇಣ ಪದಮಾಪ್ನೋತಿ ತದ್ಯತ್ಪರಮಪಾವನಂ ॥ ೧೬ ॥

ವಿಚಾರೇಣಾವದಾತೇನ ಪಶ್ಯತ್ಯಾತ್ಮಾನಮಾತ್ಮನಾ ।
ಇಂದುನಾ ಶೀತಲೇನಾಂತರ್ವಿಶ್ವಂ ಖಮಿವ ತೇಜಸಾ ॥ ೧೭ ॥

ತಾವದ್ಭವಮಹಾಂಬೋಧೌ ಜನಸ್ತೃಣವದುಹ್ಯತೇ ।
ವಿಚಾರತಟವಿಶ್ರಾಂತಿಮೇತಿ ಯಾವನ್ನ ಚೇತಸಾ ॥ ೧೮ ॥

ವಿಚಾರೇಣ ಪರಿಜ್ಞಾತವಸ್ತುನೋಽಸ್ಯ ಜನಸ್ಯ ಧೀಃ ।
ಸರ್ವಾನಧಃಕರೋತ್ಯಾಧೀನ್ಸೌಮ್ಯಾಂಭ ಇವ ವಾಲುಕಾಃ ॥ ೧೯ ॥

---

೧೬. ಅವರ ಉಪದೇಶದಂತೆ ಧ್ಯಾನ, ಅರ್ಚನ, ಮೊದಲಾದುವನ್ನು ಮಾಡಿ, ಕ್ರಮಕ್ರಮವಾಗಿ ಪರಮಪಾವನವಾದ ತತ್ಪದವನ್ನು ಪಡೆಯಬೇಕು.

೧೭. ಸೌಮ್ಯಕಿರಣನಾದ ಚಂದ್ರನ ಬೆಳಕಿನಲ್ಲಿ ಆಕಾಶವನ್ನೆಲ್ಲ ಕಾಣುವಂತೆ ಶುದ್ಧವಾದ ವಿಚಾರದಿಂದ ತನ್ನನ್ನು ತನ್ನಲ್ಲಿಯೇ ತನ್ನಿಂದಲೇ ಕಂಡುಕೊಳ್ಳುವನು.

೧೮. ಎಲ್ಲಿಯವರೆಗೆ ವಿಚಾರವೆಂಬ ದಡವನ್ನು ಮನಸ್ಸು ಹಿಡಿಯುವುದಿಲ್ಲವೋ ಅಲ್ಲಿಯವರೆಗೆ ಜನವು ಸಂಸಾರ ಮಹಾಂಬುಧಿಯಲ್ಲಿ ಹೊಡೆದುಕೊಂಡು ಹೋಗುತ್ತಲೇ ಇರುವುದು.

೧೯. ತಿಳಿಯಾದ ನೀರು ಮಳಲನ್ನು ತಳದಲ್ಲಿ ಹಾಕಿಬಿಡುವಂತೆ, ವಿಚಾರದಿಂದ ವಸ್ತುವನ್ನು ಅರಿತವನ ಮನಸ್ಸು ಸಕಲ ಚಿಂತೆಯನ್ನೂ ಎಸೆದುಬಿಡುವುದು.

ಇದಂ ರುಕ್ಮಮಿದಂ ಭಸ್ಮ ಪರಿಜ್ಞಾತಮಿತಿ ಸ್ಫುಟಂ |
ನ ತಥಾ ಹೇಮಕಾರಸ್ಯ ಹೇಮ ಜ್ಞಾನಾತ್ಮನಸ್ತಥಾ || ೨೦ ||

ಅಥ ಯೋಽಯಂ ಮನಾಗಾತ್ಮಾ ಸ್ವಾತ್ಮನ್ಯವಗತೇ ಚಿರಂ |
ಭವತೀತಿ ನರಸ್ಯೇಹ ಮೋಹಸ್ಯಾವಸರಃ ಕುತಃ || ೨೧ ||

ಅಪರಿಜ್ಞಾತಸಾರೇ ಹಿ ಮನೋಂತರ್ಯದಿ ಮುಹ್ಯತೇ |
ಜ್ಞಾನಸಾರೇ ತ್ವಸಂಧಿಗ್ಧಮಸತೀ ಕಿಲ ಮೂಢತಾ || ೨೨ ||

ಹೇ ಜನಾ ಅಪರಿಜ್ಞಾತಾ ಆತ್ಮಾ ವೋ ದುಃಖಸಿದ್ಧಯೇ |
ಪರಿಜ್ಞಾತಸ್ತ್ವನಂತಾಯ ಸುಖಾಯೋಪಶಮಾಯ ಚ || ೨೩ ||

ಮಿಶ್ರೀಭೂತಮಿವಾನೇನ ದೇಹೇನೋಪಹತಾತ್ಮನಾ |
ವ್ಯಕ್ತೀಕೃತ್ಯ ಸ್ವಮಾತ್ಮಾನಂ ಸ್ವಸ್ಥಾ ಭವತ ಮಾಚಿರಂ || ೨೪ ||

೨೦–೨೧. ಚಿನ್ನವನ್ನು ಚೆನ್ನಾಗಿ ಬಲ್ಲ ಅಕ್ಕಸಾಲೆಗೆ ಇದು ಚಿನ್ನ ಇದು ಬೂದಿ ಎಂದು ಚೆನ್ನಾಗಿ ಗೊತ್ತಿದ್ದು ಮೋಹವಿಲ್ಲದಿರುವಂತೆ, ತನ್ನಲ್ಲಿ ತನ್ನ ಅಕ್ಷಯ ಸ್ವರೂಪವನ್ನು ಕಂಡವನಿಗೆ, ಅಕ್ಷಯ ಆತ್ಮನೇ ಆದವನಿಗೆ, ಮೋಹವೆಲ್ಲಿಯದು ?

೨೨. ಅತತ್ವಜ್ಞನಾದವನಿಗೆ ಮನಸ್ಸು ಮೋಹಗೊಳ್ಳುವುದುಂಟು ; ತತ್ವಜ್ಞನಿಗೆ ಸಂಶಯವೂ ಇರುವುದಿಲ್ಲವೆಂದಮೇಲೆ ಮೋಹವೆಲ್ಲಿಯದು ?

೨೩. ಎಲೈ ಜನರೆ, ಆತ್ಮವನ್ನು ತಿಳಿಯದಿದ್ದರೆ ಸಿದ್ಧಿಸುವುದು ದುಃಖವೇ ! ಆತ್ಮವು ತಿಳಿದರೆ, ಅನಂತವಾದ ಸುಖವೂ ಶಾಂತಿಯೂ ಲಭಿಸುವುದು.

೨೪. ದೇಹವನ್ನೇ ಆತ್ಮವೆಂದುಕೊಂಡಿರುವುದನ್ನು ಬಿಟ್ಟು, ಆತ್ಮವು ಪ್ರತ್ಯೇಕವೆಂಬುದನ್ನು ಖಚಿತವಾಗಿ ತಿಳಿದುಕೊಂಡು ಸುಖವಾಗಿರಿ. ತಡಮಾಡಬೇಡಿ.

ದೇಹೇನಾಸ್ಯ ನ ಸಂಬಂಧೋ ಮನಾಗೇವಾಮಲಾತ್ಮನಃ ।
ಹೇಮ್ನಃ ಪಂಕಲವೇನೇವ ತದ್ಗತಸ್ಯಾಪಿ ಮಾನವಾಃ ॥ ೨೫ ॥

ಪೃಥಗಾತ್ಮಾ ಪೃಥಗ್ದೇಹೋ ಜಲಪದ್ಮಲವೋಪಮೌ ।
ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿಮೇ ॥ ೨೬ ॥

ಜಡಧರ್ಮಿ ಮನೋ ಯಾವದ್ಗರ್ತಕಚ್ಛಪವತ್ಸ್ಥಿತಂ ।
ಭೋಗಮಾರ್ಗವದಾಮೂಢಂ ವಿಸ್ಮೃತಾತ್ಮವಿಚಾರಣಂ ॥ ೨೭ ॥

ತಾವತ್ಸಂಸಾರತಿಮಿರಂ ಸೇಂದುನಾಪಿ ಸವಹ್ನಿನಾ ।
ಅರ್ಕದ್ವಾದಶಕೇನಾಪಿ ಮನಾಗಪಿ ನ ಭಿದ್ಯತೇ ॥ ೨೮ ॥

---

೨೫. ಚಿನ್ನಕ್ಕೂ ಕೆಸರಿಗೂ ಎಲ್ಲಾದರೂ ಸಂಬಂಧವುಂಟೇ! ಹಾಗೆಯೆ, ಎಲೆ ಮಾನವರೆ, ನಿರ್ಮಲಾತ್ಮನು ಈ ದೇಹಕ್ಕೆ ಎಂದಿಗೂ ಗಂಟುಬಿದ್ದವನಲ್ಲ.

೨೬. ಕೊಳದ ನೀರೂ, ಪದ್ಮಪತ್ರದ ಮೇಲಿರುವ ಜಲಕಣವೂ ಬೇರೆ ಬೇರೆಯಾಗಿ ತೋರುವಂತೆಯೇ ಆತ್ಮನೂ ದೇಹಿಯೂ ಬೇರೆ ಬೇರೆಯಾಗಿ ತೋರುವುದು (ಬೇರೆಯಾಗಲು ಅಜ್ಞಾನವೇ ಕಾರಣವು) ಎಂದು ನಾನು ಕೈಯೆತ್ತಿ ಕೂಗುತ್ತಿರುವೆನಾದರೂ ಯಾರೂ ಕೇಳುವುದಿಲ್ಲವಲ್ಲ!

೨೭–೮. ಮನಸ್ಸು ತಾನು ಜಡವೆಂದುಕೊಂಡು ಎಲ್ಲಿಯವರೆಗೂ ಕೂಪಮಂಡೂಕವಂತೆ ಆತ್ಮವಿಚಾರವನ್ನು ಮರೆತು ಮೋಹಗೊಂಡು ಭೋಗಮಾರ್ಗದಲ್ಲಿ ಬಿದ್ದಿರುವುದೋ ಅದುವರೆಗೆ ಸೂರ್ಯನೂ ಚಂದ್ರನೂ ದ್ವಾದಶಾದಿತ್ಯರೂ ಸೇರಿದರೂ ಈ ಸಂಸಾರಾಂಧಕಾರವನ್ನು ಭೇದಿಸಲಾರರು.

ಸಂಪ್ರಬುದ್ಧೇ ಹಿ ಮನಸಿ ಸ್ವಾಂ ವಿವೇಚಯತಿ ಸ್ಥಿತಿಂ ।
ನೈಶಮರ್ಕೋದಯ ಇವ ತಮೋ ಹಾರ್ದಂ ಪಲಾಯತೇ ॥ ೨೯ ॥

ನಿತ್ಯಮುತ್ತಮಬೋಧಾಯ ಯೋಗಶಯ್ಯಾಗತಂ ಮನಃ ।
ಬೋಧಯೇದ್ಭವಭೇದಾಯ ಭವೋ ಹ್ಯತ್ಯಂತದುಃಖದಃ ॥ ೩೦ ॥

ಯಥಾ ರಜೋಭಿರ್ಗಗನಂ ಯಥಾ ಕಮಲಮಂಬುಭಿಃ ।
ನ ಲಿಪ್ಯತೇ ಹಿ ಸಂಶ್ಲಿಷ್ಟೈರ್ದೇಹೈರಾತ್ಮಾ ತಥೈವ ಚ ॥ ೩೧ ॥

ಕರ್ದಮಾದಿ ಯಥಾ ಹೇಮ್ನಾ ಶ್ಲಿಷ್ಟಮೇತಿ ಪೃಥಕ್ಸ್ಥಿತಂ ।
ನಾಂತಃಪರಿಣತಿಂ ಯಾತಿ ಜಡೋ ದೇಹಸ್ತಥಾತ್ಮನಾ ॥ ೩೨ ॥

---

೨೯. ಮನಸ್ಸು ಎಚ್ಚೆತ್ತುಕೊಂಡು ತನ್ನ ಸ್ಥಿತಿಯನ್ನು ವಿವೇಚನಮಾಡಿಕೊಳ್ಳಲು, ಸೂರ್ಯೋದಯವಾಗಲು ರಾತ್ರಿ ಕತ್ತಲು ಕಳೆವಂತೆ, ಹೃದಯದಲ್ಲಿರುವ ಅಜ್ಞಾನವೂ ಓಡುವುದು.

೩೦. ಸಂಸಾರವು ಅತ್ಯಂತ ದುಃಖಕರವು. ಆದರಿಂದ ಈ ಸಂಸಾರವನ್ನು ಭೇದಿಸುವುದಕ್ಕೋಸ್ಕರ, ಉತ್ತಮವಾದ ಜ್ಞಾನದ ಲಾಭವಾಗಲೆಂದು ಮನಸ್ಸು ಯೋಗಶಯ್ಯಾಗತವಾಗಿರುವಂತೆ ಯಾವಾಗಲೂ ಎಚ್ಚರಗೊಳಿಸುತ್ತಿರಬೇಕು.

೩೧. ಧೂಳಿನಿಂದ ಆಕಾಶವೂ, ನೀರಿನಿಂದ ಕಮಲವೂ ಹೇಗೆ ಮಲಿನವಾಗುವುದಿಲ್ಲವೋ ಹಾಗೆಯೇ ನಾನಾ ದೇಹಗಳು ಪ್ರಾಪ್ತವಾದರೂ ಆತ್ಮನು ಅಲ್ಲಿ ಸಿಕ್ಕಿಕೊಳ್ಳುವುದಿಲ್ಲ.

೩೨. ಚಿನ್ನದೊಡನೆ ಹೊಂದಿಕೊಂಡಿದ್ದರೂ ಕೆಸರು ತಾನೂ ಬದಲಾಯಿಸದೆ, ಚಿನ್ನದೊಡನೆಯೂ ಬೆರೆಯದೆ ಬೇರೆಯೇ ಆಗಿರುವಂತೆ, ಜಡವಾದ ದೇಹವು ಆತ್ಮನ ಸಂಗವನ್ನು ಪಡೆದರೂ ಆತ್ಮನನ್ನು ತನ್ನಂತೆಯೂ ಮಾಡಿಕೊಳ್ಳಲಾರದು; ತಾನೂ ಆತ್ಮನಂತಾಗಲಾರದು.

ಸುಖದುಃಖಾನುಭಾವಿತ್ವಮಾತ್ಮನೀತ್ಯವಬುಧ್ಯತೇ ।
ಅಸತ್ಯಮೇವ ಗಗನೇ ಬಿಂದುತಾಮ್ಲಾನತೇ ಯಥಾ ॥ ೩೩ ॥

ಸುಖದುಃಖೇ ನ ದೇಹಸ್ಯ ಸರ್ವಾತೀತಸ್ಯ ನಾತ್ಮನಃ ।
ಏತೇ ಹ್ಯಜ್ಞಾನಕಸ್ಯೈವ ತಸ್ಮಿನ್ನಷ್ಟೇ ನ ಕಸ್ಯಚಿತ್ ॥ ೩೪ ॥

ನ ಕಸ್ಯಚಿತ್ಸುಖಂ ಕಿಂಚಿದ್ದುಃಖಂ ಚ ನಚ ಕಸ್ಯಚಿತ್ ।
ಸರ್ವಮಾತ್ಮಮಯಂ ಶಾಂತಮನಂತಂ ಪಶ್ಯ ರಾಘವ ॥ ೩೫ ॥

ಇಮಾ ಯಾಃ ಪರಿದೃಶ್ಯಂತೇ ವಿತತಾಃ ಸೃಷ್ಟಿದೃಷ್ಟಯಃ ।
ಪಯಸೀವ ತರಂಗಾಸ್ತೇ ಪಿಚ್ಛಂ ವ್ಯೋಮ್ನೀವ ಚಾತ್ಮನಿ ॥ ೩೬ ॥

---

೩೩. ಆಕಾಶದಲ್ಲಿ ಬಿಂದುಗಳೂ ಮಾಲಿನ್ಯವೂ ಇರುವಂತೆ ಕಾಣುವುದು ಹೇಗೆ ಅಸತ್ಯವೋ ಹಾಗೆಯೇ ಸುಖದುಃಖಗಳನ್ನು ಅನುಭವಿಸುವವನು ಆತ್ಮನು ಎನ್ನುವುದೂ ಅಸತ್ಯವೇ !

೩೪. ಸುಖದುಃಖಗಳು (ಜಡವಾದ) ದೇಹಕ್ಕಲ್ಲ. ಸರ್ವಾತೀತನಾದ ಆತ್ಮನಿಗಲ್ಲ. ಇವು ಕೇವಲ ಅಜ್ಞಾನಕ್ಕೆ ಮಾತ್ರ. ಆ ಅಜ್ಞಾನವು ನಾಶವಾಗಲು ಅವೂ ನಾಶವಾಗುವುವು.

೩೫. ಯಾರಿಗೇ ಆಗಲಿ ಸುಖವೆಂಬುದೂ ಇಲ್ಲ; ಯಾರಿಗೇ ಆಗಲಿ ದುಃಖವೆಂಬುದೂ ಇಲ್ಲ. ಎಲ್ಲವೂ ಆತ್ಮಮಯವಾಗಿರುವುದು; ಶಾಂತವಾಗಿರುವುದು; ಅನಂತವಾಗಿರುವುದು. ಇದನ್ನು, ಎಲೈ, ರಾಘವ, ನೋಡುವವನಾಗು.

೩೬. ನಾನಾ ಪ್ರಕಾರವಾಗಿ ಹರಡಿರುವಂತೆ ಕಾಣುತ್ತಿರುವ ಈ ಸೃಷ್ಟಿಗಳೆಲ್ಲವೂ ನೀರಿನಲ್ಲಿ ಕಾಣಿಸುವ ಅಲೆಗಳಂತೆ, ಆಕಾಶದಲ್ಲಿ ನವಿಲುಗರಿಯ ಭ್ರಮೆಯುಂಟಾಗುವಂತೆ, ಕೇವಲಾತ್ಮನಲ್ಲಿಯೇ ಕಾಣುವುವು.

ಯಥಾ ಮಣಿರ್ದದಾತ್ಯಾತ್ಮಚ್ಛಾಯಾಃ ಸ್ವಯಮಕಾರಣಂ ।
ತೇಜೋಮಯೀಸ್ತಥೈವಾಯಮಾತ್ಮಾ ಸೃಷ್ಟೀಃ ಪ್ರಯಚ್ಛತಿ ॥ ೩೭ ॥

ಆತ್ಮಾ ಜಗಚ್ಚ ಸುಮತೇ ನೈಕಂ ನ ದ್ವೈತಮಪ್ಯಸನ್ ।
ಆಭಾಸಮಾತ್ರಮೇವೇದಮಿತ್ಥಂ ಸಂಪ್ರತಿ ಜೃಂಭತೇ ॥ ೩೮ ॥

ಸಮಸ್ತಂ ಖಲ್ವಿದಂ ಬ್ರಹ್ಮ ಸರ್ವಮಾತ್ಮೈವಮಾತತಂ ।
ಅಹಮನ್ಯದಿದಂ ಚಾನ್ಯದಿತಿ ಭ್ರಾಂತಿಂ ತ್ಯಜಾನಘ ॥ ೩೯ ॥

ತತೋ ಬ್ರಹ್ಮಘನೇ ನಿತ್ಯೇ ಸಂಭವಂತಿ ನ ಕಲ್ಪನಾಃ ।
ವಿಚ್ಛಿತ್ತಯಃ ಪಯೋರಾಶೌ ಯಥಾ ರಾಮ ನ ಸನ್ಮಯಾಃ ॥ ೪೦ ॥

---

೩೭. ರತ್ನವು, ಬೇರೊಂದು ಕಾರಣವಿಲ್ಲದೆ, ಸಹಜವಾಗಿಯೇ ತೇಜೋಮಯಗಳಾಗಿ ತನ್ನಂತೆಯೇ ಇರುವ ನೆರಳುಗಳನ್ನು ಕೊಡುವುದೋ ಹಾಗೆಯೇ ಆತ್ಮವೂ ಸೃಷ್ಟಿಗಳನ್ನು ಹರಡುತ್ತಿರುವುದು.

೩೮. ಆತ್ಮ, ಜಗತ್ತು, ಇವೆರಡೂ ಒಂದೇ ಅಲ್ಲ; ಬೇರೆ ಬೇರೆಯೂ ಅಲ್ಲ; ಅಸತ್ತೂ ಅಲ್ಲ; ಆಭಾಸಮಾತ್ರವಾಗಿದ್ದುಕೊಂಡು ಅಜ್ಞಾನದಶೆಯಲ್ಲಿ ಹೀಗೆ ವಿಜೃಂಭಿಸುವುದು.

೩೯. ಎಲೈ ಅನಘನಾದ ರಾಮನೆ, ಇದ್ದುಬಿದ್ದುದೆಲ್ಲವೂ ಬ್ರಹ್ಮವೇ! ಹರಡಿದಂತೆ ತೋರುತ್ತಿರುವ ಈ ಸರ್ವವೂ ಆತ್ಮವೇ! ಇದು ಬೇರೆ, ಇದು ಬೇರೆ, ಎಂಬ ಭ್ರಾಂತಿಯನ್ನು ಬಿಡು.

೪೦. ಹೀಗೆ ತುಂಬಿರುವ ನಿತ್ಯವಾದ ಬ್ರಹ್ಮಘನದಲ್ಲಿ ಯಾವ ಭೇದಕಲ್ಪನೆಯೂ ಸಂಭವಿಸುವುದಿಲ್ಲ. ಜಲರಾಶಿಯಲ್ಲಿ ಕಂಡುಬರುವ ಭೇದಗಳಂತೆ ಅವು ಸತ್ಯವೆಂಬಂತೆ ತೋರುತ್ತಿದ್ದರೂ ಸತ್ಯವಲ್ಲ. (ಸಮುದ್ರದಲ್ಲಿ ವಾಸ್ತವಿಕವಾದ ವಿಭಾಗಗಳಿಲ್ಲದಿರುವಂತೆ, ದೇಶಕಾಲವಸ್ತು ಪರಿಚ್ಛೇದ ಶೂನ್ಯವಾಗಿರುವ ಬ್ರಹ್ಮ ಪದಾರ್ಥದಲ್ಲಿ ಯಾವ ಭೇದ ಕಲ್ಪನೆಯೂ ಸಂಭವಿಸುವುದಿಲ್ಲ.—ತಾ. ಪ್ರ.)

ಏಕಸ್ಮಿನ್ನೇವ ಸರ್ವಸ್ಮಿನ್ ಪರಮಾತ್ಮನಿ ವಸ್ತುನಿ ।
ದ್ವಿತೀಯಾ ಕಲ್ಪನಾ ನಾಸ್ತಿ ವಹ್ನೌ ಹಿಮಕಣೋ ಯಥಾ ॥ ೪೧ ॥

ಭಾವಯನ್ನಾತ್ಮನಾತ್ಮಾನಂ ಚಿದ್ರೂಪೇಣೈವ ಚಿನ್ಮಯಂ ।
ಋಜೂಜ್ಜ್ವಲಮಯೋ ಹ್ಯಾತ್ಮಾ ಸ್ವಯಮಾತ್ಮನಿ ಜೃಂಭತೇ ॥ ೪೨ ॥

ನ ಶೋಕೋಽಸ್ತಿ ನ ಮೋಹೋಽಸ್ತಿ ನ ಜನ್ಮಾಸ್ತಿ ನ ಜನ್ಮವಾನ್ ।
ಯದಸ್ತೀಹ ತದೇವಾಸ್ತಿ ವಿಜ್ವರೋ ಭವ ರಾಘವ ॥ ೪೩ ॥

ನಿರ್ದ್ವಂದ್ವೋ ನಿತ್ಯಸತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ।
ಅದ್ವಿತೀಯೋ ವಿಶೋಕಾತ್ಮಾ ವಿಜ್ವರೋ ಭವ ರಾಘವ ॥ ೪೪ ॥

---

೪೧. ಬೆಂಕಿಯಲ್ಲಿ ಹಿಮಕಣವು ಇರುವುದುಂಟೆ? ಹಾಗೆಯೇ, ತಾನೇ ತಾನಾಗಿ ಏಕೈಕವಾಗಿರುವ ಸರ್ವವೂ ತಾನೇ ಆಗಿರುವ, ವಸ್ತುವಿನಲ್ಲಿ ದ್ವೈತಕಲ್ಪನೆಯಾದರೂ ಹೇಗೆ ಬಂದೀತು?

೪೨. ಚಿದ್ರೂಪನಾದ ಆತ್ಮನು ಚಿನ್ಮಯನಾದ ತನ್ನನ್ನೇ ಭಾವನೆಮಾಡಿಕೊಳ್ಳುತ್ತ, ಋಜುವಾಗಿ (ವಕ್ರವಿಲ್ಲದೆ)ಯೂ, ಜ್ಞಾನೋಜ್ಜ್ವಲವಾಗಿಯೂ ಇರುವ ತನ್ನಲ್ಲಿಯೇ ತಾನಾಗಿಯೇ ವಿಜೃಂಭಿಸುವನು.

೪೩. ಶೋಕವೆಂಬುದಿಲ್ಲ; ಮೋಹವೆಂಬುದಿಲ್ಲ; ಜನ್ಮವೆಂಬುದಿಲ್ಲ; ಜನ್ಮಿ ಎಂಬುದಿಲ್ಲ; ಯಾವುದೊಂದು ಮೊದಲಿಂದ ತಾನೇತಾನಾಗಿದೆಯೋ ಅದೇ ಇಂದಿಗೂ ಇದೆ. ಅದರಿಂದ ಎಲೆ ರಾಘವ ನೀನು ವಿಜ್ವರನಾಗು.*

೪೪. (ಸುಖದುಃಖಾದಿ) ದ್ವಂದ್ವರಹಿತನಾಗು. (ಬರಲಿ ಎಂಬ) ಯೋಗ, (ಇರಲಿ ಎಂಬ) ಕ್ಷೇಮ ಇವುಗಳನ್ನು ಮರೆತು, ಆತ್ಮವಂತನೂ, ಶೋಕರಹಿತನೂ ಆಗಿ, ರಾಘವ, ನೀನು ಜ್ವರರಹಿತನಾಗು.

---

* (ಮನಸ್ಸಿಗೆ ಬರುವ ತಾಪಕ್ಕೆ ಜ್ವರವೆಂದು ಹೆಸರು).

ಸಮಃ ಸ್ವಸ್ಥಃ ಸ್ಥಿರಮತಿಃ ಶಾಂತಶೋಕಮನಾ ಮುನಿಃ |
ಮೌನೀ ವರಮಣಿಸ್ವಚ್ಛೋ ವಿಜ್ವರೋ ಭವ ರಾಘವ || ೪೫ ||

ವಿವಿಕ್ತಃ ಶಾಂತಸಂಕಲ್ಪೋ ಧೀರಧೀರ್ವಿಜಿತಾಶಯಃ |
ಯಥಾ ಪ್ರಾಪ್ತಾನುವರ್ತೀಚ ವಿಜ್ವರೋ ಭವ ರಾಘವ || ೪೬ ||

ವೀತರಾಗೋ ನಿರಾಯಾಸೋ ವಿಮಲೋ ವೀತಕಲ್ಮಷಃ |
ನ ದಾತಾ ನ ಪರಿತ್ಯಾಗೀ ವಿಜ್ವರೋ ಭವ ರಾಘವ || ೪೭ ||

---

೪೫. ಸಮದೃಷ್ಟಿಯಾಗಿ, ಸ್ವಸ್ಥ (ಆತ್ಮವಂತ) ನಾಗಿ, ಸ್ಥಿರಮತಿಯಾಗಿ, ಮನಸ್ಸಿನ ಶೋಕವು ಶಾಂತವಾದ ಮುನಿಯಾಗಿ, ಮೌನಿಯಾಗಿ, ಉತ್ತಮರತ್ನದಂತೆ ಸ್ವಚ್ಛನಾಗಿ, ರಾಘವ, ವಿಜ್ವರನಾಗು.

(ಸಮದೃಷ್ಟಿ = ಕಂಡ ಕಂಡ ಕಡೆಯೆಲ್ಲ ಬ್ರಹ್ಮನನ್ನು ಕಾಣುವವನು. ಗೀತಾ ೫-೧೮, ೬-೨೯ ರ ಶಾಂಕರಭಾಷ್ಯ ನೋಡಿ. ಸಮಂ ಏಕಂ ಅವಿಕ್ರಿಯಂ ತತ್ ಬ್ರಹ್ಮ ದ್ರಷ್ಟುಂ ಶೀಲಂ ಯೇಷಾಂತೇ ಪಂಡಿತಾಃ ಸಮದರ್ಶಿನಃ—೫-೧೮.

ಸರ್ವತ್ರ ಸಮದರ್ಶನಃ ಸರ್ವೇಷು ಬ್ರಹ್ಮಾದಿಸ್ಥಾವರಾಂತೇಷು ವಿಷಮೇಷು ಸರ್ವಭೂತೇಷು ಸಮಂ ನಿರ್ವಿಶೇಷಂ ಬ್ರಹ್ಮಾತ್ಮೈಕತ್ವ ವಿಷಯಂ ದರ್ಶನಂ ಜ್ಞಾನಂ ಯಸ್ಯ ಸ ಸರ್ವತ್ರ ಸಮದರ್ಶನಃ—೬-೨೯.

೪೬. ವಿಜನಸ್ಥಳದಲ್ಲಿ, ಸಂಕಲ್ಪಗಳನ್ನೆಲ್ಲ ತ್ಯಜಿಸಿ, ಧೀರಬುದ್ಧಿಯಾಗಿ, ಮನಸ್ಸನ್ನು ಗೆದ್ದು, ಯದೃಚ್ಛಾಲಾಭಸಂತುಷ್ಟನಾಗಿ ಇರುತ್ತ, ರಾಘವ, ವಿಜ್ವರನಾಗು.

೪೭. ರಾಗದ್ವೇಷಗಳನ್ನು ಬಿಟ್ಟು, ಯಾವುದಕ್ಕೂ ಆಯಾಸಪಡದೆ, ಶಾರೀರಕ ಮಾನಸಿಕ ಕಲ್ಮಷಗಳನ್ನೆಲ್ಲ ತೊರೆದು, ಪರಿಗ್ರಹ ಪರಿತ್ಯಾಗವೆರಡೂ ಇಲ್ಲದೆ, ರಾಘವ, ವಿಜ್ವರನಾಗು.

ವಿಶ್ವಾತೀತಪದಂ ಪ್ರಾಪ್ತಃ ಪ್ರಾಪ್ತಪ್ರಾಪ್ತವ್ಯಪೂರಿತಃ |
ಪೂರ್ಣಾರ್ಣವವದಕ್ಷುಬ್ಧೋ ವಿಜ್ವರೋ ಭವ ರಾಘವ ॥ ೪೮ ॥

ವಿಕಲ್ಪಜಾಲನಿರ್ಮುಕ್ತೋ ಮಾಯಾಂಜನವಿವರ್ಜಿತಃ |
ಆತ್ಮನಾತ್ಮನಿ ತೃಪ್ತಾತ್ಮಾ ವಿಜ್ವರೋ ಭವ ರಾಘವ ॥ ೪೯ ॥

ಅನಂತಾಪಾರಪರ್ಯಂತವಪುರಾತ್ಮವಿದಾಂವರ |
ಧರಾಧರಶಿರೋಧೀರೋ ವಿಜ್ವರೋ ಭವ ರಾಘವ ॥ ೫೦ ॥

ಯಥಾಪ್ರಾಪ್ತಾನುಭವನಾತ್ಸರ್ವತ್ರಾನಭಿವಾಂಛನಾತ್ |
ತ್ಯಾಗಾದಾನಪರಿತ್ಯಾಗಾದ್ವಿಜ್ವರೋ ಭವ ರಾಘವ ॥ ೫೧ ॥

---

೪೮. ಲೋಕಲೋಕಗಳನ್ನೆಲ್ಲ ಮೀರಿದ ಪದವಿಯನ್ನು ಪಡೆದು, ಏನನ್ನು ಪಡೆಯಬೇಕೋ ಅದನ್ನು ಪಡೆದವನಾಗಿ, ತುಂಬಿರುವ ಮಹಾಸಾಗರದಂತೆ ಅಕ್ಷುಬ್ಧನಾಗಿ, ರಾಘವ, ವಿಜ್ವರನಾಗು.

೪೯. ವಿಕಲ್ಪದ ಬಲೆಯಿಂದ ಬಿಡಿಸಿಕೊಂಡು, ಮಾಯೆಯ ಸೋಂಕನ್ನು ಕಳೆದುಕೊಂಡು, ಆತ್ಮನಿಂದ ಆತ್ಮನಲ್ಲಿಯೇ ತೃಪ್ತನಾಗಿ, ರಾಘವ, ವಿಜ್ವರನಾಗು.

೫೦. ಆತ್ಮವಿತ್ತರಲ್ಲಿ ಶ್ರೇಷ್ಠನಾದ ರಾಘವನೆ, ಅನಂತವೂ ಅಪಾರವೂ ಆದ ಆತ್ಮನೇ ನೀನಾಗಿ, ಪರ್ವತಶಿಖರದಂತೆ ಅಚಲನಾಗಿ, ರಾಘವ, ವಿಜ್ವರನಾಗು.

೫೧. ಬಂದುದನ್ನು ಒಪ್ಪಿಕೊಂಡು, ಬರಲಿ ಎಂಬ ಆಸೆಯನ್ನೇ ತೊರೆದು, ತ್ಯಾಗ ಸಂಗ್ರಹ ಎರಡನ್ನೂ ಬಿಟ್ಟು, ರಾಘವ, ವಿಜ್ವರನಾಗು.

ಆತ್ಮನ್ಯೇವಾತ್ಮನೌದಾರ್ಯಂ ಭವ ಪೂರ್ಣ ಇವಾರ್ಣವಃ ।
ಆತ್ಮನ್ಯೇವಾತ್ಮನಾಹ್ಲಾದಂ ಭಜ ಪೂರ್ಣೇಂದು ಬಿಂಬವತ್ ॥ ೫೨ ॥

ವಿಶ್ವಪ್ರಪಂಚರಚನೇಯಮಸತ್ಯರೂಪಾ
ನಾಸತ್ಯರೂಪಮನುಧಾವತಿ ರಾಮ ತಜ್ಜ್ಞಃ ॥
ಯಜ್ಜ್ಞೋಽಸಿ ಶಾಂತಕಲನೋಽಸಿ ನಿರಾಮಯೋಽಸಿ ।
ನಿತ್ಯೋದಿತೋಽಸಿ ಭವ ಸುಂದರ ಶಾಂತಶೋಕಃ ॥ ೫೩ ॥

ಏಕಾತಪತ್ರಮವನೌ ಗುರುಣೋಪದಿಷ್ಟಂ
ಸಮ್ಯಕ್ಪಾಲಯ ಚಿರಂ ಸಮಯೇಹ ದೃಷ್ಟ್ಯಾ ।
ರಾಜ್ಯಂ ಸಮಸ್ತಗುಣರಂಜಿತರಾಜಲೋಕ
ಸ್ತ್ಯಾಗೋ ನ ಯುಕ್ತ ಇಹ ಕರ್ಮಸು ನಾಪಿ ರಾಗಃ ॥ ೫೪ ॥

ಇತ್ಯಾರ್ಷೇ ಶ್ರೀ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ಪ್ರಶಮೋಪದೇಶೋ" ನಾಮ ಪಂಚಮಃ ಸರ್ಗಃ

---

೫೨. ಆತ್ಮತೃಪ್ತನಾಗಿ, ಪೂರ್ಣಸಾಗರದಂತೆ ನೀನೂ ಪೂರ್ಣನಾಗು; ಪೂರ್ಣಚಂದ್ರನಂತೆ ಆತ್ಮಾನಂದಸಂಪನ್ನನಾಗು.

೫೩. ದೃಶ್ಯವಾದ ಈ ವಿಶ್ವವೆಲ್ಲವೂ, ಅಸತ್ಯವಾದುದು; ಹಾಗೆಂದು ಬಲ್ಲವನು ಈ ಅಸತ್ಯರೂಪವನ್ನು ಹಿಂದಟ್ಟಿಕೊಂಡು ಹೋಗುವನೆ? ಎಲೈ ಸುಂದರನಾದ ರಾಮನೆ, ನೀನು ಇದನ್ನು ಬಲ್ಲವನು; ಶಾಂತಸಂಕಲ್ಪನಾದವನು; ದುಃಖಾತೀತನಾದವನು; ನಿತ್ಯ ಶ್ರೇಯಸ್ಸನ್ನು ಪಡೆದವನು. ಆದರಿಂದ ಶೋಕರಹಿತನಾಗು.

೫೪. (ಆದರಿಂದ) ನಿನ್ನ ತಂದೆಯಾದ ದಶರಥನ ಅಪ್ಪಣೆಯಾದಂತೆ, ಏಕಚ್ಛತ್ರಾಧಿಪತ್ಯವಾದ ಈ ರಾಜ್ಯವನ್ನು ಸಮದೃಷ್ಟಿಯಾಗಿ ನಿನ್ನ ರಾಜಗುಣಗಳಿಂದ

ರಾಜಲೋಕವನ್ನೆಲ್ಲ ಪಾಲಿಸುತ್ತ ಚೆನ್ನಾಗಿ ಚಿರಕಾಲ ಪಾಲಿಸು. ಈ ಲೋಕದಲ್ಲಿ ಇರುವವರೆಗೂ ಇಲ್ಲಿನ ಕರ್ಮಗಳಲ್ಲಿ ತ್ಯಾಗವೂ ಯುಕ್ತವಲ್ಲ; ರಾಗವಂತೂ ಅಲ್ಲವೇ ಅಲ್ಲ.

ಚಿಂತಿಸಿ, ಗೀತಾ ಅಧ್ಯಾಯ ೧೮.

ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ ।
ಯಜ್ಞದಾನ ತಪಃ ಕರ್ಮನತ್ಯಾಜ್ಯಮಿತಿ ಚಾಪರೇ ॥ ೩ ॥

ನ ಹಿ ದೇಹಭೃತಾಶಕ್ಯಂತ್ಯಕ್ತುಂ ಕರ್ಮಾಣ್ಯಶೇಷತಃ ।
ಯಸ್ತು ಕರ್ಮಫಲತ್ಯಾಗೀ ಸತ್ಯಾಗೀತ್ಯಭಿಧೀಯತೇ ॥ ೧೧ ॥

ಬ್ರಾಹ್ಮಣ ಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವ ಪ್ರಭವೈರ್ಗುಣೈಃ ॥ ೪೧ ॥

ಶೌರ್ಯಂ ತೇಜೋಧೃತಿರ್ದಾಕ್ಷ್ಯಂ ಯುದ್ಧೇಚಾಪ್ಯಪಲಾಯನಂ ।
ದಾನಮೀಶ್ವರ ಭಾವಶ್ಚ ಕ್ಷಾತ್ರಂ ಕರ್ಮಸ್ವಭಾವಜಂ ॥ ೪೩ ॥

ಸ್ವೇಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ॥ ೪೫ ॥

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಂ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ ೪೬ ॥

ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಲ್ಮಷಂ ॥ ೪೭ ॥

ಸಹಜಂ ಕರ್ಮಕೌಂತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ॥ ೪೮ ॥

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
" ಪ್ರಶಮೋಪದೇಶ " ವೆಂಬ ಐದನೆಯ ಸರ್ಗವು.

ಷಷ್ಠಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಇಮಂ ವಿಶ್ವಪರಿಸ್ಪಂದಂ ಕರೋಮ್ಯಾತ್ಮಸ್ತ್ವವಾಸನಂ ।
ಪ್ರವರ್ತತೇ ಯಃ ಕಾರ್ಯೇಷು ಸ ಮುಕ್ತ ಇತಿ ಮೇ ಮತಿಃ ॥ ೧ ॥

ಪೌರುಷೀಂ ತನುಮಾಶ್ರಿತ್ಯ ಕೇಚಿದೇತತ್ಕ್ರಿಯಾರತಾಃ ।
ಸ್ವರ್ಗಾನ್ನರಕಮಾಯಾಂತಿ ಸ್ವರ್ಗಂ ಚ ನರಕಾತ್ಪುನಃ ॥ ೨ ॥

ಕೇಚಿತ್ತ್ವಕರ್ಮಣಿ ರತಾ ವಿರತಾ ಅಪಿ ಕರ್ಮಣಃ ।
ನರಕಾನ್ನರಕಂ ಯಾಂತಿ ದುಃಖಾದ್ದುಃಖಂ ಭಯಾದ್ಭಯಂ ॥ ೩ ॥

ಆರನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. "ವ್ಯವಹಾರವನ್ನೆಲ್ಲ ವಾಸನಾಶೂನ್ಯನಾಗಿ ನಡೆಯಿಸುವೆನು" ಎಂದು ನಿಶ್ಚಯಿಸಿಕೊಂಡು ಕರ್ತವ್ಯಕರ್ಮಗಳನ್ನು ಮಾಡುವವನು ಮುಕ್ತನೇ ಎಂದು ನನ್ನ ಅಭಿಪ್ರಾಯವು.

೨. ಮನುಷ್ಯ ಜನ್ಮವನ್ನು ಪಡೆದವರು ಈ ವ್ಯವಹಾರಗಳಲ್ಲಿ ನಿರತರಾಗಿ ಸ್ವರ್ಗದಿಂದ ನರಕಕ್ಕೂ ನರಕದಿಂದ ಸ್ವರ್ಗಕ್ಕೂ ಅಲೆಯುತ್ತಿರುವರು.

೩. ಇನ್ನು ಕೆಲವರು ಅಕರ್ಮನಿರತರೂ ವಿಹಿತಕರ್ಮ ವಿಮುಖರೂ ಆಗಿ ನರಕದಿಂದ ನರಕಕ್ಕೆ ಹೋಗುತ್ತ ದುಃಖದಿಂದ ದುಃಖವನ್ನೂ ಭಯದಿಂದ ಭಯವನ್ನೂ ಹೊಂದುತ್ತ ಬಳಲುವರು.

ಕೇಚಿತ್ಸ್ವವಾಸನಾತಂತು ಬದ್ಧಾಃ ಕರ್ಮಫಲೋದಿತಾಃ |
ತಿರ್ಯಕ್ತ್ವಾತ್ಸ್ಥಾವರತನುಂ ಯಾಂತಿ ತಿರ್ಯಕ್ತನುಂ ತತಃ || ೪ ||

ಕೇಚಿದಾತ್ಮವಿದೋ ಧನ್ಯಾ ವಿಚಾರಿತಮನೋದೃಶಃ |
ವಿಚ್ಛಿನ್ನತೃಷ್ಣಾನಿಗಡಾ ಯಾಂತಿ ನಿಷ್ಕೇವಲಂ ಪದಂ || ೫ ||

ಪರಾ ಕತಿಪಯಾನ್ಯೇವ ಭುಕ್ತ್ವಾ ಜನ್ಮಾನಿ ರಾಘವ |
ಅಸ್ಮಿನ್ನನ್ಮನಿ ಯೋ ಮುಕ್ತಸ್ತಸ್ಮಾದ್ರಾಜಸಸಾತ್ವಿಕಃ || ೬ ||

ಜಾತೋಽಸೌ ವೃದ್ಧಿಮಭ್ಯೇತಿ ಪಾರ್ವಣಶ್ಚಂದ್ರಮಾ ಇವ |
ಕುಟಜಂ ಪ್ರಾವೃಷೀವೈನಂ ಸೌಭಾಗ್ಯಮನುಗಚ್ಛತಿ || ೭ ||

ಯಸ್ಯೇದಂ ಜನ್ಮ ಪಾಶ್ಚಾತ್ಯಂ ಸಮಾಶ್ವೇವ ಮಹಾಮತೇ |
ವಿಶಂತಿ ವಿದ್ಯಾ ವಿಮಲಾ ಮುಕ್ತಾ ವೇಣುಮಿವೋತ್ತಮಂ || ೮ ||

---

೪. ಮತ್ತೆ ಕೆಲವರು ಸ್ವಕರ್ಮವಾಸನೆಯೆಂಬ ಪಾಶಕ್ಕೆ ಸಿಕ್ಕಿ, ಕರ್ಮಫಲ ನಾಗಿ ತಿರ್ಯಕ್, ಸ್ಥಾವರ ತನುಗಳನ್ನು ಮತ್ತೆ ಮತ್ತೆ ಪಡೆಯುವರು.

೫. ಎಲ್ಲಿಯೋ ಕೆಲವರು ಆತ್ಮಜ್ಞಾನಸಂಪನ್ನರಾದ ಧನ್ಯರಾಗಿ, ಮನಸ್ಸ್ವ ರೂಪವನ್ನು ವಿಚಾರಮಾಡಿ ತಿಳಿದವರಾಗಿ, ತೃಷ್ಣಾ ಎಂಬ ಸರಪಳಿಯಿಂದ ಬಿಡಿಸಿ ಕೊಂಡು, ಕೈವಲ್ಯವನ್ನು ಪಡೆಯುವರು.

೬. ರಾಘವ, ಕೆಲವು ಜನ್ಮಗಳಾದಮೇಲೆ ಯಾವನು ಒಂದೇ ಜನ್ಮದಲ್ಲಿಯೇ ಮುಕ್ತನಾಗುವನೋ ಅವನು ರಾಜಸಸಾತ್ವಿಕನೆನ್ನಿಸಿಕೊಳ್ಳುವನು.

೭. ಅದೇ ಜನ್ಮದಲ್ಲಿಯೇ ಮುಕ್ತನಾಗುವ ರಾಜಸಸಾತ್ವಿಕನು ಪೂರ್ಣಿಮಾ ಚಂದ್ರನಂತೆ, ವರ್ಷಾಕಾಲದ ಕುಟಜ (ಕೊಡಸಿಗೆ) ವೃಕ್ಷದಂತೆ, ಹುಟ್ಟಿ ವೃದ್ಧಿಯಾಗು ವನು; ಸೌಭಾಗ್ಯವನ್ನು ಪಡೆಯುವನು.

೮. ಎಲೈ ಮಹಾಮತಿಯೆ, ಯಾವನಿಗೆ ಅದೇ ಕೊನೆಯ ಜನ್ಮವೋ, ಅವ ನಿಗೆ, ಬಿದಿರಲ್ಲಿ ಮುತ್ತಿನ ಮಣಿಗಳು ಸೇರುವಂತೆ, ಎಲ್ಲ ಸುವಿದ್ಯೆಗಳೂ ಲಭಿಸುವುವು.

ಆರ್ಯತಾ ಹೃದ್ಯತಾ ಮೈತ್ರೀ ಸೌಮ್ಯತಾ ಕರುಣಾ ಜ್ಞತಾ ।
ಸಮಾಶ್ರಯಂತಿ ತಂ ನಿತ್ಯಮಂತಃಪುರಮಿವಾಂಗನಾಃ ॥ ೯ ॥

ಯಃ ಕುರ್ವನ್ಸರ್ವಕಾರ್ಯಾಣಿ ಪುಷ್ಟೇ ನಷ್ಟೇಽಥ ತತ್ಫಲೇ ।
ಸಮಃ ಸನ್ಸರ್ವಕಾರ್ಯೇಷು ನ ತುಷ್ಯತಿ ನ ಶೋಚತಿ ॥ ೧೦ ॥

ತಮಾಂಸೀವ ದಿವಾಯಾಂತಿ ತತ್ರ ದ್ವಂದ್ವಾನಿ ಸಂಕ್ಷಯಂ ।
ಶರದೀವ ಘನಾಸ್ತತ್ರ ಗಣಾ ಗಚ್ಛಂತಿ ಶುದ್ಧತಾಂ ॥ ೧೧ ॥

ಪೇಶಲಾಚಾರಮಧುರಂ ಸರ್ವೇ ವಾಂಛಂತಿ ತಂ ಜನಾಃ ।
ವೇಣುಂ ಮಧುರನಿಧ್ವಾನಂ ವನೇ ವನಮೃಗಾ ಇವ ॥ ೧೨ ॥

---

೯. ಅಂಗನೆಯರು ಅಂತಃಪುರವನ್ನು ಆಶ್ರಯಿಸಿರುವಂತೆ, ಆರ್ಯತೆ, ಮನೋಹರತೆ, ಮೈತ್ರೀ, ಸೌಮ್ಯತೆ, ಕರುಣೆ, ಕೃತಜ್ಞತೆ, ಇವೆಲ್ಲವೂ ಅವನನ್ನು ನಿತ್ಯವೂ ಆಶ್ರಯಿಸಿರುವುವು.

೧೦. ಯಾವನು ಫಲವು ಲಭಿಸಲಿ, ಲಭಿಸದಿರಲಿ, ಸರ್ವಕಾರ್ಯಗಳನ್ನೂ ಮಾಡುತ್ತ ಸರ್ವಕಾರ್ಯಗಳನ್ನೂ ಸಮವಾಗಿ ನೋಡುತ್ತ, ತೃಪ್ತಿ ಶೋಕಗಳು ಯಾವುದೂ ಇಲ್ಲದಿರುವನೋ,

೧೧. ಅಂಥವನಲ್ಲಿ ಕತ್ತಲುಗಳು ಹಗಲಿನಲ್ಲಿ ಕ್ಷಯ ಹೊಂದುವಂತೆ, ಸುಖ ದುಃಖಾದಿ ದ್ವಂದ್ವಗಳು ವಿಲಯವನ್ನು ಹೊಂದುವುವು ; ಅವನ ಗುಣಗಳೆಲ್ಲ, ಶರತ್ಕಾಲದಲ್ಲಿ ಮೋಡಗಳು ಶುದ್ಧವಾಗುವ ಹಾಗೆ ಶುದ್ಧವಾಗುವುವು.

೧೨. ಮಧುರ ಧ್ವನಿಯುಳ್ಳ ವೇಣುವನ್ನು ವನದಲ್ಲಿರುವ ವನ್ಯಮೃಗಗಳೆಲ್ಲ ಪ್ರೀತಿಸುವಂತೆ, ಶುದ್ಧಾಚಾರದಿಂದ ಪ್ರಿಯನಾದ ಅವನನ್ನು ಎಲ್ಲರೂ ಪ್ರೀತಿಸುವರು.

ನರಂ ಪಾಶ್ಚಾತ್ಯಜನ್ಮಾನಮೇವಂಪ್ರಾಯಾ ಗುಣಶ್ರಿಯಃ ।
ಜಾತಮೇವಾನುಧಾವಂತಿ ಬಲಾಕಾ ಇವ ವಾರಿದಂ ॥ ೧೩ ॥

ತತೋऽಸೌ ಗುಣಸಂಪೂರ್ಣೋ ಗುರುಮೇವಾನುಗಚ್ಛತಿ ।
ಸ ತಮೇವಂ ವಿವೇಕೇ ವೈ ನಿಯೋಜಯತಿ ಪಾವನೇ ॥ ೧೪ ॥

ವಿಚಾರವೈರಾಗ್ಯವತಾ ಚೇತಸಾ ಗುಣಶಾಲಿನಾ ।
ದೇವಂ ಪಶ್ಯತ್ಯಥಾತ್ಮಾನಮೇಕರೂಪಮನಾಮಯಂ ॥ ೧೫ ॥

ತನೋತ್ಯಯಂ ವಿಚಾರೇ ಚಾರುಣಾ ಶಾಂತಚೇತಸಾ ।
ಪ್ರಬೋಧನಾಯ ಪ್ರಥಮಂ ಮನೋಮನನಮಾಂತರಂ ॥ ೧೬ ॥

ಯೇ ಹಿ ಪಾಶ್ಚಾತ್ಯಜನ್ಮಾನಸ್ತೇ ಹಿ ಸುಪ್ತಂ ಮನೋಮೃಗಂ ।
ಪ್ರಬೋಧಯಂತಿ ಪ್ರಥಮಂ ಗುಣಹೀನಂ ಮಹಾಗುಣಾಃ ॥ ೧೭ ॥

---

೧೩. ಬಲಾಕ (ಕೊಕ್ಕರೆ) ಗಳು ಮೇಘ ಪಂಕ್ತಿಯನ್ನು ಅನುಸರಿಸುವಂತೆ, ರಾಜಸ ಸಾತ್ವಿಕನನ್ನು ಹುಟ್ಟುತ್ತಿದ್ದ ಹಾಗೆಯೇ ಈ ರೀತಿಯ ಗುಣಸೌಭಾಗ್ಯಗಳು ಆಶ್ರಯಿಸಿರುವುವು.

೧೪. ಹೀಗೆ ಗುಣಸಂಪೂರ್ಣನಾದ ಆತನು ಗುರುವನ್ನು ಆಶ್ರಯಿಸುವನು. ಆತನು ಅವನನ್ನು ಪಾವನವಾದ ವಿವೇಕದಲ್ಲಿ ನಿಯೋಜಿಸುವನು.

೧೫. ಗುಣಶಾಲಿಯಾಗಿ, ವಿಚಾರ ವೈರಾಗ್ಯಸಂಪನ್ನವಾದ ಮನಸ್ಸಿನಿಂದ ಏಕರೂಪನೂ ಅನಾಮಯನೂ ಜ್ಯೋತಿಸ್ಸ್ವರೂಪನೂ ಆದ ಆತ್ಮನನ್ನು ಕಾಣುವನು.

೧೬. ಇಂಥವನು ಮೊದಲು ಹಿತವಾದ ವಿಚಾರದಿಂದ, ಶಾಂತವಾದ ಮನಸ್ಸಿನಿಂದ, ಜ್ಞಾನಾರ್ಥವಾಗಿ ಮನಸ್ಸಿನಲ್ಲಿಯೇ ಮನನ ಮಾಡುವನು.

೧೭. ಹೀಗೆ, ಕೊನೆಯ ಜನ್ಮದ ಮಹಾಪುರುಷರು, ಮನೋಮೃಗವು ತನ್ನ ದುರ್ಗುಣವನ್ನು ಬಿಟ್ಟು ಸುಪ್ತವಾಗುವಂತೆ ಜ್ಞಾನಸಂಪನ್ನರಾಗುವರು.

ಪ್ರಥಿತಗುಣಾನ್ಸುಗುರೂನ್ನಿಷೇವ್ಯ ಯತ್ನಾ
ದಮಲಧಿಯಾ ಪ್ರವಿಚಾರ್ಯ ಚಿತ್ತರತ್ನಂ ||
ಗತಿಮಮಲಾಮುಪಯಾಂತಿ ಮಾನವಾಸ್ತೇ
ಪರಮವಲೋಕ್ಯ ಚಿರಂ ಪ್ರಕಾಶಮಂತಃ || ೧೮ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
“ ಪ್ರಥಮೋಪದೇಶೋ ” ನಾಮ ಷಷ್ಠಃ ಸರ್ಗಃ

---

೧೮. ಇಂತಹ ಮಾನವೋತ್ತಮರು ಪ್ರಯತ್ನಪೂರ್ವಕವಾಗಿ ಸದ್ಗುಣ ಸಂಪನ್ನರಾದ ಸದ್ಗುರುಗಳನ್ನು ಚೆನ್ನಾಗಿ ಸೇವಿಸಿ, ನಿರ್ಮಲ ಬುದ್ಧಿಯೆಂಬ ಚಿತ್ತ ಸ್ವರೂಪವನ್ನು ಕುರಿತು ವಿಚಾರಿಸಿ, ತಮ್ಮಲ್ಲಿಯೇ ಪ್ರಕಾಶಿಸುತ್ತಿರುವ ಆತ್ಮವನ್ನು ದರ್ಶನಮಾಡಿ ಉತ್ತಮಗತಿಯನ್ನು ಪಡೆಯುವರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ಶ್ರೀ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ “ ಪ್ರಥಮೋಪದೇಶ ” ವೆಂಬ ಆರನೆಯ ಸರ್ಗವು.

ಸಪ್ತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಏಷ ತಾವತ್ಕ್ರಮಃ ಪ್ರೋಕ್ತಃ ಸಾಮಾನ್ಯಃ ಸರ್ವದೇಹಿನಾಂ ।
ಇಮಮನ್ಯಂ ವಿಶೇಷಂ ತ್ವಂ ಶೃಣು ರಾಜೀವಲೋಚನ ॥ ೧ ॥

ಅಸ್ಮಿನ್ಸಂಸಾರಸಂರಂಭೇ ಜಾತಾನಾಂ ದೇಹಧಾರಿಣಾಂ ।
ಅಪವರ್ಗಕ್ಷಮೌ ರಾಮ ದ್ವಾವಿಮಾವುತ್ತಮೌ ಕ್ರಮೌ ॥ ೨ ॥

ಏಕಸ್ತಾವದ್ಗುರುಪ್ರೋಕ್ತಾದನುಷ್ಠಾನಾಚ್ಛನೈಃ ಶನೈಃ ।
ಜನ್ಮನಾ ಜನ್ಮಭಿರ್ವಾಪಿ ಸಿದ್ಧಿದಃ ಸಮುದಾಹೃತಃ ॥ ೩ ॥

ಏಳನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಇದುವರೆಗೂ ಹೇಳಿದುದು ಸರ್ವರಿಗೂ ಸಾಮಾನ್ಯವಾದ ಕ್ರಮವು. ಇನ್ನು ವಿಶೇಷ ಕ್ರಮವನ್ನು ಹೇಳುವೆನು. ರಾಜೀವಲೋಚನನಾದ ರಾಮನೆ, ಕೇಳು.

೨. ಸಂಸಾರ ಸಂಭ್ರಮದಲ್ಲಿ ಸಿಕ್ಕಿಕೊಂಡಿರುವ ದೇಹಧಾರಿಗಳಿಗೆಲ್ಲ, ಎಲೈ ರಾಮನೆ, ಮುಕ್ತಿಯಾಗಲು ಇವೆರಡೂ ಉತ್ತಮವಾದ ಹಾದಿಗಳು.

೩. ಮೊದಲನೆಯದು ಗುರುವು ಹೇಳಿದ ಹಾದಿಯನ್ನು ಹಿಡಿದು ಕ್ರಮವಾಗಿ ಅನುಷ್ಠಾನಮಾಡುತ್ತಾ ಒಂದು ಜನ್ಮದಲ್ಲಿಯೇ ಅಥವಾ ಜನ್ಮಾಂತರಗಳಲ್ಲಿಯೇ ಸಿದ್ಧಿಯನ್ನು ಕೊಡುವ ಮಾರ್ಗವು.

ದ್ವಿತೀಯಸ್ತ್ವಾತ್ಮನೈವಾಶು ಕಿಂಚಿದ್ವ್ಯುತ್ಪನ್ನಚೇತಸಾ |
ಭವತಿ ಜ್ಞಾನಸಂಪ್ರಾಪ್ತಿರಾಕಾಶಫಲಪಾತವತ್ || ೪ ||

ನಭಃ ಫಲನಿಪಾತಾಭ ಜ್ಞಾನಸಂಪ್ರತಿಪತ್ತಯೇ |
ತತ್ರೇಮಂ ಶೃಣು ವೃತ್ತಾಂತಂ ಪ್ರಾಕ್ತನಂ ಕಥಯಾಮಿ ತೇ || ೫ ||

ಶೃಣು ಸುಭಗ ಕಥಾಂ ಮಹಾನುಭಾವಾ
ವ್ಯಪಗತಪೂರ್ವಶುಭಾಶುಭಾರ್ಗಲೌಘಾಃ ||
ಸ್ವಪತಿತಫಲವತ್ಪರಂ ವಿವೇಕಂ
ಚರಮಭವಾ ವಿಮಲಂ ಸಮಶ್ನುವಂತಿ || ೬ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ಆಕಾಶಫಲಪ್ರಾಪ್ತಿ ವಿಜ್ಞಾನಸಂಪ್ರಾಪ್ತಿ ಕ್ರಮಸೂಚನಂ" ನಾಮ ಸಪ್ತಮಃ ಸರ್ಗಃ

---

೪. ಎರಡನೆಯದು ತನ್ನ ಪ್ರಯತ್ನದಿಂದಲೇ ವಿವೇಕವನ್ನು ಪಡೆದ ಮನಸ್ಸಿಗೆ ಆಕಾಶದಿಂದ ಬಿದ್ದ ಹಣ್ಣಿನಂತೆ, ಜ್ಞಾನ ಪ್ರಾಪ್ತಿಯಾಗುವುದು.

೫. ಆಕಾಶದಿಂದ ಬಿದ್ದ ಹಣ್ಣಿನಂತೆ ಜ್ಞಾನವು ಲಭಿಸುವುದುಂಟು ಎಂಬುದರ ನಿದರ್ಶನವಾಗಿ ಹಿಂದಿನ ಕಥೆಯೊಂದನ್ನು ಹೇಳುವೆನು ಕೇಳು.

೬. ಎಲೈ ಸೌಭಾಗ್ಯವಂತನೆ, ಮಹಾನುಭಾವರಾದ ಚರಮ ಜನ್ಮದವರು, ಜನ್ಮಜನ್ಮಾಂತರಗಳ ಶುಭಾಶುಭಫಲಗಳೆಂಬ ಸಂಕೋಲೆಗಳನ್ನು ಕಳೆದುಕೊಂಡು ಆಕಾಶ ಪತಿತಫಲದಂತೆ ಪರವಿವೇಕ (ಸಮಜ್ಞಾನ) ವನ್ನು ಹೇಗೆ ಪಡೆದರೆಂಬುದನ್ನು ಕೇಳು.

ಇಂತಿದು ಆರ್ಷವೂ ವಾಲ್ಮೀಕಿಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ಆಕಾಶಫಲಪ್ರಾಪ್ತಿ ವಿಜ್ಞಾನಸಂಪ್ರಾಪ್ತಿಕ್ರಮಸೂಚನ" ವೆಂಬ ಏಳನೆಯ ಸರ್ಗವು.

ಅಷ್ಟಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಅಸ್ತ್ಯಸ್ತಮಿತಸರ್ವಾಪದುದ್ಯತ್ಸಂಪದುದಾರಧೀಃ |
ವಿದೇಹಾನಾಂ ಮಹೀಪಾಲೋ ಜನಕೋ ನಾಮ ವೀರ್ಯವಾನ್ ॥ ೧ ॥

ಕಲ್ಪವೃಕ್ಷೋಽರ್ಥಿಸಾರ್ಥಾನಾಂ ಮಿತ್ರಾಬ್ಜಾನಾಂ ದಿವಾಕರಃ |
ಮಾಧವೋ ಬಂಧುಪುಷ್ಪಾಣಾಂ ಸ್ತ್ರೀಣಾಂ ಮಕರಕೇತನಃ ॥ ೨ ॥

ದ್ವಿಜಕೈರವಶೀತಾಂಶುರ್ದ್ವಿಷತ್ತಿಮಿರಭಾಸ್ಕರಃ |
ಸೌಜನ್ಯರತ್ನಜಲಧಿರ್ಭುವಂ ವಿಷ್ಣುರಿವಾಸ್ಥಿತಃ ॥ ೩ ॥

ಎಂಟನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ವಿದೇಹ ದೇಶದರಸನಾದ ಭೂಪಾಲನುಂಟು. ಆತನು ಆಪತ್ತುಗಳನ್ನು ಕಂಡವನಲ್ಲ. ಅಭ್ಯುದಯಪರವಾದ ಸಂಪತ್ತು ಉಳ್ಳವನು. ಚೆನ್ನಾಗಿ ತಿಳಿದವನು.

೨. ಆತನು ಅರ್ಥಿಗಳಾಗಿ ಬಂದವರಿಗೆ ಕಲ್ಪವೃಕ್ಷವು. ಮಿತ್ರರೆಂಬ ಕಮಲಗಳಿಗೆ ಸೂರ್ಯನು. ಬಂಧುಗಳೆಂಬ ಹೂಗಳಿಗೆ ವಸಂತ ಋತುವು. ಸ್ತ್ರೀಯರಿಗೆ ಮನ್ಮಥನು.

೩. ಬ್ರಾಹ್ಮಣರೆಂಬ ಕುಮುದಗಳಿಗೆ ಚಂದ್ರನು. ಶತ್ರುಗಳೆಂಬ ಕತ್ತಲೆಗೆ ಸೂರ್ಯನು. ಸೌಜನ್ಯವೆಂಬ ರತ್ನಗಳಿಗೆ ಜಲಧಿಯು. ಹೀಗಿದ್ದು ಭೂಮಿಯಲ್ಲಿ ಅವತರಿಸಿರುವ ವಿಷ್ಣುವೋ ಎಂಬಂತಿದ್ದನು.

ಪ್ರಫುಲ್ಲಬಾಲಲತಿಕೇ ಮಂಜರೀಪುಂಜಪಿಂಜರೇ |
ಸ ಕದಾಚಿನ್ಮಧೌ ಮತ್ತೇ ಕೋಕಿಲಾಲಾಪಲಾಸಿನೀ || ೪ ||

ಯಯೌ ಕುಸುಮಿತಾಭೋಗಂ ಸುವಿಲಾಸಲತಾಂಗನಂ |
ಲೀಲಯೋಪವನಂ ಕಾಂತಂ ನಂದನಂ ವಾಸವೋ ಯಥಾ || ೫ ||

ತಸ್ಮಿನ್ವರವನೇ ಹೃದ್ಯೇ ಕೇಸರೋದ್ದಾಮಮಾರುತೇ |
ದೂರಸ್ಥಾನುಚರಃ ಸಾನುಕುಂಜೇಷು ವಿಚಚಾರ ಹ || ೬ ||

ಅಥ ಶುಶ್ರಾವ ಕಸ್ಮಿಂಶ್ಚಿತ್ತಮಾಲವನಗುಲ್ಮಕೇ |
ಸಿದ್ಧಾನಾಮಪ್ರದೃಶ್ಯಾನಾಂ ಸ್ವಪ್ರಸಂಗಾದುದಾಹೃತಾಃ || ೭ ||

ವಿವಿಕ್ತವಾಸಿನಾಂ ನಿತ್ಯಂ ಶೈಲಕಂದರಚಾರಿಣಾಂ |
ಇಮಾಃ ಕಮಲಪತ್ರಾಕ್ಷ ಗೀತಾ ಗೀತಾತ್ಮಭಾವನಾ || ೮ ||

೪—೫. ಆತನು ಒಮ್ಮೆ ಚಿಗರು ಹೂ ಗೊಂಚಲುಗಳಿಂದ ಸಿಂಗರಿಸಿಕೊಂಡ ಎಳೆ ಬಳ್ಳಿಗಳೂ ಗಾನದಿಂದ ಶೋಭಿಸುವ ಕೋಗಿಲೆಗಳೂ ಉಳ್ಳ ವಸಂತಋತುವಿನಲ್ಲಿ, ಹೂಗಳಿಂದಲೂ ಲತಾಂಗನಾವಿಲಾಸದಿಂದಲೂ ಸುಂದರವಾದ ನಂದನಕ್ಕೆ ಇಂದ್ರನು ಹೋಗುವಂತೆ ತನ್ನ ಉಪವನಕ್ಕೆ ವಿಲಾಸಾರ್ಥವಾಗಿ ಹೋದನು.

೬. ಪುಷ್ಪಕೇಸರಗಳ ಆಮೋದವನ್ನು ಬೀರುವ ಮಂದಮಾರುತನಿಂದ ಸುಂದರವಾದ ಆ ದಿವ್ಯವನದಲ್ಲಿ ಅನುಚರರನ್ನೆಲ್ಲ ದೂರವಾಗಿ ಬಿಟ್ಟು ಕ್ರೀಡಾಪರ್ವತದ ತಪ್ಪಲುಗಳಲ್ಲಿ ವಿಹರಿಸುತ್ತಿದ್ದನು.

೭–೮. ಒಂದಾನೊಂದು ತಮಾಲಗುಲ್ಮದಲ್ಲಿ ಕಣ್ಣಿಗೆ ಕಾಣದೆ ಮರೆಯಾಗಿ, ನಿರ್ಜನ ಪ್ರಾಂತಗಳಾದ ಶೈಲಕಂದರಗಳಲ್ಲಿ ಚರಿಸುವ ಸಿದ್ಧರು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುವ ಪ್ರಸಂಗದಲ್ಲಿ ಹೇಳಿದ, ಆತ್ಮಭಾವ ಸಂಪೂರ್ಣವಾದ ಗೀತಗಳನ್ನು, ಕಮಲಲೋಚನನಾದ ರಾಮನೆ, ಕೇಳಿದನು.

ಸಿದ್ಧಾ ಉವಾಚ :—

ದ್ರಷ್ಟೃದೃಶ್ಯಸಮಾಯೋಗಾತ್ಪ್ರತ್ಯಯಾನಂದನಿಶ್ಚಯಃ ।
ಯಸ್ತಂ ಸಮಾತ್ಮತತ್ತ್ವೋತ್ಥಂ ನಿಸ್ಪಂದಂ ಸಮುಪಾಸ್ಮಹೇ ॥ ೯ ॥

ಅನ್ಯೇ ಊಚುಃ :—

ದ್ರಷ್ಟೃದರ್ಶನದೃಶ್ಯಾನಿ ತ್ಯಕ್ತ್ವಾ ವಾಸನಯಾ ಸಹ ।
ದರ್ಶನಪ್ರಥಮಾಭಾಸಮಾತ್ಮಾನಂ ಸಮುಪಾಸ್ಮಹೇ ॥ ೧೦ ॥

ಅನ್ಯೇ ಊಚುಃ :—

ದ್ವಯೋರ್ಮಧ್ಯಗತಂ ನಿತ್ಯಮಸ್ತಿ ನಾಸ್ತೀತಿ ಪಕ್ಷಯೋಃ ।
ಪ್ರಕಾಶನಂ ಪ್ರಕಾಶ್ಯಾನಾಮಾತ್ಮಾನಂ ಸಮುಪಾಸ್ಮಹೇ ॥ ೧೧ ॥

ಸಿದ್ಧರು ಹೇಳಿದರು :—

೯. ದೃಕ್, ದೃಶ್ಯಗಳ ಸಂಯೋಗದಿಂದ ತನಗೆ ಆನಂದವುಂಟಾಯಿತೆಂಬ ನಿಶ್ಚಯವು ಎಲ್ಲಿ ಹುಟ್ಟುವುದೋ, ಅಲ್ಲಿಯೇ ಕಾಣಿಸಿಕೊಳ್ಳುವ ನಿಸ್ಪಂದರೂಪವಾದ ಆತ್ಮತತ್ತ್ವ ಯಾವುದುಂಟೋ, ಅದನ್ನೇ ನಾವು ಉಪಾಸಿಸುವೆವು. (ಚಕ್ಷುರಾದಿ ಇಂದ್ರಿಯಗಳ ದ್ವಾರಾ ವಿಷಯಗಳನ್ನು ಅನುಭವಿಸತಕ್ಕವರಿಗೆ ಆ ವಿಷಯಗಳ ಸನ್ನಿಕರ್ಷದಿಂದ ಆಯಾ ವಿಷಯಾಕಾರವಾಗಿ ಪರಿಣಮಿಸುವ ಬುದ್ಧಿವೃತ್ತಿಯಲ್ಲಿ ಸ್ವಯಂ ಪ್ರಕಟವಾಗತಕ್ಕ ಯಾವ ಆನಂದರೂಪವಾದ ನಿಶ್ಚಯವುಂಟೋ, ಅದನ್ನೇ ಆತ್ಮತತ್ತ್ವಪರಿಚಿಂತನೆಯಿಂದುಂಟಾದ ನಿರತಿಶಯ ಭೂಮರೂಪನಾದ ಆತ್ಮನೆಂದು ನಿಶ್ಚಲವಾಗಿ ಸರ್ವದಾ ಅನುಭವಿಸುವೆವು :—ತಾ. ಪ್ರ.)

ಇತರರು ಹೇಳಿದರು :—

೧೦. ದೃಕ್, ದೃಶ್ಯ, ದರ್ಶನಗಳೆಂಬ ತ್ರಿಪುಟಿಯನ್ನೂ ತದ್ವಾಸನೆಯನ್ನೂ ಸಹ ತ್ಯಜಿಸಿ, ಆ ತ್ರಿಪುಟೀ ರೂಪವಾದ ವೃತ್ತಿಯು ಹುಟ್ಟುವುದಕ್ಕಿಂತ ಮುಂಚೆಯೇ ಇದ್ದ ಆತ್ಮವನ್ನು ಉಪಾಸನ ಮಾಡುವೆವು.

ಇತರರು ಹೇಳಿದರು :—

೧೧. ಅಸ್ತಿ, ನಾಸ್ತಿ ಎಂಬ ಎರಡು ಪಕ್ಷಗಳಿಗೂ ಮಧ್ಯದಲ್ಲಿರುವನಾಗಿ, ನಿತ್ಯನಾಗಿ, ಪ್ರಕಾಶ್ಯವಾದುವುಗಳನ್ನೆಲ್ಲ ಪ್ರಕಾಶಪಡಿಸುವ ಆತ್ಮವನ್ನು ನಾವು ಉಪಾಸನ ಮಾಡುವೆವು.

ಅನ್ಯೇ ಊಚುಃ :—

ಯಸ್ಮಿನ್ಸರ್ವಂ ಯಸ್ಯ ಸರ್ವಂ ಯತಃ ಸರ್ವಂ ಯಸ್ಮಾಯಿದಂ |
ಯೇನ ಸರ್ವಂ ಯದ್ಧಿ ಸರ್ವಂ ತತ್ಸತ್ಯಂ ಸಮುಪಾಸ್ಮಹೇ || ೧೨ ||

ಅನ್ಯೇ ಊಚುಃ :—

ಅಶಿರಸ್ಕಂ ಹಕಾರಾಂತಮಶೇಷಾಕಾರಸಂಸ್ಥಿತಂ |
ಅಜಸ್ರಮುಚ್ಚರಂತಂ ಸ್ವಂ ತಮಾತ್ಮಾನಮುಪಾಸ್ಮಹೇ || ೧೩ ||

ಅನ್ಯೇ ಊಚುಃ :—

ಸಂತ್ಯಜ್ಯ ಹೃದ್ಗುಹೇಶಾನಂ ದೇವಮನ್ಯಂಪ್ರಯಾಂತಿ ಯೇ
ತೇ ರತ್ನಮಭಿವಾಂಛಂತಿ ತ್ಯಕ್ತಹಸ್ತಸ್ಥಕೌಸ್ತುಭಾಃ || ೧೪ ||

ಇತರರು ಹೇಳಿದರು :—

೧೨. ಸರ್ವವೂ ಯಾವುದರಲ್ಲಿರುವುದೋ, ಎಲ್ಲವೂ ಯಾವುದರದೋ, ಯಾವುದರಿಂದ ಎಲ್ಲವೂ ಹೊರಬರುವುದೋ, ಯಾವುದರ ಪ್ರಸಾದವನ್ನು ಪಡೆಯಲು ಎಲ್ಲವೂ ದುಡಿಯುತ್ತಿವೆಯೋ, ಯಾವುದರಿಂದ ಎಲ್ಲವೂ ಇದೆಯೋ, ಯಾವುದನ್ನು ಎಲ್ಲವೂ ಆಶ್ರಯಿಸಿರುವುದೋ, ಸತ್ಯಸ್ವರೂಪವಾದ ಅದನ್ನೇ ನಾವು ಉಪಾಸನ ಮಾಡುವೆವು.

ಇತರರು ಹೇಳಿದರು :—

೧೩. ಅಕಾರದಿಂದ ಆರಂಭವಾಗಿ ಹಕಾರಾಂತವಾಗಿ (ಅಹಂ) ಪ್ರತಿಯೊಂದರ ಆಕಾರವೂ ತಾನೇ ಆಗಿ, ತನ್ನನ್ನು ತಾನೇ ಉಚ್ಚರಿಸಿಕೊಳ್ಳುತ್ತಿರುವ ಆತ್ಮವನ್ನು ಉಪಾಸನ ಮಾಡುವೆವು.

(ಪ್ರತಿಯೊಂದು ಶ್ವಾಸದಲ್ಲಿಯೂ ಸೋಽಹಂ ಎಂದು ನುಡಿಯುತ್ತಿರುವುದನ್ನು ಅಜಪಾ ಗಾಯತ್ರಿ ಎನ್ನುವರು. ಅಹೋರಾತ್ರಿಗಳಲ್ಲಿ ತನ್ಮನಸ್ಕರಾಗಿರುವುದೇ ಅದರ ಉಪಾಸನೆ).

ಇತರರು ಹೇಳಿದರು :—

೧೪. ತಮ್ಮ ಹೃದಯವೆಂಬ ಗುಹೆಯಲ್ಲಿರುವ ದೇವರನ್ನು ಬಿಟ್ಟು ಇನ್ನೊಬ್ಬ ದೇವರನ್ನು ಹುಡುಕುವವರು, ಕೈಯಲ್ಲಿದ್ದ ಕೌಸ್ತುಭವನ್ನು ಎಸೆದು ಮತ್ತೊಂದು ರತ್ನವನ್ನು ಆಶಿಸುವಂಥವರು.

ಅನ್ಯೇ ಊಚುಃ :—

ಸರ್ವಾಶಾಃ ಕಿಲ ಸಂತ್ಯಜ್ಯ ಫಲಮೇತದವಾಪ್ಯತೇ |
ಯೇನಾಶಾವಿಷವಲ್ಲೀನಾಂ ಮೂಲಮಾಲಾ ವಿಲೂಯತೇ ॥ ೧೫ ॥

ಅನ್ಯೇ ಊಚುಃ :—

ಬುದ್ಧ್ವಾಪ್ಯತ್ಯಂತವೈರಸ್ಯಂ ಯಃ ಪದಾರ್ಥೇಷು ದುರ್ಮತಿಃ |
ಬಧ್ನಾತಿ ಭವನಾಂ ಭೂಯೋ ನರೋ ನಾಸೌ ಸ ಗರ್ದಭಃ ॥ ೧೬ ॥

ಅನ್ಯೇ ಊಚುಃ :—

ಉತ್ಥಿತಾನುತ್ಥಿತಾನೇತಾನಿಂದ್ರಿಯಾಹೀನ್ಪುನಃ ಪುನಃ |
ಹನ್ಯಾದ್ವಿವೇಕದಂಡೇನ ವಜ್ರೇಣೇವ ಹರಿರ್ಗಿರೀನ್ ॥ ೧೭ ॥

ಇತರರು ಹೇಳಿದರು :—

೧೫. ಆಶೆಗಳನ್ನೆಲ್ಲ ತ್ಯಜಿಸಿದುದರ ಫಲವಾಗಿ, ಸಾಲುಗಟ್ಟಿಕೊಂಡಿರುವ ಆಶಾವಲ್ಲಿಗಳ ಮೂಲಗಳೆಲ್ಲವೂ ತುಂಡುತುಂಡಾಗುವುವು.

ಇತರರು ಹೇಳಿದರು :—

೧೬. ಪ್ರಪಂಚ ಪದಾರ್ಥಗಳೆಲ್ಲವೂ ಅತ್ಯಂತ ರಸಹೀನಗಳು ಎಂದು ತಿಳಿದು ತಿಳಿದೂ ಯಾವ ದುರ್ಮತಿಯು ಮತ್ತೆ ಅವುಗಳಲ್ಲಿ ಮನಸ್ಸಿಡುವನೋ ಅವನು ಮನುಷ್ಯನಲ್ಲ, ಗರ್ದಭವೇ ಸರಿ.

ಇತರರು ಹೇಳಿದರು :—

೧೭. ಇಂದ್ರನು ಬೆಟ್ಟಗಳನ್ನು ವಜ್ರದಿಂದ ಹೊಡೆದಂತೆ ಪದೇ ಪದೇ ತಲೆಯೆತ್ತುತ್ತಲೇ ಇರುವ ಇಂದ್ರಿಯಗಳೆಂಬ ಹಾವುಗಳನ್ನು ಮತ್ತೆ ಮತ್ತೆ ವಿವೇಕ ದಂಡದಿಂದ ಹೊಡೆಯುತ್ತಲೇ ಇರಬೇಕು.

ಅನ್ಯೇ ಊಚುಃ :—

ಉಪಶಮಸುಖಮಾಹರೇತ್ಪವಿತ್ರಂ
ಶಮವಶತಃ ಶಮಮೇತಿ ಸಾಧುಚೇತಃ ||
ಪ್ರಶಮಿತಮನಸಃ ಸ್ವಕೇ ಸ್ವರೂಪೇ
ಭವತಿ ಸುಖೇ ಸ್ಥಿತಿರುತ್ತಮಾ ಚಿರಾಯ || ೧೮ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ಸಿದ್ಧ ಗೀತಾ" ನಾಮಾಷ್ಟಮಃ ಸರ್ಗಃ

ಇತರರು ಹೇಳಿದರು :—

೧೮. ಮೊದಲು ಉಪಶಾಂತಿ ಸುಖವನ್ನು ಪಡೆಯಬೇಕು. ಉಪಶಾಂತಿಯಿಂದ ಚಿತ್ತಾಶಾಂತಿಯು ಲಭಿಸುವುದು. ಚಿತ್ತಾಶಾಂತಿಯಿಂದ ಆನಂದಸ್ವರೂಪವಾದ ಸ್ವಸ್ವರೂಪಸ್ಥಿತಿಯು ಶಾಶ್ವತವಾಗಿ ಲಭಿಸುವುದು.

ಇಂತಿದು ಆರ್ಷವೂ ವಾಲ್ಮೀಕಿಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ಸಿದ್ಧಗೀತಾನಾಮ" ವೆಂಬ ಎಂಟನೆಯ ಸರ್ಗವು.

ನವಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಇತಿ ಸಿದ್ಧಗಣೋದ್ಗೀತಾ ಗೀತಾಃ ಶ್ರುತ್ವಾ ಮಹೀಪತಿಃ |
ವಿಷಾದವಶಮಾಜಗಾಮಾಶು ಭೀರೂ ರಣರವಾದಿವ ॥ ೧ ॥

ಜಗಾಮ ಪರಿವಾರಂ ಸ್ವಮಾಕರ್ಷನ್ಸ್ವಗೃಹಂ ಪ್ರತಿ |
ಸ್ವತೀರವೃಕ್ಷಾನುಗತಃ ಸರಿದೋಘ ಇವಾರ್ಣವಂ ॥ ೨ ॥

ಪರಿವಾರಮಶೇಷೇಣ ವಿಸೃಜ್ಯ ಸ್ವಂ ಸ್ವಮಾಲಯಂ |
ಏಕಏವಾರುರೋಹಾಗ್ರ್ಯಂ ಗೃಹಕರ್ಮ ಇವಾಚಲಂ ॥ ೩ ॥

ಒಂಬತ್ತನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಹೀಗೆ ಹಾಡಿದ ಆ ಸಿದ್ಧ ಗೀತೆಗಳನ್ನು ಕೇಳಿ ಆ ಜನಕಮಹಾರಾಜನು ರಣಶಬ್ದವನ್ನು ಕೇಳಿ ಹೆದರಿದ ಹೇಡಿಯಂತೆ, ವಿಷಾದಪರನಾದನು.

೨. ತನ್ನ ತೀರದಲ್ಲಿದ್ದ ಮರಗಳನ್ನೆಲ್ಲ ಸೆಳೆದುಕೊಂಡು ನದಿಯ ಪ್ರವಾಹವು ಸಮುದ್ರಕ್ಕೆ ಹೋಗುವಂತೆ ಆ ಮಹೀಪತಿಯು ಪರಿವಾರವನ್ನೆಲ್ಲ ಕರೆದುಕೊಂಡು ತನ್ನ ಅರಮನೆಗೆ ಬಂದನು.

೩. ಪರಿವಾರವನ್ನೆಲ್ಲ ತಮ್ಮ ತಮ್ಮ ಮನೆಗೆ ಹೋಗುವಂತೆ ವಿಸರ್ಜಿಸಿ, ಸೂರ್ಯನು ಪರ್ವತವನ್ನು ಸೇರುವಂತೆ, ತಾನೊಬ್ಬನೇ ಮಹಡಿಯ ಮೇಲಕ್ಕೆ ಹೋದನು.

ತತ್ರ ಪ್ರೋಡ್ಡಯನಾಲೋಲಖಗಪಕ್ಷತಿಚಂಚಲಾಃ ।
ಆಲೋಕಯಂಲೋಕಗತೀರ್ವಿಲಲಾಪೇದಮಾಕುಲಃ ॥ ೪ ॥

ಹಾ ಕಷ್ಟಮತಿಕಷ್ಟಾಸು ಲೋಕಲೋಕದಶಾಸ್ವಯಂ ।
ಪಾಶಾಣೇಷ್ವಿವ ಪಾಷಾಣಾ ಆಲುಠಾಮಿ ಬಲಾದಹಂ ॥ ೫ ॥

ಅಪರ್ಯಂತಸ್ಯ ಕಾಲಸ್ಯ ಕೋಪ್ಯಂಶೋ ಜೀವ್ಯತೇ ಮಯಾ ।
ತಸ್ಮಿನ್ನ್ಭಾವಂ ನಿಬಧ್ನಾಮಿ ಧಿಜ್ಮಾಮಧಮಚೇತನಂ ॥ ೬ ॥

ಕಿಯನ್ಮಾತ್ರಮಿದಂ ನಾಮ ರಾಜ್ಯಮಾಜೀವಿತಂ ಮಮ ।
ಕಿಮೇತೇನ ವಿನಾ ದುಃಖಂ ತಿಷ್ಠಾಮಿ ಹತಧೀರ್ಯಥಾ ॥ ೭ ॥

---

೪. ಅಲ್ಲಿ ಕುಳಿತುಕೊಂಡು, ಆಕಾಶದಲ್ಲಿ ಹಾರಾಡುವ ಹಕ್ಕಿಗಳ ರೆಕ್ಕೆಗಳ ಬಡಿತದಂತೆ ಚಂಚಲವಾಗಿರುವ ಲೋಕವ್ಯಾಪಾರಗಳನ್ನು ಕುರಿತು ಚಿಂತಿಸುತ್ತಾ ದುಃಖಪಟ್ಟನು.

೫. ಹಾ! ಕಷ್ಟ! ಕಷ್ಟ! ಕಲ್ಲುಗಳಲ್ಲಿ ಕಲ್ಲುಗಳು ಬಿದ್ದು ಒದ್ದಾಡುವಂತೆ, ಅತಿ ದುಃಖಕರಗಳಾದ ಚಂಚಲ ಲೋಕವ್ಯವಹಾರಗಳಲ್ಲಿ ಬಲವಂತವಾಗಿ ಸಿಕ್ಕಿಕೊಂಡು ಒದ್ದಾಡುತ್ತಿರುವೆನಲ್ಲ!

೬. ಅನಂತವಾದ ಈ ಕಾಲದಲ್ಲಿ ಎಲ್ಲಿಯೋ ಅತ್ಯಲ್ಪ ಕಾಲ ಮಾತ್ರ ನಾನು ಬದುಕಿರುವೆನು. ಇಷ್ಟು ಅಲ್ಪಕಾಲದ ಜೀವನದಲ್ಲಿಯೂ ಆಶೆಯನ್ನಿಟ್ಟುಕೊಂಡಿರುವ ಅಧಮನಾದ ನನಗೆ ಧಿಕ್ಕಾರವಿರಲಿ.

೭. ಈ ನನ್ನ ರಾಜ್ಯ, ಜೀವನ ಎಂಬಿವು ಎಷ್ಟು ಮಾತ್ರದವು! ಇವು ಇಲ್ಲದಿದ್ದ ಮಾತ್ರಕ್ಕೇ ಏನು ದುಃಖ! ಇದೇಕೆ ನಾನು ಬುದ್ಧಿಹೀನನಂತೆ ಇರುವೆನು,

ಆದಾವಂತೇಽಪ್ಯನಂತೋಽಹಂ ಮಧ್ಯೇ ಪೇಲವಜೀವಿತಃ ।
ಬಾಲಶ್ಚಿತ್ರೇಂದುನೇವಾಹಂ ಕಿಂ ಮುಧಾ ಧೃತಿಮಾಸ್ಥಿತಃ ॥ ೮ ॥

ಪ್ರಪಂಚರಚಿತೇನಾಹಮಿಂದ್ರಜಾಲೇನ ಜಾಲನಾ ।
ಹಾ ಕಷ್ಟಮತಿಮುಹ್ಯಾಮಿ ಕೇನಾಸ್ಮಿ ಪರಿಮೋಹಿತಃ ॥ ೯ ॥

ಯದ್ವಸ್ತು ಯಚ್ಚ ವಾ ರಮ್ಯಂ ಯದುದಾರಮಕೃತ್ರಿಮಂ ।
ಕಿಂಚಿತ್ತದಿಹ ನಾಸ್ತ್ಯೇವ ಕಿಂನಿಷ್ಠೇಹ ಮತಿರ್ಮಮ ॥ ೧೦ ॥

ದೂರಸ್ಥಮಪ್ಯದೂರಸ್ಥಂ ಮನ್ಯೇ ಮನಸಿ ವರ್ತತೇ ।
ಇತಿ ನಿಶ್ಚಿತ್ಯ ಬಾಹ್ಯಾರ್ಥಭಾವನಾಂ ಸಂತ್ಯಜಾಮ್ಯಹಂ ॥ ೧೧ ॥

---

೮. ಆದಿಯಲ್ಲಿಯೂ ಅಂತ್ಯದಲ್ಲಿಯೂ ಅನಂತನಾಗಿರುವ ನಾನು ಈಗ ಮಾತ್ರ ಹೀಗೆ ಕ್ಷಣಜೀವಿಯಾಗಿರುವೆನಲ್ಲ! ಚಿತ್ರದ ಚಂದ್ರನನ್ನು ನೋಡಿ ಆನಂದಿಸುವ ಬಾಲಕನಂತೆ, ನಾನೂ ಇವುಗಳಿಂದ ತೃಪ್ತನಾಗಿರುವೆನಲ್ಲ!

೯. ಇಲ್ಲವಾದ ಪ್ರಪಂಚವೆಂಬ ಇಲ್ಲದ ಇಂದ್ರಜಾಲವನ್ನು ಪ್ರದರ್ಶಿಸುವ ಯಾವನೋ ಮಾಯಾವಿಯು ನನ್ನನ್ನು ಹೀಗೆ ಮೋಹಗೊಳಿಸಿರುವನಲ್ಲ! ಏನು ಅನ್ಯಾಯ!

೧೦. ವಾಸ್ತವ್ಯವಾಗಿ ಸತ್ಯವಾಗಿರತಕ್ಕುದು, ನಿಜವಾಗಿ ರಮ್ಯವಾದುದು, ಯಾವುದು ಪ್ರಶಸ್ತವಾಗಿ ಅಕೃತ್ರಿಮವಾಗಿರುವುದು, ಅಂತಹುದು ಯಾವುದೂ ಇಲ್ಲಿ ಇಲ್ಲವಲ್ಲ; ಆದರೂ ಯಾವುದಕ್ಕಾಗಿ ನನ್ನ ಮನಸ್ಸು ಒದ್ದಾಡುವುದು!

೧೧. "ನನ್ನ ಮನಸ್ಸಿನಲ್ಲಿ ಇರುವುದು ದೂರದಲ್ಲಿದ್ದರೂ ಸಮೀಪದಲ್ಲಿದ್ದಂತೆಯೇ!" ಎಂದು ನಿಶ್ಚಯಿಸಿಕೊಂಡು ಬಾಹ್ಯಪದಾರ್ಥಗಳ ಚಿಂತನೆಯನ್ನೆಲ್ಲ ಬಿಟ್ಟುಬಿಡುವೆನು.

ಲೋಕಾಜವಂ ಜವೀಭಾವಃ ಸಲಿಲಾವರ್ತಭಂಗುರಃ |
ದೃಷ್ಟೋಽದ್ಯಾಪಿ ಹಿ ದುಃಖಾಯ ಕೇಯಮಾಸ್ಥಾ ಸುಖಂಪ್ರತಿ || ೧೨ ||

ಪ್ರತ್ಯಬ್ದಂ ಪ್ರತಿಮಾಸಂ ಚ ಪ್ರತ್ಯಹಂ ಚ ಪ್ರತಿಕ್ಷಣಂ |
ಸುಖಾನಿ ದುಃಖಪಿಂಡಾನಿ ದುಃಖಾನಿ ತು ಪುನಃಪುನಃ || ೧೩ ||

ಪರಾಮೃಷ್ಟಂ ವಿಶಿಷ್ಟಂ ಹಿ ದೃಷ್ಟಂ ನಷ್ಟಂ ನ ಭಾವಿತಂ |
ಅತ್ರಸ್ಥಂ ನ ತದಸ್ತೀಹ ಸತಾಂ ಯತ್ರಾಸ್ತು ಸಂಸ್ಥಿತಿಃ || ೧೪ ||

---

೧೨. ಜನರು ಭೋಗಾರ್ಥವಾಗಿ ಧನಾರ್ಜನಾದಿಗಳಲ್ಲಿ ಮಾಡುವ ತೀವ್ರ ಪ್ರವೃತ್ತಿಯೆಲ್ಲವೂ ನೀರಿನ ಸುಳಿಯಂತೆ ಭಂಗುರವಾದುದು ; ದುಃಖದಲ್ಲೇ ಮುಗಿಯುವುದು ; ಆದರೂ ವಿಷಯ ಸುಖಕ್ಕಾಗಿ ಏಕೆ ಇಷ್ಟು ಆಶೆಪಡುವುದು ?

(ಲೋಕಾನಾಂ ಜನಾನಾಂ ಭೋಗಾರ್ಥಂ ಧನಾರ್ಜನಾದಿ ಪ್ರವೃತ್ತಿರೂಪಃ ಆಜವಂ ಜವೀಭಾವಃ ಸಲಿಲಾವರ್ತ ಇವ ಭಂಗುರ ಇತ್ಯಾದಿ—ತಾ. ಪ್ರ.)

೧೩. ಪ್ರತಿ ವರ್ಷವೂ ಪ್ರತಿ ಮಾಸವೂ ಪ್ರತಿ ದಿವಸವೂ ಪ್ರತಿ ಕ್ಷಣವೂ ಕೂಡ ಸುಖನೆಂಬುದೆಲ್ಲವೂ ದುಃಖಜಾಲವಾಗಿಯೇ ಇರುವುದು. ದುಃಖವಂತೂ ಮತ್ತೆ ಮತ್ತೆ ಬರುತ್ತಲೇ ಇರುವುದು.

೧೪. ಯಾವುದೇ ಆಗಲಿ ಪರಾಮರ್ಶೆಮಾಡಿ ನೋಡಿದರೆ, ದೃಷ್ಟವೆಲ್ಲವೂ ನಷ್ಟವಾಗುವುದೇ ! ಆದರಿಂದ ಭಾವನೆಗೆ ಯೋಗ್ಯವಲ್ಲ. ಅಲ್ಲದೆ ಈ ಸಂಸಾರದಲ್ಲಿರುವ ಯಾವುದೇ ಆಗಲಿ ಸತ್ಪುರುಷರ ಮನಸ್ಸೊಪ್ಪುವುದು ಒಂದೂ ಇಲ್ಲ.

(ಅತ್ರ ಸಂಸಾರೇ ತಿಷ್ಠತೀತ್ರಸ್ಥಂ, ಕಿಂಚಿತ್ಕಾಲಂ ದೃಷ್ಟಂ ಸದ್ಯಏವನಷ್ಟಂ | ಸ್ವರಾಜ್ಯಾದಿ ಪದಂ ತುಚ್ಛತ್ವಾನ್ನಭಾವಿತಂ ನ ಚಿಂತಿತಮೇವ | ಹಿಯತೋ, ವಿಶಿಷ್ಟಂ ಸರ್ವೋತ್ಕೃಷ್ಟತ್ವೇನ ಪ್ರಸಿದ್ಧಮೈಂದ್ರ ಪ್ರಜಾಪತ್ಯಾದಿ ಪದಮಪಿ ಪರಾಮೃಷ್ಟಂ ವಿಚಾರಿತಂ ಸತಾಂ ವಿವೇಕಿನಾಂ ಸಂಸ್ಥಿತಿರಾತ್ಯಂತಿಕ ವಿಶ್ರಾಂತಿರ್ಯತ್ರಾಸ್ತು ತಾದೃಶಮಿಹನಾಸ್ತೀತ್ಯರ್ಥಃ— ತಾ. ಪ್ರ.)

ಅದ್ಯ ಯೇ ಮಹತಾಂ ಮೂರ್ಧ್ನಿ ತೇ ದಿನೈರ್ನಿಪತಂತ್ಯಧಃ |
ಹತಚಿತ್ತಮಹತ್ತಾಯಾಂ ಕೈಷಾ ವಿಶ್ವಸ್ತಥಾ ಬತ ‖ ೧೫ ‖

ಅರಜ್ಜುರೇವ ಬದ್ಧೋಽಹಮಪಂಕೋಽಸ್ಮಿ ಕಲಂಕಿತಃ |
ಪರಿತೋಸ್ಮ್ಯಪರಿಸ್ಥೋಪಿ ಹಾ ಮಮಾತ್ಮನ್ಹತಾ ಸ್ಥಿತಿಃ ‖ ೧೬ ‖

ಕಸ್ಮಾದಕಸ್ಮಾನ್ಮೋಹೋಽಯಮಾಗತೋ ಧೀಮತೋಽಪಿ ಮೇ |
ಅಸಿತಃ ಪಿಹಿತಾಲೋಕೋ ಭಾಸ್ಕರಾಗ್ರಮಿವಾಂಬುಧಃ ‖ ೧೭ ‖

ಕ ಇಮೇ ಮೇ ಮಹಾಭೋಗಾಃ ಕ ಇಮೇ ಮಮ ಬಾಂಧವಾಃ |
ಬಾಲೋ ಭೂತಮಯೇನೇವ ಸಂಕೇತೇನಾಹಮಾಕುಲಃ ‖ ೧೮ ‖

---

೧೫. ಈ ದಿವಸ ಯಾರು ದೊಡ್ಡವರಿಂದ ಗಣ್ಯರೆಂದು ಭಾವಿತರಾಗಿರುವರೋ ಅವರೇ ಇನ್ನು ಕೆಲವು ದಿನಗಳಲ್ಲಿ ಕೆಳಕ್ಕೆ ಉರುಳುವರು. ಹೀಗಿರಲು, ಎಲೈ ದುಷ್ಟಚಿತ್ತವೆ, ನೀನು ಯಾಕೆ ಮಹತ್ತತೆಯಲ್ಲಿ ವಿಶ್ವಾಸವಿಡುವೆ ?

೧೬. ಹಗ್ಗವಿಲ್ಲದೆ ಕಟ್ಟಿಗೆ ಸಿಕ್ಕಿರುವೆನು ! ಕೆಸರಿಲ್ಲದೆಯೇ ಕಳಂಕಿತನಾಗಿರುವೆನು ; ಮೇಲಿದ್ದವನಾದರೂ ಕೆಳಕ್ಕುರುಳಿರುವೆನು ; ಅಯ್ಯೋ ಪರಮಾತ್ಮ ! ನನ್ನ ಸ್ಥಿತಿಯು ಎಷ್ಟು ಕೆಟ್ಟುದು !

೧೭. ನಾನು ಬುದ್ಧಿವಂತನೇ ಆದರೂ ಅಕಸ್ಮಾತ್ತಾಗಿ, ಕರಿಯ ಮೋಡವು ಒಂದು ಬೆಳಕನ್ನು ಮರೆಮಾಡುವಂತೆ, ಯಾವುದೋ ಮೋಹವು ನನ್ನನ್ನು ಹಿಡಿದುಬಿಟ್ಟಿರುವುದಲ್ಲ !

೧೮. ಈ ಮಹಾ ಭೋಗಗಳು ಎನ್ನುವುವು ಯಾವುವು ? ನನ್ನ ಬಂಧುಗಳೆಂಬ ಇವರು ಯಾರು ? ಹುಡುಗರು ತಮ್ಮ ಸ್ವಸಂಕಲ್ಪದಿಂದ ಹುಟ್ಟಿದ ಭೇತಾಳನಿಗೆ ವಶರಾಗಿ ಅಳುವಂತೆ, ನಾನೂ ದುಃಖ ಪಡುತ್ತಿರುವೆನಲ್ಲ !

ಸ್ವಯಮೇವ ನಿಬಧ್ನಾಮಿ ಜರಾಮರಣರಾಗಿಣೀಂ ।
ಕಿಮಿಮಾಮಹಮೇತೇಷು ವೃತಿಮುದ್ವೇಗಕಾರಿಣೀಂ ॥ ೧೯ ॥

ಯಾತು ತಿಷ್ಠತು ವಾ ಸಂಮ್ಯಜ್ ಮಮೈತಾಂಪ್ರತಿ ಕೋ ಗ್ರಹಃ ।
ಬುದ್ಬುದಶ್ರೀರಿವೈಷಾ ಹಿ ಮಿಥ್ಯೈವೇತ್ಥಮುಪಸ್ಥಿತಾ ॥ ೨೦ ॥

ತೇ ಮಹಾವಿಭವಾ ಭೋಗಾಸ್ತೇ ಸಂತಃ ಸ್ನಿಗ್ಧಬಾಂಧವಾಃ ।
ಸರ್ವಂ ಸ್ಮೃತಿಪಥಂ ಪ್ರಾಪ್ತಂ ವರ್ತಮಾನೇಪಿ ಕಾ ಧೃತಿಃ ॥ ೨೧ ॥

ಕ್ವ ಧನಾನಿ ಮಹೀಪಾನಾಂ ಬ್ರಹ್ಮಣಃ ಕ್ವ ಜಗಂತಿ ವಾ ।
ಪ್ರಾಕ್ತನಾನಿ ಪ್ರಯಾತಾನಿ ಕೇಯಂ ವಿಶ್ವಸ್ತತಾ ಮಮ ॥ ೨೨ ॥

---

೧೯. ಜರಾಮರಣಗಳಲ್ಲಿ ವಿಶ್ವಾಸವನ್ನು ಇಟ್ಟುಕೊಂಡು, ಯಾವಾಗಲೂ ಉದ್ವೇಗವನ್ನೇ ಉಂಟುಮಾಡುವ ಈ ಚಾಪಲ್ಯವನ್ನು ಈ ಭೋಗಗಳಲ್ಲಿ ನಾನೇಕೆ ಇಟ್ಟುಕೊಂಡಿರುವೆನು ?

(ಗ್ರಂಥಾಂತರಗಳಲ್ಲಿ 'ಜಿಹ್ವೇಪಸ್ಥಾ ಚಾಪಲ್ಯ ರಾಹಿತ್ಯಮೇವ ಧೃತಿಃ' ಎಂದು ಹೇಳಿದೆ. ಆದರಿಂದ ಇಲ್ಲಿ ಮೂಲದಲ್ಲಿ ಕಿಂ, ಇಮಾಂ, ಅಹಂ, ಏತೇಷು ಅಧೃತಿಃ (ನಿಬಧ್ನಾಮಿ) ಎಂದಿದ್ದಾರೆ. ಜಿನ್ನ.)

೨೦. ಈ ಭೋಗ ಸಂಪತ್ತಿಯು ಹೋಗಲಿ ಇರಲಿ ಇದರ ವಿಚಾರದಲ್ಲಿ ನನಗೇಕೆ ಆಸ್ಥೆ? ಇದೆಲ್ಲವೂ ನೀರುಗುಳ್ಳೆಯ ವೈಭವದಂತೆ ವ್ಯರ್ಥವಾದುದು ; ಬಂದರೂ ನಿಲ್ಲುವುದಲ್ಲ.

೨೧. ಮಹಾವಿಭವಸಂಪನ್ನಗಳಾದ ಭೋಗಗಳೂ ಯೋಗ್ಯರೂ ವಿಶ್ವಾಸಪರರೂ ಆದ ಬಂಧುಗಳೂ,

೨೨. ಹಿಂದಿನ ಮಹಾರಾಜರುಗಳ ಧನಗಳೂ ಹಿರಣ್ಯಗರ್ಭನ ಜಗತ್ತುಗಳೂ, ಎಲ್ಲವೂ ಗತವೂ ಯಾತವೂ ಆಗಿರಲು ನನಗಿನ್ನೂ ಈ ಆಸ್ಥೆಯೇಕೆ ?

ಗಲಿತಾನೀಂದ್ರಲಕ್ಷಾಣಿ ಬುದ್ಬುದಾನೀವ ವಾರಿಣೀ ।
ಮಾಂ ಜೀವಿತನಿಬದ್ಧಾಸ್ಥಂ ವಿಹಸಿಷ್ಯಂತಿ ಸಾಧವಃ ॥ ೨೩ ॥

ಬ್ರಹ್ಮಣಾಂ ಕೋಟಿಯೋ ಯಾತಾ ಗತಾಃ ಸರ್ಗಪರಂಪರಾಃ ।
ಪ್ರಯಾತಾಃ ಪಾಂಸುವದ್ಭೂಪಾಃ ಕಾ ಧೃತಿರ್ಮಮ ಜೀವಿತೇ ॥ ೨೪ ॥

ಸಂಸಾರರಾತ್ರಿದುಃಸ್ವಪ್ನೇ ಚೇತ್ಯೇ ದೇಹಮಯೇ ಭ್ರಮೇ ।
ಆಸ್ಥಾಂ ಚೇದನುಬಧ್ನಾಮಿ ತತ್ರಮಾಂ ತು ಧಿಗಸ್ಥಿತಿಂ ॥ ೨೫ ॥

ಅಯಂ ಸೋಹಮಿತಿ ವ್ಯರ್ಥಕಲ್ಪನಾಽಸತ್ಸ್ವರೂಪಿಣೀ ।
ಅಹಂಕಾರಪಿಶಾಚೇನ ಕಿಮಜ್ಞವದಹಂ ಸ್ಥಿತಃ ॥ ೨೬ ॥

---

೨೩. ನೀರಿನ ಗುಳ್ಳೆಗಳಂತೆ ಇಂದ್ರರೆಷ್ಟೋ ಜನ ಹುಟ್ಟಿ ಹೋದರು. ಹೀಗಿದ್ದರೂ, ಜೀವಿತದಲ್ಲಿ ಆಸೆಯಿಟ್ಟುಕೊಂಡಿರುವ ನನ್ನನ್ನು ನೋಡಿ ಸಾಧುಗಳು ನಗುವರಲ್ಲವೆ ?

೨೪. ಬ್ರಹ್ಮರು ಕೋಟಿಗಟ್ಟಲೆ ಸಂದುಹೋದರು. ಸೃಷ್ಟಿಪರಂಪರೆಗಳು ನಷ್ಟವಾದುವು. ಮಹಾರಾಜರಂತೂ ಧೂಳಿನ ಕಣಗಳಂತೆ ಕಳೆದುಹೋದರು. ಇನ್ನು ನಾನು ಬದುಕಿರುವೆನೆಂಬುದಕ್ಕೆ ಏನು ನಂಬಿಕೆ ?

೨೫. ನಾನಾಗಿ ಕಲ್ಪಿಸಿಕೊಂಡಿರುವ ಸಂಸಾರವೆಂಬ ದುಸ್ವಪ್ನದಲ್ಲಿ, ಈ ದೇಹವೇ ನಾನೆಂಬ ಭ್ರಮೆಯಲ್ಲಿ, ನಾನು ಆಸ್ಥೆಯನ್ನು ಇಟ್ಟುಕೊಂಡಿರುವುದಾದರೆ, ಈ ನನ್ನ ಅವಿವೇಕಕ್ಕೆ ಧಿಕ್ಕಾರವಿರಲಿ.

೨೬. ಅಯಂ (ಇದು ಹತ್ತಿರ) ಸಃ (ಅವನು ದೂರ) ಅಹಂ (ಈ ದೇಹವೇ ನಾನು) ಎಂಬ ಇಲ್ಲದ ಸಲ್ಲದ ವ್ಯರ್ಥಕಲ್ಪನೆಗಳನ್ನು ಮಾಡಿಕೊಂಡು ಅಹಂಕಾರವೆಂಬ ಪಿಶಾಚಕ್ಕೆ ಸಿಕ್ಕಿಕೊಂಡು ನಾನು ಅಜ್ಞಾನಿಯಂತಿರುವೆನಲ್ಲ !

ಹತಂ ಹೆತಮಿದಂ ಕಸ್ಮಾದಾಯುಂರಾತತಯಾನಯಾ ।
ಪಶ್ಯನ್ನಪಿ ನ ಪಶ್ಯಾಮಿ ಸೂಕ್ಷ್ಮಯಾ ಕಾಲಲೇಖಯಾ ॥ ೨೭ ॥

ಪಾದಪೀಠೇ ಕೃತೇಶಾನಾಃ ಶಾರ್ಙ್ಗಕ್ರೀಡನಕಂದುಕಾಃ ।
ಕಾಲಕಾಪಾಲಿಕಾಗ್ರಾಸಾಃ ಕಿಮಾಸ್ತೇ ಮಯಿ ವಲ್ಗಸೀ ॥ ೨೮ ॥

ಅಜಸ್ರಮುಪಯಾಂತ್ಯೇತೇ ಯಾಂತಿ ಚಾದ್ಯಾಪಿ ವಾಸರಾಃ ।
ಅವಿನಷ್ಟೈಕಸದ್ವಸ್ತುದೃಷ್ಟೋ ನಾದ್ಯಾಪಿ ವಾಸರಃ ॥ ೨೯ ॥

ಸಾರಸಾಃ ಸರಸೀಷ್ವೇತೇ ಸರ್ವಸ್ಮಿಜ್ಜನಚೇತಸೀ ।
ಭೋಗಾ ಏವ ಸ್ಫುರಂತ್ಯಂತರ್ನತು ಸ್ವಪದದೃಷ್ಟಯಃ ॥ ೩೦ ॥

---

೨೭. ಕ್ಷಣಾದಿರೂಪವಾಗಿ ಸೂಕ್ಷ್ಮವಾಗಿದ್ದರೂ ಎಲ್ಲೆಲ್ಲಿಯೂ ತಾನೇ ತಾನಾಗಿ ಹರಡಿಕೊಂಡಿರುವ ಈ ಕಾಲವು ಆಯುಸ್ಸನ್ನು ತಿಂದುಹಾಕುತ್ತಿರುವುದಲ್ಲ! ಇದನ್ನು ಕಂಡಿದ್ದರೂ ನಾನು ಏಕೆ ಕಾಣದಂತಿರುವೆನು?

೨೮. ಅನೇಕ ಬ್ರಹ್ಮಾದಿಗಳನ್ನು ತುಳಿದು ಎಷ್ಟೋ ಮಂದಿ ವಿಷ್ಣುಗಳನ್ನು ಚೆಂಡಾಡಿ ಇನ್ನೆಷ್ಟೋ ಮಂದಿ ರುದ್ರರನ್ನು ನುಂಗಿ ಕಾಲನು ಕುಣಿಯುತ್ತಿರಲು ಎಲೆ ಜೀವಿತಾಶೆಯೇ ನನ್ನಲ್ಲೇಕೆ ಕುಣಿಯುತ್ತಿರುವೆ?

೨೯. ದಿನಗಳು ಒಂದೇ ಸಮನಾಗಿ ಬರುತ್ತಿವೆ, ಹೋಗುತ್ತಿವೆ. ಆದರೆ, ಅವಿನಾಶಿಯೂ ಅದ್ವಿತೀಯವೂ ಆದ ವಸ್ತುವನ್ನು ಕಂಡ ದಿವಸವು ಮಾತ್ರ ಇದು ವರೆಗೂ ಬರಲಿಲ್ಲ.

೩೦. ಸರಸ್ಸಿನಲ್ಲಿ ನಲಿದಾಡುವ ಸಾರಸಗಳಂತೆ, ಎಲ್ಲರ ಮನಸ್ಸಿನಲ್ಲಿಯೂ ಭೋಗಗಳು (ಭೋಗದಾಶೆಗಳು) ಮಾತ್ರ ಕುಣಿದಾಡುತ್ತಿವೆಯೇ ಹೊರತು ಆತ್ಮ ಜ್ಞಾನ ಪಡೆಯಬೇಕೆಂಬ ಆಸೆಯು ಹುಟ್ಟುವುದಿಲ್ಲ.

ಕಷ್ಟಾತ್ಕಷ್ಟತರಂ ಪ್ರಾಪ್ತೋ ದುಃಖಾದ್ದುಃಖತರಂ ಗತಃ ।
ಅದ್ಯಾಪಿ ನ ವಿರಕ್ತೋಽಸ್ಮಿ ಹಾ ಧಿಙ್ಮಾಮಧಮಾಶಯಂ ॥ ೩೧ ॥

ಯೇಷು ಯೇಷು ದೃಢಾ ಬದ್ಧಾ ಭಾವನಾ ಭವ್ಯವಸ್ತುಷು ।
ತಾನಿ ತಾನಿ ವಿನಷ್ಟಾನಿ ದೃಷ್ಟಾನಿ ಕಿಮಿಹೋತ್ತಮಂ ॥ ೩೨ ॥

ಯನ್ಮಧ್ಯೇ ಯಚ್ಚ ಪರ್ಯಂತೇ ಯದಾಪಾತೇ ಮನೋರಮಂ ।
ಸರ್ವಮೇವಾಪವಿತ್ರಂ ತದ್ವಿನಾಶಾಮೇಧ್ಯದೂಷಿತಂ ॥ ೩೩ ॥

---

೩೧. ಕಷ್ಟಕ್ಕಿಂತಲೂ ಕಷ್ಟವೂ ದುಃಖಕ್ಕಿಂತಲೂ ದುಃಖವೂ ಆದ ಸ್ಥಿತಿಗಳನ್ನೆಲ್ಲ ಪಡೆದೆನಾದರೂ ನಾನಿನ್ನೂ ವಿರಕ್ತನಾಗಲಿಲ್ಲವಲ್ಲ! ಹೀನವಾದ ಆಸೆಗಳಿಗೆ ಗುರಿಯಾಗಿರುವ ನನಗೆ ಧಿಕ್ಕಾರವಿರಲಿ.

೩೨. ರಮಣೀಯವೆಂದು ಯಾವ ಯಾವ ವಸ್ತುಗಳಲ್ಲಿ ಆಸೆಯನ್ನು ದೃಢವಾಗಿ ಇಟ್ಟುಕೊಂಡಿದ್ದೆನೋ ಅವೆಲ್ಲವೂ ನಾಶವಾಗಿ ಹೋದುದನ್ನು ಕಂಡುದಾಯಿತು. ಇನ್ನು ಯಾವುದನ್ನು ಉತ್ತಮವೆನ್ನುವುದು?

೩೩. ಮಧ್ಯದಲ್ಲಿ ಮನೋಹರವಾಗಿ ಕಾಣುವುದು ಯಾವುದೋ, ಯಾವುದು ಅಂತ್ಯದಲ್ಲಿ ಮನೋಹರವಾಗುವುದೋ, ಯಾವುದು ಭೋಗಕಾಲದಲ್ಲಿ ಮನೋಹರವಾಗಿರುವುದೋ ಅವೆಲ್ಲವೂ ಅಪವಿತ್ರಗಳು, ವಿನಾಶವೆಂಬ ಅಮೇಧ್ಯದಿಂದ ದೂಷಿತಗಳು.

(ಮಧ್ಯಕಾಲದಲ್ಲಿ ಮನೋಹರವಾಗಿ ಕಾಣುವ **ವಯಸ್ಸು** ಯಾವುದುಂಟೋ, ಕೊನೆಯಲ್ಲಿ ಮನೋಹರವಾಗಿ ಕಾಣುವ **ಧರ್ಮವು** ಯಾವುದುಂಟೋ, ಆ ಭೋಗಕಾಲದಲ್ಲಿ ಮನೋಹರವಾದ **ವಿಷಯ ಭೋಗವು** ಯಾವುದುಂಟೋ ಇದೆಲ್ಲವೂ ಅಪವಿತ್ರವಾದುದು ; ವಿನಾಶವೆಂಬ ಅಮೇಧ್ಯದಿಂದ ದೂಷಿತವಾದುದು.—ತಾ.ಪ್ರ.)

(ಸ್ವಭಾವಕ್ಷಯಿಷ್ಣುವಾದ ವಯಸ್ಸು, ದುಃಖಯೋನಿಯಾದ ಭೋಗ, ಇವುಗಳೊಡನೆ ಧರ್ಮವನ್ನು ಸೇರಿಸುವುದು ನಮಗೆ ಸಮ್ಮತವಿಲ್ಲ.—ಸಂಪಾದಕ]

ಯೇಷು ಯೇಷು ಪದಾರ್ಥೇಷು ಧೃತಿಂ ಬಧ್ನಾತಿ ಮಾನವಃ |
ತೇಷು ತೇಷ್ವೇವ ತಸ್ಯಾಯಂ ದೃಷ್ಟೋ ನಾಶೋದಯೋ ಭೃಶಂ || ೩೪ ||

ಶ್ವಃಶ್ವಃ ಪಾಪಿಯಸೀಮೇಷ ಶ್ವಃಶ್ವಃ ಕ್ರೂರತರಾಮಪಿ |
ಶ್ವಃಶ್ವಃ ಸ್ವೇದಕರೀಮೇತಿ ದಶಾಮಿಹಜಡೋಜನಃ || ೩೫ ||

ಅಜ್ಞಾನೈಕ ಹತೋ ಬಾಲ್ಯೇ ಯೌವನೇ ಮದನಾಹತಃ |
ಶೇಷೇ ಕಲತ್ರಚಿಂತಾರ್ತಃ ಕಿಂ ಕರೋತಿ ಕದಾ ಜಡಃ || ೩೬ ||

ಆಗಮಾಪಾಯಿ ವಿರಸಂ ದಶಾವೈಷಮ್ಯದೂಷಿತಂ |
ಅಸಾರಸಾರಂ ಸಂಸಾರಂ ಕಿಂ ತತ್ಪಶ್ಯತಿ ದುರ್ಮತಿಃ || ೩೭ ||

---

೩೪. ಯಾವ ಯಾವ ಪದಾರ್ಥಗಳಲ್ಲಿ ಮಾನವನು ಆಸ್ಥೆಯನ್ನಿಡುವನೋ ಅವುಗಳಲ್ಲೆಲ್ಲ ನಾಶವು ಆರಂಭವಾಗಿರುವುದು ಕಂಡೇ ಕಾಣುವುದು.

೩೫. ಜಡವಾದ ಜನವು ಬರುಬರುತ್ತ ಪಾಪದಿಂದ ಪಾಪಕ್ಕೆ ಇಳಿಯುವುದು ; ಅನುಭವಿಸುವುದಕ್ಕೆ ಕಷ್ಟವಾಗುವ ದೆಶೆಯನ್ನೇ ಹೊಂದುವುದು ; ದುಃಖವನ್ನೇ ಪಡೆಯುತ್ತಿರುವುದು.

೩೬. ಅಜ್ಞಾನದಿಂದ ಹತವಾದ ಬಾಲ್ಯ, ಮದನನ ಏಟಿಗೆ ಸಿಕ್ಕಿದ ಯೌವನ, ಕಳತ್ರ ಚಿಂತೆಯಿಂದ ಕೊರಗುವ ಇಳಿವಯಸ್ಸು, ಹೀಗಿರಲು, ಸದಾ ಜಡನಾದ ಮಾನವನು ಏನು ಮಾಡುವನು ?

೩೭. ಈ ಸಂಸಾರವು ಬರುವಿಕೆ (ಜನನ) ಆಗಿಹೋಗುವಿಕೆ (ಮರಣ) ಇವುಗಳಿಂದ ಅತಿ ವಿರಸವಾದುದು. ಕಷ್ಟಕರವಾದ ದಶೆಗಳಿಂದ ದೂಷಿತವಾದುದು. ಅತಿ ನಿಸ್ಸಾರವಾದುದು. ಮನುಜನು ಇದನ್ನು ಅರಿಯದ ದುರ್ಮತಿಯಾಗಿರುವನಲ್ಲ !

ರಾಜಸೂಯಾಶ್ವಮೇಧಾದ್ಯೈರಿಷ್ಟ್ವಾ ಯಜ್ಞಶತೈರಪಿ ।
ಮಹಾಕಲ್ಪಾಂತಮಪ್ಯಂಶಂ ಸ್ವರ್ಗಂ ಪ್ರಾಪ್ನೋತಿ ನಾಧಿಕಂ । ॥ ೩೮ ॥

ಕೋಽಸೌ ಸ್ವರ್ಗೋಽಸ್ತಿ ಭೂಮೌ ವಾ ಪಾತಾಲೇ ವಾ ಪ್ರದೇಶಕಃ ।
ನ ಯತ್ರಾಭಿಭವಂತ್ಯೇತಾ ದುರ್ಭ್ರಮರ್ಯ ಇವಾಪದಃ ॥ ೩೯ ॥

ನಿಜಚೇತೋಬಿಲವ್ಯಾಲಾಃ ಶರೀರಸ್ಥಲಪಲ್ಲವಾಃ ।
ಆಧಯೋ ವ್ಯಾಧಯಶ್ಚೈತೇ ನಿವಾರ್ಯಂತೇ ಕಥಂ ಕಿಲ ॥ ೪೦ ॥

ಸತೋಽಸಕ್ತಾ ಸ್ಥಿತಾ ಮೂರ್ಧ್ನಿ ಮೂರ್ಧ್ನಿ ರಮ್ಯೇಷ್ವರಮ್ಯತಂ ।
ಸುಖೇಷು ಮೂರ್ಧ್ನಿ ದುಃಖಾನಿ ಕಿಮೇಕಂ ಸಂಶ್ರಯಾಮ್ಯಹಂ ॥ ೪೧ ॥

---

೩೮. ರಾಜಸೂಯ, ಅಶ್ವಮೇಧ, ಮೊದಲಾದ ನೂರು ಯಾಗಗಳನ್ನು ಮಾಡಿ ಮಹಾಕಲ್ಪಾಂತವಾಗಿ ಸ್ವರ್ಗದಲ್ಲಿದ್ದರೂ ಅದರಲ್ಲಿ ಒಂದಂಶವನ್ನು ಮಾತ್ರವೇ ಅನುಭವಿಸುವನಲ್ಲದೆ ಹೆಚ್ಚಾಗಿ ಅನುಭವಿಸಲಾರನು

೩೯. (ಆ ಸ್ವರ್ಗದಲ್ಲಿ ತಾನೇ ಸುಖವುಂಟೆ ?) ಭೂಮಿಯಲ್ಲಿ ಆಗಲಿ, ಪಾತಾಳ ದಲ್ಲಿ ಆಗಲಿ, ದುರುದುಂಬಿಗಳಂತಿರುವ ಆಪತ್ತುಗಳು ಪೀಡಿಸದಿರುವ ಸ್ವರ್ಗ ಪ್ರದೇಶವು ಯಾವುದುಂಟು ?

೪೦. ನಮ್ಮ ಹೃದಯವೆಂಬ ಬಿಲದಲ್ಲಿ ಸೇರಿಕೊಂಡಿರುವ ಹಾವುಗಳಂತಿರುವ ಆಧಿ (ಮನೋರೋಗ) ಗಳೂ, ಶರೀರವೆಂಬ ನೆಲದಲ್ಲಿ ಚಿಗುರುತ್ತಿರುವ (ಮರ ಗಳಂತಿರುವ) ವ್ಯಾಧಿ (ಶರೀರ ರೋಗ) ಗಳೂ ಹೇಗೆ ತಾನೆ ನಿವಾರಣವಾದಾವು ?

೪೧. ಯಾವುದು ಸತ್ಯ, ಇದೆಯೆಂದುಕೊಳ್ಳುವೆನೋ ಅದರ ತಲೆಯ ಮೇಲೆಯೇ ಅಸತ್ಯ, ಇಲ್ಲದಿರುವಿಕೆ, ಎಂಬುದು ಕುಳಿತಿರುವುದು. ಯಾವುದನ್ನು ರಮ್ಯವೆಂದುಕೊಳ್ಳುವೆನೋ ಅದರ ನೆತ್ತಿಯಮೇಲೆಯೇ ಅರಮ್ಯತೆಯು ಇರುವುದು. ಸುಖದ ತುದಿಯಲ್ಲಿಯೇ ದುಃಖಗಳಿರುವುವು. ಹೀಗಿರಲು ನಾನು ಯಾವುದನ್ನು ಆಶ್ರಯಿಸಲಿ ?

ಜಾಯಂತೇ ಚ ಮ್ರಿಯಂತೇ ಚ ಪ್ರಾಕೃತಾಃ ಕ್ಷುದ್ರಜಂತವಃ |
ಧರಾ ತೈರೇವ ಸೀರಂಧ್ರಾ ದುರ್ಲಭಾಃ ಸಾಧುಸಾಧವಃ || ೪೨ ||

ನೀಲೋತ್ಪಲಾಲಿನಯನಾಃ ಪರಮಪ್ರೇಮಭೂಷಣಾಃ |
ಹಾಸಾಯೈವ ವಿಲಾಸಿನ್ಯಃ ಕ್ಷಣಭಂಗಿತಯಾ ಸ್ಥಿತಾಃ || ೪೩ ||

ಯೇಷಾಂ ನಿಮೇಷಣೋನ್ಮೇಷೈರ್ಜಗತಾಂ ಪ್ರಲಯೋದಯೌ |
ತಾದೃಶಾಃ ಪುರುಷಾಃ ಸಂತಿ ಮಾದೃಶಾಂ ಗಣನೈವ ಕಾ || ೪೪ ||

ಸಂತಿ ರಮ್ಯತರಾದ್ರಮ್ಯಾಃ ಸುಸ್ಥಿರಾದಪಿ ಸುಸ್ಥಿರಾಃ |
ಚಿಂತಾಪರ್ಯವಸಾನೇಯಂ ಪದಾರ್ಥಶ್ರೀಃ ಕಿಮೀಹಸೇ || ೪೫ ||

---

೪೨. ಈ ಭೂಮಂಡಲದಲ್ಲಿ ಎಲ್ಲಿ ನೋಡಿದರೂ ಹುಟ್ಟಿಹುಟ್ಟಿ ಸಾಯುತ್ತಿರುವ ಕ್ಷುದ್ರ ಜಂತುಗಳೇ ತುಂಬಿವೆಯೇ ಹೊರತು ನಿಜವಾದ ಸಾಧುಗಳು ಹುಡುಕಿದರೂ ಸಿಕ್ಕರಲ್ಲ!

೪೩. ನೀಲೋತ್ಪಲದಂತೆ ಸುಂದರವೂ ಬಿಂದುಗಳಂತೆ ಚಂಚಲವೂ, ಆದ ಕಣ್ಣುಗಳುಳ್ಳವರಾಗಿ, ಶ್ರೇಷ್ಠವಾದ ಪ್ರೇಮವೆಂಬ ಅಲಂಕಾರವನ್ನು ತಳೆದಿರುವ ಸುಂದರಿಯರು, ಕೇವಲ ಅಪಹಾಸ್ಯಕ್ಕಾಗಿಯೇ ಹುಟ್ಟಿದವರಂತೆ, ಕೇವಲ ಸ್ವಲ್ಪ ಕಾಲ ಮಾತ್ರವಿರುವರಲ್ಲ!

೪೪. ಯಾರು ಕಣ್ಣು ಮುಚ್ಚಿದರೆ ಜಗತ್ತುಗಳ ಪ್ರಳಯವೂ, ಕಣ್ಣು ತೆರೆದರೆ ಉತ್ಪತ್ತಿಯೂ ಆಗುವುದೋ ಅಂತಹ ಮಹಾಪುರುಷರಿರಲು ನನ್ನಂತಹವನು ಒಂದು ಲೆಕ್ಕವೇ?

೪೫. ನಾವು ರಮ್ಯವೆಂದುಕೊಂಡಿರುವ ವಸ್ತುಗಳಿಗಿಂತ ಎಷ್ಟೋ ರಮ್ಯವಾದ ವಸ್ತುಗಳಿರುವುವು. ಸ್ಥಿರಗಳು ಎಂದುಕೊಂಡವುಗಳಿಗಿಂತ ಸ್ಥಿರವಾದವುಗಳು ಇರುವುವು. ಹೀಗಿರುವ (ಒಂದಕ್ಕಿಂತ ಇನ್ನೊಂದು ಹೆಚ್ಚಾದುದು ಇರುವುದರಿಂದ) ಯಾವ ಪದಾರ್ಥವನ್ನು ಪಡೆದರೂ ಕೊನೆಗೆ ಇದು ಇಷ್ಟೇಯೇ ಎನ್ನಿಸಿ ಚಿಂತೆಯಲ್ಲಿ ಮುಗಿಯುವುದರಿಂದ, ಯಾವ ಪದಾರ್ಥವನ್ನು ಬಯಸುವುದು?

ಸಂಪದಶ್ಚ ವಿಚಿತ್ರಾ ಯಾಸ್ತಾಶ್ಚೇಚ್ಚಿತ್ತೇನ ಸಂಮತಾಃ ।
ತತ್ತಾ ಅಪಿ ಮಹಾರಂಭಾ ಹಂತ ಮನ್ಯೇ ಮಹಾಪದಃ ॥ ೪೬ ॥

ಆಪದೋಽಪಿ ವಿಚಿತ್ರಾ ಯಾಸ್ತಾಶ್ಚೇನ್ಮನಸಿ ಸಂಮತಾಃ।
ತತ್ತಾ ಅಪಿ ಮಹಾರಂಭಾ ಮನ್ಯೇ ಮನಸಿ ಸಂಪದಃ ॥ ೪೭ ॥

ಮನೋಮಾತ್ರವಿವರ್ತೇಽಸ್ಮಿನ್ಜಗತ್ಯಬ್ಧೀಂದುಭಂಗುರೇ ।
ಮಮೇದಮಿತ್ಯಪೂರ್ವೇಯಂ ಕುತಸ್ತ್ಯಾಽಕ್ಷರಮಾಲಿಕಾ ॥ ೪೮ ॥

ಕಾಕತಾಲೀಯಯೋಗೇನ ಸಂಪನ್ನಾಯಾಂ ಜಗತ್ಸ್ಥಿತೌ ।
ಧೂರ್ತೇನ ಕಲ್ಪಿತಾ ವ್ಯರ್ಥಂ ಹೇಯೋಪಾದೇಯಭಾವನಾ ॥ ೪೯ ॥

---

೪೬. ಚಿತ್ತವು ಮಹಾ ವಿಚಿತ್ರಗಳು ಅಪರೂಪಗಳು ಎಂದು ಒಪ್ಪಿಕೊಂಡಿರುವ ಸಂಪತ್ತುಗಳು ಯಾವ ಯಾವವು ಉಂಟೋ ಕಷ್ಟಸಾಧ್ಯವಾದ ಅವುಗಳೆಲ್ಲವೂ ಮಹಾ ವಿಪತ್ಸ್ಥಾನಗಳೆಂದೇ ನನಗೆ ತೋರುವುದಲ್ಲ!

೪೭. ಅದೇ ಮನಸ್ಸಿನಲ್ಲಿ ಯಾವದನ್ನು ಮಹಾ ಆಪತ್ತುಗಳೆಂದುಕೊಂಡಿರುವೆವೋ ಅವೇ ಕಷ್ಟಪಟ್ಟು ಸಾಧಿಸಬೇಕಾದ ಸಂಪತ್ತುಗಳೆಂದು ನನಗೆ ತೋರುತ್ತಿದೆ.

೪೮. ಕೇವಲ ಮನಸ್ಸಿನ ಭ್ರಾಂತಿಯಿಂದ ಹುಟ್ಟಿರತಕ್ಕ, ಸಮುದ್ರ ತರಂಗಗಳಲ್ಲಿ ಪ್ರತಿಫಲಿಸಿದ ಚಂದ್ರಬಿಂಬದಂತೆ ಚಂಚಲವಾಗಿರುವ ಈ ಜಗತ್ತಿನಲ್ಲಿ ಮಮ–ನನ್ನದು ಎಂಬ ಈ ಹೊಸ ಅಕ್ಷರ ಮಾಲಿಕೆಯು ಎಲ್ಲಿಂದ ಬಂತು?

೪೯. ಕಾಕತಾಳೀಯ ನ್ಯಾಯದಂತೆ, ಆಕಸ್ಮಿಕವಾಗಿ, ಅಕಾರಣವಾಗಿ, ಸಂಭವಿಸಿರುವ ಈ ಜಗತ್ತಿನಲ್ಲಿ, ಇದು ಹೇಯ, ಇದು ಉಪಾದೇಯ, ಎಂಬ ವ್ಯವಸ್ಥೆಯನ್ನು ವ್ಯರ್ಥವಾಗಿ ಯಾವನೋ ಧೂರ್ತನು ಕಲ್ಪಿಸಿರಬೇಕು.

ಇಯತ್ತಾಚ್ಛಿನ್ನತಪ್ತಾಸು ಸುಖನಾಮ್ನಾಸು ದೃಷ್ಟಿಷು ।
ಕಾಸ್ವೇತಾಸ್ವನುರಕ್ತೋಽಸ್ಮಿ ಪತಂಗೋಽಗ್ನಿ ಶಿಖಾಸ್ವಿವ ॥ ೫೦ ॥

ವರಮೇಕಾಂತದಾಹೇಷು ಲುಠನಂ ರೌರವಾಗ್ನಿಷು ।
ನತ್ವಾಲೂನವಿವರ್ತಾಸು ಸ್ಥಿತಂ ಸಂಸಾರವೃತ್ತಿಷು ॥ ೫೧ ॥

ಸಂಸಾರ ಏವ ದುಃಖಾನಾಂ ಸೀಮಾಂತ ಇತಿ ಕಥ್ಯತೇ ।
ತನ್ಮಧ್ಯಪತಿತೇ ದೇಹೇ ಸುಖಮಾಸಾದ್ಯತೇ ಕಥಂ ॥ ೫೨ ॥

ಅಕೃತ್ರಿಮಮಹಾದುಃಖೇ ಸಂಸಾರೇ ಯೇ ವ್ಯವಸ್ಥಿತಾಃ ।
ತ ಏತೇಽನ್ಯಾನಿ ದುಃಖಾನಿ ಜಾನತೇ ಮಧುರಾಣ್ಯಲಂ ॥ ೫೩ ॥

ಅಹಮಪ್ಯಧಮೋತ್ಸೃಷ್ಟಕಾಷ್ಠಲೋಷ್ಟಸಮಸ್ಥಿತಿಃ ।
ಅಜ್ಞೈರೇವಾಗತಃ ಸಾಮ್ಯಂ ಪರಮಾಮೃಷ್ಟವಸ್ತುಭಿಃ ॥ ೫೪ ॥

---

೫೦. ಇಷ್ಟೇ ಸರಿ ಎಂಬ ಪರಿಮಿತಿಗೆ ಒಳಗಾಗಿರುವ, ಈ ಸುಖ ಸುಖ ಎಂದು ನಾನೆಂದುಕೊಳ್ಳುತ್ತಿರುವ, ಈ ಭ್ರಾಂತಿಗಳಲ್ಲಿ, ಅಗ್ನಿಜ್ವಾಲೆಗೆರಗುವ ಪತಂಗದಂತೆ, ನಾನೇಕೆ ಸ್ವನಾಶವನ್ನು ಗಮನಿಸದೆ ಅನುರಕ್ತನಾಗಿರುವೆನಲ್ಲ!

೫೧. ಸುಖದುಃಖಾದಿಗಳಿಂದ ನಡು ನಡುವೆ ಒಡೆದು ಹರಕು ಮುರುಕಾಗಿರುವ ಸಂಸಾರದಲ್ಲಿ ಇರುವುದಕ್ಕಿಂತ, ಸುಮ್ಮನೇ ಸುಡುತ್ತಿರುವ ರೌರವ ನರಕದ ಅಗ್ನಿಗಳಲ್ಲಿ ಬಿದ್ದು ಒದ್ದಾಡುವುದು ಎಷ್ಟೋ ಒಳ್ಳೆಯದು!

೫೨. ದುಃಖಗಳ ಪರಮಾವಧಿಯೇ ಇದು ಎಂದು ಹೇಳಿಸಿಕೊಳ್ಳುವ ಸಂಸಾರದ ನಡುವೆ ಬಿದ್ದಿರುವ ಈ ದೇಹದಲ್ಲಿ ಸುಖವಾದರೂ ಹೇಗೆ ದೊರಕೀತು!

೫೩. (ಬಹುಶಃ) ಸಹಜವಾಗಿಯೇ ಮಹಾದುಃಖವಾದ ಈ ಸಂಸಾರದಲ್ಲಿ ಸಿಕ್ಕಿಕೊಂಡಿರುವರು, (ಇದಕ್ಕಿಂತ ಹಗುರವಾದ) ಇತರ ದುಃಖಗಳನ್ನು ಸುಖಗಳೆಂದು ತಿಳಿದುಕೊಳ್ಳುವರೇನೋ?

೫೪. ನಾನೂ ಕೂಡ, ಅಧಮವಾದ ಕಾಷ್ಠಲೋಷ್ಟಗಳಂತೆ ಮೂಢನಾಗಿ ಸದ್ವಸ್ತುವಿಚಾರಶೂನ್ಯರಾದ ಅಜ್ಞರ ಸಮನಾದೆನಲ್ಲ!

ಸಹಸ್ರಾಂಕುರಶಾಖಾತ್ಮಫಲಪಲ್ಲವಶಾಲಿನಃ ।
ಅಸ್ಯ ಸಂಸಾರವೃಕ್ಷಸ್ಯ ಮನೋ ಮೂಲಮಹಾಂಕುರಃ ॥ ೫೫ ॥

ಸಂಕಲ್ಪಮೇವ ತನ್ಮನ್ಯೇ ಸಂಕಲ್ಪೋಪಶಮೇನ ತತ್ ।
ಶೋಷಯಾಮಿ ಯಥಾ ಶೋಷಮೇತಿ ಸಂಸಾರಪಾದಪಃ ॥ ೫೬ ॥

ಆಕಾರಮಾತ್ರರಮ್ಯಾಸು ಮನೋಕರ್ಮಲವೃತ್ತಿಷು ।
ಪರಿಜ್ಞಾತಾಸ್ವಿಹಾದ್ಯೈವ ನ ರಮೇ ನಾಶನೀಷ್ವಹಂ ॥ ೫೭ ॥

ಆಶಾಪಾಶಶತಪ್ರೋತಾಃ ಪಾತೋತ್ಪಾತೋಪತಾಪದಾಃ ।
ಸಂಸಾರವೃತ್ತಯೋಭುಕ್ತಾ ಇದಾನೀಂ ವಿಶ್ರಮಾಮ್ಯಹಂ ॥ ೫೮ ॥

---

೫೫. ಸಾವಿರಾರು ಚಿಗುರು, ಕೊಂಬೆ, ಹಣ್ಣು, ಎಲೆಗಳು ಉಳ್ಳ ಈ ಸಂಸಾರವೆಂಬ ವೃಕ್ಷಕ್ಕೆ ಮೊದಲನೆಯ ಅಲಂಕಾರವೇ ಮನಸ್ಸು —

(ಸಂಕಲ್ಪಗಳೆಂಬ ಸಾವಿರಾರು ಅಂಕುರಗಳಿಂದಲೂ, ದೇಹಾದಿಗಳೆಂಬ ಶಾಖೆಗಳಿಂದಲೂ, ವಿರಾಟ್ಪುರುಷನೆಂಬ ಆಕಾರದಿಂದಲೂ ಸುಖದುಃಖಗಳೆಂಬ ಫಲಗಳಿಂದಲೂ ರಾಗಲೋಭಾದಿಗಳೆಂಬ ಪಲ್ಲವಗಳಿಂದಲೂ ಶೋಭಿಸುವ ಈ ಸಂಸಾರವೆಂಬ ವೃಕ್ಷಕ್ಕೆ ಮನಸ್ಸೆಂಬುದೇ ಮೂಲಭೂತವಾದ ದೊಡ್ಡ ಅಂಕುರವು—ತಾ. ಪ್ರ.)

೫೬. ಸಂಕಲ್ಪವೇ ಆ ಮನಸ್ಸು. ಸಂಕಲ್ಪವನ್ನು ಶಾಂತಿಗೊಳಿಸಿ, ಈ ಮನಸ್ಸೂ, ಈ ಮನಸ್ಸೇ ಮೂಲವಾಗಿರುವ ಸಂಸಾರ ಮಹಾ ವೃಕ್ಷವೂ ಒಣಗಿ ಹೋಗುವಂತೆ ಮಾಡುವೆನು.

೫೭. ಈ ಮನಸ್ಸೆಂಬ ಕಪಿಯು ಚೇಷ್ಟೆಗಳೆಲ್ಲವೂ ನೋಡುವುದಕ್ಕೆ ಮಾತ್ರ ಚೆನ್ನಾಗಿದ್ದರೂ ಕೊನೆಗೆ ನಾಶನವೇ ಮಾಡುವುವು ಎಂಬುದು ಚೆನ್ನಾಗಿ ತಿಳಿದಿರುವುದರಿಂದ ನಾನು ಇವುಗಳಲ್ಲಿ ಮೋಹಪಡುವುದಿಲ್ಲ.

೫೮. ಆಶೆಗಳೆಂಬ ನೂರಾರು ಹಗ್ಗಗಳಿಂದ ಹೆಣೆದಿರುವ, ಬೀಳುವುದು, ಏಳುವುದು ಮೊದಲಾದ ಎಷ್ಟೋ ತಾಪ ಉಪತಾಪಗಳನ್ನು ಕೊಡುವ ಸಂಸಾರ ವ್ಯವಹಾರಗಳನ್ನು ಅನುಭವಿಸಿಯಾಯಿತು. ಇನ್ನಾದರೂ ಸುಮ್ಮನಾಗುವೆನು.

ಹಾ ಹತೋಽಸ್ಮಿ ವಿನಷ್ಟೋಽಸ್ಮಿ ಮೃತೋಽಸ್ಮೀತಿ ಪುನಃಪುನಃ ।
ಶೋಚಿತಂ ಗತಮೇವಾಹಮಿದಾನೀಂ ನಾನುರೋದಿಮಿ || ೫೯ ||

ಪ್ರಬುದ್ಧೋಽಸ್ಮಿ ಪ್ರಹೃಷ್ಟೋಽಸ್ಮಿ ದೃಷ್ಟಶ್ಚೋರೋಽಯಮಾತ್ಮನಃ ।
ಮನೋ ನಾಮ ನಿಹನ್ಮ್ಯೇನಂ ಮನಸಾಸ್ಮಿ ಚಿರಂ ಹತಃ || ೬೦ ||

ಏತಾವಂತಮಿಮಂ ಕಾಲಂ ಮನೋ ಮುಕ್ತಾಫಲಂ ಮಮ ।
ಅವಿದ್ಧಮಾಸೀದಧುನಾ ವಿದ್ಧಂ ತು ಗುಣಮರ್ಹತಿ || ೬೧ ||

ಮನಸ್ತುಷಾರಕಣಿಕಾ ವಿವೇಕಾರ್ಕಾತಪೇನ ಮೇ ।
ಚಿರಪ್ರವೃತ್ತಯೇ ನೂನಮಚಿರಾಲ್ಲಯಮೇಷ್ಯತಿ || ೬೨ ||

ವಿವಿಧೈಃ ಸಾಧುಭಿಃ ಸಿದ್ಧೈರಹಂ ಸಾಧು ಪ್ರಬೋಧಿತಃ ।
ಆತ್ಮಾನಮನುಗಚ್ಛಾಮಿ ಪರಮಾನಂದಸಾಧನಂ || ೬೩ ||

---

೫೯. ಅಯ್ಯೋ! ಏಟು ತಿಂದೆನಲ್ಲ! ಹಾಳಾಗಿ ಹೋದೆನಲ್ಲ! ಎಂದು ಪದೇ ಪದೇ ಶೋಚಿಸುತ್ತಿದ್ದ ನಾನು ಇನ್ನು ಅಳುವುದಿಲ್ಲ.

೬೦. ನನಗೆ ಎಚ್ಚರವಾಯಿತು; ಹರ್ಷವಾಯಿತು! ನನ್ನನ್ನು ಕದ್ದುಕೊಂಡು ಹೋಗಿದ್ದ ಕಳ್ಳನು ಸಿಕ್ಕಿದನು. ಆ ಕಳ್ಳನೇ ಈ ಮನಸ್ಸು! ಇವನನ್ನು ಹೊಡೆದು ಹಾಕುವೆನು. ಇದುವರೆಗೂ ನಾನು ಇವನ ಏಟಿಗೆ ಸಿಕ್ಕಿದ್ದೆನು.

೬೧. ಮನಸ್ಸೆಂಬ ಮುತ್ತಿನ ಮಣಿಯನ್ನು ಇದುವರೆಗೂ ಕೊರೆದು ತೂತು ಹಾಕಿರಲಿಲ್ಲ; ಈಗ ಇದನ್ನು ಕೊರೆದು ತೂತು ಮಾಡುವೆನು. ಆಗ ಅದು ಗುಣ (ದಾರ) ವನ್ನು ಪಡೆಯಲು ಅರ್ಹವಾಗುವುದು.

೬೨. ಮನಸ್ಸು ಎಂಬ ಈ ಹಿಮದ ತುಂತುರು, ನನ್ನ ವಿವೇಕವೆಂಬ ಸೂರ್ಯನ ಬಿಸಿಲಿನಿಂದ ಬೇಗ ಲಯವಾಗಿ ನನಗೆ ಶಾಶ್ವತ ಪದವಿಯು ಸಿಕ್ಕಲಿ.

೬೩. ಸತ್ಪುರುಷರಾದ ಆ ಹಲವರು ಸಿದ್ಧರು ನನಗೆ ಚೆನ್ನಾಗಿ ಬೋಧಿಸಿದರು. ಪರಮಾನಂದಕ್ಕೆ ಸಾಧನವಾದ ಆತ್ಮನನ್ನು ಹುಡುಕಿಕೊಂಡು ಹೋಗುವೆನು.

ಆತ್ಮಾನಂ ಮಣಿಮೇಕಾಂತೇ ಲಬ್ಧ್ವೈವಾಲೋಕಯನ್ಸುಖಂ ।
ತಿಷ್ಠಾಮ್ಯಸ್ತಮಿತಾನ್ಯೇಹಃ ಶಾರದೀವಾಮಲೋಽಂಬುದಃ ॥ ೬೪ ॥

ಅಯಮಹಮಿದಮಾತತಂ ಮಮೇತಿ
ಸ್ಫುರಿತಮಪಾಸ್ಯ ಬಲಾದಸತ್ಯಮಂತಃ ॥
ರಿಪುಮತಿಬಲಿನಂ ಮನೋ ನಿಹತ್ಯ
ಪ್ರಶಮಮುಪೈಮಿ ನಮೋಽಸ್ತು ತೇ ವಿವೇಕ ॥ ೬೫ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇ ಉಪಶಮಪ್ರಕರಣೇ
"ಜನಕ ವಿತರ್ಕೋ" ನಾಮ ನವಮಃ ಸರ್ಗಃ

---

೬೪. ಆತ್ಮವೆಂಬ ರತ್ನವನ್ನು ಏಕಾಂತದಲ್ಲಿ ಪಡೆದು ಅದನ್ನು ನೋಡಿ ನೋಡಿ ಸುಖಪಡುತ್ತ, ಶರತ್ಕಾಲದ ನಿರ್ಮಲವಾದ ಮೋಡದಂತೆ ನಿರ್ಮಲನಾಗಿ, ಇತರ ಆಸೆಗಳೆಲ್ಲ ಬಿಟ್ಟು ಕೂರುವೆನು.

೬೫. "ಇವನು, ನಾನು, ಈ ಇದೆಲ್ಲವೂ ನನ್ನದು" ಎಂದು ಸ್ಫುರಿಸುತ್ತಿರುವ ಈ ಅಸದ್ಭಾವವನ್ನು ಅಲ್ಲಿಯೇ ಬಲವಂತನಾಗಿ ನಾಶಮಾಡಿ, ಅತಿಬಲಶಾಲಿ ಶತ್ರುವಾದ ಈ ಮನಸ್ಸನ್ನು ಹತಮಾಡಿ, ಉಪಶಾಂತಿಯನ್ನು ಹೊಂದುವೆನು. ಎಲೆ ವಿವೇಕವೇ, ನಿನಗೆ ನಮಸ್ಕಾರವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ಜನಕ ವಿಕರ್ತ" ಎಂಬ ಒಂಭತ್ತನೆಯ ಸರ್ಗವು.

ದಶಮಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಇತಿ ಚಿಂತಯತಸ್ತಸ್ಯ ಪುರಃ ಸಂಪ್ರವಿವೇಶ ಹ ।
ಪ್ರತೀಹಾರಃ ಪರೋ ಭಾನೋಃ ಸ್ಯಂದನಾಗ್ರ ಇವಾರುಣಃ ॥ ೧ ॥

ಪ್ರತೀಹಾರ ಉವಾಚ :—

ದೇವ ದೋಸ್ತಂಭವಿಶ್ರಾಂತಸಮಸ್ತವಸುಧಾಭರ ।
ಸಂಪಾದಯೋತ್ತಿಷ್ಠ ದಿನವ್ಯಾಪಾರಂ ನೃಪತೋಚಿತಂ ॥ ೨ ॥

ಏತಾಃ ಕುಸುಮಕರ್ಪೂರಕುಂಕುಮಾಂಬುಘಟಾಃ ಸ್ತ್ರಿಯಃ ।
ಸ್ನಾನಭೂಮೌ ಸ್ಥಿತಾಃ ಸಜ್ಜಾ ನದ್ಯೋ ಮೂರ್ತಿಯುತಾ ಇವ ॥ ೩ ॥

ಹತ್ತನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಹೀಗೆಂದು ಯೋಚನೆ ಮಾಡುತ್ತಿರುವ ಆ ಜನಕನ ಬಳಿಗೆ ದ್ವಾರಪಾಲಕನು ಸೂರ್ಯನ ರಥದ ಮುಂದುಗಡೆಯಲ್ಲಿ ಬರುವ ಅರುಣನಂತೆ ಬಂದನು.

ದ್ವಾರಪಾಲಕನು ಹೇಳಿದನು :—

೨. ನಿಜಭುಜಗಳಲ್ಲಿ ಭೂಮಂಡಲದ ಭಾರವನ್ನೆಲ್ಲಾ ವಹಿಸಿರುವ ಪ್ರಭುವೆ, ಏಳು, ನಿನ್ನ ಅಧಿಕಾರಕ್ಕೆ ತಕ್ಕಂತೆ ದಿನ ವ್ಯಾಪಾರವನ್ನು ಮಾಡು.

೩. ಕುಸುಮ, ಕರ್ಪೂರ, ಕುಂಕುಮಗಳಿಂದ ಕೂಡಿದ ನೀರಿನಿಂದ ತುಂಬಿರುವ ಚಿನ್ನದ ಕೊಡಗಳನ್ನು ಹಿಡಿದುಕೊಂಡು, ಮೂರ್ತಿಮತ್ತಾಗಿ ಬಂದ ನದಿಗಳೋ ಎಂಬಂತೆ, ಸ್ತ್ರೀಯರು ಸ್ನಾನ ಭೂಮಿಯಲ್ಲಿ ಸಿದ್ಧರಾಗಿ ನಿಂತಿರುವರು.

ಏತಾಃ ಕಮಲಕಲ್ಹಾರಕಾನನಭ್ರಾಂತಷಟ್ಪದಾಃ |
ಕೃತಾಃ ಕಮಲನೀಪಾಶರಚಿತಾಂಶುಕಮಂಡಪಾಃ ॥ ೪ ॥

ಏತಾಃ ಕಮಲಿನೀತೀರಭುವಶ್ಛತ್ರೈಃ ಪ್ರಪೂರಿತಾಃ |
ಸಚಾಮರರಥೇಭಾಶ್ವೈಃ ಸ್ನಾನಾವಸರಸೇವಿನಾಂ ॥ ೫ ॥

ಸಮಗ್ರಸುಮನಃಪೂರ್ಣೈರನ್ನೌಷಧಪರಿಪ್ಲುತೈಃ |
ಸಜ್ಜೀಕೃತಾಃ ಪಟಲಕೈರ್ದೇವಾರ್ಚನಗೃಹಾಸ್ತಥಾ ॥ ೬ ॥

ಸ್ನಾತಃ ಪವಿತ್ರಹಸ್ತಶ್ಚ ಪರಿಜಪ್ಯಾಘಮರ್ಷಣಃ |
ತ್ವಾಮೇವ ಪ್ರೇಕ್ಷತೇ ದೇವ ದಕ್ಷಿಣಾರ್ಹೋ ದ್ವಿಜವ್ರಜಃ ॥ ೭ ॥

---

೪. ಕಮಲ ಕಹ್ಲಾರಗಳ ಕಾನನಗಳಲ್ಲಿ ಅಲೆಯುತ್ತಿದ್ದ ಭ್ರಮರಗಳು ಮೇಲಕ್ಕೆ ಎದ್ದಿರುವುವು. ಕಮಲದ ದಂಟುಗಳಿಂದ ಸ್ನಾನಭೂಮಿಯ ಪಟಗೃಹ ಮಂಟಪ ಗಳನ್ನು ಅಲಂಕರಿಸಿರುವರು.

೫. ಸ್ನಾನ ಸಮಯದಲ್ಲಿ ಸೇವೆಯನ್ನು ಸಲ್ಲಿಸುವದಕ್ಕಾಗಿ ಬಂದಿರುವ ಸಾಮಂತ ನರಪತಿಗಳ ಚಾಮರ, ರಥ, ಆನೆ ಕುದುರೆ, ಛತ್ರಗಳು ಇವುಗಳಿಂದ ಕಮಲ ಸರಸ್ಸಿನ ತೀರವೆಲ್ಲವೂ ನಿಬಿಡವಾಗಿರುವುದು.

೬. ದೇವತಾರ್ಚನ ಮಂದಿರಗಳು ಈ ಕೊನೆಯಿಂದ ಆ ಕೊನೆಯವರೆಗೂ ಪುಷ್ಪಗಳು, ದಿವ್ಯಭಕ್ಷ್ಯಗಳು, ಯವ ದರ್ಭಾದಿ ಪೂಜಾಸಾಮಗ್ರಿಗಳು, ಇವೆಲ್ಲದ ರಿಂದ ತುಂಬಿರುವುವು.

೭. ದೇವ! ದಕ್ಷಿಣೆಯನ್ನು ಪಡೆಯಲು ಅರ್ಹರಾದ ದ್ವಿಜ ಸಮೂಹವು ಸ್ನಾನಮಾಡಿ, ಪವಿತ್ರಹಸ್ತರಾಗಿ, ಅಘಮರ್ಷಣ ಜಪಮಾಡಿ, ನಿನ್ನನ್ನು ಎದರು ನೋಡುತ್ತಿರುವುದು.

ಲಸಚ್ಚಾಮರಹಸ್ತಾಭಿಃ ಪಾಲ್ಯತೇ ಪರಮೇಶ್ವರ |
ಸಜ್ಜೀಕೃತಾಸ್ತೇ ಕಾಂತಾಭಿಃ ಶೀತಾ ಭೋಜನಭೂಮಯಃ || ೮ ||

ಶೀಘ್ರಮುತ್ತಿಷ್ಠ ಭದ್ರಂ ತೇ ನಿಯತಂ ಕಾರ್ಯಮಾಚರ |
ನ ಕಾಲಮತಿವರ್ತಂತೇ ಮಹಾಂತಃ ಸ್ವೇಷು ಕರ್ಮಸು || ೯ ||

ಪ್ರತೀಹಾರಪತಾವಿತ್ಥಮುಕ್ತವತ್ಯಥ ಪಾರ್ಥಿವಃ |
ತಥೈವ ಚಿಂತಯಾಮಾಸ ಚಿತ್ರಾಂ ಸಂಸಾರಸಂಸ್ಥಿತಿಂ || ೧೦ ||

ಕಿಯನ್ಮಾತ್ರಮಿದಂ ನಾಮ ರಾಜ್ಯಂ ಸುಖಮಿತಿ ಸ್ಥಿತಂ |
ನ ಪ್ರಯೋಜನಮೇತೇನ ಮಮೇಹ ಕ್ಷಣಭಂಗಿನಾ || ೧೧ ||

---

೮. ಪರಮೇಶ್ವರನೆ, ತಂಪಾಗಿರುವ ಭೋಜನ ಶಾಲೆಯು ದಿವ್ಯ ಚಾಮರಗಳನ್ನು ಧರಿಸಿರುವ ಸುಂದರ ಸ್ತ್ರೀಯರಿಂದ ಪರಿಪಾಲಿತವಾಗಿ ಸಿದ್ಧವಾಗಿರುವುದು.

೯. ಮಹಾರಾಜನೆ, ಏಳು, ನಿನಗೆ ಮಂಗಳವಾಗಲಿ, ನಿಯತವಾದ ಕರ್ಮವನ್ನು ಮಾಡು, ಮಹಾಪುರುಷರು ಯಾರೂ ತಮ್ಮ ತಮ್ಮ ಕರ್ಮಗಳನ್ನು ಮಾಡುವುದರಲ್ಲಿ ಕಾಲವನ್ನು ಮೀರುವುದಿಲ್ಲ.

೧೦. ದ್ವಾರಪಾಲಕ ಮುಖ್ಯನು ಹೀಗೆ ವಿಜ್ಞಾಪಿಸುತ್ತಿರಲು, ಆ ಜನಕ ಭೂಪತಿಯು ಹಾಗೆಯೇ ಚಿತ್ರವಾದ ಸಂಸಾರ ಸ್ಥಿತಿಯನ್ನು ವಿಚಾರಮಾಡಿ ನೋಡಿದನು.

೧೧. ಸುಖವಾಗಿದೆಯೆಂಬ ಈ ರಾಜ್ಯವು ಎಷ್ಟುಮಾತ್ರದ್ದು ? ಹೀಗೆ ಇದ್ದು ಹಾಗೆ ಹೋಗುವ, ಇದರಿಂದ ನನಗೆ ಆಗಬೇಕಾದುದೇನು ?

ಸರ್ವಮೇವ ಪರಿತ್ಯಜ್ಯ ಮಿಥ್ಯಾಶಂಬರಡಂಬರಂ |
ಏಕಾಂತ ಏವ ತಿಷ್ಠಾಮಿ ಸಂಶಾಂತ ಇವ ವಾರಿಧಿಃ || ೧೨ ||

ಅಲಮೇಭಿರಸತ್ಪ್ರಾಯೈರ್ಮಮ ಭೋಗವಿಜೃಂಭಿತೈಃ |
ತ್ಯಕ್ತ್ವಾ ಸರ್ವಾಣಿ ಕರ್ಮಾಣಿ ಸುಖಂತಿಷ್ಠಾಮಿ ಕೇವಲಂ || ೧೩ ||

ಚಿತ್ತ ಚಾತುರ್ಯಮೇತಸ್ಮಾದ್ಭೋಗಾಭ್ಯಾಸಕುಸಂಭ್ರಮಾತ್ |
ತ್ಯಜ ಜನ್ಮ ಜರಾ ಜಾಡ್ಯ ಜಾಲ ಜಂಬಾಲ ಶಾಂತಯೇ || ೧೪ ||

ದಶಾಸು ಸ್ವಾಸು ಯಾಸ್ವೇವ ಸಂಭ್ರಮಂ ಚಿತ್ತ ಪಶ್ಯಸಿ |
ತಾಭ್ಯ ಏವಾಭಿರಚಿತಂ ಪರಮಂ ದುಃಖಮೇಷ್ಯಸಿ || ೧೫ ||

ಪ್ರವೃತ್ತಂ ಸನ್ನಿವೃತ್ತಂ ಸದ್ಭೂಯೋಭೂಯಶ್ಚಿರಂಚಿರಂ |
ಭೋಗಭೂಮಿಷು ಸರ್ವಾಸು ಚಿತ್ತಂ ತೃಪ್ತಿಂ ನ ಗಚ್ಛತಿ || ೧೬ ||

---

೧೨. ಅದರಿಂದ, ಇಂದ್ರಜಾಲದಂತೆ ಅಸತ್ಯವಾಗಿರುವ ಈ ಎಲ್ಲವನ್ನೂ ಪರಿತ್ಯಾಗಮಾಡಿ ಏಕಾಂತದಲ್ಲಿ ನಿಶ್ಚಿಂತನಾಗಿ ಪ್ರಶಾಂತವಾದ ಸಮುದ್ರದಂತೆ ನಿಲ್ಲುವೆನು.

೧೩. ದುಷ್ಟವಾದ ಈ ಭೋಗಜಾಲ ವಿಜೃಂಭಣದಿಂದ ನನಗೆ ಆಗಬೇಕಾದುದೇನು ? ಅದರಿಂದ, ಇವುಗಳನ್ನೆಲ್ಲಾ ತೊರೆದು ಏಕಾಂತವಾಗಿರುವೆನು.

೧೪. ಎಲೆ ಚಿತ್ತವೆ, ಜನ್ಮ, ಜರಾ, ಜಾಡ್ಯ ಜಾಲಗಳೆಂಬ ಕೆಸರು ತೊಳೆಯಲೆಂದು ಭೋಗಾನುಭವದಲ್ಲಿ ಸಂಭ್ರಮಪಡುವುದನ್ನು ಸಂಪೂರ್ಣವಾಗಿ ಬಿಡು.

೧೫. ಯಾವ ಯಾವ ದಶೆಗಳಲ್ಲಿದ್ದು ಸೌಖ್ಯಪಡಬೇಕೆಂದು ನೀನು ಸಂಭ್ರಮಪಡುತ್ತಿರುವೆಯೋ ಅವವುಗಳಿಂದಲೇ ಸಂಭವಿಸುವ ಪರಮ ದುಃಖವನ್ನು ಪಡೆಯುವೆ.

೧೬. ಈ ಹಾಳು ಮನಸ್ಸು, ಮತ್ತೆ ಮತ್ತೆ ಭೋಗ ಭೋಗಗಳಲ್ಲಿ ಪ್ರವರ್ತಿಸಿ, ಅಲ್ಲಿಯೇ ಎಷ್ಟೋ ಕಾಲವಿದ್ದು, ಮತ್ತೆ ಮತ್ತೆ ಹಿಂದಿಗುಗುತ್ತಿದ್ದರೂ ಇನ್ನೂ ತೃಪ್ತವಾಗಲಿಲ್ಲವಲ್ಲ !

ತಸ್ಮಾತ್ಪಾಪಾಲಮನಯಾ ತುಚ್ಛಯಾ ಭೋಗಚಿಂತಯಾ ।
ಭವತ್ಯಕೃತ್ರಿಮಾ ತೃಪ್ತಿರ್ಯೇನಾಭಿಪತಿತಂ ತತಃ ॥ ೧೭ ॥

ಇತಿ ಸಂಚಿಂತ್ಯ ಜನಕಸ್ತೂಷ್ಣೀಮೇವ ಬಭೂವಹ ।
ಶಾಂತಚಾಪಲಚೇತಸ್ತ್ವಾಲ್ಲಿಪಿಕರ್ಮಾರ್ಪಿತೋಪಮಃ ॥ ೧೮ ॥

ಪ್ರತೀಹಾರೋಽಪಿ ನೋವಾಚ ಗೌರವೇಣ ಭಯೇನ ಚ ।
ಪುನರ್ವಾಕ್ಯಂ ಮಹೀಪಾನಾಂ ಚಿತ್ತವೃತ್ತಿಷು ಶಿಕ್ಷಿತಃ ॥ ೧೯ ॥

ತೂಷ್ಣೀಮಥ ಕ್ಷಣಂ ಸ್ಥಿತ್ವಾ ಜನಕೋ ಜನಜೀವಿತಂ ।
ಪುನಃ ಸಂಚಿಂತಯಾಮಾಸ ಮನಸಾ ಶಮಶಾಲಿನಾ ॥ ೨೦ ॥

---

೧೭. ಅದರಿಂದ, ಎಲೆ ಪಾಪಿಷ್ಠ ಚಿತ್ತವೆ, ತುಚ್ಛವಾದ ಈ ಭೋಗಚಿಂತೆಯನ್ನು ಮಾಡಿದುದು ಸಾಕು. ಯಾವುದನ್ನು ಚಿಂತಿಸಿದರೆ, ಸಹಜವಾದ ತೃಪ್ತಿಯುಂಟಾಗುವುದೋ ಅದನ್ನು ಕುರಿತು ಚಿಂತಿಸು.

೧೮. ಹೀಗೆ ಚಿಂತಿಸಿ ಚಿಂತಿಸಿ, ಚಿತ್ತದ ಚಾಂಚಲ್ಯವು ತಿರೋಧಾನವಾಗಲು ಜನಕಮಹಾರಾಜನು, ಚಿತ್ರಾರ್ಪಿತ ಪ್ರತಿಮೆಯಂತೆ ಸುಮ್ಮನೆ ಕುಳಿತಿದ್ದನು.

೧೯. ದ್ವಾರಪಾಲಕನು ಅದನ್ನು ಕಂಡರೂ ಗೌರವದಿಂದಲೂ ಭಯದಿಂದಲೂ ಏನನ್ನೂ ಹೇಳಲಿಲ್ಲ. ಮಹೀಪತಿಗಳ ಮನಸ್ಸನ್ನು ತಿಳಿದು ವರ್ತಿಸುವುದರಲ್ಲಿ ಶಿಕ್ಷಿತನಾದವನಲ್ಲವೇ ಅವನು ?

೨೦. ಜನಕಮಹಾರಾಜನು ಹೀಗೆ ಒಂದು ಗಳಿಗೆ ಸುಮ್ಮನಿದ್ದು ಶಾಂತಿಯುಕ್ತವಾದ ಮನಸ್ಸಿನಿಂದ ಮತ್ತೆ ಜಗದ ಜಂತು ಜನರ ಜೀವಿತವನ್ನು ಕುರಿತು ವಿಚಾರಮಾಡಿದನು.

ಕಿಮುಪಾದೇಯಮಸ್ತೀಹ ಯತ್ನಾತ್ಸಂಸಾಧಯಾಮ್ಯಹಂ ।
ಕಸ್ಮಿನ್ವಸ್ತುನಿ ಬಧ್ನಾಮಿ ಧೃತಿಂ ನಾಶವಿವರ್ಜಿತೇ ॥ ೨೧ ॥

ಕಿಂ ಮೇ ಕ್ರಿಯಾಪರತಯಾ ಕಿಂ ಮೇ ನಿಷ್ಕ್ರಿಯಯಾಪಿ ವಾ ।
ನ ತದಸ್ತಿ ವಿನಾಶೇನ ವರ್ಜಿತಂ ಯತ್ತ್ರಿಲೋಕಿತಂ ॥ ೨೨ ॥

ಕ್ರಿಯಾವಾನಕ್ರಿಯೋ ವಾಸ್ತು ಕಾಯೋsಯಮಸದುತ್ಥಿತಃ ।
ಸಮುತ್ಥಿತಸ್ಯ ಶುದ್ಧಸ್ಯ ಚಿತ್ತಃ ಕಾ ನಾಮ ಮೇ ಕ್ಷತಿಃ ॥ ೨೩ ॥

ನಾಭಿವಾಂಛಾಮ್ಯಸಂಪ್ರಾಪ್ತಂ ಸಂಪ್ರಾಪ್ತಂ ನ ತ್ಯಜಾಮ್ಯಹಂ ।
ಸ್ವಸ್ಥ ಆತ್ಮನಿ ತಿಷ್ಠಾಮಿ ಯನ್ಮಮಾಸ್ತಿ ತದಸ್ತು ಮೇ ॥ ೨೪ ॥

---

೨೧. ಈ ಜಗತ್ತಿನಲ್ಲಿ ಸರ್ವ ಪ್ರಯತ್ನದಿಂದಲೇ ಸಂಪಾದಿಸಬೇಕಾದ ವಸ್ತುವು ಯಾವದಿರುವದು ? ನಾಶವರ್ಜಿತವಾಗಿ ಶಾಶ್ವತವಾಗಿರುವ ಯಾವ ವಸ್ತುವಿನಲ್ಲಿ ನಾನು ಆಸ್ಥೆಯನ್ನಿಡಲಿ ?

೨೨. ಈ ಕರ್ಮಗಳನ್ನೆಲ್ಲ ಮಾಡಿ ನನಗೆ ಆಗಬೇಕಾದುದೇನು ? ಕರ್ಮಗಳನ್ನು ಮಾಡದೆ ಸುಮ್ಮನೆ ಕುಳಿತರೆ ನನಗೆ ಹೋಗುವುದೇನು ? ಈ ಲೋಕದಲ್ಲಿ ಹುಟ್ಟಿದುದು ಯಾವುದು ತಾನೇ ವಿನಾಶವಿಲ್ಲದೆ ಇರುವುದು ?

೨೩. ಮಿಥ್ಯಾಭೂತವಾದ ಈ ದೇಹವು ಕ್ರಿಯಾಪರವಾಗಲಿ, ಅಥವಾ ಅಕ್ರಿಯವಾಗಿಯಾದರೂ ಆಗಲಿ, ಬ್ರಹ್ಮನಿಷ್ಠನಾಗಿ, ಶುದ್ಧನಾಗಿ, ಚಿತ್ಸ್ವರೂಪನಾಗಿರುವ ನನಗೆ ಹಾನಿಯೇನು ?

೨೪. ಇನ್ನು ಮುಂದೆ ಅಪ್ರಾಪ್ತವಾದುದನ್ನು ಆಶಿಸುವುದಿಲ್ಲ. ಪ್ರಾಪ್ತವಾದುದನ್ನು ಬಿಡುವುದಿಲ್ಲ. ಸ್ವಸ್ಥನಾಗಿ ಆತ್ಮನಿಷ್ಠನಾಗಿ ಇರುವೆನು. ಯಾವುದು ಯಾವುದು ಆಗಬೇಕಾಗಿರುವುದೋ ಅದೆಲ್ಲವೂ ಆಗಲಿ.

ನ ಮಮೇವ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।
ಕ್ರಿಯಯಾಽಕ್ರಿಯಯಾ ವಾಪಿ ಯತ್ಪ್ರಾಪ್ತಂ ತದಸನ್ಮಯಂ ॥ ೨೫ ॥

ಅಕುರ್ವತಃ ಕುರ್ವತೋ ವಾ ಯುಕ್ತಾಯುಕ್ತಾಃ ಕ್ರಿಯಾ ಮಮ ।
ನಾಭಿವಾಂಛಿತಮಸ್ತೀಹ ಯದುಪಾದೇಯತಾಂ ಗತಂ ॥ ೨೬ ॥

ತದುತ್ಥಾಯ ಕ್ರಮಪ್ರಾಪ್ತಾಂ ಕಾಯೋಽಯಂ ಪ್ರಕೃತಾಂ ಕ್ರಿಯಾಂ ।
ಕರೋತ್ವಸ್ಪಂದಿತಾಂಗಸ್ತು ಕಿಮಯಂ ಸಾಧು ಶುಷ್ಯತಿ ॥ ೨೭ ॥

ಸ್ಥಿತೇ ಮನಸಿ ನಿಷ್ಕಾಮೇ ಸಮೇ ವಿಗತರಂಜನೇ ।
ಕಾಯಾವಯವಜೌ ಕಾರ್ಯೌ ಸ್ಪಂದಾಸ್ಪಂದೌ ಫಲೇ ಸಮೌ ॥ ೨೮ ॥

---

೨೫. ಯಾವ ಕಾರ್ಯವನ್ನು ಮಾಡಿ ಸಂಪಾದಿಸಬೇಕಾದ ಅರ್ಥವು ಯಾವುದಿರುವುದು ? ಮಾಡದೆ ಬಿಟ್ಟರೆ ನಷ್ಟವಾಗುವ ಅರ್ಥವು ಯಾವುದು ? ಕಾರ್ಯಪರನಾಗಿಯಾಗಲಿ, ಕಾರ್ಯರಹಿತನಾಗಿಯಾಗಲಿ ಸಂಪಾದಿಸಿದುದು ಯಾವುದು ತಾನೇ ಶಾಶ್ವತವಾಗಿರುವುದು ?

೨೬. ನಿಷಿದ್ಧ ಕರ್ಮಗಳನ್ನು ಮಾಡದೆ ಬಿಟ್ಟು, ವಿಹಿತಕರ್ಮಗಳನ್ನು ಮಾಡಿ, ಸಂಪಾದಿಸಬೇಕಾದುದು ಯಾವುದೂ ನನಗೆ ಇಲ್ಲ.

೨೭. ಈ ದೇಹವು ಅಲ್ಲಾಡದಂತೆ ಕುಳಿತಿದ್ದರೂ ಹಾಗೆಯೇ ಜೀರ್ಣವಾಗುವುದು. ಅದರಿಂದ ತಾನೆ ಏನು ಒಳ್ಳೆಯದು ? ಅದರಿಂದ, ಇದುವರೆಗೂ ಹೇಗೋ ಹಾಗೆಯೇ ಈಗಲೂ ಮಾಡಬೇಕಾಗಿ ಬಂದಿರುವ, ಈ ಕರ್ಮವನ್ನು ಈ ದೇಹವು ಮಾಡಲಿ.

೨೮. ಮನಸ್ಸು ಕಾಮವನ್ನು ವಿಸರ್ಜಿಸಿ, ಯಾವುದೊಂದು ವಿಕಾರವೂ ಇಲ್ಲದೆ ಭಾವನಾಶೂನ್ಯವಾಗಿರಲು, ದೇಹದ ಅಂಗಗಳು ಮಾಡುವ ಕಾರ್ಯ ಕಾರ್ಯರಾಹಿತ್ಯಗಳೆರಡರಿಂದಲೂ ಬರುವ ಫಲವು ಒಂದೇ ತಾನೇ ?

ಕರ್ಮಜಾಸು ಫಲಶ್ರೀಷು ಮನಸಾ ಕರ್ತೃಭೋಕ್ತೃತೇ ।
ತಸ್ಮಿನ್ಪ್ರಶಾಂತಿಮಾಯಾತೇ ಕೃತಮಪ್ಯಕೃತಂ ನೃಣಾಂ ॥ ೨೯ ॥

ಯೋ ನಿಶ್ಚಯೋಽಂತಃ ಪುರುಷಸ್ಯ ರೂಢಃ
ಕ್ರಿಯಾಸ್ವಸೌ ತನ್ಮಯತಾಮುಪೈತಿ ॥
ಅನಾಮಯಂ ಮೇ ಪದಮಾಹತಾ ಧೀ
ರಧೀರತಾಮಂತರಲಂ ತ್ಯಜಾಮಿ ॥ ೩೦ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ಜನಕನಿಶ್ಚಯೋ" ನಾಮ ದಶಮಃ ಸರ್ಗಃ

---

೨೯. ಕರ್ಮಗಳ ಫಲವಾಗಿ ಪ್ರಾಪ್ತವಾಗುವ ಸೌಭಾಗ್ಯದ ಕರ್ತೃತ್ವ ಭೋಕ್ತೃತ್ವಗಳೆರಡೂ ಮನಸ್ಸಿನಿಂದಲೇ ಎಂದು ನಿರ್ಧರವಾಗಿರುವಾಗ, ಆ ಮನಸ್ಸೇ ಪ್ರಶಾಂತವಾದ ಮೇಲೆ ಕರ್ಮವನ್ನು ಮಾಡಿದರೂ ಮಾಡದೆ ಇದ್ದಂತೆಯೇ ಸರಿ.

೩೦. ಮನುಷ್ಯನ ಮನಸ್ಸಿನೊಳಗೆ ಯಾವ ನಿಶ್ಚಯವು ದೃಢವಾಗಿರುವುದೋ ಅದೇ ಕ್ರಿಯೆಗಳಲ್ಲಿಯೂ ತಾನೇ ತಾನಾಗಿ ಕಾಣಿಸಿಕೊಳ್ಳುವುದು. ತನ್ನ ಬುದ್ಧಿಯು ಈಗ ಯಾವದೊಂದು ವಿಕಾರವನ್ನೂ ಪಡೆಯದೆ ಉತ್ತಮ ಪದವನ್ನು ಆಶ್ರಯಿಸಿರುವುದು. ಅದರಿಂದ ನನಗೆ ಇನ್ನೇನಾದರೂ ಹಾನಿಯಾದೀತೆಂಬ ಶಂಕೆಯನ್ನು ತ್ಯಜಿಸುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ಜನಕ ನಿಶ್ಚಯ"ವೆಂಬ ಹತ್ತನೆಯ ಸರ್ಗವು.

ಏಕಾದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:

ಇತಿ ಸಂಚಿಂತ್ಯ ಜನಕೋ ಯಥಾಪ್ರಾಪ್ತಾಂ ಕ್ರಿಯಾಮಸೌ ।
ಅಸಕ್ತಃ ಕರ್ತುಮುತ್ತಸ್ಥೌ ದಿನಂ ದಿನಪತಿರ್ಯಥಾ ॥ ೧ ॥

ಇಷ್ಟಾನಿಷ್ಟಾಃ ಪರಿತ್ಯಜ್ಯ ಚೇತಸಾ ವಾಸನಾಃ ಸ್ವಯಂ ।
ಯಥಾಪ್ರಾಪ್ತಂ ಚಕಾರಾಸೌ ಜಾಗ್ರತ್ಯೇವ ಸುಷುಪ್ತವತ್ ॥ ೨ ॥

ಸಂಪಾದ್ಯ ತದಹಃಕಾರ್ಯಮಾರ್ಯಾವರ್ಜನಪೂರ್ವಕಂ ।
ಅನಯಚ್ಛರ್ವರೀಮೇಕಸ್ತಯೈವ ಧ್ಯಾನಲೀಲಯಾ ॥ ೩ ॥

ಹನ್ನೊಂದನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು:—

೧. ಹಿಂದೆ ಹೇಳಿದಂತೆಲ್ಲ ಚಿಂತನ ಮಾಡಿ, ಜನಕಮಹಾರಾಜನು, ಯಥಾಪ್ರಾಪ್ತವಾದ ಕ್ರಿಯಾಕಲಾಪಗಳನ್ನು ಕರ್ಮಫಲಾಸಕ್ತಿಯಿಲ್ಲದೆ, ಮಾಡಲು, ಕರ್ತವ್ಯ ಕರ್ಮವೆಂದು ಹಗಲಾಗಲೆಂದು ಮೇಲಕ್ಕೇಳುವ ಸೂರ್ಯನಂತೆ, ಎದ್ದನು.

೨. ಮನಸ್ಸಿನಲ್ಲಿದ್ದ ಇಷ್ಟ ಅನಿಷ್ಟ ರೂಪನಾದ ವಾಸನೆಗಳೆಲ್ಲವನ್ನೂ ಪೂರ್ಣವಾಗಿ ತ್ಯಜಿಸಿ, ಜಾಗ್ರತ್ತಿನಲ್ಲಿಯೇ ಇದ್ದರೂ ಸುಷುಪ್ತನಂತೆ ಎಲ್ಲಾ ಕಾರ್ಯಗಳನ್ನು ಕ್ರಮವಾಗಿ ಮಾಡಿದನು.

೩. ಹೀಗೆ ಪೂಜ್ಯರನ್ನೆಲ್ಲ ಪೂಜೆಗಳಿಂದ ಸಂತೋಷಗೊಳಿಸಿ, ಆ ಹಗಲಿನ ಕಾರ್ಯವನ್ನೆಲ್ಲ ಮುಗಿಸಿ, ಆ ರಾತ್ರಿಯನ್ನೂ ಏಕಾಂತದಲ್ಲಿಯೇ ಅದೇ ಧ್ಯಾನಲೀಲೆಯಿಂದ ಕಳೆದನು.

ಮನಃ ಸಮರಸಂ ಕೃತ್ವಾ ಸಂಶಾಂತವಿಷಯಭ್ರಮಂ।
ಶರ್ವರ್ಯಾಂ ಕ್ಷೀಣಾಯಮಾಣಾಯಾಮಿತ್ಥಂ ಚಿತ್ತಮಬೋಧಯತ್ ॥ ೪ ॥

ಚಿತ್ತ ಚಂಚಲ ಸಂಸಾರ ಆತ್ಮನೋ ನ ಸುಖಾಯತೇ ।
ಶಮಮೇಹಿ ಶಮಾಚ್ಛಾಂತಂ ಸುಖಂ ಸಾರಮವಾಪ್ಸ್ಯತೇ ॥ ೫ ॥

ಯಥಾಯಥಾ ವಿಕಲ್ಪೌಘಾನ್ಸಂಕಲ್ಪಯಸಿ ಹೇಲಯಾ ।
ತಥಾತಥೈತಿ ಸ್ಫಾರತ್ವಂ ಸಂಸಾರಸ್ತವ ಚಿಂತಯಾ ॥ ೬ ॥

ಶತಶಾಖತ್ವಮಾಯಾತಿ ಸೇಕೇನ ವಿಟಪೀ ಯಥಾ ।
ಅನಂತಾಧಿತ್ವಮಾಯಾಸಿ ಶಠ ಭೋಗೇಚ್ಛಯಾ ತಥಾ ॥ ೭ ॥

---

೪. ರಾತ್ರಿಯ ಕೊನೆಯ ಜಾವದಲ್ಲಿ, ಮತ್ತೆ, ತನ್ನ ಮನಸ್ಸು ವಿಷಯ ವಾಸನಾಶೂನ್ಯನಾಗಿ ಸಮರಸವಾಗಿರುವಂತೆ ಮಾಡಿಕೊಂಡು, ಅದನ್ನು ಕುರಿತು ಹೀಗೆ ಸಂಬೋಧಿಸಿದನು.

೫. ಎಲೆ ಚಂಚಲವಾದ ಚಿತ್ತವೆ, ಈ ಸಂಸಾರದಿಂದ ನಿನಗೂ ಸುಖವಿಲ್ಲ; ನನಗೂ ಸುಖವಿಲ್ಲ. ಅದರಿಂದ ಶಾಂತಿಯನ್ನು ಹೊಂದು. ಶಾಂತಿಯಿಂದ, ಸುಖಸಾರವಾದ ಆತ್ಮಪದವನ್ನು ಪಡೆಯುವೆ.

೬. ನೀನು ಹೇಗೆ ಹೇಗೆ ಲೀಲಾಜಾಲವಾಗಿ ಸಂಕಲ್ಪ ಸಮುದಾಯಗಳನು ಕಲ್ಪಿಸುತ್ತಾ ಹೋಗುವೆಯೋ ಹಾಗೆ ಹಾಗೆ ಈ ಸಂಸಾರವೂ ನಿನ್ನ ಚಿಂತೆಯಿಂದಲೇ ಬೆಳೆಯುತ್ತಾ ಹೋಗುವುದು.

೭. ಮರವು ನೀರು ಹೊಯ್ಯುತ್ತಿದ್ದರೆ, ನೂರಾರು ಕೊಂಬೆಗಳನ್ನೊಡೆಯುವಂತೆ, ನೂರಾರು ಭೋಗಗಳನ್ನು ಪಡೆಯಬೇಕೆಂದು ಚಿಂತಿಸುತ್ತಾ, ಅನಂತವಾದ ಆಧಿ (ಮನೋವ್ಯಾಧಿ) ಗಳನ್ನು ಪಡೆಯುವೆ.

ಚಿಂತಾಜಾಲವಿಲಾಸೋತ್ಥಾ ಜನ್ಮಸಂಸಾರಸೃಷ್ಟಯಃ ।
ತಸ್ಮಾತ್ತ್ಯಕ್ತ್ವಾ ವಿಚಿತ್ರಾಂ ತ್ವಂ ಚಿಂತಾಮುಪಶಮಂ ವ್ರಜ ॥ ೮ ॥

ಸಂಸಾರಸೃಷ್ಟಿತರಲಾಮಿಮಾಂ ತುಲಯ ಸುಂದರ ।
ಅಸ್ಯಾಂ ಚೇತ್ಸಾರಮಾಪ್ನೋಷಿ ತದೇತಾಮೇವ ಸಂಶ್ರಯ ॥ ೯ ॥

ಆಸ್ಥಾಂ ಯಸ್ಮಾತ್ಪರಿತ್ಯಜ್ಯ ದೃಶ್ಯದರ್ಶನಲಾಲಸಾತ್ ।
ಮೈತದ್ಗೃಹಾಣ ಮಾ ಮುಂಚ ಸ್ವೇಚ್ಛಯಾ ವಿಹರೇಚ್ಛಯಾ ॥ ೧೦ ॥

ಇದಂ ದೃಶ್ಯಮಸತ್ಸದ್ವಾಪ್ಯುದೇತ್ವಸ್ತಮುಪೈತುವಾ ।
ಸಾಧೋ ವಿಷಮತಾಂ ಗಚ್ಛ ಮೈತದೀಯೈರ್ಗುಣಾಗುಣೈಃ ॥ ೧೧ ॥

---

೮. ಜನನ ಮರಣರೂಪವಾದ ಈ ಸೃಷ್ಟಿಗಳೆಲ್ಲವೂ ನಿನ್ನ ಚಿಂತೆಯ ವಿಲಾಸದಿಂದಲೇ ಆದವು. ಆದರಿಂದ, ವಿಚಿತ್ರ ಚಿಂತಾಸಂತಾನವನ್ನೆಲ್ಲ ಬಿಟ್ಟು ಉಪಶಾಂತಿಯನ್ನು ಹೊಂದು.

೯. ಎಲೆ ವಿವೇಕಿಯಾದ ಚಿತ್ತವೆ, ಅತಿ ಚಂಚಲವಾಗಿರುವ ಈ ಸಂಸಾರ ಸೃಷ್ಟಿಯನ್ನು ತೂಗಿ ನೋಡು. ಇದರಲ್ಲಿ ಏನಾದರೂ ಸ್ವಾರಸ್ಯವಿದ್ದರೆ, ಆಗ ಇದನ್ನೇ ಆಶ್ರಯಿಸುವೆಯಂತೆ.

೧೦. ಹೀಗೆ, ಈ ಸಂಸಾರವನ್ನು ಬೆಳೆಸಿಕೊಂಡು ಹೋಗುವಿಕೆಯಿಂದ ಏನೂ ಪ್ರಯೋಜನವಿಲ್ಲದಕಾರಣ, ಆದರಲ್ಲಿರುವ ಆಸ್ಥೆಯನ್ನು ಬಿಟ್ಟು, ಈ ದೃಶ್ಯವನ್ನು ದರ್ಶನಮಾಡಿಕೊಂಡು ಕುಳಿತಿರಬೇಕೆಂಬ ಹಂಬಲವನ್ನು ಬಿಡು. ಯಾವುದನ್ನೂ ಹಿಡಿಯಬೇಡ, ಯಾವುವನ್ನೂ ಬಿಡಬೇಡ ನಿನಗೆ ತೋರಿದಂತೆ ಆತ್ಮಕಾಮನಾಗಿ ವಿಹರಿಸಿಕೊಂಡಿರು.

೧೧. ಈ ದೃಶ್ಯ ಜಾಲವೆಲ್ಲವೂ ಸತ್ತಾಗಲಿ ಅಸತ್ತಾಗಲಿ, ಅದು ಉದಯಿಸಲಿ, ಮುಳುಗಿಹೋಗಲಿ. ಈ ದೃಶ್ಯದ ಗುಣಾಗುಣಗಳಿಂದ ನಿನಗೆ ಏನೂ ಹೆಚ್ಚುಕಡಿಮೆಗಳಾಗದಂತೆ, ಎಲೆ ವಿವೇಕಿಯೆ, ನೀನು ಸುಖವಾಗಿರು.

ಮನಾಗಪಿ ನ ಸಂಬಂಧಸ್ತವ ದೃಶ್ಯೇನ ವಸ್ತುನಾ |
ಅವಿದ್ಯಮಾನರೂಪೇಣ ಸಂಬಂಧಃ ಕೋಽಯಮೀದೃಶಃ || ೧೨ ||

ಅಸತ್ತ್ವಮೇತಚ್ಚ ನ ಸದ್ದ್ವಯೋರೇವಾಸತೋಃ ಸತೋಃ |
ಸಂಬಂಧ ಇತಿ ಚಿತ್ರೇಯಮಪೂರ್ವೈವಾಕ್ಷರಾವಲೀ || ೧೩ ||

ಅಸದೇತತ್ತು ಸಚ್ಚೇತ್ತ್ವಂ ತಥಾಪಿ ಕಿಲ ಸುಂದರ |
ಸಂಗಃ ಸದಸತೋಃ ಕೀದೃಗ್ವದ ತ್ವಂ ಮರ್ತ್ಯಜೀವಯೋಃ || ೧೪ ||

ಚಿತ್ತ ತ್ವಮಥ ದೃಶ್ಯಂ ಚ ದ್ವೇ ಏವ ಯದಿ ಸನ್ಮಯೇ |
ಸದಾಸ್ಥಿತೇ ತತ್ಪ್ರಸರಃ ಕುತೋ ಹರ್ಷವಿಷಾದಯೋಃ || ೧೫ ||

---

೧೨. ನಿನಗೂ ಈ ದೃಶ್ಯ ಜಾಲಕ್ಕೂ ಹೇಗೆ ಹೇಗೂ ಸಂಬಂಧವಿಲ್ಲ (ಆದುದರಿಂದ ಬಿಡುವುದು ಹೇಗೆ ಎನ್ನಬೇಕಾಗಿಲ್ಲ). ಸ್ವತಂತ್ರ ಸತ್ತೆಯೇ ಇಲ್ಲದ ವಸ್ತುವಿನೊಡನೆ ಯಾವ ಸಂಬಂಧವು ಏರ್ಪಟ್ಟೀತು?

೧೩. ನೀನೂ ಅಸತ್, ಈ ದೃಶ್ಯವೂ ಅಸತ್, ನಿಮ್ಮಿಬ್ಬರಿಗೂ ಸಂಬಂಧವುಂಟು ಎಂದರೆ ಅದೆಂತಹ ವಿಚಿತ್ರ ಸಂಬಂಧ? ಇದೆಂತಹ ವಿಚಿತ್ರ!

೧೪. ಅಥವಾ ಈ ದೃಶ್ಯವು ಅಸತ್ತು, ನಾನು ಸತ್ತು ಎಂದು ಹೇಳುವೆಯಾದರೂ ಎಲೆ ವಿವೇಕಿಯೇ, ಸತ್ತವನಿಗೂ ಬದುಕಿದವನಿಗೂ ಸಂಬಂಧವು ಹೇಗೆ ಇಲ್ಲವೋ, ಹಾಗೆಯೇ ಈ ದೃಶ್ಯಕ್ಕೂ ನಿನಗೂ ಹೇಗೆ ಸಂಬಂಧವುಂಟಾದೀತು?

೧೫. ಹಾಗೂ ಅಲ್ಲ, ನಾನೂ ದೃಶ್ಯವೂ ಎರಡೂ ಸತ್ಪದಾರ್ಥಗಳೇ ಎನ್ನುವೆಯಾದರೂ, ಎಲೆ ಚಿತ್ತವೆ, ಆಗಲೂ ಹರ್ಷ ವಿಷಾದಗಳಿಗೆ ಅವಕಾಶವೆಲ್ಲಿ? (ಎರಡೂ ಸತ್ತೇ ಆದರೆ ಯಾವುದೋ ಹೋಗುವುದಿಲ್ಲ; ಯಾವುದೂ ಬರುವುದಿಲ್ಲವಾಗಿ, ಬರುವುದರಿಂದ ಆಗುವ ಹರ್ಷವೆಂಬ ವಿಕಾರವಾಗಲಿ ಹೋಗುವುದರಿಂದ ಆಗುವ ವಿಷಾದವೆಂಬ ವಿಕಾರವಾಗಲಿ ಇರಲು ಅವಕಾಶವಿಲ್ಲವೆಂದು ಭಾವ).

ತಸ್ಮಾನ್ಮಹಾಧಿಂ ಮುಂಚ ತ್ವಂ ಮೂಲಮುಲ್ಲಾಸಮಾಹರ |
ಸಂಕ್ಷುಬ್ಧಾಂಬುಧಿಮಾವಿಷ್ಟಾಂ ತ್ಯಜಾಭವ್ಯಾಮಿಮಾಂ ಸ್ಥಿತಿಂ || ೧೬ ||

ಕಂದುಕಾಲಾತವದ್ವ್ಯರ್ಥಮಾತ್ಮನೈವ ಪರಿಜ್ವಲನ್ |
ಮಾ ಮೋಹಮಲಮಾಸಾದ್ಯ ಮಂದತಾಂ ಗಚ್ಛ ಸನ್ಮತೇ || ೧೭ ||

ನ ತದಿಹಾಸ್ತಿ ಸಮುನ್ನತಮುತ್ತಮಂ |
ವ್ರಜಸಿ ಯೇನ ಪಾರಂ ಪರಿಪೂರ್ಣತಾಂ ||
ತದವಲಂಬ್ಯ ಬಲಾದತಿಧೀರತಾಂ |
ಜಹಿಹಿ ಚಂಚಲತಾಂ ಶಠ ರೇ ಮನಃ || ೧೮ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ದೇವದೂತೋಕ್ತೇ ಮೋಕ್ಷೋಪಾಯೇಷು ಉಪಶಮಪ್ರಕರಣೇ
"ಚಿತ್ತಾನುಶಾಸನಂ" ನಾಮ ಏಕಾದಶಃ ಸರ್ಗಃ

---

೧೬. ಆದರಿಂದ, ನೀನು ಹೆಚ್ಚಿಕೊಂಡಿರುವ ಈ ಮಹಾ ಮನೋವ್ಯಥೆಯನ್ನು ಬಿಡು. ತೂಷ್ಣೀಂಸ್ಥಿತಿಯುಳ್ಳಿದ್ದು ಉಲ್ಲಾಸಪಡು. ಅಲ್ಲೋಲ ಕಲ್ಲೋಲವಾದ ಸಮುದ್ರದ ಸ್ಥಿತಿಯನ್ನು ತಿರಸ್ಕರಿಸುವಂತಹ, ಯೋಗ್ಯವಲ್ಲದ, ಈ ಅವಸ್ಥೆಯನ್ನು ಬಿಡು.

೧೭. ಎಲೆ ಸನ್ಮತಿಯೆ, ಮದ್ದಿನಿಂದ ಆದ ಚೆಂಡು ಬಾಣವು ತಾನೇ ಹತ್ತಿಕೊಂಡು ಉರಿದುಹೋಗಿ ವ್ಯರ್ಥವಾಗುವಂತೆ, ನಿನಗೆ ನೀನೇ ಮೋಹಮಲವನ್ನು ಪಡೆದು ಮಂದನಾಗಿ ಕೆಡಬೇಡ.

೧೮. ಎಲೆ, ಶಠವಾದ ಮನಸ್ಸೇ, ನೀನು ಯಾವುದನ್ನು ಪಡೆದರೆ ಉತ್ತಮವಾದ ಪರಿಪೂರ್ಣತೆಯನ್ನು ಹೊಂದುವೆಯೋ, ಅಂತಹ ವಸ್ತುವು ಯಾವುದೂ ಇಹದಲ್ಲಿಲ್ಲ. ಆದರಿಂದ ಪ್ರಯತ್ನಪುರಸ್ಸರವಾಗಿ ಧೈರ್ಯವನ್ನು ಅವಲಂಬಿಸಿ, ಚಂಚಲತೆಯನ್ನು ಬಿಡು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ಚಿತ್ತಾನುಶಾಸನ" ಎಂಬ ಹನ್ನೊಂದನೆಯ ಸರ್ಗವು.

ದ್ವಾದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಏವಂ ವಿಚಾರಯಂಸ್ತತ್ರ ಸ್ವರಾಜ್ಯೇ ಜನಕೋ ನೃಪಃ ।
ಚಕಾರಾಖಿಲಕಾರ್ಯಾಣಿ ನ ಮುಮೋಹ ಚ ಧೀರಧೀಃ ॥ ೧ ॥

ನ ಮನಃ ಪ್ರೋಲ್ಲಲಾಸಾಸ್ಯ ಕ್ವಚಿದಾನಂದವೃತ್ತಿಷು ।
ಕೇವಲಂ ಸುಷುಪ್ತಸಂಸ್ಥಂ ಸದೈವ ವ್ಯವತಿಷ್ಠತ ॥ ೨ ॥

ತತಃಪ್ರಭೃತ್ಯಸೌ ದೃಶ್ಯಂ ನಾಜಹಾರ ನ ಚಾತ್ಯಜತ್ ।
ಕೇವಲಂ ವಿಗತಾಶಂಕಂ ವರ್ತಮಾನೇ ವ್ಯವಸ್ಥಿತಃ ॥ ೩ ॥

ಹನ್ನೆರಡನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಹೀಗೆ ವಿಚಾರಮಾಡುತ್ತ ಆ ಜನಕರಾಜನು ತನ್ನ ರಾಜ್ಯದಲ್ಲಿಯೇ ಇದ್ದುಕೊಂಡು ಎಲ್ಲ ಕಾರ್ಯಗಳನ್ನೂ ಮಾಡುತ್ತಿದ್ದರೂ ಧೀರಮನಸ್ಕನಾದ ಆತನು ಮೋಹಕ್ಕೆ ಒಳಗಾಗಲಿಲ್ಲ.

೨. ಎಲ್ಲರೂ ಸುಖವೆಂದುಕೊಳ್ಳುವ ಯಾವ ಸೌಖ್ಯಗಳಲ್ಲಿಯೂ ಆತನ ಮನಸ್ಸು ಉಲ್ಲಾಸಪಡುತ್ತಿರಲಿಲ್ಲ. ಕೇವಲವಾಗಿ ಸುಷುಪ್ತಿಯಲ್ಲಿರುವಂತೆ ಯಾವುದೊಂದೂ ವಿಕ್ಷೇಪವಿಲ್ಲದೆ ಇತ್ತು.

೩. ಅದು ಮೊದಲುಗೊಂಡು ಜನಕಮಹಾರಾಜನು ದೃಶ್ಯವನ್ನು ಯಾವುದನ್ನೇ ಆಗಲಿ, ಸ್ವೀಕರಿಸಲೂ ಇಲ್ಲ ಬಿಡಲೂ ಇಲ್ಲ. ಯಾವುದೊಂದು ಶಂಕೆಯೂ ಇಲ್ಲದೆ ಮಾಡತಕ್ಕ ಕೆಲಸಗಳನ್ನೆಲ್ಲ ಮಾಡುತ್ತಲೂ ಇದ್ದನು.

ಅನಾರತವಿವೇಕೇನ ತೇನ ಸದ್ಯಃ ಸನಾತನಂ |
ಪುನಃ ಕಲಂಕಂ ನೈವಾಪ್ತಮಂಬರೇಣೇವ ರಾಜಸಂ || ೪ ||

ಸ್ವವಿವೇಕಾನುಸಂಧಾನಾದಿತಿ ತಸ್ಯ ಮಹೀಪತೇಃ |
ಸಮ್ಯಗ್ಜ್ಞಾನಮನಂತಾಭಮಲಂ ವಿಮಲತಾಂ ಯಯೌ || ೫ ||

ಅನಾಮೃಷ್ಟವಿಕಲ್ಪಾಂಶಃ ಚಿದಾತ್ಮಾ ವಿಗತಾಮಯಃ |
ಉದಿಯಾಯ ಹೃದಾಕಾಶೇ ತಸ್ಯ ವ್ಯೋಮ್ನೀವ ಭಾಸ್ಕರಃ || ೬ ||

ಸ ದದರ್ಶಾಖಿಲಾನ್ಭಾವಾನ್ಚಿಚ್ಛಕ್ತೌ ಸಮುವಸ್ಥಿತಾನ್ |
ಆತ್ಮಭೂತಾನನಂತಾತ್ಮಾ ಸರ್ವಭೂತಾತ್ಮಕೋವಿದಃ || ೭ ||

---

೪. ಯಾವಾಗಲೂ ವಿವೇಕದ ಹಾದಿಯನ್ನೇ ಹಿಡಿದು ನಡೆಯುತ್ತಿದ್ದ ಆತನಿಗೆ ರಜಸ್ಸು (ಧೂಳು) ಆಕಾಶಕ್ಕೆ ಹತ್ತದಂತೆ, ಅನಾದಿಯಾದ (ಅಹಂಕಾರ ಮಮಕಾರ ರೂಪಿಯಾದ) ಕಳಂಕವು ಹತ್ತಲಿಲ್ಲ.

೫. ಆತ್ಮವಿವೇಕವನ್ನು ಅನುಸಂಧಾನಮಾಡುತ್ತ, ಆತನು ಅಪರಿಚ್ಛನ್ನವೂ ಪರಿಶುದ್ಧವೂ ಬ್ರಹ್ಮಾಕಾರವೂ ಆದ ಸಮ್ಯಗ್‌ಜ್ಞಾನವನ್ನು ಪಡೆದನು.

೬. ಆತನ ಹೃದಯದಲ್ಲಿ ವಿಕ್ಷೇಪಶೂನ್ಯವಾದ, ನಿರ್ವಿಕಲ್ಪವಾದ, ಚಿದಾತ್ಮವು, ಅಂತರಿಕ್ಷದಲ್ಲಿ ಉದಯಿಸುವ ಸೂರ್ಯನಂತೆ, ಉದಯಿಸಿತು.

೭. ಸರ್ವಭೂತಸ್ವರೂಪಜ್ಞಾನ ನಿಪುಣನಾದ ಆ ಜನಕಮಹಾರಾಜನು ಇದ್ದ ಇರುವ ಸರ್ವ ಪದಾರ್ಥಗಳೂ ಚಿಚ್ಛಕ್ತಿಯಲ್ಲಿಯೇ ಇರುವುದೆಂಬುದನ್ನು ಕಂಡನು.

ಪ್ರಹೃಷ್ಟೋ ನ ಬಭೂವಾಸೌ ಕ್ವಚಿನ್ನ ಚ ಸುದುಃಖಿತಃ ।
ಪ್ರಕೃತೇರ್ವ್ಯವಹಾರಸ್ಥಾತ್ಸದೈವ ಸಮಮಾನಸಃ ॥ ೮ ॥

ಜೀವನ್ಮುಕ್ತೋ ಬಭೂವಾಸೌ ತತಃ ಪ್ರಭೃತಿ ಮಾನದಃ ।
ಜನಕೋ ಜರಠಜ್ಞಾನೀ ಜ್ಞಾತಲೋಕಪರಾವರಃ ॥ ೯ ॥

ರಾಜ್ಯಂ ಕುರ್ವನ್ವಿದೇಹಾನಾಂ ಜನಕೋ ಜನಜೀವಿತಂ ।
ನೈವ ಹರ್ಷವಿಷಾದಾಭ್ಯಾಂ ಸೋಽವಶಃ ಪರಿತಪ್ಯತೇ ॥ ೧೦ ॥

ನಾಸ್ತಮೇತಿ ನ ಚೋದೇತಿ ಗುಣದೋಷವಿಚೇಷ್ಟಿತೈಃ
ಅರ್ಥಾನರ್ಥೈಃ ಸ ರಾಜ್ಯೋತ್ಥೈರ್ನ ಗ್ಲಾಯತಿ ನ ಹೃಷ್ಯತಿ । ॥ ೧೧ ॥

---

೮. ಹೀಗೆ ವ್ಯವಹಾರ ಮಾಡುತ್ತಿದ್ದ ಜನಕಮಹಾರಾಜನು ಸರ್ವದಾ ಸಮಚಿತ್ತನಾಗಿದ್ದ ಕಾರಣ ಯಾವುದರಿಂದಲೂ ಹೆಚ್ಚಾದ ಹರ್ಷವನ್ನಾಗಲೀ, ಅಥವಾ ಅತಿಯಾದ ದುಃಖವನ್ನೇ ಆಗಲಿ, ಪಡೆಯಲಿಲ್ಲ.

೯. ಅದು ಮೊದಲುಗೊಂಡು ಜ್ಞಾನವೃದ್ಧನೂ ಲೋಕ ಲೋಕಗಳ ಪೂರ್ವೋತ್ತರವನ್ನೆಲ್ಲ ಬಲ್ಲವನೂ ಆದ ಆ ಜನಕಮಹಾರಾಜನು ಜೀವನ್ಮುಕ್ತನಾಗಿ ಸುಖವಾಗಿ ಇದ್ದನು.

೧೦. ವಿದೇಹರಾಜನಾದ ಆತನು ಒಂದು ದೇಶದ ರಾಜ್ಯಭಾರವನ್ನೇ ನಡೆಯಿಸುತ್ತಿದ್ದರೂ ಹರ್ಷವಿಷಾದಗಳಿಗೆ ವಶನಾಗಿ ಪರಿತಾಪಪಡಲಿಲ್ಲ.

೧೧. ಆತನು ತನ್ನ ಮನಸ್ಸಿನಲ್ಲಿ ಬರುವ ಗುಣದೋಷಫಲಗಳಿಂದ ಹೆಚ್ಚಲಿಲ್ಲ; ತಗ್ಗಲಿಲ್ಲ. ರಾಜ್ಯದಿಂದ ಬಂದ ಅರ್ಥ ಅನರ್ಥಗಳಿಂದ ಹರ್ಷಪಡಲಿಲ್ಲ. ಆಯಾಸಪಡೆಯಲಿಲ್ಲ.

ಕುರ್ವನ್ನಪಿ ಕರೋತ್ಯೇಷ ನ ಕಿಂಚಿದಪಿ ಕುತ್ರಚಿತ್ ।
ಸ ತಿಷ್ಠತ್ಯೇವ ಸತತಂ ಸರ್ವದೈವಾಂತರೇ ಚಿತಃ ॥ ೧೨ ॥

ಸುಷುಪ್ತಾವಸ್ಥಿತಸ್ಯೈವ ಜನಕಸ್ಯ ಮಹೀಪತೇಃ ।
ಭಾವನಾಃ ಸರ್ವಭಾವೇಭ್ಯಃ ಸರ್ವಥೈವಾಸ್ತಮಾಗತಾಃ ॥ ೧೩ ॥

ಭವಿಷ್ಯಂ ನಾನುಸಂಧತ್ತೇ ನಾತೀತಂ ಚಿಂತಯತ್ಯಸೌ ।
ವರ್ತಮಾನನಿಮೇಷಂ ತು ಹಸನ್ನೇವಾನುವರ್ತತೇ ॥ ೧೪ ॥

ಸ್ವವಿಚಾರವಶೇನೈವ ತೇನ ತಾಮರಸೇಕ್ಷಣ ।
ಪ್ರಾಪ್ತಂ ಪ್ರಾಪ್ಯಮಶೇಷೇಣ ರಾಮ ನೇತರಯೇಚ್ಛಯಾ ॥ ೧೫ ॥

---

೧೨. ಎಲ್ಲವನ್ನೂ ಮಾಡುತ್ತಿರುವನಾದರೂ ಆತನು ಯಾವಾಗಲೂ ಎಲ್ಲಿಯೂ ಏನೂ ಮಾಡದೆಯೇ ಇರುವನಂತೆ ಯಾವಾಗಲೂ ಚಿಚ್ಛಕ್ತಿಯಲ್ಲಿಯೇ ನೆಲೆಯಾಗಿ ನಿಂತಿರುತ್ತಿದ್ದನು.

೧೩. ಹೀಗೆ ಸುಷುಪ್ತಿಯಲ್ಲಿರುವವನಂತೆ ವಿಕಲ್ಪಶೂನ್ಯನಾಗಿದ್ದ ಜನಕ ಮಹಾರಾಜನಿಗೆ ಸಮಸ್ತ ಪದಾರ್ಥಗಳ ಭಾವನೆಯೂ ಸರ್ವಥಾ ಅಸ್ತವಾಯಿತು.

(ನಮ್ಮ ಹೊರಗೆ ಇಂದ್ರಿಯ ಪ್ರತ್ಯಕ್ಷವಾಗಿರುವ ಈ ಪ್ರಪಂಚವು ಪ್ರತ್ಯೇಕ ಸತ್ತಾ ಉಳ್ಳುದಾಗಿ ಇರುವುದೆಂಬ ಭಾವನೆಯು ನಮ್ಮ ಮನಸ್ಸಿಗೆ ಬರುವುದು. ಇದೇ ಪಿಂಡಗ್ರಹ. ಇದರ ನಿವೃತ್ತಿಯೇ ಶಾಸ್ತ್ರಾಭಿಪ್ರಾಯ. ಜನಕ ಮಹಾರಾಜನಿಗೆ ಪಿಂಡಗ್ರಹ ನಿವೃತ್ತಿಯಾಯಿತು ಎಂದು ಹೇಳುವುದೇ ಈ ಶ್ಲೋಕದ ಉತ್ತರಾರ್ಧದ ಅಭಿಪ್ರಾಯ—ದೇ.)

೧೪. ಆತನು ಮುಂದೆ ಏನು ಮಾಡಬೇಕು ಎಂಬುದನ್ನು ಯೋಚಿಸುತ್ತಿರಲಿಲ್ಲ; ಹಿಂದೆ ಕಳೆದುಹೋದದನ್ನು ಕುರಿತು ಚಿಂತಿಸುತ್ತಿರಲಿಲ್ಲ. ಯಾವ ನಿಮಿಷದಲ್ಲಿಯೇನು ಬರುವುದೋ ಅದನ್ನೇ ಸಂತೋಷದಿಂದ ಅನುವರ್ತಿಸುತ್ತ ಸುಖವಾಗಿ ಇರುತ್ತಿದ್ದನು.

೧೫. ಹೀಗೆ, ಕಮಲನೇತ್ರನಾದ ರಾಮನೆ, ಆ ಜನಕನು ಇತರರ ಸಹಾಯವಿಲ್ಲದೆ, ತಾನೇ ವಿಚಾರಮಾಡಿಕೊಳ್ಳುತ್ತ, ಪರಮ ಪದವನ್ನೂ ಪಡೆದನು.

ತಾವತ್ತಾವತ್ಸ್ವಕೇನೈವ ಚೇತಸಾ ಪ್ರವಿಚಾರ್ಯತೇ ।
ಯಾವದ್ಯಾವದ್ವಿಚಾರಾಣಾಂ ಸೀಮಾಂತಃ ಸಮವಾಪ್ಯತೇ ॥ ೧೬ ॥

ನ ಸದ್ಗುರೋರ್ನ ಶಾಸ್ತ್ರಾರ್ಥಾನ್ನ ಪುಣ್ಯಾತ್ಪ್ರಾಪ್ಯತೇ ಪದಂ ।
ಯತ್ಸಾಧುಸಂಘಾಭ್ಯುದಿತಾದ್ವಿಚಾರವಿಶದಾದ್ಧೃತಃ ॥ ೧೭ ॥

ಸುಂದರ್ಯಾ ನಿಜಯಾ ಬುದ್ಧ್ಯಾ ಪ್ರಜ್ಞಯೇವ ವಯಸ್ಯಯಾ ।
ಪದಮಾಸಾದ್ಯತೇ ರಾಮ ನ ನಾಮ ಕ್ರಿಯಯಾನ್ಯಯಾ ॥ ೧೮ ॥

ಯಸ್ಯೋಜ್ಜ್ವಲತಿ ತೀಕ್ಷ್ಣಾಗ್ರಾ ಪೂರ್ವಾಪರವಿಚಾರಿಣೀ ।
ಪ್ರಜ್ಞಾ ದೀಪಶಿಖಾ ಜಾತು ಜಾಡ್ಯಾನ್ಧ್ಯಂ ತಂ ನ ಬಾಧತೇ ॥ ೧೯ ॥

---

೧೬. ಪ್ರತಿಯೊಬ್ಬರೂ ತಮ್ಮಷ್ಟಕ್ಕೆ ತಾವೇ ತಮ್ಮ ಮನಸ್ಸಿನಲ್ಲಿಯೇ ವಿಚಾರ ಮಾಡುತ್ತಿರಬೇಕು. ವಿಚಾರದ ಕೊಟ್ಟಕೊನೆಗೆ ಹೋಗುವವರೆಗೂ (ಎಂದರೆ ಪರಮ ಪದವನ್ನು ಪಡೆಯುವವರೆಗೂ) ವಿಚಾರ ಮಾಡುತ್ತಲೇ ಇರಬೇಕು.

೧೭. ಸಾಧುಸಂಗದಿಂದ ಉಂಟಾಗುವ ವಿಚಾರದಿಂದ ಪ್ರಾಪ್ತವಾಗುವ ಯಾವ ಸ್ಥಾನವುಂಟೋ ಅದು ಗುರುಕೃಪೆಯಿಂದಾಗಲೀ, ಶಾಸ್ತ್ರಾನುಗ್ರಹದಿಂದಾಗಲೀ, ಪುಣ್ಯದಿಂದಲೇ ಆಗಲೀ ಲಭಿಸುವುದಿಲ್ಲ.

೧೮. ಪ್ರಾಜ್ಞಳಾದ ಸಖಿಯಂತಿರುವ, ವಿವೇಕಿಯಾದ ನಿಜಬುದ್ಧಿಯಿಂದ ಪರಮ ಪದವು ಲಭ್ಯವಾಗುವುದಲ್ಲದೆ, ಇನ್ನು ಯಾವ ಕ್ರಿಯಾಕಲಾಪಗಳಿಂದಲೂ ಲಭ್ಯವಾಗುವುದಿಲ್ಲ.

೧೯. ಯಾವನ ಪ್ರಜ್ಞೆಯೆಂಬ ದೀಪಶಿಖೆಯು ಪೂರ್ವಾಪರಗಳನ್ನು ವಿಚಾರ ಮಾಡುತ್ತಾ ತೀಕ್ಷ್ಣಾಗ್ರವಾಗಿ ಪ್ರಜ್ವಲಿಸುತ್ತಿರುವುದೋ ಅಲ್ಲಿನವರೆಗೂ ಅವನಿಗೆ ಅಜ್ಞಾನವೆಂಬ ಕತ್ತಲಿನ ಬಾಧೆಯಿರುವುದಿಲ್ಲ.

ದುರುತ್ತರಾ ಯಾ ವಿಪದೋ ದುಃಖಕಲ್ಲೋಲಸಂಕುಲಾಃ ।
ತೀರ್ಯತೇ ಪ್ರಜ್ಞಯಾ ತಾಭ್ಯೋ ನಾವಾಽಪದ್ಭ್ಯೋ ಮಹಾಮತೇ ॥ ೨೦ ॥

ಪ್ರಜ್ಞಾವಿರಹಿತಂ ಮೂಢಮಾಪದಲ್ಪಾಪಿ ಬಾಧತೇ ।
ಪೇಲವಾ ಚಾನಿಲಕಲಾ ಸಾರಹೀನಮಿವೋಲಪಂ ॥ ೨೧ ॥

ಪ್ರಜ್ಞಾವಾನಸಹಾಯೋಽಪಿ ವಿಶಾಸ್ತ್ರೋಽಪ್ಯರಿಮರ್ದನ ।
ಉತ್ತರತ್ಯೇವ ಸಂಸಾರಸಾಗರಾದ್ರಾಮ ಪೇಲವಾತ್ ॥ ೨೨ ॥

ಪ್ರಜ್ಞಾವಾನಸಹಾಯೋಽಪಿ ಕಾರ್ಯಾಂತಮಧಿಗಚ್ಛತಿ ।
ದುಷ್ಪ್ರಜ್ಞಃ ಕಾರ್ಯಮಾಸಾದ್ಯ ಪ್ರಧಾನಮಪಿ ನಶ್ಯತಿ ॥ ೨೩ ॥

---

೨೦. ಎಲೈ ಮಹಾಮತಿಯೆ, ದುಃಖಪರಂಪರೆಯೆಂಬ ಕಲ್ಲೋಲಗಳಿಂದ ಕೂಡಿ ದಾಟಲು ಅಸಾಧ್ಯವಾಗಿರುವ ಯಾವ ವಿಪತ್ತೆಂಬ ನದಿಗಳುಂಟೋ, ಅವುಗಳೆಲ್ಲವನ್ನೂ ಪ್ರಜ್ಞೆಯೆಂಬ ನಾವೆಯಿಂದಲೇ ದಾಟಬಹುದು.

೨೧. ಪ್ರಜ್ಞಾವಂತನಲ್ಲದ ಮೂಢನನ್ನು ಅಲ್ಪವಾದ ಆಪತ್ತೂ ಬಾಧಿಸುವುದು. ಹಗುರವಾದ ಕಡ್ಡಿಯನ್ನು ಸುಳಿಗಾಳಿಯೂ ಹಾರಿಸಬಲ್ಲುದಲ್ಲವೇ?

೨೨. ಪ್ರಜ್ಞಾವಂತನಾದವನು ಅಸಹಾಯನೇ ಆದರೂ ಶಾಸ್ತ್ರವನ್ನು ಬಲ್ಲವನಲ್ಲದಿದ್ದರೂ ಸಂಸಾರಸಾಗರವನ್ನೂ, ರಾಮ, ಸಣ್ಣ ಹಳ್ಳವನ್ನು ಹೇಗೋ ಹಾಗೆ, ದಾಟಬಿಡುವನು.

೨೩. ಪ್ರಜ್ಞಾವಂತನಿಗೆ ಸಹಾಯವಿಲ್ಲದಿದ್ದರೂ ಅವನು ಕಾರ್ಯವನ್ನು ಗೆಲ್ಲುವನು. ಪ್ರಜ್ಞಾಶೂನ್ಯನಾದವನಿಗೆ ಮುಖ್ಯವಾಗಿರತಕ್ಕ ಕಾರ್ಯವು ಕೈಗೂಡುವುದಾಗಿದ್ದರೂ ಕೆಡುವುದು.

ಶಾಸ್ತ್ರಸಜ್ಜನಸಂಸರ್ಗೈಃ ಪ್ರಜ್ಞಾಂ ಪೂರ್ವಂ ವಿವರ್ಜಯೇತ್ ।
ಸೇಕಸಂರಕ್ಷಣಾರಂಭೈಃ ಫಲಪ್ರಾಪ್ತೌ ಲತಾಮಿವ ॥ ೨೪ ॥

ಪ್ರಜ್ಞಾಬಲಬೃಹನ್ಮೂಲಃ ಕಾಲೇ ಸತ್ಕಾರ್ಯಪಾದಪಃ ।
ಫಲಂ ಫಲತ್ಯತಿಸ್ವಾದು ಭಾಸೋ ಬಿಂಬಮಿವೈಂದವಂ ॥ ೨೫ ॥

ಯ ಏವ ಯತ್ನಃ ಕ್ರಿಯತೇ ಬಾಹ್ಯಾರ್ಥೋಽಪಾರ್ಜನೇ ಜನೈಃ ।
ಸ ಏವ ಯತ್ನಃ ಕರ್ತವ್ಯಃ ಪೂರ್ವಂ ಪ್ರಜ್ಞಾವಿವರ್ಧನೇ ॥ ೨೬ ॥

ಸೀಮಾಂತಂ ಸರ್ವದುಃಖಾನಾಮಾಪದಂ ಕೋಶಮುತ್ತಮಂ ।
ಬೀಜಂ ಸಂಸಾರವೃಕ್ಷಾಣಾಂ ಪ್ರಜ್ಞಾಮಾಂದ್ಯಂ ವಿನಾಶಯೇತ್ ॥ ೨೭ ॥

---

೨೪. ನೀರು ಹೊಯ್ದು ಕಾಪಾಡುವುದೇ ಮೊದಲಾದ ಕಾರ್ಯಗಳಿಂದ ಫಲವಾಗಲೆಂದು ಲತೆಯನ್ನು ಬೆಳೆಸುವಂತೆ, ಶಾಸ್ತ್ರ, ಸಜ್ಜನಸಂಗತಿ, ಮೊದಲಾದುವುಗಳಿಂದ ಪ್ರಜ್ಞೆಯನ್ನು ಮೊದಲು ಬೆಳೆಸಬೇಕು.

೨೫. ಸೂರ್ಯನ ಕಿರಣಗಳಿಂದ ಚಂದ್ರಬಿಂಬವು ಶುಕ್ಲಪಕ್ಷದಲ್ಲಿ ವಿವೃದ್ಧವಾಗುವಂತೆ, ಪ್ರಜ್ಞಾಬಲವೆಂಬ ಭಾರಿಯ ಬುಡವುಳ್ಳ ಸತ್ಕಾರ್ಯವೆಂಬ ಮರವು ಸಕಾಲದಲ್ಲಿ ತಪ್ಪದೆ ಅತಿ ಮಧುರವಾದ ಫಲಗಳನ್ನು ಕಾಯುವುದು.

೨೬. ಜನ (ಪಾಮರ) ರು ಬಾಹ್ಯಾರ್ಥಗಳನ್ನು ಸಂಪಾದಿಸುವುದರಲ್ಲಿ ಎಷ್ಟೆಷ್ಟು ಯತ್ನಮಾಡುವರೋ ಅಷ್ಟಷ್ಟು ಯತ್ನವನ್ನು, ಪ್ರಜ್ಞಾವಿವರ್ಧನಕ್ಕಾಗಿ ಪ್ರಾಜ್ಞನು ಮೊದಲು ಮಾಡಬೇಕು.

೨೭. ಸರ್ವ ದುಃಖಗಳಿಗೂ ಅವಧಿ (ಕೊಟ್ಟಕೊನೆ) ಯು ಈ ಪ್ರಜ್ಞಾಮಾಂದ್ಯವು. ಇದು ಆಪತ್ತುಗಳ ಭಾಂಡಾಗಾರವು, ಸಂಸಾರವೃಕ್ಷದ ಬೀಜವು. ಆದರಿಂದ ಈ ಪ್ರಜ್ಞಾಶೂನ್ಯತೆಯನ್ನು ನಾಶಮಾಡಬೇಕು.

ಸ್ವರ್ಗಾದ್ಯದ್ಯಚ್ಚ ಪಾತಾಲಾದ್ರಾಜ್ಯಾದ್ಯತ್ಸಮವಾಪ್ಯತೇ ।
ತತ್ಸಮಾಸಾದ್ಯತೇ ಸರ್ವಂ ಪ್ರಜ್ಞಾಕೋಶಾನ್ಮಹಾತ್ಮನಾ || ೨೮ ||

ಪ್ರಜ್ಞಯೋತ್ತೀರ್ಯತೇ ಭೀಮಾತ್ತಸ್ಮಾತ್ಸಂಸಾರಸಾಗರಾತ್ ।
ನ ದಾನೈರ್ನ ಚ ವಾ ತೀರ್ಥೈಸ್ತಪಸಾ ನಚ ರಾಘವ || ೨೯ ||

ಯತ್ಪ್ರಾಪ್ತಾಃ ಸಂಪದಂ ದೈವೀಮಪಿ ಭೂಮಿಚರಾನರಾಃ ।
ಪ್ರಜ್ಞಾಪುಣ್ಯಲತಾಯಾಸ್ತತ್ಫಲಂ ಸ್ವಾದು ಸಮುತ್ಥಿತಂ || ೩೦ ||

---

೨೮. ಸ್ವರ್ಗದಿಂದಲಾಗಲಿ, ಪಾತಾಳದಿಂದ ಆಗಲಿ, ರಾಜ್ಯದಿಂದಲೇ ಆಗಲಿ, ಏನೇನನ್ನು ಪಡೆಯಬಹುದೋ ಅವಷ್ಟನ್ನೂ ಮಹಾತ್ಮನು ಪ್ರಜ್ಞಾಬಲವೊಂದರಿಂದಲೇ ಸಂಪಾದಿಸುವನು.

೨೯. ಭಯಂಕರವಾದ ಈ ಸಂಸಾರಸಾಗರವನ್ನು, ಎಲೈ ರಾಘವನೆ, ಪ್ರಜ್ಞಾಬಲವೊಂದರಿಂದ ದಾಟಬಹುದಲ್ಲದೆ, ದಾನ, ತೀರ್ಥಯಾತ್ರೆ, ತಪಸ್ಸು ಇವು ಯಾವುದರಿಂದಲೂ ಸಾಧ್ಯವೇ ಇಲ್ಲ.

೩೦. ಭೂಮಿಯಲ್ಲಿರುವ ಮಾನವರು ದೇವಯೋಗ್ಯವಾದ ಸಂಪತ್ತನ್ನು (ದೇವತ್ವವನ್ನು) ಪಡೆದರೆನ್ನುವುದು ಯಾವುದುಂಟೋ ಅದು ಕೂಡ ಪ್ರಜ್ಞಾ ಎಂಬ ಪುಣ್ಯಲತೆಯಲ್ಲಿ ಉದಯಿಸಿದ ಮಧುರ ಫಲವು.

ಶ್ರೀ ನಿಜಗುಣ ಶಿವಯೋಗಿಗಳು ವಿವೇಕ ಚಿಂತಾಮಣಿ (ಆರನೆಯ ಪ್ರಕರಣ) ಯಲ್ಲಿ ಹೇಳಿರುವುದನ್ನು ಚಿಂತಿಸಿ :—

(ದೇವತೆಗಳಲ್ಲಿ ಅಜಾನಜಾನ ದೇವತೆಗಳು, ಕರ್ಮದೇವತೆಗಳು, ಎಂಬ ಎರಡು ಭೇದಗಳಿವೆ. ಸೃಷ್ಟಿ ಪ್ರಾರಂಭದಲ್ಲಿಯೇ ಆ ಸ್ಥಳದಲ್ಲಿ ಸೇರಿದವರು ಅಜಾನಜಾನ ದೇವತೆಗಳು ಎನಿಸುವರು. ಅವರೆಲ್ಲರೂ ಮಹೇಶ್ವರನ ಪ್ರಭುಶಕ್ತಿಲೇಶದಿಂದೊಡಗೂಡಿ ಮಾಹೇಶ್ವರರೆನಿಸಿ ಶಾಂಭವ ವ್ರತಬಲದಿಂದ ಸಿದ್ಧಿಗಳನ್ನು ಪಡೆದು

ಪ್ರಜ್ಞಯಾ ನಖರಾಲೂನ ಮತ್ತವಾರಣಯೂಥಪಾಃ |
ಜಂಬುಕೈರ್ವಿಜಿತಾಃ ಸಿಂಹಾಃ ಸಿಂಹೈರ್ಹರಿಣಕಾ ಇವ || ೩೧ ||

ಸಾಮಾನ್ಯೈರಪಿ ಭೂಪತ್ವಂ ಪ್ರಾಪ್ತಂ ಪ್ರಜ್ಞಾವಶಾನ್ನರೈಃ |
ಸ್ವರ್ಗಾಪವರ್ಗ ಯೋಗ್ಯತ್ವಂ ಪ್ರಾಜ್ಞಸ್ಯೈವೇಹ ದೃಶ್ಯತೇ || ೩೨ ||

ಯಜ್ಞಾದಿಗಳಿಂದ ತಮ್ಮನ್ನು ತೃಪ್ತಿಗೊಳಿಸುವ ಜನರಿಗೆ ಇಷ್ಟಾರ್ಥಗಳನ್ನು ಕೊಟ್ಟು ರಕ್ಷಿಸುವ ಸಾಮರ್ಥ್ಯವನ್ನು ಪಡೆದಿರುವರು. ಆಧಿಕಾರಿಕರೆನಿಸಿದ ಈ ದೇವತೆಗಳು ಮೂವತ್ತು ಮೂರು ಕೋಟಿ ಮಂದಿ. ಇವರು ವೇದಮಂತ್ರ ದೇವತೆಗಳಾಗಿರುವರು. (ಇಂತಹ) ಇಂದ್ರಾಗ್ನಿ ಬೃಹಸ್ಪತಿ ಮೊದಲಾದವರು ಅಜಾನಜಾನ ದೇವತೆಗಳು ಎಂದು ತಿಳಿಯಬೇಕು.

ಭೂಲೋಕದಲ್ಲಿ ಮನುಷ್ಯರಾಗಿ ಹುಟ್ಟಿ ಬಳಿಕ ಶ್ರೌತ ಸ್ಮಾರ್ತ ಕರ್ಮನಿಷ್ಠೆಯಿಂದ ಕೃಛ್ರಚಾಂದ್ರಾಯಣಾದಿ ವ್ರತಾಚರಣಧುರೀಣರಾಗಿ ಸದಾಚಾರಸಂಪತ್ತಿಯನ್ನು ಪಡೆದು ಪಾಪಕ್ಕೆಳಸದೆ ಪರಿಶುದ್ಧರಾಗಿ ಸ್ನಾನ, ದಾನ, ಜಪ, ಹೋಮ, ಸಂಧ್ಯಾ, ತರ್ಪಣ, ಸಪರ್ಯೆ, ದೇವತಾರ್ಚನೆ, ಬಲಿ, ಅಧ್ಯಯನ, ಧರ್ಮಾಚರಣೆ, ಧ್ಯಾನ, ಯೋಗ, ಯುಕ್ತರಾಗಿ ಅಗ್ನಿಷ್ಟೋಮ ಅಪ್ತೋರ್ಯಾಮ ಮೊದಲಾದ ಕರ್ಮಗಳಿಂದಲೂ ಇಷ್ಟಾಪೂರ್ತಾದಿ ಕಾಮ್ಯಗಳಿಂದಲೂ ಪುಣ್ಯವನ್ನು ಪಡೆದವರೇ ಕರ್ಮದೇವತೆಗಳೆನಿಸಿ ವಿಮಾನದಿಂದ ಸ್ವರ್ಗವನ್ನೈದಿ ನಿಜಪುಣ್ಯವಾಸನೆಯಿರುವ ಪರ್ಯಂತ ಅಜಾನಜಾನರೊಡನೆ ಸಮಾನಸುಖ ಭಾಗಿಗಳಾಗಿ ಸುಕೃತಾನುರೂಪಭೋಗವನ್ನು ಪಡೆವರು.)

೩೧. ತಮ್ಮ ಉಗುರಿನ ತುದಿಯಿಂದಲೇ ಮತ್ತ ಗಜೇಂದ್ರರನ್ನು ಸೀಳಿ ಹಾಕುವ ಸಿಂಹಗಳನ್ನೂ ಕೂಡ, ಸಿಂಹಗಳು ಜಿಂಕೆಯನ್ನು ಗೆಲ್ಲುವಂತೆ ನರಿಗಳು ಗೆಲ್ಲುವುದು ಪ್ರಜ್ಞಾಬಲದಿಂದಲೇ !

(ಪಂಚತಂತ್ರದ ಕಥೆಯನ್ನು ಚಿಂತಿಸಿ.)

೩೨. ಸಾಮಾನ್ಯರಾದ ಮನುಷ್ಯರೂ ಕೂಡ ತಮ್ಮ ತಮ್ಮ ಪ್ರಜ್ಞಾಬಲದಿಂದ ದೊರೆತನವನ್ನು ಪಡೆದಿರುವರು. ಸ್ವರ್ಗ, ಮೋಕ್ಷಗಳನ್ನು ಕೂಡ ಪ್ರಾಜ್ಞರಾದ ಮಾನವರು ಸಾಧಿಸುವರು ಎಂಬುದು ಪ್ರತ್ಯಕ್ಷವಾಗಿರುವುದು.

ಪ್ರಜ್ಞಯಾ ವಾದಿನಃ ಸರ್ವೇ ಸ್ವವಿಕಲ್ಪವಿಲಾಸಿನಃ |
ಜಯಂತಿ ಸುಭಟಪ್ರಖ್ಯಾನ್ನರಾನಪ್ಯತಿಭೀರವಃ || ೩೩ ||

ಚಿಂತಾಮಣಿರಿಯಂ ಪ್ರಜ್ಞಾ ಹೃತ್ಕೋಶಸ್ಥಾ ವಿವೇಕಿನಃ |
ಫಲಂ ಕಲ್ಪಲತೇವೈಷಾ ಚಿಂತಿತಂ ಸಂಪ್ರಯಚ್ಛತಿ || ೩೪ ||

ಭವ್ಯಸ್ತರತಿ ಸಂಸಾರಂ ಪ್ರಜ್ಞಯಾಽಪೋಹ್ಯತೇಽಧಮಃ |
ಶಿಕ್ಷಿತಃ ಪಾರಮಾಪ್ನೋತಿ ನಾವಾ ನಾಪ್ನೋತ್ಯಶಿಕ್ಷಿತಃ || ೩೫ ||

ಧೀಃ ಸಂಮ್ಯಗ್ಯೋಜಿತಾ ಪಾರಮಸಮ್ಯಗ್ಯೋಜಿತಾಽಽಪದಂ |
ನರಂ ನಯತಿ ಸಂಸಾರೇ ಭ್ರಮಂತೀ ನೌರಿವಾರ್ಣವೇ || ೩೬ ||

---

೩೩. ಮಹಾಭಟರಂತೆ ಅಜೇಯರಾಗಿರುವ ಪ್ರತಿಪಕ್ಷ ವಿದ್ವಾಂಸರನ್ನು ಕೂಡ, ಅತಿ ಭೀರುಗಳಾದ ವಾದಿಗಳು ನಾನಾ ವಿಕಲ್ಪಗಳನ್ನುಂಟುಮಾಡುತ್ತ ಗೆಲ್ಲುವುದೂ ತಮ್ಮ ಪ್ರಜ್ಞಾಬಲದಿಂದಲೇ !

೩೪. ಈ ಪ್ರಜ್ಞೆಯೆಂಬುದು ವಿವೇಕಿಯ ಹೃದಯದಲ್ಲಿರುವ ಚಿಂತಾಮಣಿಯು. ಈ ಪ್ರಜ್ಞಾಕಲ್ಪಲತೆಯು ಬೇಕೆಂದು ಕೋರಿದರೆ ಯಾವ ಫಲವನ್ನೇ ಆಗಲಿ ಕೊಡುವುದು.

೩೫. ಉತ್ತಮನು ಈ ಪ್ರಜ್ಞೆಯನ್ನು ಆಶ್ರಯಿಸಿ ಸಂಸಾರವನ್ನು ದಾಟುವನು. ಅಧಮನು ಪ್ರಜ್ಞೆಯ ಬಲವಿಲ್ಲದೆ ಈ ಸಂಸಾರ ವಾಹಿನಿಯಲ್ಲಿ ಕೊಚ್ಚಿ ಹೋಗುವನು. ನಾವೆಯಿಂದ ನದಿಯನ್ನು ದಾಟಬೇಕಾದರೆ ಶಿಕ್ಷಿತನಿಗೆ ಸಾಧ್ಯವೇ ಹೊರತು ಅಶಿಕ್ಷಿತನಿಗೆಂತು ಸಾಧ್ಯವು ?

೩೬. ಸಾಗರದಲ್ಲಿ ಅಲೆಯುತ್ತಿರುವ ನಾವೆಯಂತೆ ಬುದ್ಧಿಯೂ ಸಂಸಾರ ಸಾಗರದಲ್ಲಿ ಸುತ್ತುತ್ತಿರುವುದು. ಇದನ್ನು ಸರಿಯಾಗಿ ನಿಯೋಜಿಸಿದರೆ, ಸಂಸಾರವನ್ನು ದಾಟಿಸುವುದು. ತಪ್ಪಾಗಿ ನಿಯೋಗಿಸಿದರೆ ಇಲ್ಲದ ಆಪತ್ತುಗಳನ್ನು ತಂದೊಡ್ಡುವುದು.

ವಿವೇಕಿನಮಸಂಮೂಢಂ ಪ್ರಾಜ್ಞಮಾಶಾಗಣೋತ್ಥಿತಾಃ |
ದೋಷಾ ನ ಪರಿಬಾಧಂತೇ ಸನ್ನದ್ಧಮಿವ ಸಾಯಕಾಃ || ೩೭ ||

ಪ್ರಜ್ಞಯೇಹ ಜಗತ್ಸರ್ವಂ ಸಮ್ಯಗೇವಾಂಗ ದೃಶ್ಯತೇ |
ಸಮ್ಯಗ್ದರ್ಶನಮಾಯಾಂತಿ ನಾಪದೋ ನ ಚ ಸಂಪದಃ || ೩೮ ||

ಪಿಧಾನಂ ಪರಮಾರ್ಕಸ್ಯ ಜಡಾತ್ಮಾ ವಿತತೋಽಸಿತಃ |
ಅಹಂಕಾರಾಂಬುದೋ ಮತ್ತಃ ಪ್ರಜ್ಞಾವಾತೇನ ಬಾಧ್ಯತೇ || ೩೯ ||

ಪರಮತುಲ ಮುಪೈತುಮಿಚ್ಛತೋಚ್ಚೈಃ |
ಪ್ರಥಮಮಿಯಂ ಮತಿರೇವ ಲಾಲನೀಯಾ ||

---

೩೭. ಭದ್ರವಾದ ಕವಚವನ್ನು ತೊಟ್ಟಿರುವವನನ್ನು ಬಾಣಗಳು ಹೇಗೆ ಬಾಧಿಸಲಾರವೋ ಹಾಗೆಯೇ ಪ್ರಜ್ಞೆಯನ್ನು ಆಶ್ರಯಿಸಿರುವ ವಿವೇಕಿಯೂ ಅಸಂಮೂಢನೂ ಆದವನನ್ನು ನೂರಾರು ಆಸೆಗಳಿಂದ ಹುಟ್ಟಿದ ದೋಷಗಳು ಬಾಧಿಸಲಾರವು.

೩೮. ಪ್ರಜ್ಞಾವಂತನಿಗೆ ಈ ಜಗತ್ತೆಲ್ಲವೂ ಚೆನ್ನಾಗಿ ತಿಳಿದು ಸಮ್ಯಗ್ದರ್ಶನವಾಗುವುದು. ಅಂತಹ ಸಮ್ಯಗ್ದರ್ಶನವುಳ್ಳವನಿಗೆ ಎಲ್ಲಿಯೂ ಯಾವಾಗಲೂ ಸಂಪತ್ತು ವಿಪತ್ತುಗಳಿಂದ ಬಾಧೆಯಿಲ್ಲ.

೩೯. ಅಹಂಕಾರವೆಂಬ ದೊಡ್ಡದೊಂದು ಮೇಘವುಂಟು. ಇದು ಶುದ್ಧವಾಗಿ ಜಡವಾದುದು. ಚೆನ್ನಾಗಿ ಹರಡಿರುವುದು. ಕಪ್ಪಗಿರುವುದು. ಪರಮಾತ್ಮನೆಂಬ ಸೂರ್ಯನನ್ನು ಮುಚ್ಚಿಬಿಟ್ಟಿರುವುದು. ಇಂತಹ ಮಹಾ ಮೇಘವನ್ನೂ ಕೂಡ ಪ್ರಜ್ಞೆಯೆಂಬ ಗಾಳಿಯು ಹಾರಿಸಿಬಿಡುವುದು.

೪೦. ಅಸದೃಶವಾದ ಪರಮ ಪದವನ್ನು ಹೊಂದಲೇಬೇಕೆಂದು ಅಪೇಕ್ಷಿಸತಕ್ಕ ಪುರುಷನು ಈ ಪ್ರಜ್ಞೆಯನ್ನು ಮೊದಲು ಆದರಿಸಬೇಕು. ಬೆಳೆಯನ್ನು ಪಡೆಯಬೇಕೆಂಬ ರೈತನು ಮೊದಲು ನೆಲವನ್ನು ಉಳಬೇಕು ತಾನೇ ?

ಫಲಮಭಿಲಷತಾ ಕೃಷೀವಲೇನ ।
ಪ್ರಥಮತರಂ ನನು ಕೃಷ್ಯತೇ ಧರೈವ ॥ ४० ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ಪ್ರಜ್ಞಾಮಾಹಾತ್ಮ್ಯಂ" ನಾಮ ದ್ವಾದಶಃ ಸರ್ಗಃ

(ಹಿಂದೆ ವೈರಾಗ್ಯ ಪ್ರಕರಣದಲ್ಲಿ ಪೌರುಷವನ್ನು ಕುರಿತು ಹೇಳಿರುವುದನ್ನು ಇಲ್ಲಿ ಒಮ್ಮೆ ಚಿಂತಿಸಿ.)

ಇಂತಿದು ಆರ್ಷವೂ ವಾಲ್ಮೀಕಿಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ಪ್ರಜ್ಞಾಮಾಹಾತ್ಮ್ಯಂ" ಎಂಬ ಹನ್ನೆರಡನೆಯ ಸರ್ಗವು.

ತ್ರಯೋದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಏವಂ ಜನಕವದ್ರಾಮ ವಿಚಾರ್ಯಾತ್ಮಾನಮಾತ್ಮನಾ ।
ಪದಂ ವಿದಿತವೇದ್ಯಾನಾಮವಿಘ್ನೇನಾಧಿಗಚ್ಛತಿ ॥ ೧ ॥

ಯೇ ಹಿ ಪಾಶ್ಚಾತ್ಯಜನ್ಮಾನಃ ಪ್ರಾಜ್ಞಾ ರಾಜಸಸಾತ್ವಿಕಾಃ ॥
ಪ್ರಾಪ್ನುವಂತಿ ಸ್ವಯಂ ಪ್ರಾಪ್ಯಂ ತೇ ಜನಾ ಜನಕಾ ಇವ ॥ ೨ ॥

ತಾವತ್ತಾವದ್ವಿಜಿತ್ಯಾರೀನಿಂದ್ರಿಯಾಖ್ಯಾನ್ಪುನಃಪುನಃ ।
ಯಾವದಾತ್ಮಾತ್ಮನೈವಾಯಮಾತ್ಮನ್ಯೇವ ಪ್ರಸೀದತಿ ॥ ೩ ॥

ಹದಿಮೂರನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಹೀಗೆ, ಜನಕ ಮಹಾರಾಜನ ಹಾಗೆ, ನಿನ್ನಲ್ಲಿಯೇ ನೀನೇ ಆತ್ಮವನ್ನು ಕುರಿತು ವಿಚಾರ ಮಾಡುತ್ತಾ ಇದ್ದರೆ, ಬ್ರಹ್ಮಜ್ಞರಾದವರ ಪದವಿಯನ್ನು ನೀನೂ ನಿರ್ವಿಘ್ನವಾಗಿ ಪಡೆಯುವೆ.

೨. ಅಂತಿಮ ಜನ್ಮವನ್ನು ಪಡೆದಿರುವ ರಾಜಸ ಸಾತ್ವಿಕ ಪ್ರಾಜ್ಞರೂ ಆದ ಜನರು ಜನಕಮಹಾರಾಜನಂತೆ ಪ್ರಾಪ್ಯವಾದ ಆ ಪರಮ ಪದವನ್ನು ತಾವಾಗಿಯೇ ಪಡೆಯುವರು.

೩. ಆಗಾಗ ವೈರಿಯುದೆ ಇಂದ್ರಿಯಗಳೆಂಬ ಶತ್ರುಗಳನ್ನು ಮತ್ತೆ ಮತ್ತೆ ಜಯಿಸುತ್ತ, ತನ್ನಲ್ಲಿಯೇ ತಾನಾಗಿಯೇ ವಿಚಾರ ಮಾಡುತ್ತ ಮಾಡುತ್ತ ಆತ್ಮನು ಪ್ರಸನ್ನನಾಗಿರುವಂತೆ ಮಾಡಿಕೊಂಡಿರಬೇಕು.

ಪ್ರಸನ್ನೇ ಸರ್ವಗೇ ದೇವೇ ದೇವೇಶೇ ಪರಮಾತ್ಮನಿ ।
ಸ್ವಯಮಾಲೋಕಿತೇ ಸರ್ವಾಃ ಕ್ಷೀಯಂತೇ ದುಃಖದೃಷ್ಟಯಃ　　　|| ೪ ||

ಮುಷ್ಟಯೋ ಮೋಹಬೀಜಾನಾಂ ವೃಷ್ಟಯೋ ವಿವಿಧಾಪದಾಂ ।
ಕುದೃಷ್ಟಯಃ ಕ್ಷಯಂ ಯಾಂತಿ ದೃಷ್ಟೇ ತಸ್ಮಿನ್ಪರಾವರೇ　　　|| ೫ ||

ಸದಾ ಜನಕವದ್ರಾಮ ಸರ್ವಾರಂಭವದಾತ್ಮನಾ ।
ಪ್ರಜ್ಞಯಾತ್ಮಾನಮಾಲಕ್ಷ್ಯ ಲಕ್ಷ್ಮೀವಾನುತ್ತಮೋ ಭವ　　　|| ೬ ||

---

೪. ಹೀಗೆ ಜ್ಯೋತಿಃಸ್ವರೂಪನಾಗಿ ಸರ್ವಗತನಾಗಿರುವ ದೇವೇಶ್ವರನಾದ ಪರಮಾತ್ಮನು ಪ್ರಸನ್ನನಾಗಿ ದೃಷ್ಟಿಗೋಚರನಾಗಲು ಸರ್ವದುಃಖಗಳೂ ಕ್ಷಯವಾಗುವುವು.

೫. ಆ ಪರಾತ್ಪರ ವಸ್ತುವಿನ ದರ್ಶನವಾದರೆ, ಮೋಹಬೀಜಗಳ ಮೂಟೆಗಳೂ ನಾನಾ ಆಪತ್ತುಗಳಿಗೆ ಆಕರಗಳೂ ಆದ (ಅಹಂಕಾರ ಮಮಕಾರ ಆತ್ಮಕಪಾದ) ಕುದೃಷ್ಟಿಗಳೆಲ್ಲವೂ ಕ್ಷಯವಾಗುವುವು.

(ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ । ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ || ೮ || ೨-೨-ಮುಂಡಕ.

ಯದಾ ಸರ್ವೇ ಪ್ರಮುಚ್ಯಂತೇ ಕಾಮಾಯೇಽಸ್ಯಹೃದಿಶ್ರಿತಾಃ ।
ಅಥಮರ್ತ್ಯೋಽಮೃತೋಭವತಿ ಅತ್ರ ಬ್ರಹ್ಮ ಸಮಶ್ನುತೇ　　　|| ೧೪ ||

ಯದಾ ಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹ ಗ್ರಂಥಯಃ ।
ಅಥಮರ್ತ್ಯೋಽಮೃತೋಭವತಿ ಏತಾವದನುಶಾಸನಂ　　　|| ೧೫ ||

೬-೨-ಕಠೋಪನಿಷತ್.

ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ||　　　—ಗೀತಾ

೬. ರಾಮ, ಆ ಜನಕಮಹಾರಾಜನಂತೆ ನೀನೂ ಪ್ರಜ್ಞೆಯನ್ನು ಆಶ್ರಯಿಸಿ, ನಿನ್ನ ಅನುಭವದಿಂದ ನೀನಾಗಿಯೇ ಜಗದಾದಿ ಸರ್ವಕಾರ್ಯಗಳಿಗೂ ಹೇತುವಾದ ಆತ್ಮನನ್ನು ಸದಾ ದರ್ಶನ ಮಾಡುತ್ತ ಇದ್ದು ಸಂಪನ್ನನೂ ಉತ್ತಮನೂ ಆಗು.

ನಿತ್ಯಮಂತರ್ವಿಚಾರಸ್ಯ ಪಶ್ಯತಶ್ಚಂಚಲಂ ಜಗತ್ ।
ಜನಕಸ್ಯೇವ ಕಾಲೇನ ಸ್ವಯಮಾತ್ಮಾ ಪ್ರಸೀದತಿ ॥ ೭ ॥

ನ ದೈವಂ ನ ಚ ಕರ್ಮಾಣಿ ನ ಧನಾನಿ ನ ಬಾಂಧವಾಃ ।
ಶರಣಂ ಭವಭೀತಾನಾಂ ಸ್ವಪ್ರಯತ್ನಾದೃತೇ ನೃಣಾಂ ॥ ೮ ॥

ಯೇ ದೈವನಿಷ್ಠಾಃ ಕೃತ್ಯಾದೌ ಕುವಿಕಲ್ಪಪರಾಯಣಾಃ ।
ತೇಷಾಂ ಮಂದಾ ಮತಿಸ್ತಾತ ನಾನುಗಮ್ಯಾ ವಿನಾಶಿನೀ ॥ ೯ ॥

ವಿವೇಕಂ ಪರಮಾಶ್ರಿತ್ಯ ವಿಲೋಕ್ಯಾತ್ಮಾನಮಾತ್ಮನಾ ।
ಧಿಯಾ ವಿರಾಗೋದ್ಧುರಯಾ ಸಂಸಾರಜಲಧಿಂ ತರೇತ್ ॥ ೧೦ ॥

---

೭. ನಿತ್ಯವೂ ತನ್ನಲ್ಲಿಯೇ ವಿಚಾರಮಾಡಿಕೊಳ್ಳುತ್ತ, ಜಗತ್ತಿನ ಚಂಚಲ ಸ್ಥಿತಿಯನ್ನು ಪರಿಭಾವಿಸುತ್ತಿರುವವನಿಗೆ ಜನಕಮಹಾರಾಜನಿಗೆ ಆದಂತೆ, ಸಕಾಲದಲ್ಲಿ ಆತ್ಮನು ಪ್ರಸನ್ನನಾಗುವನು.

(ಯಮೇವೈಷ ವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಂ ॥ ೨–೧–ಕಠ.)

೮. ಸಂಸಾರ ಭಯಭೀತರಾಗಿರುವ ಮನುಷ್ಯರಿಗೆ ಸ್ವಪ್ರಯತ್ನ ಮಾತ್ರವೇ ಶರಣವಲ್ಲದೆ, ಇನ್ನುಳಿದ ದೈವ, ಕರ್ಮ, ಧನ, ಬಂಧುಗಳು ಮೊದಲಾದವರು ಯಾರೂ ಇಲ್ಲ.

೯. ವತ್ಸ, ಯಾರು ದೈವವಲ್ಲದೆ ಇನ್ನು ಏನೂ ಇಲ್ಲವೆಂದುಕೊಂಡು ಕಾರ್ಯ ಪರಾಯಣರಾಗಬೇಕಾದ ಸಮಯದಲ್ಲಿ ಹಾಗೋ ಹೀಗೋ ಎಂದು ನಾನಾ ವಿಧವಾಗಿ ವಿಕಲ್ಪಮಾಡುತ್ತಿರುವರೋ, ಅಂಥವರ ವಿನಾಶಕರವಾದ ಮೂಢಮತಿಯನ್ನು ಅನುಸರಿಸಬಾರದು.

೧೦. ಪ್ರಾಜ್ಞನಾದವನು ಶ್ರೇಷ್ಠವಾದ ವಿವೇಕವನ್ನು ಅವಲಂಬಿಸಿ, ವೈರಾಗ್ಯ ಸಂಪನ್ನವಾದ ಬುದ್ಧಿಯಿಂದ ಆತ್ಮಸ್ವರೂಪವನ್ನು ಸ್ವತಂತ್ರ ವಿಚಾರದಿಂದ ನೋಡಿಕೊಂಡು ಸಂಸಾರ ಜಲಧಿಯನ್ನು ದಾಟಬೇಕು.

ಏಷಾ ಸಾ ಕಥಿತಾ ರಾಮ ನಭಃ ಫಲನಿಪಾತವತ್ ।
ಸುಖದಾ ಜ್ಞಾನಸಂಪ್ರಾಪ್ತಿರಜ್ಞಾನತರುನಾಶಿನೀ ॥ ೧೧ ॥

ಜನಕಸ್ಯೇಹ ಸದ್ಬುದ್ಧೇಃ ಸ್ವಯಮೇವ ವಿಲೋಕಿನಃ ।
ವಿಕಾಸಮೇತ್ಯಯಂ ದೇಹೀ ದೇವಃ ಪ್ರಾತರಿವಾಂಬುಜಂ ॥ ೧೨ ॥

ಸಂಸಾರಮನನಂ ಚಿತ್ರಂ ವಿಚಾರೇಣ ವಿಲೀಯತೇ ।
ಗಲದ್ವಶೀಕೃತಸ್ಪರ್ಶಾವಮಾತಪೇನ ಹಿಮಂ ಯಥಾ ॥ ೧೩ ॥

ಅಯಮೇವಾಹಮಿತ್ಯಸ್ಯಾ ನಿಶಾಯಾ ಉದಿತೇ ಕ್ಷಯೇ ।
ಸ್ವಯಂ ಸರ್ವಗತಃ ಸ್ಫಾರಃ ಸ್ವಲೋಕಃ ಸಂಪ್ರವರ್ತತೇ ॥ ೧೪ ॥

---

೧೧. ಎಲೈ ರಾಮನೆ, ಹೀಗೆ ಆಕಾಶದಿಂದ ಅಕಸ್ಮಾತ್ ಬಿದ್ದ ಹಣ್ಣಿನಂತೆ ಆಕಸ್ಮಿಕವಾಗಿ ಸಂಭವಿಸಿ, ಅಜ್ಞಾನವೆಂಬ ಮರವನ್ನು ಉರುಳಿಸುವ ಮತ್ತು ಆತ್ಮ ಸೌಖ್ಯವನ್ನೇ ಕೊಡುವ ಜ್ಞಾನಪ್ರಾಪ್ತಿಯ ಕಥೆಯು ಇದು.

೧೨. ಜನಕರಾಜನಂತೆ ಸ್ವಯಂ ವಿಚಾರಮಾಡಿ ನೋಡಬಲ್ಲ ಸದ್ಬುದ್ಧಿವಂತನ ದೇಹದಲ್ಲಿ, ಬೆಳಗಿನ ಹೊತ್ತು ಅರಳುವ ಅಂಬುಜದಂತೆ, ಪರಮಾತ್ಮನು ಸ್ವಯಂ ಪ್ರಕಟನಾಗುವನು.

೧೩. ಸೂರ್ಯಕಿರಣವು ತಗುಲಿದ ಹಿಮವು ಶೈತ್ಯವನ್ನು ಬಿಟ್ಟು ಕರಗಿ ನೀರಾಗುವಂತೆ ಚಿತ್ರವಿಚಿತ್ರವಾದ ಈ ಸಂಸಾರ ಭಾವನೆಯೆಲ್ಲವೂ ವಿಚಾರದಿಂದ ನಷ್ಟವಾಗುವುದು.

೧೪. ದೇಹವೇ ನಾನು ಎಂದುಕೊಳ್ಳುವ ದೇಹಾತ್ಮಭಾವನೆಯೆಂಬ ರಾತ್ರಿಯು ಕ್ಷಯವಾದರೆ, ಆತ್ಮಜ್ಞಾನವೆಂಬ ಬೆಳಕು ತಾನಾಗಿಯೇ ಹರಡುವುದು.

ಅಯಮೇವಾಹಮಿತ್ಯಸ್ಮಿನ್ ಸಂಕೋಚೇ ವಿಲಯಂ ಗತೇ |
ಅನಂತಭುವನವ್ಯಾಪೀ ವಿಸ್ತಾರ ಉಪಜಾಯತೇ || ೧೫ ||

ಜನಕೇನ ಪರಿತ್ಯಕ್ತಾ ಯಥಾಹಂಕಾರವಾಸನಾ |
ತಥಾ ತ್ವಮಪಿ ಸದ್ಬುದ್ಧೇ ವಿಚಾರ್ಯಾಂತಃ ಪರಿತ್ಯಜ || ೧೬ ||

ಅಹಂಕಾರಾಂಬುದೇ ಕ್ಷೀಣೇ ಚಿದ್ವ್ಯೋಮ್ನಿ ವಿಮಲೇ ತತೇ |
ನೂನಂ ಸಂಪ್ರೌಢತಾಮೇತಿ ಸ್ವಾಲೋಕೋ ಭಾಸ್ಕರಃ ಪರಃ || ೧೭ ||

ಏತಾವದೇವಾತಿತಮೋ ಯದಹಂಭಾವಭಾವನಂ |
ತಸ್ಮಿಂಶ್ಚ ಶಮಮಾನೀತೇ ಪ್ರಕಾಶ ಉಪಜಾಯತೇ || ೧೮ ||

---

೧೫. ದೇಹಾತ್ಮ ಭಾವನೆಯೆಂಬ ಸಣ್ಣತನವು ವಿನಾಶವಾದರೆ, ಅನಂತಾನಂತ ಭುವನಗಳನ್ನೆಲ್ಲ ವ್ಯಾಪಿಸಿಕೊಂಡಿರುವ ವಿಸ್ತಾರ(ದೊಡ್ಡತನ)ವು ತಲೆದೋರುವುದು.

೧೬. ಜನಕನು ಹೇಗೆ ದೇಹಾತ್ಮವಾದವನ್ನು ಬಿಟ್ಟು ಕೃತಾರ್ಥನಾದನೋ ಹಾಗೆಯೇ, ಎಲೆ ಸದ್ಬುದ್ಧಿಯೇ, ನೀನೂ ವಿಚಾರಮಾಡಿ ಮಾಡಿ, ದೇಹಾತ್ಮಭಾವನೆಯನ್ನು ಬಿಡುವನಾಗು.

೧೭. ಅಹಂಕಾರವೆಂಬ ಮೋಡವು ಅಡಗಿಹೋಗಿ, ಚಿತ್ತೆಂಬ ಆಕಾಶವು ನಿರ್ಮಲವಾಗಲು, ಆತ್ಮಜ್ಞಾನವೆಂಬ ಆದಿತ್ಯನು ಚೆನ್ನಾಗಿ ಬೆಳಗುವನು.

೧೮. ದೇಹವೇ ನಾನೆಂಬ ಅಹಂಕಾರವು ಯಾವುದುಂಟೋ ಅದೇ ಅತಿತಮಸ್ಸೆನಿಸಿಕೊಳ್ಳುವುದು. ಅದು ಶಾಂತಿಯಾಗುತ್ತಿದ್ದ ಹಾಗೆಯೇ ಪ್ರಕಾಶವು ತಲೆದೋರುವುದು.

ನಾಹಮಸ್ತಿ ನ ಚಾನ್ಯೋಽಸ್ತಿ ನ ಚ ನಾಸ್ತೀತಿ ಭಾವಿತಂ ।
ಮನಃ ಪ್ರಶಾಂತಿಮಾಯಾತಂ ನೋಪಾದೇಯೇಷು ಮಜ್ಜತಿ　　॥ ೧೯ ॥

ಉಪಾದೇಯಾನುಪತನಂ ಹೇಯೈಕಾಂತವಿವರ್ಜನಂ ।
ಯದೇತನ್ಮನಸೋ ರಾಮ ತದ್ಬಂಧಂ ವಿದ್ಧಿ ನೇತರತ್　　॥ ೨೦ ॥

ಮಾಖೇದಂ ಭಜ ಹೇಯೇಷು ನೋಪಾದೇಯಪರೋ ಭವ ।
ಹೇಯಾದೇಯದೃಶೌ ತ್ಯಕ್ತ್ವಾ ಶೇಷಸ್ಥಃ ಸ್ವಚ್ಛತಾಂ ವ್ರಜ　　॥ ೨೧ ॥

ಯೇಷಾಮಿದಮುಪಾದೇಯ ಮಿದಂ ಹೇಯಮಿತಿ ಸ್ಥಿತಿಃ ।
ವಿಲೀನಾ ತೇ ನ ವಾಂಛಂತಿ ನ ತ್ಯಜಂತೀಹ ಕಿಂಚನ　　॥ ೨೨ ॥

---

೧೯. ಈ ಅಹಂ ಎಂಬುದು ಪ್ರತ್ಯೇಕವಾಗಿ ಒಂದಿಲ್ಲ. ಅದಲ್ಲದೆ (ಈ ಸಂಸಾರದಲ್ಲಿ) ಇನ್ನು ಯಾವುದೂ ಇಲ್ಲ. ಹಾಗೆಂದು ಅದು ಇಲ್ಲವೆಂದೂ ಇಲ್ಲ. ಇದನ್ನು ತಿಳಿದುಕೊಂಡ ಮನಸ್ಸು ಪ್ರಶಾಂತಿಯನ್ನು ಹೊಂದುವುದು. "ವಿಷಯಗಳೇ ದೊಡ್ಡವು. ಅವನ್ನು ಸಂಪಾದಿಸಬೇಕು" ಎಂದುಕೊಂಡು ಅವುಗಳನ್ನು ಹಿಂಬಾಲಿಸಿಕೊಂಡು ಹೋಗುವುದಿಲ್ಲ.

೨೦. ರಾಮ, ತಾನು ಉಪಾದೇಯವೆಂದುಕೊಂಡುದನ್ನು ಆದರಿಸುವುದು, ತನಗೆ ಬೇಡವೆಂದವುಗಳನ್ನು ದ್ವೇಷಿಸುವುದು, ಇದಲ್ಲದೆ ಬೇರೆಯಾದ ಬಂಧನವು ಇನ್ನು ಯಾವುದೂ ಇಲ್ಲ.

೨೧. ಅದರಿಂದ, ಹೇಯವೆಂದುಕೊಂಡಿರುವ ವಸ್ತುಗಳಲ್ಲಿ ಖೇದವನ್ನು ಪಡಬೇಡ. ಉಪಾದೇಯವೆಂದುಕೊಂಡಿರುವ ವಸ್ತುಗಳಲ್ಲಿ ಮಗ್ನನೂ ಆಗಬೇಡ. ಹೇಯ, ಉಪಾದೇಯ, ಎರಡನ್ನೂ ಬಿಟ್ಟು, ಈ ಎರಡೂ ಅಲ್ಲದೆ ಉಳಿದಿರುವ ವಸ್ತುವಿನಲ್ಲಿ ಸುಖವಾಗಿರು.

೨೨. ಯಾವ ಪ್ರಾಜ್ಞನಿಗೆ ಇದು ಹೇಯ, ಇದು ಉಪಾದೇಯ ಎಂಬ ಸ್ಥಿತಿಯು ಲಯಹೊಂದಿರುವುದೋ ಅಂಥವನು ಈ ಲೋಕದಲ್ಲಿ ಯಾವುದನ್ನೂ ಇಚ್ಛಿಸುವುದೂ ಇಲ್ಲ; ಬಿಡುವುದೂ ಇಲ್ಲ.

ಹೇಯೋಪಾದೇಯಕಲನೇ ಕ್ಷೀಣೇ ಯಾವನ್ನ ಚೇತಸಃ ।
ನ ತಾವತ್ಸಮತಾ ಭಾತಿ ಸಾಭ್ರೇ ವ್ಯೋಮ್ನೀವ ಚಂದ್ರಿಕಾ ॥ ೨೩ ॥

ಅನಸ್ತ್ವಿದಮಿದಂ ವಸ್ತು ಯಸ್ಯೇತಿ ಲುಲಿತಂ ಮನಃ ।
ತಸ್ಮಿನ್ನೋದೇತಿ ಸಮತಾ ಶಾಖೋಟ ಇವ ಮಂಜರೀ ॥ ೨೪ ॥

ಯುಕ್ತಾಯುಕ್ತೈಷಣಾ ಯತ್ರ ಲಾಭಾಲಾಭ ವಿಲಾಸಿನೀ ।
ಸಮತಾ ಸ್ವಚ್ಛತಾ ತತ್ರ ಕುತೋ ವೈರಾಗ್ಯಭಾಸಿನೀ ॥ ೨೫ ॥

ಏಕಸ್ಮಿನ್ಬ್ರಹ್ಮಸತ್ವೇಽಸ್ಮಿನ್ವಿದ್ಯಮಾನೇ ನಿರಾಮಯೇ ।
ನಾನಾಽನಾನಾತಯಾ ನಿತ್ಯಂ ಕಿಮಯುಕ್ತಿಂ ಕ್ವ ಯುಕ್ತತಾ ॥ ೨೬ ॥

---

೨೩. ಹೇಯ-ಉಪಾದೇಯ ಎಂಬ ಕಲ್ಪನೆಗಳು ಎಂದಿನವರೆಗೆ ಕ್ಷೀಣವಾಗುವುದಿಲ್ಲವೋ ಅದುವರೆಗೆ, ಮೋಡಗಳು ತುಂಬಿರುವ ಆಕಾಶದಲ್ಲಿ ಚಂದ್ರಲೇಖೆಯು ಹೇಗೆ ಬೆಳಗುವುದಿಲ್ಲವೋ, ಹಾಗೆಯೇ ಸಮತೆಯೆಂಬುದು ಬರುವುದೇ ಇಲ್ಲ.

೨೪. "ಇದು ಚೆನ್ನಾಗಿಲ್ಲ ; ಇದು ಚೆನ್ನಾಗಿದೆ" ಯೆಂದು ಯಾವನ ಮನಸ್ಸು ಕಳಕಳಿಸುತ್ತಿರುವುದೋ, ಅವನಲ್ಲಿ, ಶಾಖೋಟದ ಮರದಲ್ಲಿ ಹೇಗೆ ಹೂವಿನ ಗೊಂಚಲು ಆಗುವುದಿಲ್ಲವೋ, ಹಾಗೆಯೇ ಸಮತೆಯೆಂಬುದು ಬರುವುದೇ ಇಲ್ಲ.

೨೫. ಯುಕ್ತ–ಅಯುಕ್ತ, ಲಾಭ–ಅಲಾಭ, ಎಂಬ ಭಾವನೆಯು ಇರುವವರೆಗೂ ವೈರಾಗ್ಯವು ತುಂಬಿದ ಮನಸ್ಸಿನಲ್ಲಿ ಮಾತ್ರ ಕಾಣುವ ಸಮತಾ, ಸ್ವಚ್ಛತಾ, ಭಾವಗಳು ಹೇಗೆ ಬರುವುವು ?

೨೬. ಅದ್ವಿತೀಯವೂ ನಿರಾಮಯವೂ ಆದ ಬ್ರಹ್ಮತತ್ವವೇ ನಾನಾ, ಅನಾನಾ ಭಾವದಿಂದ ಇರುವಾಗ ಅಯುಕ್ತ ಎನ್ನುವುದು ಯಾವುದನ್ನು ? ಯುಕ್ತ ಎನ್ನುವುದು ಯಾವುದನ್ನು ?

ಈಪ್ಸಿತಾನೀಪ್ಸಿತಾಶಾಃಕೇ ಮರ್ಕಟ್ಯೌ ಚಿತ್ತಪಾದಪೇ ।
ಚಂಚಲೇ ಸ್ಫುರತೋ ಯಸ್ಮಿನ್ ಕುತಸ್ತಸ್ಯೇಹ ಸೌಮ್ಯತಾ ॥ ೨೭ ॥

ನಿರಾಶತಾ ನಿರ್ಭಯತಾ ನಿತ್ಯತಾ ಸಮತಾ ಜ್ಞತಾ ।
ನಿರೀಹತಾ ನಿಷ್ಕ್ರಿಯತಾ ಸೌಮ್ಯತಾ ನಿರ್ವಿಕಲ್ಪತಾ ॥ ೨೮ ॥

ಧೃತಿರ್ಮೈತ್ರೀ ಮತಿಸ್ತುಷ್ಟಿರ್ಮೃದುತಾ ಮೃದುಭಾಷಿತಾ ।
ಹೇಯೋಪಾದೇಯನಿರ್ಮುಕ್ತೇ ಜ್ಞೇ ತಿಷ್ಠನ್ತ್ಯಪವಾಸನಂ ॥ ೨೯ ॥

ಧಾವಮಾನಮಧೋಭಾಗೇ ಚಿತ್ತಂ ಪ್ರತ್ಯಾಹರೇದ್ಬಲಾತ್ ।
ಪ್ರತ್ಯಾಹಾರೇಣ ಪತಿತಮಧೋ ವಾರೀವ ಸೇತುನಾ ॥ ೩೦ ॥

---

೨೭. ಯಾವನ ಚಿತ್ತವೆಂಬ ಮರದಲ್ಲಿ ಅತಿಚಪಲಗಳಾದ ಇಷ್ಟಾನಿಷ್ಟಗಳೆಂಬ ಹೆಣ್ಣು ಕಪಿಗಳು ಕುಣಿಯುತ್ತಿವೆಯೋ, ಅಂತಹವನು ಸೌಮ್ಯನಾಗುವುದೆಂತು ?

೨೮–೯. ನಿರಾಶತೆ, ನಿರ್ಭಯತೆ, ನಿತ್ಯತೆ, ಸಮತೆ, ಜ್ಞತೆ, ನಿರೀಹತೆ, ನಿಷ್ಕ್ರಿಯತೆ, ಸೌಮ್ಯತೆ, ನಿರ್ವಿಕಲ್ಪತೆ, ಧೃತಿ, ಮೈತ್ರಿ, ಮತಿ, ತುಷ್ಟಿ, ಮೃದತೆ, ಮೃದು ಭಾಷಿತೆ, ಇವುಗಳೆಲ್ಲವೂ ಹೇಯ–ಉಪಾದೇಯ ಜ್ಞಾನರಹಿತನಾಗಿ, ವಾಸನಾರಹಿತ ನಾದ ಪ್ರಾಜ್ಞನಲ್ಲಿ ಮಾತ್ರ ಇರುವುವು.

೩೦. ಕೆಳಮುಖವಾಗಿ ಹರಿಯುತ್ತಿರುವ ನೀರನ್ನು ಅಡ್ಡಗಟ್ಟೆಯಿಂದ ತಡೆಯು ವಂತೆ, ನೀಚವಾದ ವಿಷಯಗಳ ಕಡೆಗೆ ಓಡುವ ಸ್ವಭಾವವುಳ್ಳ ಮನಸ್ಸನ್ನು ಪ್ರತ್ಯಾ ಹಾರದಿಂದ ಹಿಂತಿರುಗಿಸಬೇಕು.

ವಿಷಯಗಳ ಕಡೆಗೆ ಓಡುವ ಇಂದ್ರಿಯಗಳನ್ನು ಬಲಾತ್ಕಾರವಾಗಿ ನಿರೋಧಿಸು ವುದು ಪ್ರತ್ಯಾಹಾರ.

ಯತೋಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಂ ।
ತತಸ್ತತೋ ನಿಯಮ್ಯೈತ ದಾತ್ಮನ್ಯೇವ ವಶಂ ನಯೇತ್ ॥

ಗೀತಾ—ಅ. ೬–ಶ್ಲೋ. ೨೬.

ಬಾಹ್ಯಾನರ್ಥಾನಿಮಾಂ ಸ್ತ್ಯಕ್ತ್ವಾ ತಿಷ್ಠ ಗಚ್ಛ ಸ್ವಪ ವಸ |
ಸರ್ವಥಾ ಸರ್ವದಾ ಸರ್ವಾನಾಂತರಾಂಶ್ಚ ವಿಚಾರಯ || ೩೧ ||

ಗೃಹೀತತೃಷ್ಣಾ ಶಫರೀ ವಾಸನಾ ಜಾಲಮಾವಿಲಂ |
ಸಂಸಾರವಾರಿಪ್ರಸೃತಂ ಚಿಂತಾತಂತುಭಿರಾತತಂ || ೩೨ ||

ಅನಯಾ ತೀಕ್ಷ್ಣಯಾ ತಾತ ಛಿಂಧಿ ಬುದ್ಧಿ ಶಲಾಕಯಾ |
ವಾತ್ಯಯೇವಾಂಬುದಂ ಕಾಲೇ ವಹಂತ್ಯಾ ವಿತತೇ ಪದೇ || ೩೩ ||

ಅಸ್ಯ ಸಂಸಾರವೃಕ್ಷಸ್ಯ ಮೂಲಂ ದೋಷಾಂಕುರಾಸ್ಪದಂ |
ಭವ್ಯಧೀರೇಣ ಧೈರ್ಯೇಣ ಪ್ರೋದ್ಧರೋದ್ಧರಯಾ ಧಿಯಾ || ೩೪ ||

---

೩೧. (ಅದರಿಂದ) ರಾಮ, ನೀನು ಈ ಬಾಹ್ಯವಾದ ವಿಷಯಗಳನ್ನೆಲ್ಲ ಬಿಟ್ಟು ಬಿಟ್ಟು, ನಿಂತಾಗ, ನಡೆವಾಗ, ಮಲಗಿದಾಗ, ಉಸಿರಾಡುವಾಗ, ಯಾವಾಗಲೂ, ಹೇಗೆ ಹೇಗೂ, ಸರ್ವವಿಧವಾದ ಅಂತಸ್ತತ್ವಗಳನ್ನೂ ವಿಚಾರಮಾಡುತ್ತಿರು.

೩೨. ಸಂಸಾರವೆಂಬ ನೀರಿನಲ್ಲಿ ವಾಸನಾಜಾಲವೆಂಬ ಬಲೆಯು ಹರಡಿರುವುದು. ಅದು ತೃಷ್ಣೆಯೆಂಬ ಮೀನುಗಳನ್ನು ಹಿಡಿದುಕೊಂಡಿರುವುದು. ಚಿಂತಾ ಸಂತತಿಗಳೆಂಬ ತಂತುಜಾಲಗಳಿಂದ ಆಗಿರುವುದು. ಅದಕ್ಕೆ ಮೋಹವೆಂಬ ಪಾಚಿಯು ಹತ್ತಿರುವುದು.

೩೩. ಎಲೈ ರಾಮನೆ, ಈ ಬಲೆಯನ್ನು ವರ್ಷರ್ತುವಿನೊಳಗೆ ಹರಡಿದ ಮೋಡಗಳನ್ನು ಗಾಳಿಯು ಹಾರಿಸಿಬಿಡುವಂತೆ, ತೀಕ್ಷ್ಣವಾದ ಬುದ್ಧಿಯೆಂಬ ಶಲಾಕೆಯಿಂದ ಕತ್ತರಿಸಿಬಿಡು.

೩೪. ದೋಷವೆಂಬ ಚಿಗುರುಗಳನ್ನು ಬಿಡುವ ಈ ಸಂಸಾರವೆಂಬ ವೃಕ್ಷದ ಮೂಲವಾದ ಅಜ್ಞಾನವನ್ನು ನಿಶ್ಚಲವಾದ ಧೈರ್ಯದಿಂದ ಆತ್ಮೋದ್ಧಾರ ಸಮರ್ಥವಾದ ಬುದ್ಧಿಯಿಂದ ಕತ್ತರಿಸು.

ಮನಸೈವ ಮನಶ್ಛಿತ್ವಾ ಕುಠಾರೇಣೇವ ಪಾದಪಂ ।
ಪದಂ ಪಾವನಮಾಸಾದ್ಯ ಸದ್ಯ ಏವ ಸ್ಥಿರೋ ಭವ ॥ ೩೫ ॥

ಮನಸೈವ ಮನಶ್ಛಿತ್ವಾ ವಿಸ್ಮೃತ್ಯ ಚರಮಂ ಮನಃ ।
ವರ್ತಮಾನಮಪಿ ಚ್ಛಿತ್ವಾ ಛಿನ್ನಸಂಸಾರತಾಂ ವ್ರಜ ॥ ೩೬ ॥

ಮೋಹೋ ವಿಸ್ಮೃತ್ಯ ಸಂಸಾರಂ ನ ಭೂಯಃ ಪರಿರೋಹತಿ ।
ಚಿತ್ತಂ ವಿಸ್ಮೃತ್ಯ ಸಂಸಾರಂ ನ ಭೂಯಃ ಪರಿರೋಹತಿ । ॥ ೩೭ ॥

ತಿಷ್ಠನ್ಗಚ್ಛನ್ಸ್ವಪನ್ಜಾಗ್ರನ್ನಿವಸನ್ನುತ್ಪತನ್ಪತನ್ ।
ಅಸದೇವೇದಮಿತ್ಯಂತಃ ನಿಶ್ಚಿತ್ಯಾಸ್ಥಾಂ ಪರಿತ್ಯಜ ॥ ೩೮ ॥

---

೩೫. ಕೊಡಲಿಯಿಂದ ಮರವನ್ನು ಕತ್ತರಿಸುವಂತೆ, ಮನಸ್ಸಿನಿಂದಲೇ ಮನಸ್ಸನ್ನು ಕತ್ತರಿಸಿ, ಪರಮ ಪಾವನವಾದ ಪದವಿಯನ್ನು ಆಶ್ರಯಿಸಿ ಸ್ಥಿರನಾಗು.

೩೬. ಮನಸ್ಸಿನಿಂದ ಹಿಂದೆ ಇದ್ದ ಮನಸ್ಸನ್ನು ಛೇದಿಸು. ವಿಸ್ಮೃತಿಯೆಂಬ ಅಸ್ತ್ರದಿಂದ (ಮತ್ತೆ ಮತ್ತೆ ಹುಟ್ಟಿಬರುವ) ವಾಸನೆಗಳನ್ನೆಲ್ಲ ಪರಿಹರಿಸು. ಈಗಿರುವ ಮನಸ್ಸನ್ನೂ ಕತ್ತರಿಸು. (ಹೀಗೆ ಭೂತ ಭವಿಷ್ಯದ್ವರ್ತಮಾನ ಮನೋಮಾಲಿಕೆಗಳನ್ನೆಲ್ಲ ಉಪಸಂಹಾರ ಮಾಡಿ,) ಸಂಸಾರಕ್ಕೆ ಅತೀತನಾಗು.

೩೭ ಸಂಸಾರವನ್ನೇ ಎಂದರೆ ವಾಸನಾಜಾಲವನ್ನೇ ಮರೆತವನಿಗೆ, ಮೋಹವು ಮತ್ತೆ ಹುಟ್ಟುವುದಿಲ್ಲ. ಚಿತ್ತವನ್ನೇ ಮರೆತವನಿಗೆ ಸಂಸಾರವೇ ಹುಟ್ಟುವುದಿಲ್ಲ.

೩೮. ನಿಂತಾಗ, ನಡೆವಾಗ, ನಿದ್ರಿಸುವಾಗ, ಎಚ್ಚರವಾಗಿರುವಾಗ, ಮೇಲಕ್ಕೆ ಹೋಗುವಾಗ, ಕೆಳಕ್ಕೆ ಇಳಿಯುವಾಗ, (ಯಾವಾಗಲೂ) ಈ ಕಣ್ಣಿಗೆ ಕಾಣುತ್ತಿರುವ ಸರ್ವವೂ ಅಸತ್ತು ಎಂಬ ನಿಶ್ಚಯವನ್ನು ಇಟ್ಟುಕೊಂಡು, ಇದರಲ್ಲಿ ಆಸ್ಥೆಯನ್ನು ಬಿಡು.

ಸಮತಾಮಲಮಾಶ್ರಿತ್ಯ ಸಂಪ್ರಾಪ್ತಂ ಕಾರ್ಯಮಾಹರನ್ ।
ಅಚಿಂತಯಂಸ್ತಥಾ ಪ್ರಾಪ್ತಂ ವಿಹರೇಹ ಹಿ ರಾಘವ ॥ ೩೯ ॥

ಯಥಾ ಶರ್ವೋಽಪಿ ಲಿಂಗಾನಿ ನ ಬಿಭರ್ತಿ ಬಿಭರ್ತಿ ಚ ।
ತ್ವಮೇಹಮಿಹ ಕಾರ್ಯಾಣಿ ಕುರು ಮಾ ಕುರು ಚಾನಘ ॥ ೪೦ ॥

ತ್ವಮೇವ ವೇತ್ತಾ ತ್ವಮಜಸ್ತ್ವಮಾತ್ಮಾ ತ್ವಂ ಪರಮೇಶ್ವರಃ ।
ಆತ್ಮನೋಽವ್ಯತಿರಿಕ್ತಃ ಸರ್ವ ತ್ವಯೇತ್ಥಮಿದಮಾತತಂ ॥ ೪೧ ॥

---

೩೯. (ಹೀಗೆ ಪಡೆದ) ಸಮತ್ವವನ್ನು ಚೆನ್ನಾಗಿ ಅವಲಂಬಿಸಿ, ಸಂಪ್ರಾಪ್ತವಾದ ಕಾರ್ಯವನ್ನು ಮಾಡುತ್ತ, ಅಪ್ರಾಪ್ತವಾದುದನ್ನು ಕುರಿತು ಯೋಚಿಸದೆ, ಎಲೈ ರಾಘವ, ಈ ಲೋಕದಲ್ಲಿ ಸುಖವಾಗಿ ವಿಹಾರ ಮಾಡಿಕೊಂಡಿರು.

೪೦. ಅಷ್ಟಮೂರ್ತಿಯೆನಿಸಿಕೊಂಡಿರುವ ಪರಮೇಶ್ವರನು (ಜಗದ್ದೃಷ್ಟಿಯಿಂದ) ತನ್ನ ಪೃಥಿವ್ಯಾದಿ ರೂಪಗಳನ್ನು ಧರಿಸಿಯೂ, (ಚಿದ್ದೃಷ್ಟಿಯಿಂದ) ಧರಿಸದೆಯೂ ಇರುವಂತೆ, ಎಲೈ ಅನಘ, ರಾಜ್ಯವನ್ನು ನಿರ್ಲಿಪ್ತನಾಗಿ ಆಳುತ್ತಿರು.

(ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಪುರುಷ, ಇವು, ಈಶ್ವರನ ಅಷ್ಟಮೂರ್ತಿಗಳು.

ಭೂರಂಭಾಂಸ್ಯನಲೋಽನಿಲೋಽಂಬರಮಹರ್ನಾಥೋ ಹಿಮಾಂಶುಃ ಪುಮಾನ್।
ಇತ್ಯಾಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಂ ॥
—ದಕ್ಷಿಣಾಮೂರ್ತಿ ಸ್ತೋತ್ರ)

೪೧. ನೀನು ಸರ್ವಜ್ಞನು; ನೀನು ಅಜನು (ಜನ್ಮಾದಿ ವಿಕಾರಗಳಿಲ್ಲದವನು) ನೀನೇ ಆತ್ಮನು; ನೀನು ಮಹೇಶ್ವರನು. ನೀನು ಆತ್ಮನೇ ಹೊರತು ಬೇರೆಯಲ್ಲ. ನೀನೇ ಈ ಜಗತ್ಸ್ವರೂಪನಾಗಿ ಹರಡಿಕೊಂಡಿರುವೆ.

(ನೀನು ಸರ್ವಜ್ಞನು : ಜನ್ಮಾದಿ ವಿಕಾರಶೂನ್ಯನಾದವನು: ನೀನು ಸ್ವರೂಪದಿಂದ ಪ್ರಚ್ಯುತನಾಗದಿರುವಾಗ ಪರಮಾರ್ಥಸತ್ಯರೂಪನಾಗಿರುವೆ. ಆದರೆ ಅಜ್ಞಾನದಿಂದ ನೀನು ಇದನ್ನೆಲ್ಲ ಈ ರೀತಿಯಾಗಿ ಹರಡಿಕೊಂಡಿರುವೆ—ವೈಭವ)

ಏನಾತ್ಮದೃಶ್ಯಸದ್ಭಾವಾದಭಿತೋ ಭಾವನೋಜ್ಝಿತಾ ।
ಸ ನ ಸಂಗೃಹ್ಯತೇ ದೋಷೈರ್ಹರ್ಷಾಮರ್ಷವಿಷಾದಜೈಃ ॥ ೪೨ ॥

ರಾಗದ್ವೇಷವಿನಿರ್ಮುಕ್ತಃ ಸಮಲೋಷ್ಟಾಶ್ಮಕಾಂಚನಃ ।
ಯುಕ್ತ ಇತ್ಯುಚ್ಯತೇ ಯೋಗೀ ತ್ಯಕ್ತಸಂಸಾರವಾಸನಃ ॥ ೪೩ ॥

ಸ ಯತ್ಕರೋತಿ ಯದ್ಭುಂಕ್ತೇ ಯದ್ದದಾತಿ ನಿಹಂತಿ ಯತ್ ।
ತತ್ರ ಮುಕ್ತಧಿಯಸ್ತಸ್ಯ ಸಮತಾ ಸುಖದುಃಖಯೋಃ ॥ ೪೪ ॥

---

೪೨. ಯಾವನು ತಾನು ಆತ್ಮನೆಂಬುದನ್ನು ಯಾವಾಗಲೂ ಕಾಣುತ್ತಿರುವುದರಿಂದ ಆತ್ಮಭಾವವನ್ನು ಬಿಡದೆ ಇರುವನೋ ಅಂಥವನನ್ನು ಹರ್ಷ, ಅಮರ್ಷ(ಕೋಪ) ವಿಷಾದಗಳಿಂದ ಉಂಟಾದ ದೋಷಗಳು ಹಿಡಿಯುವುದಿಲ್ಲ.

೪೩. ರಾಗದ್ವೇಷಗಳನ್ನು ಬಿಟ್ಟು, ಮಣ್ಣು ಚಿನ್ನ ಎರಡನ್ನು ಒಂದಾಗಿ ಕಾಣುತ್ತಾ, ಸಂಸಾರವಾಸನೆಯನ್ನು ಬಿಟ್ಟಿರುವವನು ಯೋಗಿಯು. ಅವನನ್ನು ಯುಕ್ತ (ಎಂದರೆ ಆತ್ಮನೊಡನೆ ಬೆರೆತವನು) ಎನ್ನುವರು.

೪೪. ಅಂತಹವನು ಏನು ಮಾಡಿದರೂ, ಏನು ತಿಂದರೂ, ಏನು ಕೊಟ್ಟರೂ, ಕೊನೆಗೆ ಕೊಂದೇ ಹಾಕಿದರೂ, ಅವನು ನಿರ್ಲಿಪ್ತನಾಗಿರುವ ಕಾರಣ, ಸುಖ ದುಃಖಗಳೆರಡರಲ್ಲೂ ಸಮನಾಗಿರುವನು.

[ಹೋಲಿಸಿ :—

(ಯಸ್ಯ ನಾಹಂ ಕೃತೋಭಾವೋ । ಯಸ್ಯ ಬುದ್ಧಿರ್ನಲಿಪ್ಯತೇ ।
ಹತ್ವಾಪಿ ಸ ಇಮಾಂ ಲೋಕಾನ್ ನ ಚ ಪಾಪೈರ್ನಬಧ್ಯತೇ ॥

ಗೀತಾ—ಅ. ೧೮, ಶ್ಲೋ. ೧೭.

ಯಾವನಿಗೆ ತಾನು ಮಾಡಿದೆನೆಂಬ ಅಹಂಕಾರವಿಲ್ಲವೋ, ಯಾವನ ಬುದ್ಧಿಗೆ ಕರ್ಮಲೇಪವಿಲ್ಲವೋ, ಅವನು ಈ ಲೋಕಗಳನ್ನೆಲ್ಲ ಧ್ವಂಸಮಾಡಿದರೂ ಪಾಪವು ಬರುವುದಿಲ್ಲ.]

ಪ್ರಾಪ್ತಂ ಕರ್ತವ್ಯಮೇವೇತಿ ತ್ಯಕ್ತೇಷ್ಟಾನಿಷ್ಟಭಾವನಃ ।
ಪ್ರವರ್ತತೇ ಯಃ ಕಾರ್ಯೇಷು ನ ಸ ಮಜ್ಜತಿ ಕುತ್ರಚಿತ್ ॥ ೪೫ ॥

ಚಿತ್ಸತ್ತಾಮಾತ್ರಮೇವೇದಮಿತಿ ನಿಶ್ಚಯವನ್ಮನಃ ।
ತ್ಯಕ್ತಭೋಗಾಭಿಮನನಂ ಶಮಮೇತಿ ಮಹಾಮತೇ ॥ ೪೬ ॥

ಮನಃ ಪ್ರಕೃತ್ಯೈವ ಜಡಂ ಚಿತ್ತತ್ತ್ವಮನುಧಾವತಿ ।
ಮಾಂಸಗರ್ಧೇನ ಮಾರ್ಜಾರೋ ವನೇ ಮೃಗಪತಿಂ ಯಥಾ ॥ ೪೭ ॥

ಸಿಂಹವೀರ್ಯವಶಾಲ್ಲಬ್ಧಂ ಮಾಂಸಂ ಭುಂಕ್ತೇಽನುಗೋ ಹರೇಃ ।
ಚಿದ್ವೀರ್ಯವಶತಃ ಪ್ರಾಪ್ತಂ ದೃಶ್ಯಮಾಶ್ರಯತೇ ಮನಃ ॥ ೪೮ ॥

---

೪೫. ಕಾಲಕಾಲದಲ್ಲಿ ಪ್ರಾಪ್ತವಾಗುವ ಕಾರ್ಯಗಳನ್ನು ಮಾಡುತ್ತ, ಇದು ಇಷ್ಟ ಇದು ಅನಿಷ್ಟ ಎಂಬ ಭಾವನೆಯೇ ಇಲ್ಲದೆ, ಯಾವನು ಕಾರ್ಯಕಾರಿಯಾಗಿರುವನೋ ಅವನು ಎಂದಿಗೂ (ಸುಖ ದುಃಖಗಳಲ್ಲಿ) ಮಗ್ನನಾಗುವುದಿಲ್ಲ.

೪೬. ಮಹಾಮತಿಯಾದ ರಾಮನೆ, ಈ ಸರ್ವವೂ ಚಿತ್ಸತ್ತೆಯಲ್ಲದೆ ಬೇರೆ ಏನೂ ಅಲ್ಲವೆಂಬ ನಿಶ್ಚಯವು ಯಾವನ ಮನಸ್ಸಿನಲ್ಲಿರುವುದೋ, ಯಾವನು ಭೋಗವನ್ನು ಕುರಿತು ಚಿಂತಿಸುವುದಿಲ್ಲವೋ ಅವನಿಗೆ ಶಾಂತಿಯು ಲಭಿಸುವುದು.

೪೭. ಮನಸ್ಸು ಸ್ವಭಾವದಿಂದಲೇ ಜಡವಾದುದು. ಇದು ಚಿತ್ತನ್ನು ಯಾವಾಗಲೂ ಅನುಸರಿಸಿಯೇ ಇರಬೇಕಲ್ಲದೆ ಸ್ವತಂತ್ರವಾಗಿರಲಾರದು. ಮಾಂಸದ ಆಸೆಯಿಂದ ಮಾರ್ಜಾರವು ಮೃಗೇಂದ್ರನ ಹಿಂದೆ ಹೋಗುವಂತೆ, ಇದು ಚಿತ್ತನ್ನು ಆಶ್ರಯಿಸಿಯೇ ಇರುವುದು.

೪೮. ಸಿಂಹವು ಬೇಟೆಯಾಡಿದ ಮೃಗದ ಮಾಂಸವನ್ನು ಅದರ ಹಿಂದಿರುವ ಇತರ ಮೃಗಗಳೆಲ್ಲ ಹಂಚಿಕೊಳ್ಳುವಂತೆ, ಚಿತ್ತಿನ ಬಲದಿಂದ ತೋರುತ್ತಿರುವ ದೃಶ್ಯವನ್ನು ಮನಸ್ಸು ಆಶ್ರಯಿಸಿರುವುದು.

ಮನ ಏವಮಸತ್ಕಲ್ಪಂ ಚಿತ್ಪ್ರಸಾದೇನ ಜೀವತಿ ।
ಭಾವಯನ್ವಿಶ್ವಮೇವೈಕಂ ಚಿಂತಾಮೇತ್ಯ ಚಿದಪ್ಯುತ ॥ ೪೯ ॥

ಜಡಂ ಯತ್ಕಿಲ ನಿರ್ಹೀನಂ ಚಿತಾ ದೀಪಿಕಯೌಜಸಾ ।
ತನ್ಮನಃ ಶವಸಂಕಾಶಮಚಿದುತ್ತಿಷ್ಠತೇ ಕಥಂ ॥ ೫೦ ॥

ಚಿತ್ಸ್ವಭಾವಪರಾಮೃಷ್ಟಾ ಸ್ಪಂದಶಕ್ತಿರಸನ್ಮಯೀ ।
ಕಲ್ಪನಾ ಚಿತ್ತಮಿತ್ಯುಕ್ತ್ವಾ ಕಥ್ಯತೇ ಶಾಸ್ತ್ರದೃಷ್ಟಿಭಿಃ ॥ ೫೧ ॥

ಯಶ್ಚಿತ್ತಾಫಣಿಪೂತ್ಕಾರಃ ಸೈವೇಯಂ ಕಲನೋಚ್ಯತೇ ।
ಚಿದೇವಾಹಮಿತಿ ಜ್ಞಾತ್ವಾ ಸಾ ಚಿತ್ತಾಮೇವ ಗಚ್ಛತಿ ॥ ೫೨ ॥

---

೪೯. ಹೀಗೆ ಅಸತ್ಪ್ರಾಯವಾಗಿರುವ, (ಎಂದರೆ ಇದ್ದೂ ಇಲ್ಲದಂತೆಯೇ ಆಗಿರುವ) ಈ ಮನಸ್ಸು ಚಿತ್ತಿನ ಅನುಗ್ರಹದಿಂದ ಬದುಕಿರುವುದು. ಹೀಗೆ ತಾನು ಬೇರೆಯೆಂದು ಕೊಂಡು ವಿಶ್ವವನ್ನೇ ಧ್ಯಾನಿಸುತ್ತಿರುವ ಈ ಮನಸ್ಸು, ಒಂದಾನೊಂದು ಸಮಯದಲ್ಲಿ ಸ್ವರೂಪಚಿಂತನ ಮಾಡುವುದಕ್ಕೆ ಹೊರಟು ತಾನೇ ಚಿತ್ತೂ ಆಗಿ ಬಿಡು ವುದು.

೫೦. ಚಿತ್ತೆಂಬ ದೀಪದ ಬೆಳಕು ಬಲಗಳಿಂದಲೇ ಈ ಮನಸ್ಸು ಬದುಕಿರುವುದು. ಇಲ್ಲದಿದ್ದರೆ ಜಡವೂ ಕೇವಲ ಹೀನವಾದುದೂ ಶವದಂತೆ ಸತ್ತು ಬಿದ್ದಿರುವುದೂ ಆದ ಈ ಮನಸ್ಸು, ಈ ಅಚಿತ್ತು, ಬದುಕುವುದು ಹೇಗೆ?

೫೧. ಚಿತ್ತಿನ ಸ್ವಭಾವದಿಂದ ಹೊರಬಿದ್ದ, ಅಸತ್ಪೂರ್ಣವಾದ ಸ್ಪಂದಶಕ್ತಿಯೇ ಮನಸ್ಸೆಂಬ ಬೇರೊಂದು ಹೆಸರಿಂದ ಕರೆಸಿಕೊಳ್ಳುವುದು ಎಂದು ಶಾಸ್ತ್ರವನ್ನು ಬಲ್ಲವರು ಹೇಳುವರು.

೫೨. ಚಿತ್ತೆಂಬ ಸರ್ಪದ ಫೂತ್ಕಾರವು ಯಾವುದುಂಟೋ ಅದೇ ಮನಸ್ಸು. ಯಾವಾಗ ಚಿತ್ತೇ ತಾನು ಎಂಬ ಅರಿವು ಉಂಟಾಗುವುದೋ ಆಗ ಮನಸ್ಸು ಚಿತ್ತೇ ಆಗಿ ಬಿಡುವುದು.

ಚೇತ್ಯೇನ ರಹಿತಾ ಯ್ಯೈಷಾ ಚಿತ್ತಬ್ರಹ್ಮ ಸನಾತನಂ ।
ಚೇತ್ಯೇನ ಸಹಿತಾ ಯ್ಯೈಷಾ ಚಿತ್ಸೇಯಂ ಕಲನೋಚ್ಯತೇ ॥ ೫೩ ॥

ಕಿಂ ಚಿದಾಮೃಷ್ಟರೂಪಂ ಯದ್ಬ್ರಹ್ಮ ತಚ್ಚ ಸ್ಥಿರಂ ಮನಃ ।
ಕಲ್ಪನಾ ಸತ್ಸದ್ಯೈವೈತತ್ಸದಿವೋಪಸ್ಥಿತಾ ಹೃದಿ ॥ ೫೪ ॥

ಚಿತ್ತಮಿತ್ಯೇವ ರೂಢೇಯಂ ಯದೈವ ಕಲನೋದಿತಾ ।
ತದೈವ ಚಿತ್ತ್ವಂ ವಿಸ್ಮೃತ್ಯ ಸಾ ಜಡೇವ ವ್ಯವಸ್ಥಿತಾ ॥ ೫೫ ॥

ಸಂಪನ್ನಾ ಕಲನಾ ಸಾವಿನ್ನಾ ಸಂಕಲ್ಪಾನುವಿಧಾಯಿನೀ ।
ಅವಚ್ಛೇದವತೀ ವಾಗ್ರಾ ಹೇಯೋಪಾದೇಯಧರ್ಮಿಣೀ ॥ ೫೬ ॥

---

೫೩. ದೃಶ್ಯ (ಚೈತ್ಯವು ಇಲ್ಲದಿದ್ದಾಗ ಎಂದರೆ ದೃಶ್ಯವಾದ ಜಗತ್ತಿನ ಯೋಚನೆಯನ್ನು ಬಿಟ್ಟಾಗ) ಈ ಚಿತ್ತೇ ಸನಾತನವಾದ ಬ್ರಹ್ಮವು: ದೃಶ್ಯದ ಯೋಚನೆಯನ್ನು ಹಿಡಿದುಕೊಂಡಿದ್ದರೆ, ಇದೇ ಚಿತ್ತಕಲನಾ, ಮನಸ್ಸು ಎನ್ನಿಸಿ ಕೊಳ್ಳುವುದು.

೫೪. ಬ್ರಹ್ಮವೇ ಹೀಗೆ ಮನನಯುಕ್ತವಾಗಿ (ತಾನು ಬೇರೆಯೆಂದುಕೊಂಡರೆ) ಮನಸ್ಸು ಎನ್ನಿಸಿಕೊಳ್ಳುವುದು. ಅದೇ ಕಲ್ಪನೆಯು, ಅದೇ ಸತ್ತು. ಯಾವಾಗಲೂ ಇದು ಸತ್ತಿನಂತೆಯೇ (ಎಂದರೇ ಸತ್ತೆಂಬ ಭ್ರಾಂತಿಯನ್ನುಂಟುಮಾಡುತ್ತ) ಹೃದಯ ದಲ್ಲಿ ನೆಲಸಿರುವುದು.

೫೫. ಇದನ್ನೇ ಎಲ್ಲರೂ ಚಿತ್ತ ಚಿತ್ತ ಎನ್ನುವುದು. ಕಲ್ಪನಾಪೂರ್ವವಾಗಿ ಹುಟ್ಟಿ, ತಾನೇ ಚಿತ್ತು ಎಂಬುದನ್ನು ಮರೆತಾಗ ಜಡದಂತೆ ಆಗಿಹೋಗುವುದು.

೫೬. ಈ ಚಿತ್ತೇ (ಅತೀತವಿಷಯ ಕಲ್ಪನೆಯಿಂದ) ಚಿತ್ತವೆಂದೂ, (ಆಗಾಮಿ ವಿಷಯ ಕಲ್ಪನೆಯಿಂದ) ಸಂಕಲ್ಪವಿಕಲ್ಪಗಳನ್ನು ಮಾಡುತ್ತ ಮನಸ್ಸೆಂದೂ ಆಗು ವುದು. ಆಗ ಅದಕ್ಕೆ ಅಂತಃಕರಣವೆಂಬ ಅವಚ್ಛೇದವು ಏರ್ಪಡುವುದು. ಅದರ ಜೊತೆಯಲ್ಲಿಯೇ ಅವಕ್ಕೆ ಹೇಯ (ಬಿಡುವುದು) ಉಪಾದೇಯ (ಗ್ರಹಿಸುವುದು) ಎಂಬ ಧರ್ಮವೂ ಉಂಟಾಗುವುದು.

ಸೈವಾ ಚಿದೇವ ಜಗತಾವಮಾಗತೇವ ಸ್ವಶಕ್ತಿತಃ ।
ನ ಸಂಪ್ರಬೋಧಿತಾ ಯಾವದ್ರೂಪಂ ತಾವನ್ನ ಬುಧ್ಯತೇ ॥ ೫೭ ॥

ಅತಃ ಶಾಸ್ತ್ರವಿಚಾರೇಣ ವೈರಾಗ್ಯೇಣ ಪರೇಣ ಚ ।
ನಿಗ್ರಹೇಣೇಂದ್ರಿಯಾಣಾಂ ಚ ಬೋಧಯೇತ್ಕಲನಾಂ ಸ್ವಯಂ ॥ ೫೮ ॥

ಕಲನಾ ಸರ್ವಜಂತೂನಾಂ ವಿಜ್ಞಾನೇನ ಶಮೇನ ಚ ।
ಪ್ರಬುದ್ಧಾ ಬ್ರಹ್ಮತಾಮೇತಿ ಭ್ರಮತೀತರಥಾ ಜಗತ್ ॥ ೫೯ ॥

ವ್ಯಾಮೋಹಮದಿರಾಮತ್ತಾಂ ಲುಠಿತಾಂ ವಿಷಯಾವಟೇ ।
ಆತ್ಮಾವೇದನ ಸಂಸುಪ್ತಾಂ ಕಲನಾಮೇವ ಬೋಧಯೇತ್ ॥ ೬೦ ॥

---

೫೭. ಆ ಚಿತ್ತೇ ತನ್ನ ಸ್ವಶಕ್ತಿಯಿಂದಲೇ ಜಗದ್ರೂಪವನ್ನು ಹೊಂದಿದ್ದರೂ, ಅದನ್ನು ನೀನೇ ಚಿತ್ತು ಎಂದು ಎಚ್ಚರಗೊಳಿಸುವವರೆಗೂ ತನ್ನ ಸ್ವರೂಪವನ್ನು ಮರೆತೇ ಇರುವುದು.

೫೮. ಅದರಿಂದ, ಶಾಸ್ತ್ರವಿಚಾರದಿಂದಲೂ, ಉತ್ತಮ ವೈರಾಗ್ಯದಿಂದಲೂ, ಇಂದ್ರಿಯಗಳ ನಿಗ್ರಹದಿಂದಲೂ ಮನಸ್ಸನ್ನು ಪ್ರಬೋಧಗೊಳಿಸಬೇಕು.

೫೯. ವಿಜ್ಞಾನದಿಂದಲೂ ಶಾಂತಿಯಿಂದಲೂ ಸರ್ವ ಜಂತುಗಳ ಮನಸ್ಸೂ ಪ್ರಬುದ್ಧವಾಗುವುದು. ಮನಸ್ಸು ಪ್ರಬುದ್ಧವಾದರೆ ಬ್ರಹ್ಮವೇ ಆಗುವುದು. ಇಲ್ಲದಿದ್ದರೆ ಸುಮ್ಮನೆ ಅಲೆಯುತ್ತಿರುವುದು.

೬೦. ಅದರಿಂದ, ವ್ಯಾಮೋಹವೆಂಬ ಕಳ್ಳು ಕುಡಿದು ಮತ್ತು ಹಿಡಿದು, ವಿಷಯಗಳೆಂಬ ಹಳ್ಳಗಳೊಳಗೆ ಬಿದ್ದು ಒದ್ದಾಡುತ್ತಿರುವ, ತನ್ನ ಸ್ವರೂಪವನ್ನು ತಿಳಿಯದೆಯೆ ತೂಕಡಿಸುತ್ತಿರುವ ಈ ಮನಸ್ಸನ್ನೇ ಪ್ರಬೋಧಗೊಳಿಸಬೇಕು.

ಅಪ್ರಬುದ್ಧಾ ಯದಾ ಹ್ಯೇಷಾ ನ ಕಿಂಚಿದವಬುಧ್ಯತೇ ।
ಸಂಕಲ್ಪಕಲನೇವಾಂತ ದೃಶ್ಯಮಾನಾ ಪ್ಯಸನ್ಮಯಿಾ ॥ ೬೧ ॥

ತಥಾ ಪರಮಯಾ ದೃಷ್ಟ್ಯಾ ಕಲನ್ಯೈಷಾಂತರಸ್ಥಯಾ ।
ಮಂಜರೀ ಗಂಧಶಕ್ತ್ಯೇವ ಪದಾರ್ಥೇಷು ವಿರಾಜತೇ ॥ ೬೨ ॥

ತನುಃ ಸಂಕಲ್ಪಿತಾ ಯ್ಯೈಷಾ ಕಲನೇತಿ ಜಗತ್ರಯೇ ।
ಸಾ ಹಿ ಕಿಂಚಿದ್ವಿಜಾನಾತಿ ನಿತ್ಯಂ ಜ್ಞಾನೈಕ ಧರ್ಮಿಣೀ ॥ ೬೩ ॥

---

೬೧. ಈ ಮನಸ್ಸು (ಚಿತ್ತವು) ಯಾವಾಗ ಪ್ರಬುದ್ಧವಾಗಿಲ್ಲವೋ ಆಗ ಏನನ್ನೂ ತಿಳಿಯಲಾರದು. ತಿಳಿದುಕೊಳ್ಳುವುದಿಲ್ಲ. ಆದರಿಂದ, ಈ ಮನಸ್ಸಿನೊಳಗಿರುವ ಚಿತ್ತೇ ಈ ಮನಸ್ಸಿನಲ್ಲಿ ಸಂಕಲ್ಪರೂಪವಾಗಿ, ಹೊರಗೆ ಜಗದ್ರೂಪವಾಗಿ ಕಾಣಿಸುವುದು.

೬೨. ಹೂವಿನ ಗೊಂಚಲಿನಲ್ಲಿರುವ ಗಂಧಶಕ್ತಿಯಂತೆ, ಸರ್ವ ಪದಾರ್ಥಗಳಲ್ಲಿಯೂ ಇರುವ ಮನಸ್ಸುಗಳೊಳಗೆಲ್ಲ ಈ ಚಿತ್ತೇ ಅಂತರ್ಗತವಾಗಿದ್ದುಕೊಂಡು ಮೆರೆಯುತ್ತಿರುವುದು.

೬೩. ಈ ಚಿತ್ತು ತಾನು ಜ್ಞಾನೈಕ ಧರ್ಮಿಣೀ (ಜ್ಞಾನವೇ ತನ್ನ ಸ್ವರೂಪವಾಗುಳ್ಳದು.) ಆದರೂ, ಸ್ವಸಂಕಲ್ಪವಶದಿಂದಲೇ ಮಾಡಿಕೊಂಡಿರುವ ದೇಹವೆಂಬ ಉಪಾಧಿಯೊಳಗೆ ಸಿಕ್ಕಿಕೊಂಡಿರುವುದರಿಂದ, ಎಲ್ಲವನ್ನೂ ತಿಳಿಯಲಾರದೆ, ಮೂರು ಲೋಕದಲ್ಲಿಯೂ ಯಾವ ಯಾವ ತನುವಿನಲ್ಲಿರುವುದೋ ಅಷ್ಟಷ್ಟನ್ನು ಮಾತ್ರ ತಿಳಿಯುವುದು.

(ಹೋಲಿಸಿ :—ಚಿಚ್ಛಕ್ತಿಶ್ಚೇತನಾ ರೂಪಾ ಜಡಶಕ್ತಿರ್ಜಡಾತ್ಮಿಕಾ॥—ಲಲಿತಾ ಸಹಸ್ರನಾಮ.

ಒಂದೇ ಶಕ್ತಿಯು ಚಿತ್ ಎಂಬ ಹೆಸರಿನಿಂದ ಚೇತನಾತ್ಮಕಳಾಗಿಯೂ ಜಡ ಎಂಬ ಹೆಸರಿನಿಂದ ಅಚೇತನಾತ್ಮಕಳಾಗಿಯೂ ಇರುವಳು.

ಚೇತನೇನ ಜಡಾ ರಾಮ ಕಲನೋಪಲರೂಪಿಣೀ ।
ಪದ್ಮಿನೀವಾತಪೇನಾಸೌ ಪರೇಣೈವ ಪ್ರಬೋಧ್ಯತೇ ॥ ೬೪ ॥

ಯಥಾ ಶಿಲಾಮಯೀ ಕನ್ಯಾ ಚೋದಿತಾಪಿ ನ ನೃತ್ಯತಿ ।
ತಥೇಯಂ ಕಲನಾ ದೇಹೇ ನ ಕಿಂಚಿದವಬುಧ್ಯತೇ ॥ ೬೫ ॥

ಲಿಪಿ ಕರ್ಮನೃಪೈರ್ಯುದ್ಧಂ ಕ್ವ ಕೃತಂ ಘರ್ಘರಾರವಂ ।
ಕ್ವಚಿನ್ನ ಚಂದ್ರಕಿರಣೈರೋಷಧ್ಯಃ ಪ್ರತಿಬೋಧಿತಾಃ ॥ ೬೬ ॥

ಆ ಚಿತ್ತು ಸರ್ವಸಾಕ್ಷಿಯಾಗಿದ್ದ ಪಕ್ಷದಲ್ಲಿ ಅದು ಆಯಾ ಅಂತಃಕರಣ ಧರ್ಮಗಳನ್ನು ಮಾತ್ರವೇ ಪ್ರಕಾಶಪಡಿಸಲು ಕಾರಣವೇನು ? ಎಂದು ಕೇಳಿದರೆ, ನಿತ್ಯವೂ ಜ್ಞಾನೈಕ ಧರ್ಮವಾಗಿರುವ ಈ ಸಾಕ್ಷಿ ಚೈತನ್ಯವು ಮೂರು ಲೋಕದಲ್ಲಿಯೂ ಪರಿಚ್ಛಿನ್ನವಾದ ಚಿತ್ತವೃತ್ತಿಯೆಂದು ಕಲ್ಪಿಸಲ್ಪಡುವುದು : ಅದುಕಾರಣ, ಅದು ಆಯಾ ಅಂತಃಕರಣಾದಿಗಳನ್ನು ಮಾತ್ರವೇ ತಿಳಿದುಕೊಳ್ಳುವುದು.—ವೈಭವ.

ದೀಪವು ಎಷ್ಟು ಅಗಲಕ್ಕೆ ಬೇಕಾದರೂ ತನ್ನ ಪ್ರಕಾಶವನ್ನು ಹರಡಬಲ್ಲುದಾದರೂ, ತಾನು ಯಾವ ಕೋಣೆಯಲ್ಲಿರುವುದೋ ಆ ಕೋಣೆಯಷ್ಟಗಲಕ್ಕೆ ಮಾತ್ರ ಬೆಳಕು ಕೊಡುವುದು. ಅದರಂತೆಯೇ ಚಿತ್ತೂ ತಾನು ಸರ್ವವನ್ನೂ ಪ್ರಕಾಶಪಡಿಸಬಲ್ಲುದಾದರೂ ಸ್ವಸಂಕಲ್ಪಬದ್ಧವಾಗಿ ಕಾಲದೇಶ ಪರಿಚ್ಛೇದಗಳನ್ನು ಅಂಗೀಕರಿಸಿ, ಬದ್ಧದಂತೆ ನಡೆಯುವುದು.—ದೇ.)

೬೪. ಬಿಸಿಲಿನಿಂದ ಕಮಲ ಲತೆಯು ಎಚ್ಚರಗೊಳ್ಳುವಂತೆ, ಕಲ್ಲಿನಂತೆ ನಿಶ್ಚೇಷ್ಟವಾಗಿ ಬಿದ್ದಿರುವ ಜಡ ಚಿತ್ತವು ಪರಾತ್ಪರವಾದ ಸಾಕ್ಷಿ ಚೈತನ್ಯದಿಂದ ಪ್ರಬುದ್ಧವಾಗುವುದು.

೬೫. ಕಲ್ಲಿನಲ್ಲಿ ಕೊರೆದಿರುವ ಹೆಣ್ಣು ಬೊಂಬೆಯು ಹೇಗೆ ಹೇಗೆ ಪ್ರೇರಿಸಿದರೂ ನರ್ತನಮಾಡಲಾರದು ಹೇಗೋ, ಹಾಗೆ, ದೇಹದಲ್ಲಿ ಸೇರಿಕೊಂಡು ಜಡವಾಗಿರುವ ಚಿತ್ತವು ಏನನ್ನೂ ತಿಳಿಯಲಾರದು.

೬೬. ಚಿತ್ರದಲ್ಲಿ ಬರೆದಿರುವ ನೃಪತಿಗಳು ಘನಘೋರವಾದ ಯುದ್ಧವನ್ನು ಮಾಡುವುದೆಲ್ಲಿ ? ಚಂದ್ರಕಿರಣಗಳಿಂದ ಔಷಧಿಗಳು ಎಲ್ಲಿ ತಾನೇ ಪ್ರಬೋಧಿತಗಳಾಗುವುದಿಲ್ಲ ?

ಅಸೃಗಾಲಿಪ್ತಗಾತ್ರೈಶ್ಚ ಶವೈಃ ಕ್ವ ಪರಿವಲ್ಗಿತಂ |
ಕ್ವ ಗೀತಂ ಮಧುರಧ್ವಾನಂ ವನಪಾಷಾಣಖಂಡಕೈಃ ॥ ೬೭ ॥

ಕ್ವ ಪುಂಸಾ ವಿಹಿತೈರರ್ಕೈಃ ಕ್ಷಪಿತಂ ಯಾಮಿನೀತಮಃ |
ಕ್ವ ಸಂಕಲ್ಪಮಯೈಶ್ಛಾಯಾ ಕ್ರಿಯತೇ ವ್ಯೋಮಕಾನನೈಃ ॥ ೬೮ ॥

ಕ್ವ ಜಡೈರುಪಲಾಕಾರೈರ್ಮಿಥ್ಯಾಭ್ರಮಭರೋತ್ಥಿತೈಃ |
ಮೃಗತೃಷ್ಣಾಮಯೈರೇಭಿರ್ಮನೋಭಿಃ ಕ್ರಿಯತೇ ಕ್ರಿಯಾ ॥ ೬೯ ॥

ಯಥಾತಪೇಽಕ್ಷತೇ ಸ್ಫಾರೇ ಮೃಗತೃಷ್ಣಾತರಂಗಿಣೀ |
ಕಲನಾ ತದ್ವದೇವೇಯಂ ಸ್ಫುರತ್ಯಾತ್ಮನಿ ಸತ್ಯಲಂ ॥ ೭೦ ॥

---

೬೭. ಹೆಣಗಳಿಗೆ ರಕ್ತವನ್ನು ಬೊಳಿದ ಮಾತ್ರದಿಂದಲೇ ಅವು ಎದ್ದು ಕುಣಿದಾಡುವುದುಂಟೇನು ? ಕಾಡಿನಲ್ಲಿ ಬಿದ್ದಿರುವ ಕಲ್ಲಿನ ಚೂರುಗಳು ಎಲ್ಲಿ ಮಧುರವಾಗಿ ಹಾಡುವುವು ?

೬೮. ಮನುಷ್ಯರು ಸೂರ್ಯಬಿಂಬಗಳನ್ನು ಸೃಷ್ಟಿಸಿ ರಾತ್ರಿಯ ಕತ್ತಲನ್ನು ಕಳೆದಿರುವುದೆಲ್ಲಿ ಉಂಟು ? ಸಂಕಲ್ಪಮಯಗಳಾದ ವ್ಯೋಮಕಾನನಗಳಿಂದ ನೆರಳಾಗುವುದು ಎಲ್ಲಿ ?

೬೯. (ಹಾಗೆಯೇ), ಕಲ್ಲಿನ ಹಾಗೆ ಜಡವಾಗಿರುವ, ಮಿಥ್ಯಾಭೂತವಾದ ಭ್ರಮದಿಂದ ಉಂಟಾಗಿರುವ, ಮೃಗತೃಷ್ಣೆ (ಬಿಸಿಲುಗುದುರೆ) ಗಳಂತಿರುವ ಈ ಮನಸ್ಸುಗಳಿಂದ ಏನು ಕೆಲಸ ತಾನೇ ಆದೀತು ?

೭೦. ತಾನೇ ತಾನಾಗಿರುವ ಬಿಸಿಲಿನಲ್ಲಿ ಮೃಗತೃಷ್ಣೆಯ ನದಿಯು ದೊಡ್ಡದಾಗಿ ಕಾಣುವಂತೆ, ಸತ್ಯವಾಗಿರುವ ಆತ್ಮನಲ್ಲಿ ಅಸತ್ಯವಾಗಿರುವ ಚಿತ್ತ ಸ್ಫುರಿಸುವುದು.

ಯದೇತತ್ಸ್ಪಂದಿತಂ ನಾಮ ತನ್ಮನೋಽಧಿಗತಂ ಶನೈಃ ।
ಮರುತಾಂ ವಿದ್ಧಿ ತಾಂ ಶಕ್ತಿಮಂತಃ ಪ್ರಾಣಶರೀರಿಣೀಂ ॥ ೭೧ ॥

ಏಷಾಂ ಸಂವಿದನಾಕ್ರಾಂತಾ ಸಂಕಲ್ಪಲವನಿಶ್ಚಯೈಃ ।
ಅನಾಕ್ಷಿಪ್ತರಸಾಕಾರಾ ಪ್ರಭೈಷಾ ಪಾರಮಾತ್ಮಿಕೀ ॥ ೭೨ ॥

ಅಯಂ ಸೋಽಹಮಿದಂ ತನ್ಮ ಇತಿ ಯಾ ಕಲನಾವಿಲಾ ।
ಪ್ರಾಣಾತ್ಮತತ್ತ್ವಯೋಸ್ತಸ್ಯಾಃ ಸಂಜ್ಞಾ ಜೀವೇತಿ ಕಥ್ಯತೇ ॥ ೭೩ ॥

---

೭೧. ಈ ಚಿತ್ತಿಗೆ ಕಾರಣವು ಸ್ಪಂದವು. ಅದೇ ಮನಸ್ಸಿಲ್ಲಿಯೂ ಸೂಕ್ಷ್ಮವಾಗಿ ಇರುವುದು. ಪ್ರಾಣವಂತವಾದ ಶರೀರದಲ್ಲಿ ಪ್ರಾಣಾದಿ ವಾಯುಗಳನ್ನು ಪ್ರೇರಿಸುವುದು ಕೂಡ ಅದೇ ಶಕ್ತಿಯೇ ಎಂದು ತಿಳಿ.

(ಚಿತ್ತಿನ ಸ್ಪಂದವೇ ಮನಸ್ಸೆಂದು ಹೇಳುವರಲ್ಲವೆ ? ಈ ಸ್ಪಂದಶಕ್ತಿಯಲ್ಲಿ ಚಿದಂಶವು ಆತ್ಮಮಾತ್ರವಾಗಿರುವುದು. ಅಚಿದಂಶವು ಪ್ರಾಣವಾಗಿರುವುದು ....ಅದುಕಾರಣ, ಕೇವಲ ಸ್ಪಂದ ಸಾಮಾನ್ಯವೇ ಮನಸ್ಸೆಂದು ತಿಳಿದುಕೊಳ್ಳುವವರು ಆತ್ಮವಂಚಕರೆನ್ನಿಸಿಕೊಳ್ಳುವರು. ಈ ಶಕ್ತಿಯು ಅನ್ನಮಯ ಕೋಶಾಂತರ್ಗತವಾದ ಪ್ರಾಣಮಯಕೋಶವೆಂದು ನೀನು ತಿಳಿಯುವವನಾಗು—ವೈಭವ.)

೭೨. ಯೋಗಿಗಳ ಸಂವಿತ್ತು ಯಾವ ರೀತಿಯಾದ ಸಂಕಲ್ಪ, ನಿಶ್ಚಯಗಳೇನೂ ಇಲ್ಲದೆ ಶುದ್ಧವಾಗಿರುವುದು. ಅಂತಹ ಅಖಂಡರಸೈಕವಾದ ಸಂವಿತ್ತೇ ಪರಮಾತ್ಮಸ್ವರೂಪವು.

೭೩. ಇವನು, ಅವನು, ನಾನು, ಇದು, ಅದು, ನನ್ನದು, ಎಂಬ ಯಾವ ಕಲ್ಪನೆಯೆಂಬ ಪಾಚಿಯುಂಟೋ ಅದು ಪ್ರಾಣ, ಆತ್ಮ ಎಂಬ ಎರಡು ತತ್ತ್ವಗಳನ್ನು ಪ್ರತ್ಯೇಕಿಸಿ ನೋಡದಿರುವಾಗ ಉಂಟಾದುದು. ಅದೇ ಜೀವ ಎನ್ನಿಸಿಕೊಳ್ಳುವುದು.

ಧೀಶ್ಚಿತ್ತಂ ಜೀವ ಇತ್ಯೇತಾಃ ಸಂಕಲ್ಪಸ್ಯಾಸತೋ ಮತಾಃ |
ಸಂಜ್ಞಾಃ ಸಂಕಲ್ಪಿತಾಸ್ತಜ್ಜ್ಞೈರ್ನ ರಾಮ ಪರಮಾರ್ಥತಃ || ೭೪ ||

ಮನೋ ನೋ ನ ಮತಿರ್ನಾಪಿ ಧೀರೇಷಾ ನ ಶರೀರಕಂ |
ಅಸ್ತೀಹ ಪರಮಾರ್ಥೇನ ಸ್ವಾತ್ಮೈವೇಹಾಸ್ತಿ ಸರ್ವದಾ || ೭೫ ||

ಆತ್ಮೈವೇದಂ ಜಗತ್ಸರ್ವಮಾತ್ಮಾ ಕಾಲಕ್ರಮಸ್ತಥಾ |
ಸ ಚಾಕಾಶಾದಚ್ಛತರೋ ನಾಸ್ತೀವಾಸ್ತ್ಯೇವ ಚಾಮಲಃ || ೭೬ ||

ಅಚ್ಛತ್ವಾದಸದಾಭಾಸಃ ಸಂವಿದ್ರೂಪತಯಾ ತು ಸತ್ |
ಆತ್ಮಾ ಸರ್ವಪದಾತೀತಃ ಸ್ವಾನುಭೂತ್ಯಾನುಭೂತಯೇ || ೭೭ ||

---

೭೪. (ಅದರೇನು?) ಮನಸ್ಸು ಎಂಬುದು ಪ್ರತ್ಯೇಕ ವಸ್ತುವಾಗಿ ಒಂದಿಲ್ಲ. ಮತಿ ಎಂಬುದು ಇಲ್ಲ: ಬುದ್ಧಿಯೆಂಬ ಇನ್ನೊಂದಿಲ್ಲ: ದೇಹವೂ ಇಲ್ಲ. ಪರಮಾರ್ಥ ದೃಷ್ಟಿಯಿಂದ, ಆತ್ಮನೊಬ್ಬನೇ ಸರ್ವದಾ ಇರುವನು.

೭೫. ಬುದ್ಧಿ, ಚಿತ್ತ, ಜೀವ, ಈ ಹೆಸರುಗಳೆಲ್ಲ ಆ ಸತ್ತಾದ ಸಂಕಲ್ಪಕ್ಕೇ ಹೊರತು ಇನ್ನು ಯಾವುದಕ್ಕೂ ಅಲ್ಲ. ತಿಳಿದವರು ಇವನ್ನೆಲ್ಲ ಸಂಜ್ಞೆಗಳು, ಪರಮಾರ್ಥ ಸತ್ಯಗಳಲ್ಲ ಎನ್ನುವರು

("ಅಪ್ರಾಣೋಹ್ಯಮನಾಃ ಶುಭ್ರಃ" "ಅಕಾಯ ಮವ್ರಣಮಸ್ನಾವಿರಂ" "ಅಸ್ಥೂಲಮನಣು" ಇತ್ಯಾದಿ ಶ್ರುತಿಶತೇನ ವಿದ್ವದನುಭವೈರ್ಯುಕ್ತಿಭಿಶ್ಚಬಾಧಿತತ್ವಾತ್ ದೃಶ್ಯಮಾತ್ರಮಹಾತ್ಮನಿನಾಸ್ತಿ ಇತಿ ಭಾವಃ"—ತಾ. ಪ್ರ.)

೭೬. ಈ ಜಗತ್ತೆಲ್ಲವೂ ಆತ್ಮವೇ! ಕಾಲದ ತಾಳು ತುದಿಗಳೆಲ್ಲವೂ ಅವನೇ! ಆ ಆತ್ಮನು ಆಕಾಶಕ್ಕಿಂತ ನಿರ್ಮಲನು. ಇವನು ಒಂದು ದೃಷ್ಟಿಯಿಂದ (ಜಡರ ಕಣ್ಣಿಗೆ) ಇಲ್ಲ. ಇನ್ನೊಂದು ದೃಷ್ಟಿಯಿಂದ (ಬುದ್ಧಿವಂತರ ಕಣ್ಣಿಗೆ) ಶುದ್ಧನಾಗಿ ಇದ್ದೇ ಇರುವನು

೭೭. ಅಸತ್ತಾದ ದೃಶ್ಯದಂತೆ ಕಂಡಂತಿದ್ದರೂ ಆತ್ಮನು ಅಚ್ಛನು ಇಂದ್ರಿಯ ಗ್ರಾಹ್ಯನಲ್ಲ. ಎಲ್ಲಾ ಜ್ಞಾನಗಳನ್ನೂ ಗ್ರಹಿಸುವ ಸಂವಿದ್ರೂಪನೇ ಆದವನು. ಅದರಿಂದ ಎಲ್ಲ ಪದವಿಗಳನ್ನೂ ಮೀರಿದವನು. ಇಂತಹ ಅತ್ಮನು ಕೇವಲ ಸ್ವಾನುಭವದಿಂದಲೇ ವ್ಯಕ್ತನಾಗುವನು.

ಮನಸ್ತತ್ರ ಪರಿಕ್ಷೀಣಂ ಯತ್ರ ಸಂವಿತ್ಪರಾತ್ಮನಃ ।
ಅಂಧಕಾರಕ್ಷಯಸ್ತತ್ರ ಯತ್ರಾಲೋಕಃ ಪ್ರವರ್ತತೇ ॥ ೭೮ ॥

ಯತ್ರಾತ್ಮಸಂವಿದೋಽಚ್ಛಾಯಾಃ ಸಂಕಲ್ಪೋತ್ಥತಯಾ ಮತಾಃ ।
ತತ್ರಾತ್ಮನೋ ವಿಸ್ಮರಣಂ ಸ್ಮರಣಂ ಚಿತ್ತಜನ್ಮನಃ ॥ ೭೯ ॥

ಪರಸ್ಯ ಪುಂಸಃ ಸಂಕಲ್ಪಮಯತ್ವಂ ಚಿತ್ತಮುಚ್ಯತೇ ।
ಅಚಿತ್ತತ್ವಮಸಂಕಲ್ಪಾನ್ಮೋಕ್ಷಸ್ತೇನಾಭಿಜಾಯತೇ ॥ ೮೦ ॥

ಏತಾವಚ್ಚೇತಸೋ ಜನ್ಮ ಬೀಜಂ ಸಂಸಾರಭೂತಯೇ ।
ಸಂಕಲ್ಪೋನ್ಮುಖತಾಂ ಯಾತಃ ಸಂವಿದೋ ವಾ ಕಿಲಾತ್ಮನಃ ॥ ೮೧ ॥

---

೭೮. ಬೆಳಕು ಬಿದ್ದೆಡೆಯಲ್ಲಿ ಕತ್ತಲು ನಾಶವಾಗುವಂತೆ, ಎಲ್ಲಿ ಆ ಪರಾತ್ಪರ ವಸ್ತುವಿನ ಬೆಳಕು ಬೀಳುವುದೋ ಅಲ್ಲಿ ಮನಸ್ಸು ಪೂರ್ಣವಾಗಿ ಕ್ಷಯವಾಗುವುದು.

(ಸ್ಥೌಲ್ಯಾದಿಗಳು ಇಲ್ಲನಾದ ಕಾರಣ, ಅಲ್ಲಿ ಇತರ ಕಾರಣಗಳು ಪ್ರವರ್ತಿಸದಿದ್ದರೆ ಹೋಗಲಿ, ಅರ್ಥನಿರ್ಣಯಕ್ಕೆ ಕಾರಣವೆಂದು ಪ್ರಸಿದ್ಧವಾದ ಮನಸ್ಸಾದರೂ ಸೂಕ್ಷ್ಮವಾದುದುದರಿಂದ ಅಲ್ಲಿ ಪ್ರವರ್ತಿಸಲಿ ಎಂದರೆ,)

೭೯. ಅತಿ ನಿರ್ಮಲವಾದ ಆತ್ಮತತ್ವಕ್ಕೆ ಸ್ವಸಂಕಲ್ಪಜನ್ಯಗಳಾದ ಬಾಹ್ಯ ಪದಾರ್ಥಗಳುಂಟು ಎಂದು ಬಂದ ಕೂಡಲೇ ಆತ್ಮನು ಸ್ವಸ್ವರೂಪವನ್ನು ಮರೆಯುವನು. ಅಲ್ಲಿಯೇ ಚಿತ್ತವು ಜನಿಸುವುದು.

೮೦. ಪರಮ ಪುರುಷನು ಸಂಕಲ್ಪಮಯನಾದಾಗಲೇ ಚಿತ್ತವಾಗುವನು. ಅಸಂಕಲ್ಪನಾಗಿರುವಷ್ಟು ಕಾಲವೂ ಅಚಿತ್ತನಾಗಿರುವನು. ಅದೇ ಮೋಕ್ಷವೆನ್ನಿಸಿಕೊಳ್ಳುವುದು.

೮೧. ಸಂಕಲ್ಪೋನ್ಮುಖನಾದ ಆತ್ಮನ ಸಂವಿತ್ತೇ ಚಿತ್ತವಾಗುವುದು. ಇದು ಈ ಮನಸ್ಸಿನ ಹುಟ್ಟು. ಇದೇ ಸಂಸಾರಕ್ಕೆ ಬೀಜವು.

ನಿರ್ವಿಕಲ್ಪಾಚ್ಚಿತಃ ಸತ್ತಾ ಸಂಕಲ್ಪಾಂಕ ಕಲಂಕಿತಾ ।
ಕಲನೇತ್ಯುಚ್ಯತೇ ತೇನ ಪುಂಸ್ತ್ವವದ್ಬುದ್ಧ್ಯತೇ ಮನಃ ॥ ೮೨ ॥

ಪ್ರಾಣಶಕ್ತೌ ನಿರುದ್ಧಾಯಾಂ ಮನೋ ರಾಮ ವಿಲೀಯತೇ ।
ದ್ರವ್ಯಚ್ಛಾಯಾನು ತದ್ದ್ರವ್ಯಂ ಪ್ರಾಣರೂಪಂ ಹಿ ಮಾನಸಂ ॥ ೮೩ ॥

ದೇಶಾಂತರಾನುಭವನಂ ಪ್ರಾಣೋ ವೇತ್ತಿ ಹೃದಿ ಸ್ಥಿತಂ ।
ಸ್ಪಂದವೇದನತೋ ಯತ್ತನ್ಮನ ಇತ್ಯಭಿಧೀಯತೇ ॥ ೮೪ ॥

---

೮೨. ನಿರ್ವಿಕಲ್ಪ ಸತ್ತು ಆದ ಚಿತ್ತು, ಸಂಕಲ್ಪದಿಂದ ಕಲಂಕಿತವಾದಾಗ ಅದೇ ಕಲನಾ, ಚಿತ್ತ, ಎನ್ನಿಸಿಕೊಳ್ಳುವುದು. ಅದರಿಂದ ಮನಸ್ಸು, ಪುರುಷನಲ್ಲಿ ಪುಂಸ್ತ್ವವು ಉದ್ಬೋಧವಾಗುವಂತೆ ಚಲಿಸುವುದು.

(ಯಥಾ ಸ್ತ್ರ್ಯಾದಿ ಸಂಕಲ್ಪಕಲನಯಾ ಪುಂಸ್ತ್ವಂ ಪುಂವ್ಯಂಜನಂ ಬುದ್ಧ್ಯತೇ ಪ್ರಜಾ ಪ್ರಸವಾರ್ಥಮಾವಿರ್ಭವತಿ ತಥಾಮನೋಽಪಿ ಜಗತ್ಪ್ರಸವಾರ್ಥಮಿತ್ಯರ್ಥಃ ॥ ತಥಾ ಚ ಬಾದರಾಯಣಸ್ಯಾಪಿ ಸೂತ್ರಂ "ಪುಂಸ್ತ್ವಾದಿವದಪಿ ಹಿ ಲೋಕೇ" ಇತಿ— ತಾ. ಪ್ರ.)

೮೩. ವಸ್ತುವಿನ ನೆರಳು ವಸ್ತುವನ್ನು ಅನುಸರಿಸುವುದು. (ಅದು ಇಲ್ಲದಿದ್ದರೆ ತಾನೂ ಇಲ್ಲವಾಗುವುದು). ಅದರಂತೆ, ಪ್ರಾಣಶಕ್ತಿಯು ನಿರೋಧವಾದರೆ ರಾಮ, ಮನಸ್ಸೂ ನಾಶವಾಗುವುದು. ಅದರಿಂದ ಮನಸ್ಸು ಪ್ರಾಣದ ರೂಪಾಂತರವು.

೮೪. ದೇಶಾಂತರದಲ್ಲಿರುವ ಪದಾರ್ಥವನ್ನು ಹೃದಯದಲ್ಲಿಯೇ ಕುಳಿತಿರುವ ಪ್ರಾಣವು ಅನುಭವ ಮಾಡುವುದುಂಟಲ್ಲವೆ ? ಅದೇ ಸ್ಪಂದವು. ಆ ಅನುಭವವು ಬರುವುದು ಆ ಸ್ಪಂದದಿಂದಲೇ! ಅದರಿಂದ ಆ ಸ್ಪಂದವೇ ಮನಸ್ಸು.

ವೈರಾಗ್ಯಾತ್ಕರಣಾಭ್ಯಾಸಾದ್ಯುಕ್ತಿತೋ ವ್ಯಸನಕ್ಷಯಾತ್ ।
ಪರಮಾರ್ಥಾವಬೋಧಾಚ್ಚ ರೋಧ್ಯಂತೇ ಪ್ರಾಣವಾಯವಃ ॥ ೮೫ ॥

ದೃಷದೋ ವಿದ್ಯತೇ ಶಕ್ತಿಃ ಕದಾಚಿಜ್ಜ್ವಲಸ್ಯೈಧಸಾಂ ।
ನ ಪುನರ್ಮನಸಾಮಸ್ತಿ ಶಕ್ತಿಃ ಸ್ಪಂದಾವಬೋಧನೇ ॥ ೮೬ ॥

ಸ್ಪಂದಃ ಪ್ರಾಣಮರುಚ್ಛಕ್ತಿಶ್ಚಲದ್ರೂಪೈವ ಸಾ ಜಡಾ ।
ಚಿಚ್ಛಕ್ತಿಃ ಸ್ವಾತ್ಮನಃ ಸ್ವಚ್ಛಾ ಸರ್ವದಾ ಸರ್ವಗೈವ ಸಾ ॥ ೮೭ ॥

ಚಿಚ್ಛಕ್ತೇಃ ಸ್ಪಂದಶಕ್ತೇಶ್ಚ ಸಂಬಂಧಃ ಕಲ್ಪ್ಯತೇ ಮನಃ ।
ಮಿಥ್ಯೈವ ತತ್ಸಮುತ್ಪನ್ನಂ ಮಿಥ್ಯಾ ಜ್ಞಾನಂ ತದುಚ್ಯತೇ ॥ ೮೮ ॥

---

೮೫. ವೈರಾಗ್ಯದಿಂದಲೂ, ಬ್ರಹ್ಮಾಭ್ಯಾಸದಿಂದಲೂ ಯುಕ್ತಿಗಳಿಂದ ಶಾಸ್ತ್ರಾರ್ಥವನ್ನು ಸಮರ್ಥನಮಾಡಿಕೊಳ್ಳುವುದರಿಂದಲೂ, ವ್ಯಸನಗಳನ್ನು ಕಳೆದು ಕೊಳ್ಳುವುದರಿಂದಲೂ, ಪರಮಾರ್ಥವನ್ನು ತಿಳಿದುಕೊಳ್ಳುವುದರಿಂದಲೂ ಪ್ರಾಣ ವಾಯುಗಳನ್ನು ನಿರೋಧಿಸಬಹುದು.

೮೬. ಕಲ್ಲಿಗೆ ಕೂಡ ಒಂದಾನೊಂದು ಕಾಲದಲ್ಲಿ ಚಲನಶಕ್ತಿಯೂ ಜ್ವಲನ ಶಕ್ತಿಯೂ ಬಂದರೂ ಬರಬಹುದು. ಆದರೆ ಮನಸ್ಸಿಗೆ ಮಾತ್ರ ಸ್ಪಂದಶಕ್ತಿ, ಜ್ಞಾನಶಕ್ತಿಗಳಿರುವುದಿಲ್ಲ. (ಇದಾನೀಂ "ಅಗ್ನಿಮಯಂ ಹಿ ಸೌಮ್ಯ, ಮನ, ಆಪೋ ಮಯಂ ಪ್ರಾಣಃ" ಇತಿ ಶ್ರುತ್ಯಾ ಭಿನ್ನೋಪಾದಾನಕಯೋಃ ಪ್ರಾಣಮನಸೋರ್ಭೇದ ಇತಿ ಪಕ್ಷೇಽಪಿ ಮನಸಃ ಸ್ವತಃ ಸ್ಪಂದಶಕ್ತೇಶ್ಚಿಚ್ಛಕ್ತೇಶ್ಚ ಅಭಾವಾತ್ ಚಿದಾತ್ಮಾ ಧೀನೇ ಏವ ತೇ ಇತಿ ಪ್ರಾಣನಿರೋಧೋಪಪತ್ತಿರಿತ್ಯಾಶಯೇನಾಹ-ತಾ. ಪ್ರ.)

೮೭. ಸ್ಪಂದವು ಪ್ರಾಣವಾಯುವಿನ ಶಕ್ತಿಯು. ಅದು ಜಡವಾದರೂ ಚಲನರೂಪವು. ಚಿಚ್ಛಕ್ತಿಯು ಆತ್ಮನ ಸರ್ವದಾ ಸರ್ವತ್ರಗತಿಯುಳ್ಳ ಸ್ವಚ್ಛವಾದ ಶಕ್ತಿಯು.

೮೮. ಚಿಚ್ಛಕ್ತಿ ಸ್ಪಂದಶಕ್ತಿಗಳ ಸಂಬಂಧವೇ ಮನಸ್ಸನ್ನು ಕಲ್ಪಿಸುವುದು. ಅದು ಮಿಥ್ಯೆಯಾಗಿಯೇ ಹುಟ್ಟುವುದು. ಅದು ಕೊಡುವ ಜ್ಞಾನವೂ ಕೂಡ ಮಿಥ್ಯೆಯೇ !

ಏಷಾ ಹ್ಯವಿದ್ಯಾ ಕಥಿತಾ ಮಾಯೈಷಾ ಸಾ ನಿಗದ್ಯತೇ ।
ಪರಮೇತತ್ತದಜ್ಞಾನಂ ಸಂಸಾರಾದಿವಿಷಪ್ರದಂ ॥ ೮೯ ॥

ಚಿಚ್ಛಕ್ತೇಃ ಸ್ಪಂದಶಕ್ತೇಶ್ಚ ಸಂಗೇ ಸಂಕಲ್ಪಕಲ್ಪನಂ ।
ನ ಕೃತಂ ಚೇತ್ಪರಿಕ್ಷೀಣಾಸ್ತದಿಮಾ ಭವಭೀತಯಃ ॥ ೯೦ ॥

ವಾಯುತಃ ಸ್ಪಂದಶಕ್ತಿರ್ಯಾ ಸಾ ಚಿತಾ ಚೇತ್ಯತೇ ಯದಾ ।
ಸಚೇತ್ಯಾ ಚಿತ್ ತದೈವಾಂತಃ ಸಂಕಲ್ಪಾದ್ಯಾತಿ ಚಿತ್ತತಾಂ ॥ ೯೧ ॥

ಚಿತ್ತತೈಷಾ ಚಿತೋ ಮಿಥ್ಯಾ ಕಲ್ಪಿತಾ ಬಾಲಯಕ್ಷವತ್ ।
ಅಖಂಡಮಂಡಲಾಕಾರ ಸ್ಪಂದರೂಪಾ ಚಿದೇವ ಯತ್ ॥ ೯೨ ॥

ಸೈಷಾ ಚಿತ್ತಾ ತದನ್ಯೇನ ಕೇನ ಸಂಬಾಧ್ಯತೇ ಕಿಲ ।
ಅಖಂಡಶಕ್ತೇರಿಂದ್ರಸ್ಯ ಕೇನ ಸ್ಯಾತ್ಸಹ ಸಂಗರಃ ॥ ೯೩ ॥

---

೮೯. ಇದೇ ಅವಿದ್ಯೆಯು. ಇದೇ ಮಾಯೆಯೆನ್ನುವುದು. ಇದೇ ಎಲ್ಲಾ ಅಜ್ಞಾನಕ್ಕೂ ಸ್ಥಾನವು. ಇದೇ ಸಂಸಾರಾದಿ ವಿಷಗಳನ್ನೆಲ್ಲ ಕಾರುವುದು.

೯೦. ಚಿಚ್ಛಕ್ತಿ ಸ್ಪಂದಶಕ್ತಿಗಳ ಸಂಗದಲ್ಲಿ ಸಂಕಲ್ಪವು ಹುಟ್ಟುವುದು. ಅದನ್ನು ಅಂಗೀಕರಿಸದಿದ್ದರೆ, ಈ ಸಂಸಾರ ಭೀತಿಗಳೆಲ್ಲವೂ ನಾಶವಾದಂತೆಯೇ ಸರಿ.

೯೧. ಪ್ರಾಣವಾಯುವಿನಲ್ಲಿರುವ ಸ್ಪಂದಶಕ್ತಿಯು, ಚಿಚ್ಛಕ್ತಿಯಿಂದ ಪ್ರಬುದ್ಧವಾದಾಗ, ಚಿಚ್ಛಕ್ತಿಗೆ ಸಚೇತ್ಯತೆಯು (ದೃಶ್ಯದೊಡನಿರುವಿಕೆಯು) ಬರುವುದು. ಆ ಅಂತಸ್ಸಂಕಲ್ಪತೆಯಿಂದಲೇ ಚಿತ್ತತೆಯು ಬರುವುದು.

೯೨. ಅಖಂಡಮಂಡಲಾಕಾರವಾದ ಚಿತ್ತು, ತಾನೇ ಚಿತ್ತತೆಯನ್ನು ಹೊಂದಿತೆಂದರೆ, ಅದು ಬಾಲಕನು ಕಲ್ಪಿಸಿಕೊಂಡ ಯಕ್ಷದಂತೆಯೇ ಸಂಕಲ್ಪಜನ್ಯವಾದುದು.

೯೩. ಅಖಂಡಶಕ್ತಿಯಾಗಿರುವ ಇಂದ್ರನಿಗೆ ಇನ್ನು ಯಾರೊಡನೆಯೂ ಸಂಗ್ರಾಮವೇ ಇಲ್ಲದಿರುವಂತೆ, ಚಿಚ್ಛಕ್ತಿಯು ಯಾವುದರಿಂದಲೂ ಹಾನಿಯನ್ನು ಪಡೆಯುವುದಿಲ್ಲ.

ಅತಃ ಸಂಬಂಧಿನೋಽಭಾವಾತ್ಸಂಬಂಧೋಽತ್ರ ನ ವಿದ್ಯತೇ |
ಸಂಬಂಧೇನ ವಿನಾ ಕಸ್ಯ ಸಿದ್ಧಂ ತತ್ಕೀದೃಶಂ ಮನಃ || ೯೪ ||

ಚಿತ್ಸ್ಪಂದಯೋರೇಕತಾಯಾಂ ಕಿಂ ನಾಮ ಮನ ಉಚ್ಯತೇ |
ಕಾ ಸೇನಾ ಹಯಮಾತಂಗ ಸಂಘ ಸಂಘಟ್ಟನಂ ವಿನಾ || ೯೫ ||

ತಸ್ಮಾನ್ನಾಸ್ತ್ಯೇವ ದುಷ್ಟಾತ್ಮಚಿತ್ತಂ ರಾಮ ಜಗತ್ತ್ರಯೇ |
ಸೈಷಾ ಸಮ್ಯಕ್ಪರಿಜ್ಞಾಸಾ ಚ್ಚೇತಸೋ ಜಾಯತೇ ಕ್ಷತಿಃ || ೯೬ ||

ಮುಧಾ ಮೈವಮನರ್ಥಾಯ ಮನಃ ಸಂಕಲ್ಪಯಾನಘ |
ಮನೋ ಮಿಥ್ಯಾಸಮುದಿತಂ ನಾಸ್ತ್ಯತ್ರ ಪರಮಾರ್ಥತಃ || ೯೭ ||

೯೪, ಸಂಬಂಧವುಂಟಾಗಬೇಕಾದರೆ ಸಂಬಂಧ ಯೋಗ್ಯವಾದ ಪದಾರ್ಥಗಳು ಇರಬೇಕು. ಅಂತಹ ಸಂಬಂಧನೇ ಇಲ್ಲದಾಗ ಮನಸ್ಸು ಹೇಗೆ ಯಾರಿಗಾಗಿ ಹುಟ್ಟಿತು ಎನ್ನಬೇಕು ?

(ಇಲ್ಲಿ ಚಿತ್ತಲ್ಲದೆ ಇನ್ನೇನೂ ಇಲ್ಲವೆನ್ನುವಾಗ ಮನಸ್ಸೆಂಬ ನೂತನ ಪ್ರತ್ಯೇಕ ಪದಾರ್ಥವೊಂದುಂಟೇ ಎಂದರೆ ಅದು ಕೇವಲ ಭ್ರಾಂತಿಜನ್ಯವಾದುದು ಎಂಬುದನ್ನು ತೋರಿಸುವುದೇ ಉದ್ದೇಶವು.)

೯೫. ಚಿತ್ತು ಸ್ಪಂದಗಳೆರಡೂ ಒಂದೇ ಎನ್ನುವುದಾದರೆ ಮನಸ್ಸು ಎನ್ನುವುದೇನು ಎಂದರೆ, ಆನೆ ಕುದುರೆಗಳ ಗುಂಪುಗಳೆಲ್ಲ ಸೇರದಿದ್ದರೆ ಸೇನೆಯೆನ್ನುವುದೇನು ?

೯೬. ಹೀಗಿರುವ ಕಾರಣ, ರಾಮ, ಜಗತ್ತ್ರಯದಲ್ಲೆಲ್ಲಾ ಹುಡುಕಿದರೂ ದುಷ್ಟಸ್ವರೂಪವಾದ ಈ ಮನಸ್ಸೆಂಬುದು ಇಲ್ಲವೇ ಇಲ್ಲ. ಚೆನ್ನಾಗಿ ವಿಚಾರಮಾಡಿ ನೋಡಿದರೆ, ಈ ಮನಸ್ಸು ಲಯವಾಗಿ ಹೋಗುವುದು.

೯೭. ಅದರಿಂದ, ಅನಘನಾದ ರಾಮನೆ, ಈ ಮನಸ್ಸು ಒಂದಿದೆಯೆಂಬ ಸಂಕಲ್ಪಕ್ಕೆ ಅವಕಾಶ ಕೊಡದಿರು. ಮನಸ್ಸು ಮಿಥ್ಯಾಜಾತವಾದುದು. ಪರಮಾರ್ಥದೃಷ್ಟಿಯಿಂದ ಮನಸ್ಸೆಂಬುದು ಪ್ರತ್ಯೇಕವಾಗಿಲ್ಲ.

ಮಾ ತ್ವಮಂತಃ ಕ್ವಚಿತ್ಕಿಂಚಿತ್ಸಂಕಲ್ಪಯ ಮಹಾಮತೇ ।
ಮನಃ ಸಂಕಲ್ಪಕಂ ರಾಮ ಯಸ್ಮಾನ್ನಾಸ್ತೀಹ ಕುತ್ರಚಿತ್ ॥ ೯೮ ॥

ಅಸಮ್ಯಗ್ಜ್ಞಾನಸಂಭೂತಾ ಕಲ್ಪನಾ ಮೃಗತೃಷ್ಣಿಕಾ ।
ಹೃನ್ಮೃತಾ ತವ ಸಂಶಾಂತಾ ಸಮ್ಯಗಾಲೋಕನಾನ್ಮನೇ ॥ ೯೯ ॥

ಜಡತ್ವಾನ್ನಿಃಸ್ವರೂಪತ್ವಾತ್ಸರ್ವದೈವ ಮೃತಂ ಮನಃ ।
ಮೃತೇನ ಮಾರ್ಯತೇ ಲೋಕಶ್ಚಿತ್ರೇಯಂ ಮೌರ್ಖ್ಯಚಕ್ರಿಕಾ ॥ ೧೦೦ ॥

ಯಸ್ಯ ನಾತ್ಮಾ ನ ದೇಹೋಸ್ತಿ ನಾಧಾರೋ ನಾಪಿ ಚಾಕೃತಿಃ ।
ತೇನೇದಂ ಭಕ್ಷ್ಯತೇ ಸರ್ವಂ ಚಿತ್ರೇಯಂ ಮೌರ್ಯವಾಗುರಾ ॥ ೧೦೧ ॥

---

೯೮. ಎಲೈ ಮಹಾಮತಿಯಾದ ರಾಮನೆ, ಅದರಿಂದ ನೀನು ಯಾವಾಗಲೂ ಹೇಗೆ ಹೇಗೂ ಏನೂ ಸಂಕಲ್ಪಮಾಡದಿರು. ನೀನು ಸಂಕಲ್ಪ ಮಾಡದಿದ್ದರೆ ನಿನ್ನ ಮನಸ್ಸು ಸಂಕಲ್ಪ ಮಾಡುವುದು ಎಂಬುದು ಎಲ್ಲಿಯೂ ಇಲ್ಲ.

೯೯. ಅಸಮ್ಯಗ್ಜ್ಞಾನದಿಂದ ಹುಟ್ಟಿರುವ ಈ ಮನಸ್ಸೆಂಬ ಮೃಗತೃಷ್ಣಿಕೆಯು ನಿನ್ನ ಹೃದಯವೆಂಬ ಮರುಭೂಮಿಯಲ್ಲಿ ಹರಿಯುತ್ತಿರುವುದು. ಇದು ಸಮ್ಯಗ್ ಜ್ಞಾನದಿಂದ ಚೆನ್ನಾಗಿ ಶಾಂತವಾಗುವುದು.

೧೦೦. ಈ ಮನಸ್ಸೆಂಬುದು ಜಡವು, ಸ್ವರೂಪರಹಿತವಾದುದು. ಆದರಿಂದ ನಿತ್ಯಮೃತವಾದುದು. ಹೀಗೆ ಮೃತವಾದ ಮನಸ್ಸೇ ಲೋಕಕ್ಕೆ ಮರಣಕಲ್ಪನೆಯನ್ನು ಕೊಟ್ಟಿರುವುದು. ಆಹಾ! ವಿಚಿತ್ರವಾದ ಈ ಮೌರ್ಖ್ಯವು ಚಕ್ರದಂತೆ ಸುತ್ತುತ್ತಿರುವುದು.

೧೦೧. ಈ ಲೋಕದಲ್ಲಿ ಮೌರ್ಖ್ಯವೆಂಬುದೊಂದು ಬಲೆಯಿರುವುದು. ಆ ಬಲೆಗೆ ಜೀವವಿಲ್ಲ ದೇಹವಿಲ್ಲ. ಅದಕ್ಕೆ ಆಧಾರವಿಲ್ಲ; ಆಕೃತಿಯಿಲ್ಲ. ಆದರೂ ಏನು ಚಿತ್ರವಿದು! ಅದು ಎಲ್ಲವನ್ನೂ ತಿನ್ನುತ್ತಿರುವುದು!

ಸರ್ವಸಾಮಗ್ರ್ಯಹೀನೇನ ಹನ್ಯತೇ ಮನಸಾಪಿ ಯಃ |
ನೀಲೋತ್ಪಲದಲಾಘಾತೈರ್ಮನ್ಯೇ ದಲಿತಮಸ್ತಕಂ || ೧೦೨ ||

ಜಡೇನ ಮೂಕೇನಾಂಧೇನ ನಿಹತೋ ಮನಸಾಪಿ ಯಃ |
ಮನ್ಯೇ ಸ ದಹ್ಯತೇ ಮೂಢಃ ಪೂರ್ಣಚಂದ್ರ ಮರೀಚಿಭಿಃ || ೧೦೩ ||

ವಿದ್ಯಮಾನೋಽಪಿ ಯಃ ಶೂರೋ ಲೋಕಸ್ತೇನಾಭಿಭೂಯತೇ |
ಅವಿದ್ಯಮಾನಮೇವೇದಂ ಹನ್ಯತೇ ಮುಗ್ಧತೋದಿತಾ || ೧೦೪ ||

ಮಿಥ್ಯಾಸಂಕಲ್ಪಕಲಿತಂ ಮಿಥ್ಯಾವಸ್ಥಿತಿಮಾಗತಂ |
ಅನ್ವಿಷ್ಟಮಪಿ ನೋ ದೃಷ್ಟಂ ಕಾ ತಸ್ಯ ಕಿಲ ಶಕ್ತತಾ || ೦೫ ||

---

೧೦೨. ಯಾವುದೊಂದು ಹನನ ಸಾಮಗ್ರಿಯೂ ಇಲ್ಲದೆಯೇ ಮನಸ್ಸು ಎಲ್ಲವನ್ನೂ ಹತಮಾಡುತ್ತಿರುವುದು ಎಂದರೆ, ಏನು ಹೇಳಲಿ, ಕನ್ನೈದಿಲೆಯ ದಳಗಳಿಂದ ಹೊಡೆದು ತಲೆಯನ್ನು ಒಡೆದರು ಎಂದಂತಾಯಿತು

೧೦೩. ಜಡವಾದ, ಮೂಕವಾದ, ಕುರುಡಾದ, ಮನಸ್ಸಿನಿಂದ ಹತನಾದೆನು ಎಂದರೆ, ಆ ಮೂಢನಿಗೆ ಏನು ಹೇಳಬೇಕು? ಅವನು ಹುಣ್ಣಿಮೆಯ ಚಂದ್ರನ ಕಿರಣಗಳಿಂದಲೂ ದಗ್ಧನಾಗುವನು.

೧೦೪. ಶೂರನಾದವನು ಒಬ್ಬನಿರುವನಾದರೆ, ಅವನಿಂದ ಲೋಕವು ಜಿತವಾಯ್ತೆನ್ನಬಹುದು. ಆದರೆ, ಈ ಮನಸ್ಸು ಎಂಬುದು ಇಲ್ಲವೇ ಇಲ್ಲ. ಇದರಿಂದ ಕೂಡ ಹತನಾಗುವೆನು ಎಂದರೆ, ಅದೆಂತಹ ಮೌಢ್ಯವು !

೧೦೫. ಮಿಥ್ಯಾ ಸಂಕಲ್ಪದಿಂದ ಹುಟ್ಟಿ, ಮಿಥ್ಯಾ ಸ್ಥಿತಿಯಲ್ಲಿಯೇ ಇದ್ದು, ಹುಡುಕಿ ಹುಡುಕಿದರೂ ಸಿಕ್ಕದೆಯೇ ಇರುವ, ಆ ಮನಸ್ಸಿನ ಶಕ್ತಿ ಎಂಥದು !

ಅಹೋ ನು ಖಲು ಚಿತ್ರೇಯಂ ಮಾಯಾಮಯವಿಧಾಯಿನೀ ।
ಚೇತಸಾಪ್ಯತಿಲೋಲೇನ ಲೋಕೋಯಮಭಿಭೂಯತೇ ॥ ೧೦೬ ॥

ಮೌರ್ಖ್ಯಂ ಯದಾಪದಾನ್ವಿಷ್ಟಃ ಕಾ ಹಿ ನಾಪದಜಾನತಃ ।
ಪಶ್ಯ ಮೌರ್ಖ್ಯಾದಿಯಂ ಸೃಷ್ಟಿರಜ್ಞಾನೇನೈವ ಜನ್ಯತೇ ॥ ೧೦೭ ॥

ಹಾಕಷ್ಟಮಪಿ ದುರ್ಬುದ್ಧೇಃ ಸೃಷ್ಟಿಮೌರ್ಖ್ಯವಶಂ ಗತಾ ।
ಅಸತ್ಯೈವ ಯದೇತೇನ ಜೀವೇನಾಪ್ಯುಪಪಾದ್ಯತೇ ॥ ೧೦೮ ॥

ಮನ್ಯೇ ಮೌರ್ಖ್ಯಮಯೀ ಸೃಷ್ಟಿರಿಯಮತ್ಯಂತ ಪೇಲವಾ ।
ವಾಸ್ತರಂಗಪ್ರವಾಹೇಣ ಕಣಶಃ ಪರಿಶೀರ್ಯತೇ ॥ ೧೦೯ ॥

---

೧೦೬. ಈ ಮಾಯೆಯು ಎಂತಹ ವಿಚಿತ್ರವಾದುದು! ಮಯಾಸುರನನ್ನು ಕೂಡ ಸೃಷ್ಟಿಸಬಲ್ಲುದೀ ಮಾಯೆ! ಅತಿ ಚಂಚಲವಾದ ಮನಸ್ಸು ಕೂಡ, ಈ ಲೋಕವನ್ನು ಸೋಲಿಸುವದಲ್ಲ!

೧೦೭. ಆಪತ್ತುಗಳು ಹುಡುಕಿಕೊಂಡು ಬರುವುವು ಎಂಬುದು ಎಂತಹ ಮೌರ್ಖ್ಯವು! ತಿಳಿಯದವನಿಗೆ ಯಾವದು ತಾನೆ ಆಪತ್ತಲ್ಲ!

೧೦೮. ಅತಿ ದುರ್ಬುದ್ಧಿಯ ಮೌರ್ಖ್ಯದಿಂದ ಹುಟ್ಟಿರುವ ಈ ಸೃಷ್ಟಿಯು, ತಾನೇ ಇಲ್ಲದಿರುವ ಈ ಜೀವನಿಂದ ಉಪಪಾದಿತವಾಗುತ್ತಿರುವದು! ಎಂತಹ ಕಷ್ಟವಿದು!

೧೦೯. ಈ ಸೃಷ್ಟಿಗೆ ಸೃಷ್ಟಿಯೇ ಮೌರ್ಖ್ಯದಿಂದ ಹುಟ್ಟಿರುವುದು. ಇದು ಬಹಳ ಮಟ್ಟಿಗೆ ಲಘುವಾದುದು. (ಅಂತಸ್ಸತ್ವವಿಲ್ಲದುದು) ನೀರಿನ ಪ್ರವಾಹವು ಹರಿಯುತ್ತಿರುವಾಗ ಮೇಲೆ ಹಾರಿದ ತುಂತುರಿನಂತಿರುವುದು.

ನೀಲಾಂಜನಾಲವಾಲೇನ ಯಂತ್ರೇಣೈವ ವಿಚೂರ್ಣ್ಯತೇ ।
ಇಂದೋರಾಭೋಗ ಪೂರ್ಣಸ್ಯ ಕರಸ್ಪರ್ಶೇನ ಮುಹ್ಯತಿ ॥ ೧೧೦ ॥

ರಿಪುಭಿರ್ನಯನೋನ್ಮುಕ್ತೈರ್ದೃಷ್ಟಃ ಸೂತ್ರೈರ್ನಿಬಧ್ಯತೇ !
ಸಂಕಲ್ಪಕೃತಯಾ ಶೂರಸೇನಯಾ ಪರಿಭೂಯತೇ ॥ ೧೧೧ ॥

ತಸ್ಮಾತ್ಕ್ವಿಲೇಯಂ ಮನಸಾ ನ ಸ್ಥಿತೇನೈವ ಕುತ್ರಚಿತ್ ।
ಕಲ್ಪಿತೇನ ಮುಧಾಽನ್ಯೇನ ಕೃಪಣೇನ ನಿಹನ್ಯತೇ ॥ ೧೧೨ ॥

ಮೂರ್ಖಲೋಕಮಯೀ ಸೃಷ್ಟಿರ್ಮನ ಏವಾಸದುತ್ಥಿತಂ ।
ಯಃ ಶಕ್ತೋ ನ ವಶೀಕರ್ತುಂ ನಾಸೌ ರಾಮೋಪದಿಶ್ಯತೇ ॥ ೧೧೩ ॥

ಅಭಿಜಾತಾಽಸ್ವರೂಪೈಷಾ ಪ್ರಜ್ಞಾ ಕ್ಷೋದೇಷು ನ ಕ್ಷಮಾ ।
ನೋಪದೇಶಗಿರಾಂ ಯೋಗ್ಯಾ ಪರಿಪೂರ್ಣೇವ ಸಂಸ್ಥಿತಾ ॥ ೧೪ ॥

---

೧೧೦. ಅದೇ ತುಂತುರು, ಎಲ್ಲಿಯಾದರೂ ಸುಳಿಗೆ ಸಿಕ್ಕಿದರೆ, ಕರಿಯ ಕಾಡಿಗೆಯ ಕರೆ ಕಟ್ಟಿ ಕಲ್ಲಿನಿಂದ ಅರೆದಂತೆ ಕಾಣುವುದು. ಅದೇ ತುಂತುರು ಪೂರ್ಣಚಂದ್ರನ ಕಿರಣಗಳಿಗೆ ಸಿಕ್ಕಿದರೆ, ಮೋಹಗೊಂಡ ಮುಗ್ಧಾಂಗನೆಯಂತಾಗುವುದು.

೧೧೧. ಶತ್ರುಗಳು ತಮ್ಮ ಕಣ್ಣುಗಳಿಂದ ನೋಡುತ್ತಿದ್ದ ಹಾಗೆಯೇ ಹಗ್ಗಗಳಿಂದ ಕಟ್ಟುವಡೆದವನಂತೆ, ಸಂಕಲ್ಪಜನ್ಯವಾದ ಶೂರಸೇನೆಯಿಂದ ಸೋತನು ಎಂಬಂತೆ,

೧೧೨–೩. ಎಲ್ಲಿಯೂ ಇಲ್ಲದ, ಮನಸ್ಸಿನಿಂದ ವ್ಯರ್ಥವಾಗಿ, ಹುಟ್ಟಿದ ಈ ಮೂರ್ಖಲೋಕಮಯವಾದ ಸೃಷ್ಟಿಯು, ಇನ್ನೊಬ್ಬ ಕಲ್ಪಿತ ಕೃಪಣನಿಂದ ಹತವಾಗುವುದು. ಅಸತ್ತಿನಿಂದ ಜನಿಸಿದ ಇಂತಹ ಸೃಷ್ಟಿಯನ್ನು ಯಾವನು ವಶಮಾಡಿಕೊಳ್ಳಲಾರನೋ ಅವನು ಉಪದೇಶಕ್ಕೆ ಅರ್ಹನೇ ಅಲ್ಲ.

೧೧೪. ಅಂತಹವನ ಪ್ರಜ್ಞೆಯು ಬಾಹ್ಯವಿಷಯಗಳಲ್ಲಿಯೇ ಮಗ್ನವಾಗಿರುವುದು. ಅಷ್ಟೇ ಅಲ್ಲದೆ, ಹೀಗಿರುವುದರಿಂದಲೇ ತಾನು ಕೃತಾರ್ಥನಾದೆನೆಂದುಕೊಳ್ಳುವುದು. ಇಂತಹ ಪ್ರಜ್ಞೆಗೆ ಉಪದೇಶಗಳನ್ನು ಗ್ರಹಿಸಲು ಶಕ್ತಿಯು ಸಾಲದು.

ಬಿಭೇತ್ಯೇಷಾಪಿ ವೀಣಾಯಾಸ್ತಂತ್ರೀಗುಣ ತನುಧ್ವನೇಃ ।
ಬಂಧೋರಪಿ ಸನಿದ್ರಸ್ಯ ಬಿಭೇತಿ ವದನದ್ಯುತೇಃ ॥ ೧೧೫ ॥

ಅಸತೋಽಪಿ ಜನಾದುಚ್ಚೈರ್ಗೀತಾದ್ಭೀತಾ ಪಲಾಯತೇ ।
ತೇನೈವ ಮನಸಾಪ್ಯಜ್ಞಾ ಕಿಲೈಷಾ ವಿವಶೀಕೃತಾ ॥ ೧೧೬ ॥

ಸುಖಲವವಿವಶಾ ದ್ವಿಷೇವ ತಪ್ತಾ
ಹೃದಯಗತೇನ ನಿಜೇನ ಚೇತಸೈವ ॥
ವಿಧುರಿತಧಿಷಣಾ ನ ವೇತ್ತಿ ಸತ್ಯಂ
ತದಪಿ ಕಥಂ ಪರಿಮೋಹಿತೋ ಮುಧೈವ ॥ ೧೧೭ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
“ಮನೋವಿನಿವಾರಣಂ” ನಾಮ ತ್ರಯೋದಶಃ ಸರ್ಗಃ

---

೧೧೫. ಇಂತಹ ಪ್ರಜ್ಞೆಯು, ವೀಣೆಯ ಸೂಕ್ಷ್ಮವಾದ ನಾದವನ್ನು ಕೇಳಿದರೂ ಹೆದರುವುದು. ಆತ್ಮಬಂಧುವಾದವನು ಮಲಗಿ ನಿದ್ರಿಸುತ್ತಿರುವಾಗ ಆತನ ಮುಖಕಾಂತಿಯನ್ನು ಕಂಡು ಹೆದರುವುದು.

೧೧೬. ಇಂತಹ ಪ್ರಜ್ಞೆಯುಳ್ಳವನು ಶತ್ರುಗಳು ಬರುತ್ತಿರುವರೆಂದು ಕೇಳಿದ ಮಾತ್ರಕ್ಕೇ ಹೆದರಿ ಓಡುವನು ; ಇಂತಹ ಪ್ರಜ್ಞೆಯು ತನ್ನ ಮನಸ್ಸಿಗೆ ತಾನೇ ವಶವಾಗುವಷ್ಟು ಅಜ್ಞವಾಗಿರುವುದು.

೧೧೭. ಈ ಪ್ರಜ್ಞೆಗೆ, ಅತ್ಯಲ್ಪವಾದ ಸುಖವು ಸಿಕ್ಕಿದರೆ ಸಾಕು, ಪರವಶವಾಗುವುದು. ತನ್ನ ಹೃದಯದಲ್ಲಿರುವ ತನ್ನ ಮನಸ್ಸೇ ಇದನ್ನು ಹಗೆಯಂತೆ ಹಗರಣಗೊಳಿಸುವುದು. ಇದಕ್ಕೆ ಸ್ವಲ್ಪವೂ ಬುದ್ಧಿಯಿಲ್ಲವಾದುದರಿಂದ ಇದು ಸತ್ಯವನ್ನು ತಿಳಿಯಲಾರದು. ಜೊತೆಗೆ ಕಾರಣವಿಲ್ಲದೆಯೇ ಮೋಹಕ್ಕೆ ವಶವಾಗುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
“ಮನೋವಿನಿವಾರಣ” ಎಂಬ ಹದಿಮೂರನೆಯ ಸರ್ಗವು.

ಚತುರ್ದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಸಂಸಾರಸಾಗರಾ ಸಾರಕಲ್ಲೋಲೈರುಹ್ಯಮಾನಯಾ ।
ಮತೇರ್ಮಾನದ ಮೂಕತ್ವಂ ಯಯಾ ಜನಕಯಾರ್ಜಿತಂ ॥ ೧ ॥

ಆತ್ಮಲಾಭಮಯೋದಾರಕಲಾಭಿರಿಹ ಸಾ ಮಯಾ ।
ವಿಚಾರೋಕ್ತಿಭಿರೇತಾಭಿಃ ಶಾಸ್ತ್ರೇಽಸ್ಮಿನ್ನೋಪದಿಶ್ಯತೇ ॥ ೨ ॥

ನ ಪಶ್ಯತೀವ ಯೋಽತ್ಯರ್ಥಂ ತಸ್ಯ ಕಃ ಖಲು ದುರ್ಮತಿಃ ।
ವಿಚಿತ್ರಮಂಜರೀ ಚಿತ್ರಂ ಸಂದರ್ಶಯತಿ ಕಾನನಂ ॥ ೩ ॥

ಹದಿನಾಲ್ಕನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧–೨. ಮಾನವಂತನಾದ ರಾಮಾ, ಈ ಸಂಸಾರವೆಂಬ ಸಾಗರದಲ್ಲಿ ನಿಸ್ಸಾರವಾದ ವಿಷಯಾಭಿಲಾಷೆಯೆಂಬ ಭಾರಿಯ ಅಲೆಗಳಿಗೆ ಸಿಕ್ಕಿ ಕೊಚ್ಚಿಹೋಗುತ್ತಿರುವ ಯಾವ ಜನರು, ವೈರಾಗ್ಯ ಮುಂತಾದವುಗಳಲ್ಲಿ ಬುದ್ಧಿಯನ್ನು ಉಪಯೋಗಿಸದೆ ಮೂಕಂತಿರುವರೋ, ಅಂತಹವರಿಗೆ ಆತ್ಮಲಾಭವನ್ನು ಕೊಡುವ, ಈ ಸುಂದರ ವಿಚಾರಗಳ ಉಪದೇಶವು ಬೇಕಿಲ್ಲ.

೩. ಏನನ್ನೂ ನೋಡಲೇಲಾರದ ಕುರುಡನಿಗೆ ಯಾರು ತಾನೇ ವಿಚಿತ್ರವಾದ ಹೂಗೊಂಚಲುಗಳಿಂದ ಚಿತ್ರಚಿತ್ರವಾಗಿರುವ ಅರಣ್ಯದ ಸೊಬಗನ್ನು ನೋಡು ಎಂದು ತೋರಿಸುವನು ?

ಕಃ ಕುಷ್ಠಘರ್ಘರಘ್ರಾಣಂ ನಾನಾಮೋದವಿಚಾರಣೇ ।
ಮೂರ್ಖಮಾತ್ಮೋಪದೇಶೇನ ಪ್ರಮಾಣೀಕುರುತೇಽಮತಿಃ ॥ ೪ ॥

ವಿಪರ್ಯಸ್ತೇಂದ್ರಿಯಂ ಮತ್ತಂ ಮದಿರಾಘೂರ್ಣಿತೇಕ್ಷಣಂ ।
ಧರ್ಮನಿರ್ಣಯಸಾಕ್ಷಿತ್ವೇ ಕಃ ಪ್ರಮಾಣೀಕರೋತ್ಯಧೀಃ ॥ ೫ ॥

ಕಃ ಶವಂ ವಾಂ ಸ್ಮಶಾನಸ್ಥಂ ಸಮುಪಾಯ ಕಥಾಶತಂ ।
ಪರಿಪೃಚ್ಛತಿ ಸಂದೇಹೇ ಕಶ್ಚ ಮೂರ್ಖಂ ಪ್ರಶಾಸ್ತಿ ಚ ॥ ೬ ॥

ಯೇನಾಶಯಬಿಲಸ್ಥೋಽಪಿ ಮೂಕೋಽಂಧೋಽಪಿ ನ ನಿರ್ಜಿತಃ ।
ಮನೋವ್ಯಾಲಃ ಸದುರ್ಬುದ್ಧಿಃ ಕಥಂ ನಾಮೋಪದಿಶ್ಯತೇ ॥ ೭ ॥

---

೪. ನಾನಾವಿಧ ಗಂಧಗಳ ಯೋಗ್ಯತೆಯನ್ನು ಗೊತ್ತು ಮಾಡಿ ಹೇಳುವ ಅಧಿಕಾರಕ್ಕೆ ಕುಷ್ಠರೋಗದಿಂದ ತಿಂದುಹೋಗಿರುವ ಮೂಗಿನವನನ್ನು ಗೊತ್ತು ಮಾಡಿ ಒಪ್ಪಿಕೊಳ್ಳುವ ದುರ್ಮತಿಯೂ ಉಂಟೆ ?

೫. ಇಂದ್ರಿಯಗಳೂ ತಮ್ಮ ತಮ್ಮ ಕೆಲಸವನ್ನು ಮಾಡಲಾರದಷ್ಟು ದುರ್ಬಲವಾಗುವ ಮಟ್ಟಿಗೆ ಕುಡಿದು, ಮತ್ತನಾಗಿ ಕಣ್ಣು ಕಣ್ಣು ಬಿಡುತ್ತಿರುವವನನ್ನು "ಧರ್ಮನಿರ್ಣಯವಾಗಬೇಕಾಗಿದೆ, ಸಾಕ್ಷಿ ಹೇಳು, ಬಾ, " ಎಂದು ಕರೆದ ಅವನು ಹೇಳುವುದನ್ನು ಒಪ್ಪಿಕೊಳ್ಳುವ ಬುದ್ಧಿಹೀನನು ಯಾರು ?

೬. ಜನಗಳಲ್ಲಿ ಹರಡಿದ ಕಥಾವೃತ್ತಾಂತಗಳಲ್ಲಿ ಸಂದೇಹ ಬಂದಾಗ, ಅದರ ನಿರ್ಣಯವನ್ನು ತಿಳಿಯಲು ಸ್ಮಶಾನದಲ್ಲಿ ಬಿದ್ದಿರುವ ಹೆಣವನ್ನು ಕೇಳುವವನು ಯಾರು ? ಮೂರ್ಖನಿಗೆ ಬುದ್ಧಿ ಹೇಳುವವರು ಯಾರು ?

೭. ಮೂಕನಾಗಿದ್ದರೂ, ಅನ್ಧವಾಗಿದ್ದರೂ, ತನ್ನ ಹೃದಯವೆಂಬ ಬಿಲದಲ್ಲಿಯೇ ಸೇರಿಕೊಂಡಿದ್ದರೂ, ಈ ಮನಸ್ಸೆಂಬ ಸರ್ಪವನ್ನು ಯಾವ ದುರ್ಬುದ್ಧಿಯು ಗೆಲ್ಲದಿರುವನೋ ಅವನಿಗೆ ಉಪದೇಶ ಮಾಡುವುದು ಹೇಗೆ ?

ಜಿತಮೇವ ಮನೋ ವಿದ್ಧಿ ವಸ್ತುತೋ ಯನ್ನ ವಿದ್ಯತೇ ।
ನಿಕಟಾತ್ಸಾ ಚಿರಾಸ್ತ್ಯೈವ ಯಾ ಶಿಲಾ ನೈವ ವಿದ್ಯತೇ ॥ ೮ ॥

ಮನೋ ನ ವಿಜಿತಂ ರಾಮ ಯೇನಾಸದಪಿ ದುರ್ಧಿಯಾ ।
ತೇನಾಗ್ರಸ್ತವಿಷೇಣೈವ ಮ್ರಿಯತೇ ವಿಷಮೂರ್ಚ್ಛಯಾ ॥ ೯ ॥

ಜ್ಞಃ ಪಶ್ಯತಿ ಸದೈವಾತ್ಮಾ ಸ್ಪಂದನೇ ಪ್ರಾಣಶಕ್ತಯಃ ।
ಇಂದ್ರಿಯಾಣಿ ಸ್ವಧರ್ಮೇಷು ಮನೋ ರಾಮ ಕಿಮುಚ್ಯತೇ ॥ ೧೦ ॥

ಪ್ರಾಣಾನಾಂ ಸ್ಪಂದನೀ ಶಕ್ತಿರ್ಜ್ಞಾನಶಕ್ತಿಃ ಪರಾತ್ಮನಃ ।
ಇಂದ್ರಿಯಾಣಾಂ ನಿಜಾ ಶಕ್ತಿರೇಕಃ ಕೋತ್ರ ನಿಬಧ್ಯತೇ ॥ ೧೧ ॥

---

೮. ವಸ್ತುತಃ ಇಲ್ಲದೆಯೇ ಇರುವ ಈ ಮನಸ್ಸು ಯಾವಾಗಲೂ ಜಿತವಾಗಿಯೇ ಇದೆಯೆಂದುಕೋ. ಯಾವ ಕಲ್ಲು ನಮ್ಮ ಬಳಿಯಲ್ಲಿ ಇಲ್ಲವೋ ಅದು ಯಾವಾಗಲೂ ಎಸೆದುಬಿಟ್ಟಂತೆಯೇ ತಾನೇ !

೯. ರಾಮ, ಸುತರಾಂ ಅಸತ್ಯ. ಈ ಮನಸ್ಸನ್ನು ಯಾವ ಬುದ್ಧಿಹೀನನು ಗೆದ್ದಿಲ್ಲವೋ ಅವನು, ತಾನು ಕುಡಿಯದೇ ಇದ್ದ ವಿಷವೇ ವ್ಯಾಪಿಸಿ ಮೃತನಾದವನಿಗೆ ಸಮಾನನು.

೧೦. ಸರ್ವಜ್ಞನಾದ ಆತ್ಮನು ಸರ್ವವನ್ನೂ ತಿಳಿಯುವನು. ಪ್ರಾಣವಾಯುವಿನ ಸ್ಪಂದದಿಂದ ಕ್ರಿಯೆಗಳೆಲ್ಲವೂ ನಡೆಯುವುವು. ಇಂದ್ರಿಯಗಳೆಲ್ಲವೂ ತಮ್ಮ ತಮ್ಮ ಕಾರ್ಯಗಳನ್ನು ತಾವು ತಾವು ಮಾಡಿಕೊಳ್ಳುವುವು. ಹೀಗಿರಲು, ರಾಮ, ಮನಸ್ಸು ಎಂಬುದು ಇನ್ನು ಯಾವುದು ?

೧೧. ಕಾರ್ಯಗಳನ್ನು ಮಾಡುವ ಸ್ಪಂದ (ಕ್ರಿಯಾ) ಶಕ್ತಿಯು ಪ್ರಾಣದ್ದು. ತಿಳಿದುಕೊಳ್ಳುವ ಜ್ಞಾನಶಕ್ತಿಯು ಪರಮಾತ್ಮನದು. ವಿಷಯಗಳನ್ನು ಅನುಭವಿಸುವ ಭೋಗಶಕ್ತಿಯು ಇಂದ್ರಿಯಗಳದ್ದು. ಹೀಗೆ ಇರಲು, (ಮನಸ್ಸು ಎಂಬುದು ಇನ್ನೊಂದು) ಪ್ರತ್ಯೇಕವಾಗಿಯೇ ಉಂಟೆಂದು ಹೇಳುವುದು ಹೇಗೆ ?

ಸರ್ವಾಸ್ತದಂಶವಸ್ತಸ್ಯ ಸರ್ವಶಕ್ತೇಃ ಕಿಲಾತ್ಮನಃ ।
ಪೃಥಕ್ತಾ ವಾಚ್ಯತಾ ಚೇಯಂ ಕುತೋ ನಾಮ ತವೋತ್ಥಿತಾ ॥ ೧೨ ॥

ಕಿಂನ್ನಾಮ ಜೀವ ಇತ್ಯುಕ್ತಂ ಯೇನೇಹಾಂಧೀಕೃತಂ ಜಗತ್ ।
ಚಿತ್ತಂ ಚೈವಾಸದೇವ ತಂ ವಿದ್ಧಿ ಕಾ ತಸ್ಯ ಶಕ್ತತಾ ॥ ೧೩ ॥

ಮನೋನಿರ್ದಗ್ಧದೃಷ್ಟೀನಾಂ ದೃಷ್ಟ್ವಾ ದುಃಖಪರಂಪರಾಂ ।
ಮತಿರ್ಮೇ ಕರುಣಾಕ್ರಾಂತಾ ರಾಮ ಮುಗ್ಧೇವ ತಪ್ಯತೇ ॥ ೧೪ ॥

---

೧೨. ಸರ್ವಶಕ್ತಿಯಾದ ಪರಮಾತ್ಮನ ಕಿರಣಗಳಂತೆ ಸರ್ವ ಶಕ್ತಿಗಳೂ ಇರುವಾಗ, ಶಕ್ತಿಯೂ ಬೇರೆ ಬೇರೆಯೆಂದು ಹೇಳುವುದು ಹೇಗೆ? ಅದಕ್ಕೆ ಬೇರೆ ಬೇರೆ ಹೆಸರಿಡುವುದು ತಾನೇ ಹೇಗೆ? ನಿನಗೆ ಈ ಭ್ರಾಂತಿಯು ಎಲ್ಲಿಂದ ಬಂತು?

೧೩. (ಪ್ರಾಣಾದಿ ಶಕ್ತಿಸಮುದಾಯವು ಮನಸ್ಸಲ್ಲ ಎಂದ ಮೇಲೆ, ಉಪನಿಷದಾದಿಗಳಲ್ಲಿ ಹೇಳಿರುವ "ಆತ್ಮಾನಂ ರಥಿನಂ ವಿದ್ಧಿ, ಶರೀರಂ ರಥಮೇವತು । ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹ ಮೇವ ಚ ॥ ಇತ್ಯಾದಿ ಕಠೋಕ್ತಿಯನ್ನು ಪರಿಭಾವಿಸಿ, ಅಲ್ಲಿ ಹೇಳಿರುವ ಆತ್ಮಾ, ಶರೀರ, ಬುದ್ಧಿ ಮನಸ್ಸುಗಳಿಗೂ ಇಲ್ಲಿ ಹೇಳಿರುವುದಕ್ಕೂ ಸಮನ್ವಯ ಹೇಗೆ ಎಂದರೆ, ವಸಿಷ್ಠಮಹರ್ಷಿಯು ಹೇಳುತ್ತಾನೆ:)

ಜೀವ ಎನ್ನುವುದು ಯಾವುದು? ಲೋಕವನ್ನೆಲ್ಲಾ ಕುರುಡು ಮಾಡಿಬಿಟ್ಟಿರುವ ಈ ಚಿತ್ತವೂ ಕೂಡ ಅಸತ್ತೇ ಆಗಿರುವುದೆಂದು ತಿಳಿ. ಹೀಗಿರಲು, ಆ ಜೀವನ ಅಥವಾ ಚಿತ್ತದ ಶಕ್ತತೆಯು ಒಂದು ಉಂಟು ಎನ್ನುವುದು ಹೇಗೆ?

೧೪. ಮನಸ್ಸು ಎಂಬುದು ಒಂದು ಉಂಟು ಎಂಬ ವಾದವನ್ನು ಅಂಗೀಕರಿಸಿದವರಿಗೆ ಪ್ರಾಪ್ತವಾಗುವ ದುಃಖಪರಂಪರೆಗಳನ್ನು ಕಂಡು, ನನ್ನ ಬುದ್ಧಿಯೂ "ಇವರ ಈ ದುಃಖವು ಹೇಗೆ ಕಳೆದೀತು" ಎಂದು ಕರುಣೆಯಿಂದ ಪರಿತಪಿಸುವುದು.

ಕಃ ಕಿಲಾತ್ರ ಕುತಃ ಖೇದೋ ಯನ್ಮೂರ್ಖಃ ಪರಿತಪ್ಯತೇ ।
ದುಃಖಾಯೈವ ಹಿ ಜಾಯಂತೇ ಕರಭಾಃ ಪ್ರಾಕೃತಾಸ್ತಥಾ ॥ ೧೫ ॥

ವಿನಾಶಾಯೈವ ಜಾಯಂತೇ ಜಡಾ ದೇಹೇಷ್ವಬುದ್ಧಯಃ ।
ಅನಾರತೋದಯಾಃ ಪಾಪಾ ಬುದ್ಬುದಾ ಜಲಧೇರಿವ ॥ ೧೬ ॥

ಕಿಯಂತಃ ಪಶ್ಯ ಪಶವಃ ಪ್ರತ್ಯಹಂ ಪ್ರತಿಮಂಡಲಂ ।
ಸೂನಾವದ್ಭಿರ್ನಿಹನ್ಯಂತೇ ಕೈವಾತ್ರ ಪರಿದೇವನಾ ॥ ೧೭ ॥

ಆರ್ಬುದಾನ್ಯನಿಲೋ ಹಂತಿ ಕ್ಷಮಾಜಾತೇಷು ಚಾನ್ವಹಂ ।
ದಂಶಾನಾಂ ಮಶಕಾನಾಂ ಚ ಕೈವಾತ್ರ ಪರಿದೇವನಾ ॥ ೧೮ ॥

---

೧೫. ವಾಸ್ತವ್ಯವಾಗಿ ನೋಡಿದರೆ ದುಃಖಕ್ಕೆ ಕಾರಣವಿಲ್ಲ. ಏಕೆಂದರೆ ದುಃಖ ಪಡುವವನು ಯಾರುಂಟು? ಆ ದುಃಖವಾದರೂ ಎಲ್ಲಿಂದ ಬಂತು? ಅಲ್ಲದೆ ಮೂರ್ಖರು ಪರಿತಾಪಪಡುವುದರಲ್ಲಿ ವಿಚಿತ್ರವಾದರೂ ಏನು? ಮೂರ್ಖರೂ ಹೇಸರಗತ್ತೆಗಳೂ ಹುಟ್ಟುವುದೇ ದುಃಖಪಡುವುದಕ್ಕೆ ಅಲ್ಲವೆ?

೧೬. ಸಮುದ್ರದಲ್ಲಿ ಗುಳ್ಳೆಗಳು ಹುಟ್ಟಿ ಹುಟ್ಟಿ ಹುಟ್ಟುತ್ತಲೇ ಇರುವಂತೆ ಆತ್ಮಜ್ಞಾನ ರಹಿತರಾದ ಪಾಪಿಗಳೂ ಮೂಢರೂ ಜಡರೂ ಕೇವಲ ಸಾಯುವುದ ಕ್ಕಾಗಿಯೇ ದೇಹಗಳನ್ನು ಪಡೆಯುವರು.

೧೭. ದಿನದಿನವೂ ದೇಶದೇಶದಲ್ಲಿಯೂ ಕಟುಕರು ಎಷ್ಟೋ ಪಶುಗಳನ್ನು ಸಂಹರಿಸುವರಲ್ಲವೆ? ಆ ವಿಚಾರದಲ್ಲಿ ಪರಿತಾಪವೇನಿದೆ? ನೀನೇ ನೋಡು.

೧೮. ಭೂಮಿಯಲ್ಲಿ ಹುಟ್ಟಿದ ನೊಣಗಳೂ ಸೊಳ್ಳೆಗಳೂ ಕೋಟಿಕೋಟಿ ಗಟ್ಟಲೆಯಾಗಿ ಗಾಳಿಗೆ ಸಿಕ್ಕಿ ಹತವಾಗುವುವು. ಅದನ್ನು ಕಂಡು ಕರುಣಿಸುವರು ಯಾರು?

ದಿಶಂಪ್ರತಿ ಗಿರೀಂದ್ರೇಷು ಪುಲಿಂದಾದ್ಯಾ ವನೇವನೇ |
ನಿಘ್ನಂತಿ ಮೃಗಲಕ್ಷಾಣಿ ಕೈವಾತ್ರ ಪರಿದೇವನಾ || ೧೯ ||

ಜಲೇ ಜಲಚರವ್ಯೂಹಾ ಸೂಕ್ಷ್ಮಾನ್ಸ್ಥೂಲೋ ನಿಕೃಂತತಿ |
ಗ್ರಾಸಾರ್ಥಂ ನಿರ್ದಯೋ ಮತ್ಸ್ಯಃ ಕೈವಾತ್ರ ಪರಿದೇವನಾ || ೨೦ ||

ಲಿಕ್ಷಾಣುಕಣಕ್ಷಾಮಾಂ ಕ್ಷುಧಾ ಖಾದತಿ ಮಕ್ಷಿಕಾ |
ತಾಂ ಕೋಶಕಾರಃ ಕ್ಷುಧಿತೋ ದಂಶಸ್ತಮಪಿ ಚಂಚಲಂ || ೨೧ ||

ತಂ ದಂಶಂ ದರ್ದುರೋ ಭುಂಕ್ತೇ ವ್ಯಾಲಸ್ತಮಪಿ ದರ್ದುರಂ |
ಸರ್ಪಮುಗ್ರಂ ಖಗೋ ಹಂತಿ ಬಭ್ರುಶ್ಚೈನಂ ನಿಕೃಂತತಿ || ೨೨ ||

---

೧೯. ದಿಕ್ಕುದಿಕ್ಕುಗಳಲ್ಲಿಯೂ ಬೆಟ್ಟಬೆಟ್ಟಗಳಲ್ಲಿಯೂ ವ್ಯಾಧರೇ ಮುಂತಾದವರು ಎಷ್ಟೋ ಲಕ್ಷ ಪಶುಪಕ್ಷಿಗಳನ್ನು ಸಂಹಾರಮಾಡುವರು. ಅದಕ್ಕಾಗಿ ಅಳುವವರು ಯಾರು ?

೨೦. ಕಡಲಿನಲ್ಲಿ, ದೊಡ್ಡ ಮೀನೊಂದು ಸಣ್ಣ ಮೀನುಗಳ ಗುಂಪುಗುಂಪುಗಳನ್ನೇ ತನ್ನ ಹೊಟ್ಟೆಗಾಗಿ, ಕೊಂಚವೂ ದಯೆಯಿಲ್ಲದೆ, ತಿಂದುಹಾಕುವುದು. ಇದಕ್ಕಾಗಿ ವ್ಯಸನಪಡುವವರಾರು ?

೨೧. ಹೀಗೆಯೇ ಅಣುವಿನಂತೆ ಸೂಕ್ಷ್ಮವಾಗಿರುವ ನೊಣವು ತನ್ನ ಹಸಿವನ್ನು ಇಂಗಿಸಿಕೊಳ್ಳಲು ತಿನ್ನುವುದು. ಆ ನೊಣವನ್ನು ಜೇಡರ ಹುಳುವು ತನ್ನ ಹಸಿವಿಗಾಗಿ ತಿನ್ನುವುದು. ಆ ಜೇಡರಹುಳುವನ್ನು ದೊಡ್ಡ ನೊಣವು ತಿನ್ನುವುದು.

೨೨. ಆ ದೊಡ್ಡ ನೊಣವನ್ನು ಕಪ್ಪೆಯು ಹಿಡಿದು ತಿನ್ನುವುದು. ಆ ಕಪ್ಪೆಯನ್ನು ಹಾವು ನುಂಗುವುದು. ಆ ಹಾವನ್ನು ಹಕ್ಕಿಯು ಹಿಡಿದು ಕೊಲ್ಲುವುದು. ಆ ಹಕ್ಕಿಯನ್ನು (ಹಾವನ್ನು) ಮುಂಗುಸಿಯು ಕೊಲ್ಲುವುದು.

ಬಭ್ರುಂ ಹಿನಸ್ತಿ ಮಾರ್ಜಾರೋ ಮಾರ್ಜಾರಂ ಶ್ವಾ ನಿಕೃಂತತಿ |
ಋಕ್ಷಃ ಕೌಲೇಯಕಂ ಹಂತಿ ಋಕ್ಷಂ ವ್ಯಾಘ್ರೋ ನಿಕೃಂತತಿ || ೨೩ ||

ಸಿಂಹೋಽಭಿಭವತಿ ವ್ಯಾಘ್ರಂ ಶರಭಃ ಸಿಂಹಮತ್ತಿ ಚ |
ಶರಭೋ ನಾಶಮಾಯಾತಿ ಮತ್ತಮೇಘವಿಲಂಘನೇ || ೨೪ ||

ಮೇಘಾ ವಾತೈರ್ವಿಧೂಯಂತೇ ವಾಯವೋ ಗಿರಿಭಿರ್ಜಿತಾಃ |
ಗಿರಯೋ ವಜ್ರನಿಷ್ಪಿಷ್ಟಾಃ ಶಕ್ರಸ್ಯ ವಶಗಃ ಪವಿಃ || ೨೫ ||

ವಿಷ್ಣುನಾ ಕ್ರಿಯತೇ ಶಕ್ರೋ ವಿಷ್ಣುರ್ಗಚ್ಛತಿ ಜಂತುತಾಂ |
ಸುಖದುಃಖದಶಾಮೇತಾಂ ಜರಾಮರಣಪಾಲಿತಾಂ || ೨೬ ||

---

೨೩. ಆ ಮುಂಗುಸಿಯನ್ನು ಬೆಕ್ಕು ಕೊಲ್ಲುವುದು. ಆ ಬೆಕ್ಕನ್ನು ನಾಯಿ ಹಿಡಿಯುವುದು: ನಾಯಿಯನ್ನು ಕರಡಿಯು ಕೊಲ್ಲುವುದು: ಕರಡಿಯನ್ನು ಹುಲಿಯು ಹೊಡೆಯುವುದು.

೨೪. ಹುಲಿಯನ್ನು ಸಿಂಹವು ಗೆಲ್ಲುವುದು. ಸಿಂಹವನ್ನು ಶರಭವು ತಿನ್ನುವುದು. ಆ ಶರಭವು ಕರಿಯ ಮೋಡವನ್ನು ಕಂಡು ಅದನ್ನು ಹೊಡೆಯಬೇಕೆಂದು ಮೇಲೆ ಹಾರಿ ಕೆಳಗೆ ಬಿದ್ದು ಪ್ರಾಣಬಿಡುವುದು.

(ಮೋಡದಿಂದ ಆಲಿಕಲ್ಲು ಬಿದ್ದಾಗ, ಮೋಡವು ತನ್ನನ್ನು ಕಲ್ಲಿನಿಂದ ಹೊಡೆಯುತ್ತದೆಂದು ರೇಗಿ ಅದರ ಮೇಲೆ ಬೀಳಲು ಹೋಗಿ ಶರಭವು ಪ್ರಾಣ ಬಿಡುವುದು ಎಂದು ವದಂತಿ.)

೨೫. ಆ ಮೇಘವನ್ನು ಗಾಳಿಯು ಹಾರಿಸಿಕೊಂಡು ಹೋಗುವುದು. ವಾಯುವನ್ನು ಬೆಟ್ಟವು ತಡೆದು ಸೋಲಿಸುವುದು. ಬೆಟ್ಟಗಳು ವಜ್ರದಿಂದ ಪುಡಿಪುಡಿಯಾಗುವುದು. ಆ ವಜ್ರವು ಇಂದ್ರನಿಗೆ ಅಧೀನವಾಗಿರುವುದು.

೨೬. ಈ ಇಂದ್ರನು ವಿಷ್ಣುವಿಗೆ ಅಧೀನನು. ಇಂತಹ ಮಹಾವಿಷ್ಣುವು ಮತ್ಸ್ಯಕೂರ್ಮಾದಿ ತಿರ್ಯಗ್ಜಂತುವಾಗಿ ಹುಟ್ಟಿ ಜರಾಮರಣಗಳನ್ನೂ ಸುಖದುಃಖಗಳನ್ನೂ ಅನುಭವಿಸುವನು.

ಜಂತವೋಪಿ ಮಹಾಕಾಯಾ ಅಪಿ ವಿದ್ಯಾಯುಧಾನ್ವಿತಾಃ ।
ಲಿಕ್ಷಾಭಿರಂಗ ಲಗ್ನಾಭಿರುಪಜೀವ್ಯಂತ ಏವ ಹಿ ॥ ೨೭ ॥

ಅಜಸ್ರಮೇವಮಾಲೂನ ವಿಶೀರ್ಣಂ ಭೂತಜಂಗಲಂ ।
ಪರಸ್ಪರಮಲಂ ಮೋಹಾದದ್ಯತೇ ರಕ್ಷ್ಯತೇಪಿ ಚ ॥ ೨೮ ॥

ಅನಾರತಂ ವಿನಶ್ಯಂತಿ ವಿವಿಧಾ ಭೂತಜಾತಯಃ ।
ಅನಾರತಂ ಚ ಜಾಯಂತೇ ಲಿಕ್ಷಾ ಯೂಕಾ ಪಿಪೀಲಿಕಾಃ ॥ ೨೯ ॥

ಜಲಕೋಶೇಷು ಜಾಯಂತೇ ಮತ್ಸ್ಯೇಭಮಕರಾದಯಃ ।
ಭೂಮಾವಂತಃ ಪ್ರಜಾಯಂತೇ ಕೀಟೌಘಾ ವೃಶ್ಚಿಕಾದಯಃ ॥ ೩೦ ॥

---

೨೭. ಮಹಾಕಾಯಗಳಾಗಿ ಪ್ರಭಾವ ಸಂಪನ್ನಗಳಾದ ಭಾರಿಭಾರಿ ಜಂತುಗಳನ್ನು ಅವುಗಳ ದೇಹದಲ್ಲಿರುವ ಕೂರೆಗಳೇ ತಿಂದು ಹಾಕಿ ಬಿಡುವುವು.

೨೮. ಹೀಗೆ, ಯಾವಾಗಲೂ ವಿಪತ್ತಿಗೆ ಸಿಕ್ಕಿಯೇ ಇದ್ದು ಜೀರ್ಣವಾಗುತ್ತಿರುವ ಈ ಭೂತ ಸಮೂಹಗಳು ಮೋಹದಿಂದ ಒಂದನ್ನೊಂದು ತಿನ್ನುತ್ತಿರುವುವು : ಅಥವಾ ಮುಂದೆ ತಿನ್ನುವುದಕ್ಕಾಗಿ ಈಗ ಒಂದನ್ನೊಂದು ಕಾಪಾಡುತ್ತಿರುವುವು.

೨೯. ಹೀಗೆ, ಕೂರೆ, ಹೇನು, ಇರುವೆ ಮುಂತಾದ ನಾನಾವಿಧ ಭೂತ ಸಮುದಾಯಗಳು ಒಂದೇ ಸಮನಾಗಿ ಸಾಯುತ್ತಲೇ ಇವೆ: ಹುಟ್ಟುತ್ತಲೇ ಇವೆ.

೩೦. ಮೀನು, ನೀರಾನೆ, ಮೊಸಳೆ ಮೊದಲಾದವು ನೀರಿನಲ್ಲಿ ಹುಟ್ಟಿದರೆ, ಚೇಳು ಮುಂತಾದ ಹುಳು ಹುಪ್ಪಟೆಗಳು ಭೂಗರ್ಭದಲ್ಲಿ ಜನಿಸುವುವು.

ಅಂತರಿಕ್ಷೇಪಿ ಜಾಯಂತೇ ಆಕಾಶವಿಹಗಾದಯಃ |
ವನವೀಥಿಷು ಜಾಯಂತೇ ಸಿಂಹವ್ಯಾಘ್ರಮೃಗಾದಯಃ || ೩೧ ||

ಪ್ರಾಣ್ಯಂಗೇಷ್ವಪಿ ಜಾಯಂತೇ ವಿಚಿತ್ರಾಃ ಕಕುಭಂಪ್ರತಿ |
ಸ್ಥಾವರೇಷ್ವಪಿ ಜಾಯಂತೇ ಘುಣಾ ಜಘನಕಾದಯಃ || ೩೨ ||

ಶಿಲಾಂತರೇಷು ಜಾಯಂತೇ ಕೀಟಭೇಕಘುಣಾದಯಃ |
ವಿಷ್ಟಾಯಾಮಪಿ ಜಾಯಂತೇ ನಾನಾಕೀಟಗಣಾಸ್ತಥಾ || ೩೩ ||

ಏವಮೇತೇಷ್ವಸಂಖ್ಯೇಷು ಜನ್ಮಸ್ವಪಚಯೇಷು ಚ |
ಅಜಸ್ರಂ ಕರುಣಾವಂತೋ ನಂದಂತು ಪ್ರರುದಂತು ವಾ || ೩೪ ||

---

೩೧. ಆಕಾಶದಲ್ಲಿ ಸಂಚರಿಸುವ ಪಕ್ಷಿ ಮೊದಲಾದವು ಅಂತರಿಕ್ಷದಲ್ಲಿ ಹುಟ್ಟುವುವು. ಸಿಂಹ, ಹುಲಿ, ಮೊದಲಾದ ವನ್ಯಮೃಗಗಳು ಅರಣ್ಯದಲ್ಲಿ ಹುಟ್ಟುವುವು.

೩೨. ದಿಕ್ಕುದಿಕ್ಕುಗಳಲ್ಲಿಯೂ ಪ್ರಾಣಿಪ್ರಾಣಿಯೂ ದೇಹದಲ್ಲಿಯೂ ವಿಚಿತ್ರವಾದ ಎಷ್ಟೋ ಪ್ರಾಣಿಗಳು ಹುಟ್ಟುವುವು. ಸ್ಥಾವರವಾದ ಮರಗಳಲ್ಲಿಯೂ ಕುಟ್ಟೇಹುಳ, ಮರವನ್ನು ಕೊರೆಯುವ ದುಂಬಿ, ಇವು ಹುಟ್ಟುವುವು.

೩೩. ಕಲ್ಲುಗಳ ನಡುವೆ (ಶಿಲಾಗರ್ಭದಲ್ಲಿ) ಹುಳು ಕಪ್ಪೆ ಮೊದಲಾದವು ಹುಟ್ಟುವುವು. ಅಮೇಧ್ಯದಲ್ಲಿಯೂ ಕೂಡ ಎಷ್ಟೋ ವಿಧವಾದ ಹುಳು ಮೊದಲಾದವು ಹುಟ್ಟುವುವು.

೩೪. ಹೀಗೆ, ಸಂಖ್ಯೆ ಮಾಡಲು ಸಿಕ್ಕದಂತೆ, ಎಷ್ಟೆಷ್ಟೋ ಪ್ರಾಣಿ ಸಮುದಾಯಗಳು ಹುಟ್ಟಿಹುಟ್ಟಿ ಸಾಯುತ್ತಿರುವುದನ್ನು ಕಂಡು ಕರುಣಾಶಾಲಿಗಳು ಬೇಕಾದರೆ ನಗಬಹುದು ಅಥವಾ ಚೆನ್ನಾಗಿ ಅಳಬಹುದು.

ಅನಾರತ ಮೃತಾವಸ್ಮಿನ್ನನಾರತಸಮುದ್ಭವೇ |
ಸಂಸಾರಸಂಭ್ರಮೇ ಯುಕ್ತಾ ನ ತುಷ್ಟಿರ್ನ ಚ ದುಃಖಿತಾ || ೩೫ ||

ಪಂಕ್ತಯಸ್ತ್ವೇವ ಮೇವೇಮಾ ವೃಕ್ಷಪರ್ಣಗಣೈಃ ಸಮಾಃ |
ಉತ್ಪತ್ಯೋತ್ಪತ್ಯ ಲೀಯಂತೇ ಭೂತಾನಾಂ ಭೂರಿಸಂಭವಾಃ || ೩೬ ||

ಯಃ ಪ್ರವೃತ್ತಃ ಕುಬುದ್ಧೀನಾಂ ದಯಾವಾನ್ದುಃಖಮಾರ್ಜನೇ |
ಸ್ವಗತಚ್ಛತ್ರನಿರ್ವ್ಯೃಷ್ಟಸೂರ್ಯಾಂಶು ಖಿದ್ಯತೇ ನಭಃ || ೩೭ ||

ನ ತಿರ್ಯಕ್ಸಮಧರ್ಮಾಣ ಉಪದೇಶ್ಯಾ ನರಾ ಭುವಿ |
ಕಥಾರ್ಥಕಥನೇನಾರ್ಥಃ ಕಃ ಸ್ಥಾಣುನಿಕಟೇ ವನೇ || ೩೮ ||

---

೩೫. ಒಂದೇ ಸಮನಾಗಿ ಸಾಯುತ್ತಲೇ ಇರುವುದು, ಒಂದೇ ಸಮನಾಗಿ ಹುಟ್ಟುತ್ತಲೇ ಇರುವುದು ಆದ ಈ ಸಂಸಾರ ಸಂಭ್ರಮದಲ್ಲಿ ತುಷ್ಟಿಯನ್ನಾಗಲೀ ದುಃಖವನ್ನಾಗಲೀ ಪಡುವುದು ವಿಹಿತವಲ್ಲ.

೩೬. ಪ್ರಾಣಿಸಮುದಾಯಗಳು ಹೀಗೆಯೇ ಸಾಲುಸಾಲಾಗಿ ಮರಗಳ ಎಲೆಗಳಂತೆ ಲೆಕ್ಕವಿಲ್ಲದೆಯೇ ಹುಟ್ಟಿ ಹುಟ್ಟಿ ಸಾಯುತ್ತಿರುವುವು.

೩೭. ಬುದ್ಧಿಯಿಲ್ಲದ ಇಂತಹ ಪ್ರಾಣಿಗಳ ದುಃಖವನ್ನು ತೊಳೆಯುವೆನೆಂದು ಯಾವನು ದಯಾವಂತನಾಗಿ ಹೊರಡುವನೋ ಅಂಥವನು ತನ್ನ ಕೈಯಲ್ಲಿರುವ ಒಂದೇ ಕೊಡೆಯಿಂದ ಆಕಾಶದಲ್ಲಿ ಎಲ್ಲಿಯೂ ಬಿಸಿಲೇ ಇಲ್ಲದಂತೆ ಮಾಡುವೆನೆಂದು ಹೊರಟು ಒದ್ದಾಡತಕ್ಕವನೇ ಸರಿ.

೩೮. ತಿರ್ಯಗ್ಜಂತುಗಳಿಗೆ ಸಮಾನರಾದ ಮನುಷ್ಯರಿಗೆ ಉಪದೇಶ ಮಾಡುವುದೇನು? ಎಲ್ಲೆಲ್ಲೂ ಮೋಟು ಮರಗಳೇ ತುಂಬಿರುವ ವನದಲ್ಲಿ ಪುರಾಣ ಹೇಳಿದರೆ ಏನು ಫಲ?

ಕಿಂ ಕಿಲ ಸ್ಫಾರಮನಸಾಂ ಪಶೂನಾಂ ಚ ವಿಶೇಷಣಂ ।
ಕೃಷ್ಯಂತೇ ಪಶವೋ ರಜ್ಜ್ವಾ ಮನಸಾ ಮೂಢಚೇತಸಃ ॥ ೩೯ ॥

ಸ್ವಚಿತ್ತಪಂಕಮಗ್ನಾನಾಂ ಸ್ವನಾಶಾರಬ್ಧಕರ್ಮಣಾಂ ।
ಮೂರ್ಖಾಣಾಮಾಪದಂ ದೃಷ್ಟ್ವಾ ಪ್ರರುದಂತ್ಯುಪಲಾ ಅಪಿ ॥ ೪೦ ॥

ಅನಿರ್ಜಿತಾತ್ಮಚಿತ್ತಾನಾಂ ಸಮಂತಾದ್ದುಃಖದಾ ದಶಾಃ ।
ತನ್ಮಾರ್ಜನಂ ಕೃತಪ್ರಜ್ಞೋ ನಾತಃ ಸಂಪ್ರತಿಪದ್ಯತೇ ॥ ೪೧ ॥

ವಿನಿರ್ಜಿತಾತ್ಮಚಿತ್ತಾನಾಂ ದುಃಖಾನಿ ರಘುನಂದನ ।
ಸುವಿಚಾರ್ಯಾಣಿ ತೇನಾತ್ರ ಜ್ಞಾತಜ್ಞೇಯಃ ಪ್ರವರ್ತತಾಂ ॥ ೪೨ ॥

---

೩೯. ವಿಷಯಗಳ ಕಡೆಗೆ ಎಳೆಯುತ್ತಿರುವ ಮನಸ್ಸುಳ್ಳ ಮನುಷ್ಯರಿಗೂ ಪಶುಗಳಿಗೂ ಏನು ವ್ಯತ್ಯಾಸ? ಪಶುಗಳನ್ನು ಹಗ್ಗ ಕಟ್ಟಿ ಎಳೆದುಕೊಂಡು ಹೋಗುವರು. ಮೂಢಬುದ್ಧಿಗಳನ್ನು ಮನಸ್ಸು ಎಳೆದುಕೊಂಡು ಹೋಗುವುದು.

೪೦. ತಮ್ಮದೇ ಚಿತ್ತವೆಂಬ ಕೆಸರಿನಲ್ಲಿ ಮುಳುಗಿಕೊಂಡು, ತಮ್ಮ ವಿನಾಶವನ್ನೇ ತರುವ ಕೆಲಸಗಳನ್ನು ಮಾಡುತ್ತ ಇರುವ ಮೂರ್ಖರಿಗೆ ಸಂಭವಿಸುವ ಆಪತ್ತುಗಳನ್ನು ಕಂಡು ಬಂಡೆಗಳೂ ಅಳುವುವು.

೪೧. ತಮ್ಮ ಚಿತ್ತವನ್ನು ಗೆಲ್ಲದಿರುವವರಿಗೆ ಎಲ್ಲ ಕಡೆಯಿಂದಲೂ ದುಃಖವುಂಟುಮಾಡುವ ಅವಸ್ಥೆಗಳೇ ಒದಗುವುವು. ಅದರಿಂದ ತಿಳಿದವರು ಯಾರೂ ಅವರಿಗೆ ದುಃಖಗಳನ್ನು ತಪ್ಪಿಸಲು ಪ್ರಯತ್ನ ಮಾಡುವುದಿಲ್ಲ.

೪೨. (ಆದರೆ,) ರಾಮ, ಯಾರು ತಮ್ಮ ಚಿತ್ತವನ್ನು ಜಯಿಸಿರುವರೋ ಅವರ ದುಃಖಗಳನ್ನು ನಿವಾರಿಸಲು ವಿವೇಕಿಯಾದವನು ಪ್ರಯತ್ನಿಸಬೇಕು.

ಮನೋ ನಾಸ್ತಿ ಮಹಾಬಾಹೋ ಮಾ ಮುಧೋಪ ಪ್ರಕಲ್ಪಯ ।
ಅನೇನ ಕಲ್ಪಿತೇನ ತ್ವಂ ವೇತಾಲೇನೇವ ಹನ್ಯಸೇ ॥ ೪೩ ॥

ಯಾವದ್ವಿಸ್ಮೃತವಾನಾತ್ಮತತ್ತ್ವಂ ಮೂಢೋ ಭವದ್ಭವಾನ್ ।
ತಾವತ್ತವ ಮನೋವ್ಯಾಲೋ ಬಭೂವಾಭ್ಯುದಿತಸ್ತತಃ ॥ ೪೪ ॥

ಇದಾನೀಂ ಭವತಾ ಜ್ಞಾತಂ ಯಥಾಭೂತ ಮರಿಂದಮ ।
ಸಂಕಲ್ಪಾದ್ವರ್ಧತೇ ಚಿತ್ತಂ ತದೇವಾಶು ಪರಿತ್ಯಜ ॥ ೪೫ ॥

ದೃಶ್ಯಮಾಶ್ರಯಸೀದಂ ಚೇತ್ತತ್ಸಚಿತ್ತೋಽಸಿ ಬಂಧವಾನ್ ।
ದೃಶ್ಯಂ ಸಂತ್ಯಜಸೀದಂ ಚೇತ್ತದಚಿತ್ತೋಽಸಿ ಮೋಕ್ಷವಾನ್ ॥ ೪೬ ॥

---

೪೩. ಎಲೆ ಮಹಾಬಾಹುವೆ, ವಾಸ್ತವ್ಯವಾಗಿಯೂ ಮನಸ್ಸು ಎಂಬುದು ಒಂದಿಲ್ಲ. ಮನಸ್ಸು ಎಂದು ಒಂದುಂಟು ಎಂದು ವ್ಯರ್ಥವಾಗಿ ಕಲ್ಪಿಸಿಕೊಳ್ಳ ಬೇಡ. ಹಾಗೆ ನೀನು ಕಲ್ಪಿಸಿಕೊಂಡರೆ, ಬಾಲಕನು ಭೇತಾಳನು ಉಂಟು ಎಂದು ಕೊಂಡು ಹತನಾಗುವ ಹಾಗೆ ಆಗುವೆ.

೪೪. ಎಲ್ಲಿಯವರೆಗೆ ನೀನು ಆತ್ಮವೇ ನಾನು ಎಂಬುದನ್ನು ಮರೆತಿದ್ದಿಯೋ ಅಲ್ಲಿಯವರೆಗೆ ನಿನ್ನ ಮನಸ್ಸೆಂಬ ಘೋರ ಸರ್ಪವು ತಲೆಯೆತ್ತಿ ಕೊಂಡಿತ್ತು.

೪೫. ಎಲೆ ಅರಿಂದಮನೆ, ಈಗ ನೀನು ತತ್ವವನ್ನು ಯಥಾವತ್ತಾಗಿ ಅರಿತಿರುವೆ. ಈ ಚಿತ್ತವೆಂಬುದು ಸಂಕಲ್ಪದಿಂದ ವೃದ್ಧಿಹೊಂದುವುದು. ಆದರಿಂದ, ನೀನು, ಆ ಸಂಕಲ್ಪವನ್ನೇ ಆದಷ್ಟು ಬೇಗ ಪರಿತ್ಯಜಿಸು.

೪೬. ದೃಶ್ಯವನ್ನು (ನಂಬಿ) ಅದನ್ನು ಆಶ್ರಯಿಸುವೆಯಾದರೆ, ಆಗ ನಿನಗೆ ಸಚಿತ್ತತ್ವವು ಬರುವುದು : ಅದರಿಂದ ಬಂಧನವೂ ಉಂಟಾಗುವುದು. ನೀನು ದೃಶ್ಯವನ್ನು ತಿರಸ್ಕರಿಸಿದರೆ ನಿನಗೆ ಅಚಿತ್ತತ್ವವು ಬಂದು ಮೋಕ್ಷವನ್ನು ಪಡೆಯುವೆ.

ಅಯಂ ಗುಣಸಮಾಹಾರೋ ಬಂಧಾಯೈವ ಸಮಾಶ್ರಿತಃ ।
ಸಂತ್ಯಕ್ತೋ ಭವ ಮೋಕ್ಷಾಯ ಯಥೇಚ್ಛಸಿ ತಥಾ ಕುರು ॥ ೪೭ ॥

ನಾಹಂ ನೇದಮಿತಿ ಧ್ಯಾಯಂಸ್ತಿಷ್ಠ ತ್ವಮಚಲಾಚಲಃ ।
ಅನಂತಾಕಾಶಸಂಕಾಶಹೃದಯೋ ಹೃದಯೇಶ್ವರಃ ॥ ೪೮ ॥

ಆತ್ಮನೋ ಜಗತಶ್ಚಾಸ್ಯ ತ್ವಮಂಗ ಕಲನಾಮಲಂ ।
ರಾಮ ದ್ವಿತ್ವಮಯೀಂ ತ್ಯಕ್ತ್ವಾ ಶೇಷಸ್ಥಃ ಸುಸ್ಥಿರೋಭವ ॥ ೪೯ ॥

---

೪೭. ಈ ತ್ರಿಗುಣ ಸಂಬಂಧವಾದ ವ್ಯವಹಾರವೆಲ್ಲ ಒಂದಲ್ಲ ಒಂದು ರೀತಿಯಿಂದ ಬಂಧಕವೇ ! ಇದೆಲ್ಲವನ್ನು ಬಿಟ್ಟರೆ ಅದು ಸಂಸಾರ ನಿವೃತ್ತಿಗೆ ಕಾರಣವಾಗುವುದು. ಆದರಿಂದ ನಿನಗೆ ತೋರಿದಂತೆ ಮಾಡು.

೪೮. ಅನಂತವಾದ ಆಕಾಶದಂತೆ ನಿನ್ನ ಹೃದಯವನ್ನು ವಿಶಾಲಮಾಡಿಕೊಂಡು "ನಾನು ಎಂಬುದೂ ಇಲ್ಲ; ಈ ದೃಶ್ಯವೂ ಇಲ್ಲ." (ಇರುವುದೆಲ್ಲ ಒಂದೇ ಬ್ರಹ್ಮ) ಎಂದು ಧ್ಯಾನ ಮಾಡುತ್ತ ನಿನ್ನ ಚಿತ್ತವನ್ನು ನಿನ್ನ ವಶದಲ್ಲಿಟ್ಟುಕೊಂಡು, ಪರ್ವತದಂತೆ ನಿಶ್ಚಲನಾಗಿರು.

೪೯. ನಾನು ಬೇರೆ ಎಂಬ ಕಲ್ಪನೆ, ಜಗತ್ತು ಬೇರೆ ಎಂಬ ಕಲ್ಪನೆ, ಇವೆರಡು ಕಲ್ಪನೆಗಳನ್ನೂ ಬಿಟ್ಟು, ದ್ವಂದ್ವಗಳನ್ನೆಲ್ಲ ತೊರೆದು ಅವಶೇಷವಾದ ಬ್ರಹ್ಮದಲ್ಲಿ ಸುಸ್ಥಿರನಾಗಿರು.

(ನಾನು ಎಂಬುದು ಒಂದು : ಇನ್ನೊಂದು ಎದುರಿಗಿರುವ ಜಗತ್ತು : ಇವೆರಡೂ ಸ್ಥಿತಿಯ ಎರಡು ಆಧಾರ ಸ್ತಂಭಗಳು. ಇವೆರಡಕ್ಕೂ ಆಧಾರ ಬ್ರಹ್ಮ. ಅದನ್ನು ಹಿಡಿದು ಇವೆರಡನ್ನೂ ಬಿಟ್ಟು ಸುಖವಾಗಿರು.)

ಆತ್ಮನೋ ಜಗತಶ್ಚಾಂತರ್ದ್ರಷ್ಟೃದೃಶ್ಯದಶಾಂತರೇ ।
ದರ್ಶನಾಖ್ಯೇ ಸ್ವಮಾತ್ಮಾನಂ ಸರ್ವದಾ ಭಾವಯನ್ಭವ ॥ ೫೦ ॥

ಸ್ವಾದ್ಯಸ್ವಾದಕಸಂತ್ಯಕ್ತಂ ಸ್ವಾದ್ಯಸ್ವಾದಕ ಮಧ್ಯಕಂ ।
ಸ್ವಾದನಂ ಕೇವಲಂ ಧ್ಯಾಯನ್ನಿತ್ಯಮಾತ್ಮಮಯೋ ಭವ ॥ ೫೧ ॥

ರಾಮಾನುಭವನೀಯಸ್ಯ ತಥಾನುಭವಿತುಃ ಸ್ವಯಂ ।
ಅವಲಂಬ್ಯ ನಿರಾಲಂಬಂ ಮಧ್ಯಂ ಮಧ್ಯೇ ಸ್ಥಿರೋ ಭವ ॥ ೫೨ ॥

ಭಾವಭಾವನಯಾ ಹೀನಂ ಭಾವಾಭಾವದಶೋಜ್ಝಿತಂ ।
ಭಾವಯನ್ನೇವಮಾತ್ಮಾನಮಾತ್ಮಸಂಸ್ಥಃ ಸ್ವಯಂ ಭವ ॥ ೫೩ ॥

---

೫೦. ಅವಶೇಷ (ಎಲ್ಲವೂ ಹೋದ ಮೇಲೆ ಉಳಿಯುವ) ಪದಾರ್ಥವು ಯಾವುದು ಎಂದರೆ ನಾನು ಎಂಬ ದೃಕ್ಕು, ಜಗತ್ತೆಂಬ ದೃಶ್ಯ, ಇವೆರಡರ ನಡುವೆ ದರ್ಶನವೆಂಬ ಜ್ಞಾನವಿರುವುದಲ್ಲವೆ? ಅದೇ ಅವಶೇಷವು. ಅಲ್ಲಿ ಆತ್ಮನನ್ನು ಯಾವಾಗಲೂ ಭಾವಿಸುವವನಾಗು.

೫೧. ಸ್ವಾದ್ಯ, ಸ್ವಾದಕ, ಎಂಬ ಭೇದವನ್ನು ತ್ಯಜಿಸಿ, ಇವೆರಡಕ್ಕೂ ನಡುವೆ ಇರುವ ಕೇವಲ ಸ್ವಾದನವೊಂದನ್ನೇ ಸದಾ ಭಾವಿಸುತ್ತ ಆತ್ಮಮಯನಾಗಿರು.

೫೨. ಹೀಗೆಯೇ ಅನುಭವನೀಯ (ಅನುಭವಿಸಬೇಕಾದ ವಸ್ತು) ಕ್ಕೂ, ಅನುಭವಿತೃ (ಅನುಭವಿಸತಕ್ಕವನು) ವಿಗೂ ನಡುವೆ, ಇರುವ ಅನುಭವವೆಂಬ ನಿರಾಲಂಬಸ್ಥಿತಿಯನ್ನು ಹಿಡಿದು ಸ್ಥಿರನಾಗು.

೫೩. ಸಂಸಾರವು ಪ್ರತ್ಯೇಕವಾಗಿರುವುದೆಂಬ ಭಾವನೆಯನ್ನು ಬಿಟ್ಟು, ಭಾವ, ಅಭಾವ ಎಂಬ ಎರಡು ದಶೆಯನ್ನು ಬಿಟ್ಟು ಕೇವಲ ಆತ್ಮವನ್ನೇ ಭಾವನೆ ಮಾಡುತ್ತಾ ನೀನೂ ಆತ್ಮಸಂಸ್ಥನಾಗಿರು.

(ಸಂಸಾರವಾಸನಾಮುಕ್ತನಾಗಿಯೂ ಜಾಗ್ರತ್ ಸ್ವಪ್ನದಶೆಗಳಿಂದ ವಿಹೀನ ನಾಗಿಯೂ ಇರುವ ಆತ್ಮನನ್ನು ಭಾವಿಸುತ್ತ ನೀನು ಸ್ವಯಂ ಆತ್ಮನಿಷ್ಠನಾಗಿರು— ವೈಭವ)

ಆತ್ಮಸತ್ತಾಂ ತ್ಯಜನ್ನೇತಾಂ ಚೇತ್ಯಂ ಭಾವಯಸಿ ಸ್ವಯಂ ।
ಯದಾ ರಾಮ ತದಾ ಯಾಸಿ ಚಿತ್ತತಾಮತಿದುಃಖದಾಂ ॥ ೫೪ ॥

ಚಿತ್ತತಾಂ ಶೃಂಖಲಾಮೇತಾಂ ಸ್ವರೂಪಜ್ಞಾನಯುಕ್ತಿತಃ ।
ಬಿಲಾಚ್ಚಿತ್ತಾನ್ಮಹಾಬಾಹೋ ಸ್ವಾತ್ಮಸಿಂಹಂ ವಿಮೋಚಯ ॥ ೫೫ ॥

ಪರಮಾತ್ಮದಶಾಂ ತ್ಯಕ್ತ್ವಾ ಚೇತ್ಯಂ ಪರಿಪತನ್ನಲಂ ।
ಯದಾ ಗಚ್ಛಸಿ ಸಂಕಲ್ಪಂ ಚೇತ್ಯಂ ಸಂಪಶ್ಯಸೇ ತದಾ ॥ ೫೬ ॥

ಆತ್ಮನೋ ವ್ಯತಿರಿಕ್ತಂ ತಚ್ಚಿತ್ತಮಿತ್ಯಂಗ ಸಂವಿದಾ ।
ಮನಃ ಸಂಪದ್ಯತೇ ದುಃಖಿ ಕ್ಷೀಯತೇ ತ್ಯಕ್ತಯಾ ತಯಾ ॥ ೫೭ ॥

---

೫೪. ರಾಮ, ನೀನು ಆತ್ಮಸತ್ತೆಯನ್ನು ಬಿಟ್ಟು ಈ ದೃಶ್ಯವನ್ನು ಆಶ್ರಯಿಸಿ (ನಂಬಿ) ದಾಗ, ನಿನಗೆ ಚಿತ್ತತೆಯು ಬರುವುದು: ದುಃಖವು ಪ್ರಾಪ್ತವಾಗುವುದು.

೫೫. ಚಿತ್ತತೆಯೆಂಬ ಸಂಕಲೆಯನ್ನು ಸ್ವರೂಪಜ್ಞಾನವೆಂಬ ಸಾಧನದಿಂದ (ಕತ್ತರಿಸಿ) ಆತ್ಮವೆಂಬ ಸಿಂಹವನ್ನು ಚಿತ್ತವೆಂಬ ಗುಹೆಯಿಂದ ಬಿಡುಗಡೆ ಮಾಡು.

೫೬. ಪರಮಾತ್ಮಾವಸ್ಥೆಯನ್ನು ಬಿಟ್ಟು ದೃಶ್ಯದ ಕಡೆಗೆ ತಿರುಗಿ ಸಂಕಲ್ಪವನ್ನು ಆರಂಭಿಸುತ್ತಿದ್ದ ಹಾಗೆಯೇ, ದೃಶ್ಯವು ನಿನಗೆ ಗೋಚರವಾಗುವುದು.

೫೭. ಆತ್ಮನಿಗಿಂತ ಬೇರೆಯಾದ ಚಿತ್ತವೆಂಬ ಒಂದು ಪದಾರ್ಥವಿದೆ ಎಂದ ಕೂಡಲೇ ದುಃಖಭೋಗಿಯಾದ ಮನಸ್ಸು ಏರ್ಪಡುವುದು. ಅದನ್ನು ಬಿಟ್ಟರೆ ಆ ಮನಸ್ಸು ಕ್ಷಯವಾಗುವುದು.

ಆತ್ಮೈವೇದಂ ಜಗತ್ಸರ್ವಮಿತ್ಯಂತಃ ಸಂವಿದೋದಯೇ ।
ಕ್ವ ಚೇತ್ತಾ ಕ್ವಚ ವಾ ಚಿತ್ತಂ ಕಿಂ ಚೇತ್ಯಂ ಚೇತನಂ ಚ ಕಿಂ ॥ ೫೮ ॥

ಅಹವಾತ್ಮೇತಿ ಜೀವೋಽಸ್ಮೀತ್ಯೇತಾವಚ್ಚಿತ್ತಕಂ ವಿದುಃ ।
ಅನೇನೇತ್ಥಮನಾದ್ಯಂತಂ ದುಃಖಂ ರಾಘವ ತನ್ಯತೇ ॥ ೫೯ ॥

ಅಹವಾತ್ಮಾ ನ ಜೀವಾಖ್ಯಾಃ ಸತ್ತಾಃ ಸಂತೀತರಾಃ ಕ್ವಚಿತ್ ।
ಇತ್ಯೇವ ಚಿತ್ತೋಪಶಮಃ ಪರಮಂ ಸುಖಮುಚ್ಯತೇ ॥ ೬೦ ॥

ಆತ್ಮೈವೇದಂ ಜಗದಿತಿ ಜಾತೇ ರಾಘವ ನಿಶ್ಚಯೇ ।
ಅಸತ್ತಾ ಚೇತಸೋ ಜಾತಾ ಭವತ್ಯೇವ ನ ಸಂಶಯಃ ॥ ೬೧ ॥

---

೫೮. ಇರುವುದೆಲ್ಲ ಆತ್ಮವೇ, ಈ ಸಮಸ್ತ ಜಗತ್ತು ಆತ್ಮನೇ ಎಂಬ ಜ್ಞಾನವು ನಿನ್ನೊಳಗೆ ಉದಯಿಸಲು, ಚೇತ್ತೃವೆಲ್ಲಿ? ಚಿತ್ತವೆಲ್ಲಿ? ಚೇತ್ಯವೆಲ್ಲಿ? ಚೇತನವೆಲ್ಲಿ?

೫೯. "ನಾನು ಜೀವಾತ್ಮನು; (ದೇಹೇಂದ್ರಿಯಗಳಿಂದ ಕೂಡಿದವನು)" ಎಂಬ ನಿಶ್ಚಯವನ್ನೇ ತಿಳಿದವರು ನಿಶ್ಚಯವೆನ್ನುವರು. ರಾಘವ, ಈ ನಿಶ್ಚಯವೊಂದರಿಂದಲೇ ಆದಿ ಅಂತ್ಯಗಳಿಲ್ಲದ ಅಪಾರವಾದ ದುಃಖವು ಉಂಟಾಗಿರುವುದು.

೬೦. "ನಾನು ಆತ್ಮನು, ಜೀವವೆಂಬ ಇತರ ಪದಾರ್ಥಗಳಾವೊಂದೂ ಇಲ್ಲ." ಎಂಬ ಜ್ಞಾನವು ಬಂದರೆ, ಚಿತ್ತವು ಶಾಂತವಾಗುವುದು.

೬೧. "ಈ ಜಗತ್ತೆಲ್ಲವೂ ಆತ್ಮವೇ!" ಎಂಬ ದೃಢ ನಿಶ್ಚಯವು ಉಂಟಾದರೆ, ಚಿತ್ತವು ಇಲ್ಲವಾಗುವುದು. ಇದರಲ್ಲಿ ಸಂಶಯವಿಲ್ಲ.

ಏವಂ ಸತ್ಯಾವಬೋಧೇನ ಸ್ವಾತ್ಮೈವೇದಮಿತಿ ಸ್ಥಿತಿಃ |
ಮನಃ ಸುಗಲಿತಂ ವಿದ್ಧಿ ಸೂರ್ಯಭಾಸಾ ತಮೋ ಯಥಾ || ೬೨ ||

ಮನಃ ಸರ್ಪಃ ಶರೀರಸ್ಥೋ ಯಾವತ್ತಾವನ್ಮಹದ್ಭಯಂ |
ತಸ್ಮಿನ್ನುತ್ಸಾರಿತೇ ಯೋಗಾದ್ಭಯಸ್ಯಾವಸರಃ ಕುತಃ || ೬೩ ||

ಭ್ರಾಂತಿಮಾತ್ರೋತ್ಥಿತಶ್ಚಿತ್ತೇ ವೇತಾಲೋಽತಿಬಲೋಽನಘ |
ಸಮ್ಯಜ್ಜ್ಞಾನೇನ ಮಂತ್ರೇಣ ಪಸಭಂ ವಿನಿಪಾತ್ಯತಾಂ || ೬೪ ||

ದೇಹಗೇಹಾದ್ಗತೇ ಚಿತ್ತಕ್ಷಯೇ ಬಲವತಾಂ ವರೇ |
ನಿರಾಧಿರ್ವಿಗತೋದ್ವೇಗಸ್ತಿಷ್ಠ ನಾಸ್ತಿ ಭಯಂ ತವ | || ೬೫ ||

---

೬೨. ಹೀಗೆ ಸತ್ಯವಾದ ಸಮ್ಯಕ್‌ಜ್ಞಾನವು ಉದಯವಾದರೆ, ಸೂರ್ಯನ ಕಿರಣಗಳಿಂದ ಅಂಧಕಾರವೆಲ್ಲವೂ ತೊಲಗಿಹೋಗುವಂತೆ, ಮನಸ್ಸು ಇದ್ದಲ್ಲಿಯೇ ಕಳಲಿಹೋಗುವುದು.

೬೩. ಎಲ್ಲಿಯುವರೆಗೆ ಈ ಮನಸ್ಸೆಂಬ ಸರ್ಪವು ಶರೀರದಲ್ಲಿ ಇರುವುದೋ ಅಲ್ಲಿಯುವರೆಗೂ ಭಯವು ಬೇಕಾದಹಾಗೆ ಇರುವುದು. ಅದನ್ನು ಉಪಾಯವಾಗಿ ಅಲ್ಲಿಂದ ಹೊರಡಿಸಿಬಿಟ್ಟರೆ ಭಯವೆಲ್ಲಿಂದ ಬರಬೇಕು ?

೬೪. ಎಲೆ ಪುಣ್ಯವಂತನಾದ ರಾಮನೆ, ಭ್ರಾಂತಿಮಾತ್ರದಿಂದಲೇ ಹುಟ್ಟಿರುವ ಈ ಚಿತ್ತ ಭೇತಾಳವು ಬಹು ಬಲವಾದುದು. ಅದನ್ನು ಸಮ್ಯಕ್‌ಜ್ಞಾನವೆಂಬ ಮಂತ್ರದಿಂದ ಬಲವಂತವಾಗಿ ತೊಲಗಿಸು.

೬೫. ಪ್ರಬಲವಾದ ಚಿತ್ತವೆಂಬ ಯಕ್ಷವನ್ನು ದೇಹವೆಂಬ ಮನೆಯಿಂದ ತೊಲಗಿಸಿಬಿಟ್ಟು ಯಾವ ಆತಂಕವೂ ಉದ್ವೇಗವೂ ಇಲ್ಲದೆ ಸುಖವಾಗಿರು. ಆಗ ನಿನಗೆ ಯಾವ ಭಯವೂ ಇಲ್ಲ.

ನೀರಾಗ ಏವ ನಿರುಪಾರ್ಜನ ಏವ ಚಾಸ್ಮೀ
ತ್ಯೇತಾವತೈವ ಗಲಿತಾ ತವ ಚಿತ್ತಸತ್ತಾ ॥
ನಿರ್ದುಃಖಮುತ್ತಮಪದಂ ಪರಮಂ ಗತೋಽಸಿ
ತಿಷ್ಠೋಪಶಾಂತ ಪರಮೈಷಣ ಏವಮಂತಃ ॥ ೬೬ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷು ಉಪಶಮಪ್ರಕರಣೇ
“ಸ್ವಚಿತ್ತನಿರೂಪಣಂ” ನಾಮ ಚತುರ್ದಶಃ ಸರ್ಗಃ

---

೬೬. “ನನಗೆ ಯಾವುದೂ ಆಗಬೇಕಾಗಿಲ್ಲ: ಆದರಿಂದ ನಾನು ಯಾವುದನ್ನೂ ಆರ್ಜಿಸಬೇಕಾಗಿಲ್ಲ.” ಎಂಬ ನಿಶ್ಚಯವನ್ನು ಸಂಪಾದಿಸಿಕೊಂಡ ಒಡನೆಯೇ, ನಿನ್ನ ಚಿತ್ತವು ಲಯವಾಗುವುದು. (ಆಗ) ದುಃಖಾತೀತವಾದ, ಉತ್ತಮವಾದ, ಪರಮ ಪದವನ್ನು ಹೊಂದುವೆ. (ಆದರಿಂದ) ಶ್ರೇಷ್ಠವಾದ ಉಪಶಾಂತಿಯೊಂದನ್ನೇ ಕೋರುತ್ತ ಇರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
“ಸ್ವಚಿತ್ತ ನಿರೂಪಣಂ” ಎಂಬ ಹದಿನಾಲ್ಕನೆಯ ಸರ್ಗವು.

ಪಂಚದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:

ಏತಾಮನುಸರನ್ ರಾಮ ಚಿತ್ತಸತ್ತಾಮಪಾವನೀಂ |
ಸಂಸಾರಬೀಜಕಣಿಕಾಂ ಜೀವಬಂಧನವಾಗುರಾಂ ॥ ೧ ॥

ಆತ್ಮಾ ತ್ಯಕ್ತಾತ್ಮರೂಪಾಭೋ ಮಲಿನಾಮಾಪ ತದ್ದೃಶಂ !
ಚಿತ್ತಂ ಸಮನುಸಂಧತ್ತೇ ಧತ್ತೇ ಚ ಕಲನಾಮಲಂ ॥ ೨ ॥

ಹದಿನೈದನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧—೨ ಚಿತ್ತವೆಂಬುದು ಬೇರೊಂದು ಉಂಟೆಂಬ ಅಪಾವನ ಭಾವನೆಯನ್ನು ಹಿಡಿದು, ತನ್ನ ಸ್ವರೂಪವನ್ನು ಬಿಟ್ಟು ಆತ್ಮನು, ಎಲೆ ರಾಮನೇ, ಸಂಸಾರವೆಂಬ ಬೀಜದ ಅಂಕುರವೂ, ಜೀವವೆಂಬ ಮೃಗವನ್ನು ಹಿಡಿಯುವ ಬಲೆಯೂ ಆದ, ಚಿತ್ತವನ್ನು ಆಶ್ರಯಿಸುವನು. ಆಗ ಎಲ್ಲಾ ರೂಪವಾದ ಮಲಿನ ದೃಷ್ಟಿಗಳೂ ಬರುವುವು. ಸಂಕಲ್ಪವೆಂಬ ಮಲವೂ ಬರುವುದು.

(ಆತ್ಮನು ಚಿತ್ತಸತ್ತೆ (ಚಿತ್ತವಿರುವುದೆಂಬ ಜ್ಞಾನ) ಯನ್ನು ಅನುಸರಿಸಿಕೊಂಡು, ತನ್ನ ಬ್ರಹ್ಮ ಸ್ವರೂಪ ಜ್ಞಾನವನ್ನು ಬಿಟ್ಟು ಬಿಟ್ಟು, ಅವಿದ್ಯೋಪಹಿತವಾದ ಜ್ಞಾನವುಳ್ಳದಾಗಿರುವ ಚಿತ್ತವನ್ನು ಅನುಸಂಧಾನ ಮಾಡುವನು. ಬಳಿಕ, ಈ ಚಿತ್ತದಿಂದ ಉಪಹೃತವಾಗುವ ರಾಗ ದ್ವೇಷಾದಿ ವಾಸನಾರೂಪವಾದ ಮಲವನು ಧರಿಸುವನು—ವೈಭವ.)

ವರ್ಧಮಾನಮಹಾಮೋಹದಾಯಿನೀ ಭಯಕಾರಿಣೀ ।
ತೃಷ್ಣಾ ವಿಷಲತಾರೂಪಾ ಮೂರ್ಚ್ಛಾಮೇವ ಪ್ರಯಚ್ಛತಿ ॥ ೩ ॥

ಯದಾ ಯದೋದೇತಿ ತದಾ ಮಹಾಮೋಹಪ್ರದಾಯಿನೀ ।
ತೃಷ್ಣಾ ಕೃಷ್ಣಾ ನಿಶೇವೇಯಮನಂತಾತ್ಮವಿಕಾರಿಣೀ ॥ ೪ ॥

ಕಲ್ಪಾನಲಶಿಖಾದಾಹಂ ಸೋಢುಂ ಶಕ್ತಾ ಹರಾದಯಃ !
ತೃಷ್ಣಾನಲ ಶಿಖಾದಾಹಂ ಸೋಢುಂ ಶಕ್ತಾ ನ ಕೇಚನ ॥ ೫ ॥

ತೀಕ್ಷ್ಣಾ ಕೃಷ್ಣಾ ಸುದೀರ್ಘಾ ಚ ವಹತ್ಯಂಗಂ ಸದಾ ನಿಜಂ ।
ಶೀತಲೈವಾಸುಖೋದರ್ಕಾ ಘೋರಾ ತೃಷ್ಣಾ ಕೃಪಾಣಿಕಾ ॥ ೬ ॥

---

೩. (ಆಗ), ವಿಷವಲ್ಲರಿಗೆ ಸಮವಾದ ತೃಷ್ಣೆಯು ಹುಟ್ಟುವುದು. ಅದು ಬೆಳೆಬೆಳೆಯುತ್ತಿರುವ ಮಹಾ ಮೋಹವನ್ನು ಉಂಟುಮಾಡುವುದು. ಭಯವನ್ನು ಮಾಡುವುದು. ಮೂರ್ಛೆಯನ್ನು ತರುವುದು.

೪. ಕತ್ತಲೆಯಂತೆ ಇರುವ ಈ ಕರಿಯ ಕಾಳ ತೃಷ್ಣೆಯು ಯಾವಾಗ ಯಾವಾಗ ಉದಯಿಸುವುದೋ ಆಗಾಗೆಲ್ಲ ತಪ್ಪದೆ ಮಹಾ ಮೋಹವು ಬಂದೇ ಬರುವುದು. ನಾನಾವಿಧವಾದ ವಿಕಾರಗಳನ್ನು ತಂದೇ ತರುವುದು.

೫. ಪ್ರಳಯಕಾಲದ ಬೆಂಕಿಯ ಜ್ವಾಲೆಗಳ ಉರಿಯನ್ನು ಪರಮೇಶ್ವರಾದಿಗಳು ತಡೆಯಬಲ್ಲರು. ಆದರೆ, ತೃಷ್ಣೆಯೆಂಬ ಬೆಂಕಿಯ ದಳ್ಳುರಿಯನ್ನು ತಡೆಯಲು ಯಾರೂ ಶಕ್ತರಲ್ಲ.

೬. ಘೋರವೂ ತೀಕ್ಷ್ಣವೂ ಸುದೀರ್ಘವೂ ಆದ ಈ ತೃಷ್ಣೆಯೆಂಬ ಕಾಳಗತ್ತಿಯು ತಣ್ಣಗಿದ್ದರೂ, ಸೋಕಿದರೆ ಸಾಕು, ಇಲ್ಲದ ದುಃಖವನ್ನು ಕೊಡುವುದು.

ಯಾನ್ಯೇತಾನಿ ದುರಂತಾನಿ ದುರ್ಜರಾಣ್ಯುನ್ನತಾನಿ ಚ |
ತೃಷ್ಣಾವಲ್ಲ್ಯಾಃ ಫಲಾನೀಹ ತಾನಿ ದುಃಖಾನಿ ರಾಘವ || ೭ ||

ಅದೃಶ್ಯೈವಾತ್ತಿ ಮಾಂಸಾಸ್ಥಿರುಧಿರಾದಿ ಶರೀರಕಾತ್ |
ಮನೋಬಲವಿಲೀನೈಷಾ ತೃಷ್ಣಾವನಶುನೀ ನೃಣಾಂ || ೮ ||

ಕ್ಷಣಮುಲ್ಲಾಸಮಾಯಾತಿ ಕ್ಷಣಮಾಯಾತಿ ಶೂನ್ಯತಾಂ |
ಜಡಾ ವಿದಲಯತ್ಯಾಶು ತೃಷ್ಣಾ ಪ್ರಾವೃತ್ತರಂಗಿಣೀ || || ೯ ||

ದೃಷ್ಟದೈನ್ಯೋ ಹತಸ್ವಾಂತೋ ಹತೌಜಾ ಯಾತಿ ನೀಚತಾಂ |
ಮುಹ್ಯತೇ ರೌತಿ ಪತತಿ ತೃಷ್ಣಯಾಭಿಹತೋ ಜನಃ || ೧೦ ||

---

೭. ರಾಘವ, ಈ ಲೋಕದಲ್ಲಿ ಘೋರಪರಿಣಾಮವುಳ್ಳವಾಗಿ, ಜೀರ್ಣಿಸಿಕೊಳ್ಳಲು ಅಸಾಧ್ಯವಾಗಿ, ಮಹತ್ತರವಾದ ದುಃಖಗಳು ಯಾವ ಯಾವವುಂಟೋ ಅವೆಲ್ಲವೂ ತೃಷ್ಣೆಯೆಂಬ ಬಳ್ಳಿಯಲ್ಲಿ ಬಿಟ್ಟ ಫಲಗಳು.

೮. ಮನಸ್ಸೆಂಬ ಬಿಲದಲ್ಲಿ ತೃಷ್ಣೆಯೆಂಬ ಕಾಡುನಾಯಿಯು ಸೇರಿಕೊಂಡಿರುವುದು. ಅದು ತಾನು ಅದೃಶ್ಯವಾಗಿಯೇ ಇದ್ದುಕೊಂಡು ಮನುಷ್ಯರ ಶರೀರದಲ್ಲಿರುವ ಮಾಂಸ, ಮೂಳೆ, ರಕ್ತ, ಮೊದಲಾದವುಗಳನ್ನೆಲ್ಲ ತಿಂದುಹಾಕುತ್ತಿರುವುದು.

೯. ಈ ತೃಷ್ಣೆಯೆಂಬ ಮಳೆಗಾಲದ ಹಳ್ಳವು ಸ್ವಭಾವತಃ ಜಡವಾಗಿದ್ದರೂ, ಒಂದು ಕ್ಷಣ ಉಲ್ಲಾಸ ಹೊಂದಿ ಕುಣಿಯುವುದು: ಇನ್ನೊಂದು ಕ್ಷಣದಲ್ಲಿಯೇ ಶೂನ್ಯವಾಗಿ ಹೋಗುವುದು: ತನ್ನಲ್ಲಿ ಸಿಕ್ಕಿಕೊಂಡವರನ್ನು ಸೀಳಿಹಾಕುವುದು.

೧೦. ಈ ತೃಷ್ಣೆಯ ಏಟಿಗೆ ಸಿಕ್ಕಿದವನು ಕೇವಲ ದೀನನಾಗಿ ಹೋಗುವನು. ಶೂನ್ಯ ಹೃದಯನಾಗುವನು. ನೀಚನಾಗುವನು. ಅಳುವನು. ಬೀಳುವನು.

ನ ಸ್ಥಿತಾ ಕೋಟರೇ ಯಸ್ಯ ತೃಷ್ಣಾ ಕೃಷ್ಣಭುಜಂಗಮಾ ।
ತಸ್ಯ ಪ್ರಾಣಾನಿಲಾಃ ಸ್ವಸ್ಥಾಃ ಪುಂಸೋ ಹೃದಯರಂಧ್ರಗಾಃ ॥ ೧೧ ॥

ನೂನಮಸ್ತಂಗತೋ ಯತ್ರ ತೃಷ್ಣಾ ಕೃಷ್ಣನಿಶಾಕ್ರಮಃ ।
ಪುಣ್ಯಾನಿ ತತ್ರ ವರ್ಧಂತೇ ಶುಕ್ಲಪಕ್ಷ ಇವೇಂದವಃ ॥ ೧೨ ॥

ಯೋ ನ ತೃಷ್ಣಾಘುಣಾವಲ್ಯಾ ಕ್ಷತಃ ಪುರುಷಪಾದಪಃ ।
ಪುಣ್ಯಪ್ರಸೂನೈಃ ಸ ಸದಾ ದಶಾಂ ಯಾತಿ ವಿಕಾಸಿನೀಂ ॥ ೧೩ ॥

ಅನಂತಾಕುಲಕಲ್ಲೋಲಾ ವಿವರ್ತಾವರ್ತಸಂಕುಲಾ ॥
ಪ್ರವಹತ್ಯಾಶಯಾರಣ್ಯೇ ತೃಷ್ಣಾಂಧಾನಾಂ ನದೀ ನೃಣಾಂ ॥ ೧೪ ॥

---

೧೧. ಯಾವ ಹೃದಯದಲ್ಲಿ ತೃಷ್ಣೆ ಎಂಬ ಕರಿಯ ಹೆಣ್ಣು ಹಾವು ಇಲ್ಲವೋ ಅಂಥವನ ಹೃದಯದಲ್ಲಿ ಇರುವ ಪ್ರಾಣ ವಾಯುವು ಸ್ವಸ್ಥವಾಗಿರುವುದು.

೧೨. ತೃಷ್ಣೆಯೆಂಬ ಕೃಷ್ಣಪಕ್ಷದ ರಾತ್ರಿಯು ಯಾವ ಹೃದಯದಲ್ಲಿ ಅಸ್ತವಾಗಿರುವುದೋ, ಅಲ್ಲಿ ಪುಣ್ಯಗಳು, ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿ ಹೊಂದುವುವು.

೧೩. ಪುರುಷನೆಂಬ ಈ ವೃಕ್ಷವನ್ನು ತೃಷ್ಣೆ ಎಂಬ ಕೊರೆಯುವ ಹುಳು ಕೊರೆಯದಿದ್ದಲ್ಲಿ, ಅದರಲ್ಲಿ ಪುಣ್ಯವೆಂಬ ಪುಷ್ಪಗಳು ಅರಳಿ, ಅದು ಅಭಿವೃದ್ಧಿಯಾಗುತ್ತಲೇ ಇರುವುದು.

೧೪. (ವಿವೇಕವಿಲ್ಲದೆ) ಕುರುಡರಾದವರ ಹೃದಯವೆಂಬ ಅರಣ್ಯದಲ್ಲಿ, ಲೆಕ್ಕವಿಲ್ಲದ ವ್ಯಾಕುಲವೆಂಬ ತರಂಗಗಳಿಂದಲೂ, ಭ್ರಾಂತಿಯೆಂಬ ಸುಳಿಗಳಿಂದಲೂ ತುಂಬಿರುವ ತೃಷ್ಣೆಯೆಂಬ ನದಿಯು ಹರಿಯುತ್ತಿರುವುದು.

ತೃಷ್ಣಯೇಮೇ ಜನಾಃ ಸರ್ವೇ ಸೂತ್ರಯಂತ್ರ ಪತಂತ್ರಿವತ್ ।
ಭ್ರಾಮ್ಯಂತೇ ಪ್ರವಿಶೀರ್ಯಂತೇ ಸಂಪ್ರೀಯಂತೇ ಚ ಭೂರಿಶಃ ॥ ೧೫ ॥

ಮೂಲಾನ್ಯಪಿ ಸುಸೂಕ್ಷ್ಮಾಣಿ ಕಠಿನಾಶಯಕರ್ಕಶಾ ।
ತೃಷ್ಣಾ ಪರಶುಧಾರೇವ ವಲ್ಗಂತೀ ವಿನಿಕೃಂತತಿ ॥ ೧೬ ॥

ನಿಪತತ್ಯವಟೇ ಮೂಢಸ್ತೃಷ್ಣಾಮನುಸರಜ್ಜನಃ ।
ನೀಲಾಮನುಪತಚ್ಛ್ವಭ್ರತೃಣಶಾಖಾಂ ಯಥೈಣಕಃ ॥ ೧೭ ॥

ನೋನ್ಮತ್ತಾಪಿ ಜರಾ ಚಕ್ಷುಸ್ತಥಾ ಜರಯತಿ ಕ್ಷಣಾತ್ ।
ಯಥಾ ಜರಯತಿ ಕ್ಷಾಮಾ ತೃಷ್ಣಾ ಹೃದಯರೂಪಿಕಾ ॥ ೧೮ ॥

---

೧೫. ಸರ್ವರನ್ನೂ ಈ ತೃಷ್ಣೆಯು ದಾರದಲ್ಲಿ ಕಟ್ಟಿದ ಹಕ್ಕಿಗಳನ್ನು ತಿರುಗಿಸುವಂತೆ ಗಿರ್ರನೆ ತಿರುಗಿಸುವುದು. ಸೀಳುವುದು. ಲೆಕ್ಕವಿಲ್ಲದೆ ಕೊಲ್ಲುವುದು.

೧೬. ಈ ತೃಷ್ಣೆಯು ಗಂಡುಗೊಡಲಿಯ ಅಲಗಿನಂತೆ ಕಠಿನವಾಗಿಯೂ ಹರಿತವಾಗಿಯೂ ಇದ್ದು ಆಟವಾಗಿ ಆಡುತ್ತ ಆಡುತ್ತಲೇ ಬಹು ಸೂಕ್ಷ್ಮವಾದ ಮೂಲ (ಬೇರು-ರಹಸ್ಯ) ಗಳನ್ನೆಲ್ಲ ಛೇದಿಸುವುದು.

೧೭. ನೀಲಿಯ ಹುಲ್ಲು ಬೆಳೆದು ಮುಚ್ಚಿ ಹೋಗಿರುವ ಗುಂಡಿಯಲ್ಲಿ ಹುಲ್ಲು ತಿನ್ನಲು ಹೋಗಿ ಬಿದ್ದು ಹೋಗುವ ಜಿಂಕೆಯಂತೆ, ತೃಷ್ಣೆಯನ್ನು ಹಿಡಿದುಹೋಗುವ ಮನುಷ್ಯನೂ ಹಳ್ಳಕ್ಕೆ ಬೀಳುವನು.

೧೮. ಮನಸ್ಸಿನಲ್ಲಿಯೇ ಇದ್ದುಕೊಂಡು ಬಹು ಸೂಕ್ಷ್ಮವಾಗಿ ಇರುವಂತೆ ತೋರುವ ಈ ತೃಷ್ಣೆಯು ಕಣ್ಣನ್ನು ಕುರುಡುಮಾಡುವ ಷ್ಟಟ್ಟಿಗೆ, ಹಣ್ಣುಹಣ್ಣು ಮುದಿತನವೂ ಮಾಡುವುದಿಲ್ಲ.

ತೃಷ್ಣಯಾಶಯಕೌಶಿಕ್ಯಾ ಹೃದ್ಯಮಂಗಲಭೂತಯಾ ।
ರೂಢಯಾ ಭಗವಾನೇಷ ವಿಷ್ಣುರ್ವಾಮನತಾಂ ಗತಃ ॥ ೧೯ ॥

ಕಯಾಚಿದೇವ ದೈವಿಕ್ಯಾ ಹೃದಿ ಗ್ರಥಿತಯಾನಯಾ ।
ತೃಷ್ಣಯಾ ಭ್ರಾಮ್ಯತೇ ವ್ಯೋಮ್ನಿ ರಜ್ಜ್ವೇವಾರ್ಕೋಽನ್ವಹಂ ಕಿಲ ॥ ೨೦ ॥

ಸರ್ವದುಃಖಮಯಾಕಾರಾಂ ಜಗತೀಜೀವನಚ್ಛಿದಂ ।
ತೃಷ್ಣಾಂ ಪರಿಹರೇತ್ಕ್ರೂರಾಮುರಗೀವ ದೂರಗಃ ॥ ೨೧ ॥

ತೃಷ್ಣಯಾ ವಾಯವೋ ವಾಂತಿ ಶೈಲಾಸ್ತಿಷ್ಠಂತಿ ತೃಷ್ಣಯಾ ।
ತೃಷ್ಣಯೈವ ಧರಾ ಧಾತ್ರೀ ತ್ರೈಲೋಕ್ಯಂ ತೃಷ್ಣಯಾ ದೃತಂ ॥ ೨೨ ॥

---

೧೯. ಗೂಬೆಯಂತೆ ಅಮಂಗಳಕಾರಿಣಿಯಾದ ಈ ತೃಷ್ಣೆಯು ಭಗವಾನ್ ಮಹಾ ವಿಷ್ಣುವಿನ ಹೃದಯದಲ್ಲಿ ಮನೆಮಾಡಿತೋ ಇಲ್ಲವೋ ಆತನು ವಾಮನನಾಗಿ ಹೋದನು. (ವಿಷ್ಣುವು ಸರ್ವ ವ್ಯಾಪಕನು. ಲಕ್ಷ್ಮೀಪತಿಯು. ವಾಮನನು ಕುಳ್ಳನು. ಅಲ್ಲದೆ ನಿಲ್ಲುವುದಕ್ಕೆಂದು ಮೂರೇ ಮೂರು ಅಡಿ ನೆಲವನ್ನು ಬೇಡುವ ತಿರುಪದವನು.)

೨೦. ಯಾವುದೋ ಒಂದು ದೈವಿಕ (ಅಭೇದ್ಯ) ದ ತೃಷ್ಣೆಯು ಹೃದಯದಲ್ಲಿ ಸೇರಿಕೊಂಡಿರುವುದರಿಂದಲೇ, ಈ ಭಗವಾನ್ ಸೂರ್ಯನು ಸೂತ್ರಯಂತ್ರದಲ್ಲಿ ಕಟ್ಟುಬಿದ್ದವನಂತೆ ಅಂತರಿಕ್ಷದಲ್ಲಿ ನಿಲ್ಲದೆ ತಿರುಗುತ್ತಿರುವನು.

೨೧. ಅದರಿಂದ, ಎಲ್ಲೆಲ್ಲಿಯೂ ಇರುವ ಸಮಸ್ತ ದುಃಖಗಳನ್ನು ಒಟ್ಟು ಗೂಡಿಸಿ ಮಾಡಿದ ಬೊಂಬೆಯೋ ಎಂಬಂತಿರುವ, ಜಗತ್ತಿನಲ್ಲಿರುವ ಪ್ರಾಣಿಗಳೆಲ್ಲರ ಜೀವನವನ್ನು ಕತ್ತರಿಸಿಹಾಕುವ, ಈ ತೃಷ್ಣೆಯನ್ನು ಘೋರವಾದ ಹೆಣ್ಣು ಹಾವನ್ನು ದೂರದಲ್ಲಿಯೇ ಬಿಡುವಂತೆ, ಬಿಟ್ಟುಬಿಡಬೇಕು.

೨೨. ವಾಯುಗಳು ಬೀಸುವುದು ತೃಷ್ಣೆಗೆ ವಶವಾಗಿ, ಪರ್ವತಗಳೂ ನಿಶ್ಚಲವಾಗಿ ಕುಳಿತಿರುವುದು ತೃಷ್ಣೆಯಿಂದ. ಈ ತ್ರೈಲೋಕ್ಯವೂ ಹೀಗಿರುವುದು ತೃಷ್ಣೆಗೆ ಸಿಕ್ಕಿರುವುದರಿಂದಲೇ !

ಸರ್ವೈವ ಲೋಕಯಾತ್ರೇಯಂ ಪ್ರೋತಾ ತೃಷ್ಣಾವರತ್ರಯಾ ।
ರಜ್ಜುಬಂಧಾದ್ವಿಮುಚ್ಯಂತೇ ತೃಷ್ಣಾಬಂಧಾನ್ನ ಕೇಚನ ॥ ೨೩ ॥

ತಸ್ಮಾದ್ರಾಘವ ತೃಷ್ಣಾಂ ತ್ವಂ ತ್ಯಜ ಸಂಕಲ್ಪವರ್ಜನಾತ್ ।
ಮನಸ್ತ್ವಕಲ್ಪನಂ ನಾಸ್ತಿ ನಿರ್ಣೀತಿಮಿತ ಯುಕ್ತಿತಃ ॥ ೨೪ ॥

ಅಯಂ ತ್ವಮಹಮಿತ್ಯೇವ ಪ್ರಥಮಂ ತಾವದಾಶಯೇ ।
ಮಾ ದುರಾಶಾಂ ಮಹಾಬಾಹೋ ಸಂಕಲ್ಪಯ ಮನೋಮಯೀಂ ॥ ೨೫ ॥

ಏತಾಂ ದುಃಖಪ್ರಸವಿನೀಮನಾತ್ಮನ್ಯಾತ್ಮಭಾವನಾಂ ।
ನ ಭಾವಯಸಿ ಚೇದ್ರಾಮ ತದಾ ತಜ್ಜ್ಞೇಷು ಗಣ್ಯಸೇ ॥ ೨೬ ॥

---

೨೩. ತೃಷ್ಣೆಯೆಂಬ ಚರ್ಮದ ಹಗ್ಗದಲ್ಲಿ ಕಟ್ಟುಬಿದ್ದಿರುವುದರಿಂದಲೇ ಲೋಕಯಾತ್ರೆಯೂ ನಡೆಯುತ್ತಿರುವುದು. ಕಟ್ಟಿರುವ ಹಗ್ಗದಿಂದ ಬಿಡಿಸಿಕೊಳ್ಳಬಹುದು. ಆದರೆ ತೃಷ್ಣೆಯ ಹಿಡಿತದಿಂದ ಮಾತ್ರ ಬಿಡಿಸಿಕೊಳ್ಳಲು ಆಗುವುದಿಲ್ಲ.

೨೪. ಆದರಿಂದ, ಎಲೈ ರಾಘವನೆ, ಯುಕ್ತಿಗಳನ್ನು ಹಿಡಿದು ವಿಚಾರ ಮಾಡಿ ಸಂಕಲ್ಪರಹಿತವಾದ ಮನಸ್ಸು ಎಂಬುದೊಂದು ಇರುವುದಿಲ್ಲ ಎಂಬುದನ್ನು ಕಂಡುಕೋ ಸಂಕಲ್ಪವನ್ನೇ ಬಿಡುವ ಮೂಲಕವಾಗಿ ಈ ತೃಷ್ಣೆಯ ಹಿಡಿತದಿಂದ ತಪ್ಪಿಸಿಕೋ.

೨೫. ಇದು, ನೀನು, ನಾನು ಎಂಬ ಈ ದುರಾಶೆಯನ್ನು ಮೊದಲು ನಿನ್ನ ಹೃದಯದಲ್ಲಿ ಬಿಡು. ದುರಾಶೆಯು ತಮೋಮಯವಾದುದು. ಅದರಿಂದ, ಮೊದಲು ಅದನ್ನು ಪರಿಹರಿಸಿಕೊ. ಸಂಕಲ್ಪವನ್ನು ಬಿಡು.

೨೬. ಆತ್ಮವಲ್ಲದ ದೇಹಾದಿಗಳಲ್ಲಿ ಆತ್ಮಭಾವನೆಯನ್ನು ಮಾಡುವುದರಿಂದಲೇ ದುಃಖಗಳೆಲ್ಲವೂ ಬರುವುವು. ಅದು ಒಂದನ್ನು ನೀನು ಪರಿಹರಿಸಿಕೊಳ್ಳಬಲ್ಲೆಯಾದರೆ, ಬ್ರಹ್ಮವಿತ್ತುಗಳಲ್ಲಿ ಒಬ್ಬನಾಗುವೆ.

ಏತಾಮಹಂ ಭಾವಮಯೀಮಪುಣ್ಯಾಂ
ಛಿತ್ತ್ವಾಽಹಂಭಾವಶಲಾಕಯೈವ ||
ಸ್ವಭಾವನಾಂ ಭವ್ಯ ಭವಾಂತಭೂಮೌ |
ಭವಾಭಿಭೂತಾಖಿಲ ಭೂತಭೀತಿಃ || ೨೭ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ತೃಷ್ಣಾ ವರ್ಣನಂ" ನಾಮ ಪಂಚದಶಃ ಸರ್ಗಃ

---

೨೭. ಎಲೆ ಪುಣ್ಯವಂತನಾದ ರಾಮನೆ, ಈ ಅಪುಣ್ಯವಾದ, ದೇಹಾತ್ಮ ಭಾವನೆಯನ್ನು ಈ ದೇಹಾದಿಗಳು ನಾನಲ್ಲ ಎಂಬ ಅನಹಂಭಾವವೆಂಬ ಸರಳಿನಿಂದ ಹೊಡೆದು ಕತ್ತರಿಸಿ, ಯಾರ ಭೀತಿಯೂ ಇಲ್ಲದವನಾಗಿ, ಯಾರಿಗೂ ಭೀತಿ ಮಾಡದವನಾಗಿ, ಎಲ್ಲವನ್ನೂ ಆತ್ಮನೇ ಎಂದು ನೋಡುವ ಆತ್ಮಭಾವನಾನಿಷ್ಠನಾಗಿ, ಭವವನ್ನು ಕೊನೆಗಾಣಿಸುವ ಭೂಮಿ(ಕೆ)ಯಲ್ಲಿ ನಿಲ್ಲುವವನಾಗು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ತೃಷ್ಣಾ ವರ್ಣನ" ಎಂಬ ಹದಿನೈದನೆಯ ಸರ್ಗವು.

ಷೋಡಶಃ ಸರ್ಗಃ

ಶ್ರೀ ರಾಮ ಉವಾಚ :—

ಸ್ವಭಾವಗಂಭೀರವೇತದ್ಭರ್ವ ವಚನಂ ತವ ।
ಯದಹಂಕಾರತೃಷ್ಣಾಂ ತ್ವಂ ಮಾ ಗೃಹಾಣೇತಿ ವಕ್ಷಿ ಮಾಂ ॥ ೧ ॥

ಅದ್ಯಹಂಕಾರಸಂತ್ಯಾಗಂ ಕರೋಮಿ ತದಿದಂ ಪ್ರಭೋ ।
ತ್ಯಜಾಮಿ ದೇಹನಾಮಾನಂ ಸನ್ನಿವೇಶಮಶೇಷತಃ ॥ ೨ ॥

ಜಾನುಸ್ತಂಭೇನ ಮಹತಾ ಧಾರ್ಯತೇ ಸುತರುರ್ಯಥಾ ।
ಅಹಂಕಾರೇಣ ದೇಹೋಽಯಂ ತಥೈವ ಕಿಲ ಧಾರ್ಯತೇ ॥ ೩ ॥

ಹದಿನಾರನೆಯ ಸರ್ಗವು

ಶ್ರೀ ರಾಮನು ಹೇಳಿದನು :—

೧. ದೇಹೋಽಹಂಕಾರರೂಪವಾದ ತೃಷ್ಣೆಯನ್ನು ಸಂಗ್ರಹಿಸದಿರು ಎಂದು ನೀನು ನನ್ನನ್ನು ಕುರಿತು ಅಪ್ಪಣೆಕೊಡಿಸಿರುವೆ. ಎಲೈ ಭಗವಂತನೆ, ನೀನು ಆಡಿದ ಮಾತು ಬಹು ಗಂಭೀರಭಾವವುಳ್ಳದು. ಇದು ನನಗೆ ಅರ್ಥವೇ ಆಗುವುದಿಲ್ಲ.

೨. ಎಲೈ ಪ್ರಭುವೆ, (ನೀನು ಹೇಳಿದಂತೆ) ದೇಹೋಽಹಂಕಾರ ಬುದ್ಧಿಯನ್ನು ಪರಿತ್ಯಾಗಮಾಡುವೆನಾದರೆ, ದೇಹ ಎಂದಿರುವ ಈ ಸನ್ನಿವೇಶವನ್ನೇ ಸಂಪೂರ್ಣವಾಗಿ ತ್ಯಜಿಸಬೇಕಾಗುವುದದಿಲ್ಲ.

೩. ಮಹಾವೃಕ್ಷಗಳನ್ನು ಧರಿಸಿರುವ ತಾಯಿಬೇರಿನಂತೆ, ಈ ದೇಹವನ್ನೆಲ್ಲ ಧರಿಸಿರುವುದು ಈ ದೇಹೋಽಹಂಕಾರ ಬುದ್ಧಿಯೇ ತಾನೆ?

ಅಹಂಕಾರಕ್ಷಯೇ ದೇಹಃ ಕಿಲಾವಶ್ಯಂ ವಿನಶ್ಯತಿ ।
ಮೂಲೇ ಕ್ರಕಚಸಂಲೂನೇ ಸುಮಹಾನಿವ ಪಾದಪಃ ॥ ೪ ॥

ತತ್ಕಥಂ ಸಂತ್ಯಜಾಮ್ಯೇನಂ ಜೀವಾಮಿ ಚ ಕಥಂ ಮುನೇ ।
ಏನಮರ್ಥಂ ವಿನಿಶ್ಚಿತ್ಯ ವದ ಮೇ ವದತಾಂ ವರ ॥ ೫ ॥

ಶ್ರೀ ವಸಿಷ್ಠ ಉವಾಚ :—

ಸರ್ವತ್ರ ವಾಸನಾತ್ಯಾಗೋ ರಾಮ ರಾಜೀವಲೋಚನ ।
ದ್ವಿವಿಧಃ ಕಥ್ಯತೇ ತಜ್ಜ್ಞೈರ್ಜ್ಞೇಯೋ ಧ್ಯೇಯಶ್ಚ ಮಾನದ ॥ ೬ ॥

ಅಹಮೇಷಾಂ ಪದಾರ್ಥಾನಾ ಮೇತೇ ಚ ಮಮ ಜೀವಿತಂ ।
ನಾಹಮೇಭಿರ್ವಿನಾ ಕಶ್ಚಿನ್ನ ಮಯ್ಯೆತೇ ವಿನಾ ಕಿಲ ॥ ೭ ॥

---

೪. ಬುಡವನ್ನು ಗರಗಸದಿಂದ ಕತ್ತರಿಸಿಬಿಟ್ಟರೆ ದೊಡ್ಡ ಮರವೂ ಉರುಳಿ ಬೀಳುವಂತೆ, ದೇಹೋಽಹಂಕಾರ ಬುದ್ಧಿಯು ಶೂನ್ಯವಾಗಲು ದೇಹವೂ ವಿನಾಶ ವಾಗುವುದಲ್ಲವೆ ?

೫. ಅದರಿಂದ, ಈ ದೇಹೋಽಂಕಾರ ಬುದ್ಧಿಯನ್ನು ಬಿಟ್ಟು ಬದುಕುವುದೆಂತು ? ಎಲೆ ಮುನೀಂದ್ರನೆ, ಈ ಅರ್ಥವನ್ನು, ಎಲೆ ಬೋಧಿಸುವವರಲ್ಲಿ ಅಗ್ರಗಣ್ಯನಾದ, ಚೆನ್ನಾಗಿ, ನಿಶ್ಚಯವಾಗಿ ನನಗೆ ಅರ್ಥವಾಗುವಂತೆ, ಹೇಳು.

ಶ್ರೀ ವಸಿಷ್ಠನು ಹೇಳಿದನು :—

೬. ರಾಜೀವಲೋಚನನಾದ ರಾಮನೆ, ದೇಹೋಽಹಂಕಾರತ್ಯಾಗವು "ವಾಸನಾತ್ಯಾಗ" ಎನ್ನಿಸಿಕೊಳ್ಳುವುದು. ಇದು ಜ್ಞೇಯ, ಧ್ಯೇಯ, ಎಂದು ಎರಡು ರೂಪವಾಗಿರುವುದೆಂದು, ಎಲೆ ಮಾನವಂತನೆ, ಅದನ್ನು ಬಲ್ಲವರು ಹೇಳುವರು.

೭. " ಈ ದೇಹೇಂದ್ರಿಯಾದಿ ಪದಾರ್ಥಗಳೆಲ್ಲವೂ ಸೇರಿರುವ ಸಂಘಾತವೇ ನಾನು: ಇವುಗಳಿದ್ದರೆ ನಾನು ಬದುಕಿರುವೆನು. ಇವು ಇಲ್ಲದಿದ್ದರೆ ನಾನು ಬದುಕಿರುವುದಿಲ್ಲ ನಾನು ಇಲ್ಲದಿದ್ದರೆ ಇವು ಇಲ್ಲ'' ಎಂಬ ಅವಿನಾಭಾವ ಸಂಬಂಧವನ್ನು ಕಲ್ಪಿಸಿಕೊಂಡಿರುವುದೇ ದೇಹೋಽಹಂಕಾರ ಬುದ್ಧಿಯು.

ಇತ್ಯಂತರ್ನಿಶ್ಚಯಂ ಕೃತ್ವಾ ವಿಚಾರ್ಯ ಮನಸಾ ಸಹ ।
ನಾಹಂ ಪದಾರ್ಥಸ್ಯ ನ ಮೇ ಪದಾರ್ಥ ಇತಿ ಭಾವಿತೇ ॥ ೮ ॥

ಅಂತಃಶೀತಲಯಾ ಬುದ್ಧ್ಯಾ ಕುರ್ವತ್ಯಾ ಲೀಲಯಾ ಕ್ರಿಯಾಂ ।
ಯೋ ನೂನಂ ವಾಸನಾತ್ಯಾಗೋ ಧ್ಯೇಯೋ ರಾಮ ಸ ಕೀರ್ತಿತಃ ॥ ೯ ॥

ಸರ್ವಂ ಸಮತಯಾ ಬುದ್ಧ್ಯಾ ಯಂ ಕೃತ್ವಾ ವಾಸನಾಕ್ಷಯಂ ।
ಜಹಾತಿ ನಿರ್ಮಮೋ ದೇಹಂ ಜ್ಞೇಯೋಽಸೌ ವಾಸನಾಕ್ಷಯಃ ॥ ೧೦ ॥

ಅಹಂಕಾರಮಯೀಂ ತ್ಯಕ್ತ್ವಾ ವಾಸನಾಂ ಲೀಲಯೈವ ಯಃ ।
ತಿಷ್ಠತಿ ಧ್ಯೇಯಸಂತ್ಯಾಗೀ ಜೀವನ್ಮುಕ್ತಃ ಸ ಉಚ್ಯತೇ ॥ ೧೧ ॥

೮-೯. ಒಳಗೆ ಹೀಗೆ ದೃಢವಾಗಿರುವ ಈ ನಿಶ್ಚಯವನ್ನೂ, ಅದನ್ನು ಅಂಗೀಕರಿಸಿರುವ ಮನಸ್ಸಿನ ಸ್ವರೂಪವನ್ನೂ, ಚೆನ್ನಾಗಿ ವಿಚಾರ ಮಾಡಿಮಾಡಿ, "ನಾನು ಈ ದೇಹೇಂದ್ರಿಯಾದಿ ಸಂಘಾತವು ಅಲ್ಲವೇ ಅಲ್ಲ: ಇವು ನನ್ನವು ಎಂಬುದೂ ಇಲ್ಲ" ಎಂದು ಗೊತ್ತುಮಾಡಿಕೊಂಡು, ತನ್ನ ಬುದ್ಧಿಯಲ್ಲಿ ಯಾವುದೊಂದು ವಿಕಾರವೂ ಇಲ್ಲದಂತೆ ಇಟ್ಟುಕೊಂಡು, ಮಾಡುವ ಕ್ರಿಯೆಗಳನ್ನೆಲ್ಲ ಲೀಲೆಯೆಂದು ಮಾಡುತ್ತ, ಇರುವವನ ವಾಸನಾತ್ಯಾಗವು ಯಾವುದುಂಟೋ ಅದು, ರಾಮ, ಧ್ಯೇಯ ವಾಸನಾತ್ಯಾಗ ಎನ್ನಿಸಿಕೊಳ್ಳುವುದು.

೧೦. ಇಂದ್ರಿಯಾದಿಗಳಿಂದ ಜ್ಞೇಯವಾಗಿರುವ ಸಮಸ್ತ ಪದಾರ್ಥಗಳನ್ನು ಬ್ರಹ್ಮಾಭಿನ್ನವಾಗಿ ಕಾಣುತ್ತಾ, ವಾಸನಾಕ್ಷಯವನ್ನು ಪಡೆದು, ಮಮಕಾರರಹಿತನಾಗಿ, ದೇಹವನ್ನು ಎಂದರೆ ದೇಹೋಽಹಂಬುದ್ಧಿಯನ್ನು ಬಿಡುವುದು ಯಾವುದೋ, ಅದು ಜ್ಞೇಯವೆಂಬ ವಾಸನಾತ್ಯಾಗವು.

೧೧. ಯಾವನು ಮಾಡುವ ಕೆಲಸವನ್ನೆಲ್ಲ ಲೀಲೆಯೆಂಬ ಬುದ್ಧಿಯಿಂದ ಮಾಡುತ್ತ ದೇಹೋಽಹಂ ಎಂಬ ನಿಶ್ಚಯ ರೂಪವಾದ ವಾಸನೆಯನ್ನು ಬಿಟ್ಟು ಕುಳಿತವನು ಯಾರೋ, ಅವನನ್ನು "ಧ್ಯೇಯವಾಸನಾ ತ್ಯಾಗೀ, ಜೀವನ್ಮುಕ್ತ" ಎನ್ನುವರು.

ನಿರ್ಮೂಲಕಲನಾಂ ತ್ಯಕ್ತ್ವಾ ವಾಸನಾಃ ಯಃ ಶಮಂ ಗತಃ
ಜ್ಞೇಯ ತ್ಯಾಗಮಯಂ ವಿದ್ಧಿ ಮುಕ್ತಂ ತಂ ರಘುನಂದನ ॥ ೧೨ ॥

ಧ್ಯೇಯಂ ತಂ ವಾಸನಾತ್ಯಾಗಂ ಕೃತ್ವಾ ತಿಷ್ಠಂತಿ ಲೀಲಯಾ ।
ಜೀವನ್ಮುಕ್ತಾ ಮಹಾತ್ಮಾನಃ ಸುಜನಾ ಜನಕಾದಯಃ ॥ ೧೩ ॥

ಜ್ಞೇಯಂ ತು ವಾಸನಾತ್ಯಾಗಂ ಕೃತ್ವೋಪಶಮಮಾಗತಾಃ ।
ವಿದೇಹಮುಕ್ತಾಸ್ತಿಷ್ಠಂತಿ ಬ್ರಹ್ಮಣ್ಯೇವ ಪರಾವರೇ ॥ ೧೪ ॥

ದ್ವಾವೇವ ರಾಘವ ತ್ಯಾಗೌ ಸಮೌ ಮುಕ್ತಪದೇ ಸ್ಥಿತೌ ।
ದ್ವಾವೇತೌ ಬ್ರಹ್ಮತಾಂ ಯಾತೌ ದ್ವಾವೇವ ವಿಗತಜ್ವರೌ ॥ ೧೫ ॥

---

೧೨. ಎಲೆ ರಾಘವನೆ, ಸಂಕಲ್ಪವನ್ನೂ, ಆ ಸಂಕಲ್ಪವನ್ನು ಮಾಡಿಸುವ ವಾಸನೆಯನ್ನೂ ಸಹ ಬಿಟ್ಟು, ಪ್ರಶಾಂತನಾದವನು ಯಾವನೋ ಅವನು ಜ್ಞೇಯ ವಾಸನಾ ತ್ಯಾಗಿಯು. ಆತನೂ ಮುಕ್ತನೇ.

೧೩. ಧ್ಯೇಯ ವಾಸನಾತ್ಯಾಗವನ್ನು ಮಾಡಿ ಲೀಲಾಮಯರಾಗಿ ಕುಳಿತಿರುವ ಜೀವನ್ಮುಕ್ತರು ನಿಜವಾಗಿಯೂ ಮಹಾತ್ಮರು: ಸಜ್ಜನರು. ಜನಕಾದಿಗಳು ಇಂಥವರು.

೧೪. ಜ್ಞೇಯ ವಾಸನಾತ್ಯಾಗವನ್ನು ಮಾಡಿ ಉಪಶಾಂತರಾದ ವಿದೇಹ ಮುಕ್ತರು ಪರಬ್ರಹ್ಮನಲ್ಲಿ ಇರುವರು.

೧೫. ಈ ಎರಡು ವಿಧವಾದ ತ್ಯಾಗವೂ ಒಂದೇ! ಈ ಎರಡು ವಿಧವಾದ ತ್ಯಾಗದಲ್ಲಿ ಯಾವುದೊಂದನ್ನು ಮಾಡಿದರೂ ಮುಕ್ತರಾಗುವರು. ರಾಘವ, ಈ ಉಭಯ ವಿಧ ತ್ಯಾಗಿಗಳೂ ವಿಜ್ವರರಾಗಿ ಬ್ರಹ್ಮತ್ವವನ್ನು ಪಡೆಯುವರು.

ಯುಕ್ತಾಯುಕ್ತಮತೀ ಸ್ವಾಸೇ ಕೇವಲಂ ವಿಮಲೇಽನಘೆ ।
ಏಕಃ ಸ್ಥಿತಃ ಸ್ಫುರದ್ದೇಹಃ ಶಾಂತದೇಹಃ ಸ್ಥಿತೋಽಪರಃ ॥ ೧೬ ॥

ಏಕಃ ಸದೇಹೋ ನಿರ್ಮುಕ್ತಸ್ತಿಷ್ಠತ್ಯಪಗತಜ್ವರಃ ।
ತ್ಯಕ್ತದೇಹೋ ವಿಮುಕ್ತೋಽನ್ಯೋ ವರ್ತತೇಽಜ್ಞೇಯವಾಸನಃ ॥ ೧೭ ॥

ಆಪತತ್ಸು ಯಥಾಕಾಲಂ ಸುಖದುಃಖೇಷ್ವನಾರತಂ ।
ನ ಹೃಷ್ಯತಿ ಗ್ಲಾಯತಿ ಯಃ ಸ ಮುಕ್ತ ಇತಿ ಹೋಚ್ಯತೇ ॥ ೧೮ ॥

ಈಪ್ಸಿತಾನೀಪ್ಸಿತೇ ನ ಸ್ತೋ ಯಸ್ಯೇಷ್ಟಾನಿಷ್ಟವಸ್ತುಷು ।
ಸುಷುಪ್ತವಚ್ಚರತಿ ಯಃ ಸ ಮುಕ್ತ ಇತಿ ಕಥ್ಯತೇ ॥ ೧೯ ॥

---

೧೬. ಆದರೆ, ಇವರಿಬ್ಬರಲ್ಲಿ ಒಬ್ಬನು ಮನಸ್ಸು ಉಳ್ಳವನು: ಇನ್ನೊಬ್ಬನು ಮನಸ್ಸು ಇಲ್ಲದವನು. ಇಬ್ಬರೂ ಬ್ರಹ್ಮದಲ್ಲಿಯೇ ಇರುವವರು. ಆದರೂ ಒಬ್ಬನಿಗೆ ದೇಹಭಾನ (ದೇಹವು ಇರುವುದೆಂಬ ಸ್ಮರಣೆ) ಉಂಟು: ಇನ್ನೊಬ್ಬನಿಗೆ ಇರುವುದಿಲ್ಲ.

೧೭. (ದೇಹವಾಸನಾತ್ಯಾಗಿ) ಯಾದವನು ಸದೇಹನಾಗಿಯೇ ವಿಗತಜ್ವರನಾಗಿ ವಿಮುಕ್ತನಾಗಿರುವನು. (ಜ್ಞೇಯವಾಸನಾತ್ಯಾಗಿ) ಯಾದವನು ವಿದೇಹಮುಕ್ತನಾಗಿರುವನು.

೧೮. ಕಾಲಕ್ರಮದಿಂದ ತಪ್ಪದೆ ಬಂದೇ ಬರುವ ಸುಖದುಃಖಗಳಲ್ಲಿ ಯಾವನು ಹರ್ಷಗ್ಲಾನಿಗಳನ್ನು ಪಡೆಯುವುದಿಲ್ಲವೋ ಅವನೇ ಮುಕ್ತನು ಎನ್ನಿಸಿಕೊಳ್ಳುವನು.

೧೯. ಇಷ್ಟ, ಅನಿಷ್ಟ ವಸ್ತುಗಳಲ್ಲಿ ಯಾವನು ಲೋಕದಲ್ಲಿ ಸುಷುಪ್ತನಂತೆ ಇದ್ದುಬಿಡುವನೋ ಅವನು ಮುಕ್ತನು.

ಹೇಯೋಪಾದೇಯಕಲನೇ ಮಮೇತ್ಯಹಮಿಹೇತಿ ಚ ।
ಯಸ್ಯಾಂತಃ ಸಂಪರಿಕ್ಷೀಣೇ ಸ ಜೀವನ್ಮುಕ್ತ ಉಚ್ಯತೇ ॥ ೨೦ ॥

ಹರ್ಷಾಮರ್ಷಭಯಕ್ರೋಧಕಾಮಕಾರ್ಪಣ್ಯದೃಷ್ಟಿಭಿಃ ।
ನ ಪರಾಮೃಶ್ಯತೇ ಯೋಽಂತಃ ಸಜೀವನ್ಮುಕ್ತ ಉಚ್ಯತೇ ॥ ೨೧ ॥

ಸುಷುಪ್ತವತ್ಪ್ರಶಮಿತಭಾವವೃತ್ತಿನಾ ।
ಸ್ಥಿತಂ ಸದಾ ಜಾಗ್ರತಿ ಯೇನ ಚೇತಸಾ ॥
ಕಲಾನ್ವಿತೋ ವಿಧುರಿವ ಯಃ ಸದಾ ಮುದಾ ।
ನಿಷೇವ್ಯತೇ ಮುಕ್ತ ಇತೀಹ ಸ ಸ್ಮೃತಃ ॥ ೨೨ ॥

---

೨೦. ಹೇಯ, ಉಪಾದೇಯ, ಎಂಬ ಯೋಚನೆಯೇ ಇಲ್ಲದೆ, ಮಮ, ಅಹಂ, ಇಹ, ಎಂಬ ವಾಸನೆಯೆಲ್ಲವೂ ಯಾವನ ಹೃದಯದಲ್ಲಿ ಸಂಪೂರ್ಣವಾಗಿ ಹೋಗಿರುವುದೋ, ಆತನು ಜೀವನ್ಮುಕ್ತನು. (ಯಾವುದಾದರೊಂದು ಪರಿಚ್ಛೇದಕ್ಕೆ ಒಳಗಾಗಿರುವುದೇ ಸಂಸಾರವು. ಆ ಪರಿಚ್ಛೇದವು ಯಾವುದೂ ಇಲ್ಲದಿರುವುದೇ ಮೋಕ್ಷವು.)

೨೧. ಹರ್ಷ, ಅಮರ್ಷ (ಅಸಹನ), ಭಯ, ಕ್ರೋಧ, ಕಾಮ, ಕಾರ್ಪಣ್ಯ ಇತ್ಯಾದಿ ವೃತ್ತಿಗಳು ಯಾವನ ಹೃದಯವನ್ನು ಸೋಕುವುದಿಲ್ಲವೋ ಆತನು ಜೀವನ್ಮುಕ್ತನು.

೨೨. ಯಾವ ಮಹಾಪುರುಷನು ಸುಷುಪ್ತಿಯಲ್ಲಿ ಹೇಗೋ ಹಾಗೆ ಜಾಗ್ರತ್ತಿನಲ್ಲಿಯೂ ವೃತ್ತಿಶೂನ್ಯನಾಗಿರುವನೋ, ಹಾಗಿದ್ದರೂ ಯಾವನ ಮನಸ್ಸು ಜಾಗ್ರತ್ತಿನಲ್ಲಿರುವಂತೆಯೇ ಎಚ್ಚರವಾಗಿರುವುದೋ, ಪೂರ್ಣಚಂದ್ರನಂತೆ ಯಾವನು ಯಾವಾಗಲೂ ಸಂತೋಷವಾಗಿಯೇ ಇರುವನೋ, ಆತನು ಇಲ್ಲಿಯೇ ಇದ್ದೂ ಮುಕ್ತನಾದವನು ಎನ್ನಿಸಿಕೊಳ್ಳುವನು.

ಶ್ರೀ ವಾಲ್ಮೀಕಿರುವಾಚ :—

ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ |
ಸಾಯಂತನಾಯ ವಿಧಯೇಽಸ್ತಮಿನೋ ಜಗಾಮ ||
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ |
ಶಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ || ೨೩ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷು ಉಪಶಮಪ್ರಕರಣೇ
"ತೃಷ್ಣಾ ಚಿಕಿತ್ಸಾ" ನಾಮ ಷೋಡಶಃ ಸರ್ಗಃ

|| ಏಕಾದಶೋ ದಿವಸಃ ||

ಶ್ರೀ ವಾಲ್ಮೀಕಿಯು ಹೇಳಿದನು :—

೨೩. ಹೀಗೆ ವಸಿಷ್ಠ ಮಹರ್ಷಿಯು ಹೇಳುತ್ತಿದ್ದ ಹಾಗೆಯೇ ದಿವಸವು ಮುಗಿಯಿತು. ಸಾಯಂಕಾಲದ ಕರ್ಮಗಳು ನೆರವೇರಲೆಂದು ಸೂರ್ಯನು ಅಸ್ತನಾದನು. ಸಭಿಕರೆಲ್ಲರೂ ವಸಿಷ್ಠ ಮಹಾಮುನಿಗೆ ನಮಸ್ಕಾರಮಾಡಿ ಸಾಯಂ ಸ್ನಾನಕ್ಕಾಗಿ ಹೊರಟರು. ರಾತ್ರಿಯು ಕಳೆಯುತ್ತಿದ್ದ ಹಾಗೆಯೇ, ಮಹಾಮುನಿಯ ಉಪದೇಶವಚನಗಳನ್ನು ಆಲಿಸಿ ಕೃತಾರ್ಥರಾಗಲು, ಸೂರ್ಯನ ಕಿರಣಗಳೊಡನೆಯೇ ಹಿಂತಿರುಗಿ ಬಂದರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ತೃಷ್ಣಾ ಚಿಕಿತ್ಸಾ" ಎಂಬ ಹದಿನಾರನೆಯ ಸರ್ಗವು.

|| ಹನ್ನೊಂದನೆಯ ದಿವಸ ||

ಸಪ್ತದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ವಿದೇಹಮುಕ್ತಾ ಯೇ ರಾಮ ತೇ ಗಿರಾಮಿಹ ಗೋಚರೇ ।
ನೈವ ತಿಷ್ಠಂತಿ ತಸ್ಮಾತ್ತ್ವಂ ಜೀವನ್ಮುಕ್ತಿಮಿಮಾಂ ಶೃಣು ॥ ೧ ॥

ಪ್ರಾಕೃತಾನ್ಯೇವ ಕರ್ಮಾಣಿ ಯಯಾ ವರ್ಜಿತವಾಂಛಯಾ ।
ಕ್ರಿಯಂತೇ ತೃಷ್ಣಯೇಮಾನಿ ತಾಂ ಜೀವನ್ಮುಕ್ತತಾಂ ವಿಧುಃ ॥ ೨ ॥

ಹದಿನೇಳನೆಯ ಅಧ್ಯಾಯವು

ಶ್ರೀ ವಸಿಷ್ಠನು ಹೇಳಿದನು :—

ರಾಮ, ವಿದೇಹಮುಕ್ತರಾದವರು ಹೇಗಿರುವರು ಎಂಬುದನ್ನು ಮಾತಿನಿಂದ ಹೇಳಲು ಆಗುವುದಿಲ್ಲ. ಅದರಿಂದ, ಜೀವನ್ಮುಕ್ತಿಯೆಂದರೆ ಏನು ಎಂಬುದನ್ನು ಕುರಿತು ಹೇಳುವೆನು ಕೇಳು.

೨. (ಶರೀರವಿರುವವರೆಗೂ ಮಾಡಬೇಕಾದ) ಪ್ರಾಕೃತ ಕರ್ಮಗಳನ್ನು ಫಲವು ಬೇಕೆಂಬ ಬುದ್ಧಿಯಿಲ್ಲದಿರುವ ತೃಷ್ಣೆಯಿಂದ ಮಾಡುವುದು ಯಾವುದುಂಟೋ ಅದೇ ಜೀವನ್ಮುಕ್ತಿಯು.

(ಕರ್ಮವನ್ನು ಮಾಡುವವನು ಪ್ರಾಜ್ಞನಾಗಲಿ ಅಜ್ಞನಾಗಲಿ, ಅವನಿಗೆ ಕರ್ಮವನ್ನು ಮಾಡುವಂತೆ ಪ್ರೇರಿಸುವ ಪ್ರಚೋದನವೊಂದು ಇದ್ದೇ ಇರಬೇಕು. ಈ ಪ್ರಚೋದನವೊಂದು ಇಲ್ಲಿ ವಸಿಷ್ಠರು "ತೃಷ್ಣಾ" ಎಂದು ಕರೆದು, ಅದರಲ್ಲಿ ಫಲಭೋಗಾಸಕ್ತಿಯುಳ್ಳದು ಸವಾಂಛಾತೃಷ್ಣೆ. ಅದಿಲ್ಲದುದು ನಿರ್ವಾಂಛಾತೃಷ್ಣೆ ಅಜ್ಞರಿಗೆ ಇರುವ ತೃಷ್ಣೆ ಮೊದಲನೆಯದು. ಪ್ರಾಜ್ಞರ ತೃಷ್ಣೆಯು ಎರಡನೆಯ ವಿಧದ್ದು ಎಂದು ಹೇಳುವರು.)

ಯಾ ಸ್ಥಿತಿಸ್ತೃಷ್ಣಯಾ ಜಂತೋರ್ಬಾಹ್ಯಾರ್ಥೈರ್ಬದ್ಧಭಾವಯಾ ।
ತಂ ಬಂಧಮಾಹುರಾಚಾರ್ಯಾಃ ಸಂಸಾರನಿಗಡಂ ದೃಢಂ ॥ ೩ ॥

ನೂನಮುಜ್ಝಿತಸಂಕಲ್ಪಾ ಹೃದಿ ಬಾಹ್ಯೇ ವಿಹಾರಿಣೀ ।
ವಾಸನಾ ಯೋದಿತಾ ಸೇಹ ಜೀವನ್ಮುಕ್ತಶರೀರಿಣೀ ॥ ೪ ॥

ಬಾಹ್ಯಾರ್ಥವ್ಯಸನೋಚ್ಛೂನಾ ತೃಷ್ಣಾ ಬದ್ಧೇತಿ ರಾಘವ ।
ಸರ್ವಾರ್ಥವ್ಯಸನೋನ್ಮುಕ್ತಾ ತೃಷ್ಣಾ ಮುಕ್ತೇತಿ ಕಥ್ಯತೇ ॥ ೫ ॥

ಪೂರ್ವಂ ಯಾಸ್ಯಾಸ್ತು ತೃಷ್ಣಾಯಾ ವರ್ತಮಾನೇಽಪಿ ಶಾಶ್ವತೀ !
ನಿರ್ದುಃಖತಾ ನಿಷ್ಫಲತಾ ಸಾ ಮುಕ್ತೇತಿ ಬುಧೈಃ ಸ್ಮೃತಾ ॥ ೬ ॥

---

೩. ಯಾವ ತೃಷ್ಣೆಯು 'ಈ ಸಂಸಾರವು ಸತ್ಯವು,' ಎಂಬ ನಂಬಿಕೆಯನ್ನು ಹುಟ್ಟಿಸಿ ಈ ಸಂಸಾರ ಸುಖದಲ್ಲಿ ಆಸಕ್ತಿಯಿರುವಂತೆ ಮಾಡುವುದೋ ಅದೇ ಬಂಧಕವು: ಅದೇ ಸಂಸಾರವೆಂಬ ದೃಢವಾದ ಸಂಕಲೆಯು ಎಂದು ಆಚಾರ್ಯರು ಹೇಳುವರು.

೪. (ಸಂಸಾರವು ಸತ್ಯವು: ಆದರಿಂದ ಇದನ್ನು ಹೀಗೆ ಹೀಗೆ ಅನುಭವಿಸಬೇಕು ಎಂದು ಮುಂತಾದ) ಸಂಕಲ್ಪಗಳನ್ನೆಲ್ಲ ಬಿಟ್ಟು, ಕೇವಲ ಲೋಕಸಂಗ್ರಹಾರ್ಥವಾಗಿ ಮಾತ್ರ ಪ್ರವರ್ತಿಸಿರುವ ವಾಸನಾರೂಪವಾದ ತೃಷ್ಣೆಯು ಯಾವುದೋ ಅದು ಜೀವನ್ಮುಕ್ತರಲ್ಲಿರುವ (ಶುದ್ಧ) ತೃಷ್ಣೆಯು.

೫. ಇಂದ್ರಿಯಾರ್ಥಗಳನ್ನು ನೆನೆದು ನೆನೆದು ಬೆಳೆಯುವ ತೃಷ್ಣೆಯು ಬದ್ಧವು (ಬಂಧಕಾರಿಣಿಯು) ರಾಘವ, ಯಾವುದೊಂದನ್ನು ಕುರಿತು ಯೋಚಿಸದಿರುವ ತೃಷ್ಣೆಯು ಮುಕ್ತವು (ಮೋಕ್ಷಕಾರಿಣಿಯು).

೬. ವಿಷಯಾನುಭವಕ್ಕಿಂತ ಮುಂಚೆಯೂ, ವಿಷಯಾನುಭವ ಮಾಡುವಾಗಲೂ, ವಿಷಯಾನುಭವವಾದ ಮೇಲೆಯೂ ಯಾವ ತೃಷ್ಣೆಯು ಹೆಚ್ಚು ಕಡಿಮೆಗಳಿಲ್ಲದೆ ಇದ್ದಂತೆ ಇದ್ದು, ದುಃಖಪ್ರದವಲ್ಲದೆ, ಇರುವುದೋ ಅದು ಮುಕ್ತತೃಷ್ಣೆಯೆಂದು ತಿಳಿದವರು ಹೇಳುವರು.

ಇದಮಸ್ತು ಮಮೇತ್ಯಂತರ್ಯೈಷಾ ರಾಘವ ಭಾವನಾ |
ತಾಂ ತೃಷ್ಣಾಂ ಶೃಂಖಲಾಂ ವಿದ್ಧಿ ಕಲನಾಂ ಚ ಮಹಾಮತೇ || ೭ ||

ತಾಮೇತಾಂ ಸರ್ವಭಾವೇಷು ಸತ್ಸ್ವಸತ್ಸು ಚ ಸರ್ವದಾ |
ಸಂತ್ಯಜ್ಯ ಪರಮೋದಾರಃ ಪರಮೇತಿ ಮಹಾಮನಾಃ || ೮ ||

ಬಂಧಾಶಾಮಥ ಮೋಕ್ಷಾಶಾಂ ಸುಖದುಃಖದಶಾಮಪಿ |
ತ್ಯಕ್ತ್ವಾ ಸದಸದಾಶಾಂ ಚ ತಿಷ್ಠಾಕ್ಷುಬ್ಧಮಹಾಬ್ಧಿವತ್ || ೯ ||

ಅಜರಾಮರಮಾತ್ಮಾನಂ ಬುದ್ಧ್ವಾ ಬುದ್ಧಿಮತಾಂ ವರ |
ಜರಾಮರಣಶಂಕಾಭಿರ್ಮಾ ಮನಃ ಕಲುಷಂ ಕೃಥಾಃ || ೧೦ ||

---

೭. ಇದು ನನಗೆ ಆಗಬೇಕು ಎಂದು ಹೃದಯದಲ್ಲಿ ಮಾಡಿಕೊಳ್ಳುವ ಭಾವನೆ ಯಾವದಿರುವುದೋ ಅದೇ ತೃಷ್ಣೆಯು. ಎಲೆ ಬುದ್ಧಿವಂತನೆ, ಅದೇ ಸಂಕಲ್ಪವು ; ಅದೇ ಸಂಕಲೆಯು.

೮. ಈ ವಿಧವಾದ ತೃಷ್ಣೆಯನ್ನು ಸತ್ ಅಸತ್ ಎಂಬ ಎರಡು ಪದಾರ್ಥಗಳಲ್ಲಿಯೂ ಇಡದೆ, ಬಿಟ್ಟು, ಉದಾರನಾಗಿರುವ ಮಹಾನುಭವನು ಬ್ರಹ್ಮತ್ವವನ್ನು ಪಡೆಯುವನು.

೯. ಬಂಧಕಗಳಾದ ದೇಹಾದಿಗಳಲ್ಲಿ ಆಶೆಮಾಡದೆ, ಮೋಕ್ಷವಾಗಬೇಕೆಂಬ ಆಶೆಯನ್ನು ಬಲವಾಗಿ ಹಚ್ಚಿಗೂಳ್ಳದೆ, ಸುಖದುಃಖಗಳಲ್ಲಿಯೂ ಹೆಚ್ಚಾಗಿ ಆಸ್ಥೆಯನ್ನು ಇಡದೆ, ಸತ್–ಅಸತ್ ಎಂಬ ಭಾವನೆಗಳನ್ನು ಹೆಚ್ಚಾಗಿ ಗೌರವಿಸದೆ ಕ್ಷೋಭರಹಿತವಾದ ಸಮುದ್ರದಂತೆ ಶಾಂತವಾಗಿರು.

೧೦. ಆತ್ಮನು ಜರಾಮರಣರಹಿತನೆಂಬುದನ್ನು ತಿಳಿದು, ಬುದ್ಧಿವಂತರಲ್ಲಿ ಶ್ರೇಷ್ಠರಾದ ರಾಮನೆ, ಜರಾಮರಣಗಳು ಉಂಟಾಗುವುವು ಎಂಬ ಶಂಕೆಗಳನು ಹಚ್ಚಿಕೊಂಡು ಮನಸ್ಸು ಕಲಕದಂತೆ ನೋಡಿಕೊ.

ಪದಾರ್ಥವತ್ತ್ವಂ ನೇದಂ ತೇ ನಾಯಂ ತ್ವಮಸಿ ರಾಘವ ।
ಕಿಂಚಿತ್ತದನ್ಯದೇವೇದಮನ್ಯ ಏವಾಸಿ ರಾಘವ ॥ ೧೧ ॥

ಅಸದಭ್ಯುದಿತೇ ವಿಶ್ವೇ ಸತೀವಾಸತಿ ಸಂಸ್ಥಿತೇ ।
ತ್ವಯಿ ತತ್ತ್ವಾಮುಕಿಗತೇ ತೃಷ್ಣಾಯಾಃ ಸಂಭವಃ ಕುತಃ ॥ ೧೨ ॥

---

೧೧. ಪ್ರಪಂಚಾದಿ ಈ ಪದಾರ್ಥಗಳು ಒಂದೂ ನೀನಲ್ಲ. ಇವೊಂದೂ ನಿನ್ನದಲ್ಲ. ರಾಘವ, ಅವೇ ಬೇರೆ, ನೀನೇ ಬೇರೆ.

೧೨. ಈ ಜಗತ್ತು ಉದಿಸಿರುವುದು ಎಂಬುದೂ ಅಸತ್ಯವು. ಇದು ಇದ್ದಂತೆಯೇ ತೋರುತ್ತಿದ್ದರೂ ಇಲ್ಲದೆಯೇ ಇರುವುದು. ಇದನ್ನು ನೀನು ಅರಿತುಜಗದ್ಭ್ರಾಂತಿಯನ್ನು ದಾಟಿರುವೆ, ಹೀಗಿರಲು, ತೃಷ್ಣೆಯೆಂಬುದು ಎಲ್ಲಿಂದ ಬಂದೀತು ?

(ಜಗತ್ತು ಸತ್ಯವೆನ್ನುವವರು ಜಗದುತ್ಪತ್ತಿ ಕ್ರಮವನ್ನು ಕುರಿತು ಯೋಚಿಸಬೇಕು. ಜಗತ್ತು ಸತ್ಯವೆನ್ನುವುದು ತೂಕ, ಗಾತ್ರ, ಉಳ್ಳದಾಗಿ ಕಣ್ಣಿಗೆ ತೋರುತ್ತಿರುವುದರಿಂದ. ತೂಕ ಗಾತ್ರ, ಬಂದಿರುವುದು ಪೃಥ್ವೀಭೂತದಿಂದ. ಪಂಚೀಕರಣಮಾಡಿ ಪೃಥ್ವೀಭೂತವನ್ನು ಉಪಸಂಹಾರ ಮಾಡಿದರೆ, ತೂಕ ಗಾತ್ರಗಳು ಕಡಿಮೆಯಾಗಿ ಹೋಗುವುವು. ದಕ್ಷಿಣ ಅಮೇರಿಕದಲ್ಲಿ ಇರುವ ಒಂದು ಜಾತಿಯ ಕಾಡುಜನರು ತಮ್ಮ ಕೈಗೆ ಸಿಕ್ಕಿದ ಪರಕೀಯರ ತಲೆಗಳನ್ನು ಒಣಗಿಸಿ ಬೇಲದ ಕಾಯಿ ಗಾತ್ರ ಮಾತ್ರ ಮಾಡುವರೆಂದೂ, ಆ ತಲೆಯು ಅಷ್ಟು ಗಾತ್ರವಾದರೂ ತನ್ನ ರೂಪವನ್ನು ಬಿಡುವುದಿಲ್ಲವೆಂದೂ ಕೇಳಿರುವೆವು. ಜೊತೆಗೆ ಕ್ಷೀರೀಯೋಗದಿಂದ ಮಾನವನು ತನ್ನ ದೇಹವನ್ನು ಆನೆಯಷ್ಟು ಬೆಳೆಸಿಕೊಳ್ಳಬಹುದೆಂಬ ಶಾಸ್ತ್ರ ಪ್ರಮಾಣವನ್ನು ಗಮನಿಸಿ.

ಅಲ್ಲದೆ, ಥೈರಾಯಿಡ್ ಎಂಬ ಒಂದು ಗ್ರಂಥಿಯು ದೇಹದ ಅಲ್ಪತ್ವ ಪೀನತ್ವಗಳಿಗೆ ಕಾರಣವೆಂದು ಈಗಿನ ಸೈನ್ಸ್ ಹೇಳುವುದನ್ನೂ ಗರ್ಭದಲ್ಲಿ ಆರಂಭವಾದಾಗ ಈ ಮಾನವ ದೇಹವೆಲ್ಲಿ ಒಂದು ಸೂಕ್ಷ್ಮ ರೇತೋ ಬಿಂದುವಿನಲ್ಲಿ ಅಡಗಿತ್ತೆಂಬ ಅನುಭವವನ್ನೂ ಎದುರಿಗಿಟ್ಟುಕೊಂಡು ನೋಡಿದರೆ ಈ ಜಗತ್ತು ಸೂಕ್ಷ್ಮಾವಸ್ಥೆಯಲ್ಲಿ

ಅನ್ಯಚ್ಚ ರಾಮ ಮನಸಿ ಪುರುಷಸ್ಯ ವಿಚಾರಿಣಃ |
ಜಾಯತೇ ನಿಶ್ಚಯಃ ಸಾಧೋ ಸ್ಫಾರಾಕಾರಶ್ಚತುರ್ವಿಧಃ ॥ ೧೩ ॥

ಆಪಾದಮಸ್ತಕಮಹಂ ಮಾತಾಪಿತೃವಿನಿರ್ಮಿತಃ |
ಇತ್ಯೇಕೋ ನಿಶ್ಚಯೋ ರಾಮ ಬಂಧಾಯಾಸದ್ವಿಲೋಕನಾತ್ ॥ ೧೪ ॥

ಹೇಗಿರಬೇಕು ಎಂಬುದನ್ನು ಊಹಿಸುವುದು ಕಷ್ಟವಲ್ಲ. ಹಾಗೆಯೇ ಇನ್ನೊಂದು ಹಜ್ಜೆ ಮುಂದೆ ಹೋಗಿ, ವೃಕ್ಷವೆಲ್ಲವೂ ಒಂದೇ ಎಂಬಂತೆ, ಕಾಲದೇಶಾತ್ಮಕವಾದ ಭ್ರಾಂತಿಯಿಂದ ಹರಡಿ ತೋರುವ ಈ ಜಗತ್ತು ಕಾಲದೇಶಭ್ರಾಂತಿರಹಿತವಾದಾಗ ಹೇಗಿರಬಹುದು ಎಂಬುದನ್ನು ಯೋಚಿಸಿದರೆ, ಆಗ ಜಗತ್ತು ಸತ್ಯವೆಂಬುದನು ಅಂಗೀಕರಿಸುವುದು ಕಷ್ಟವಾಗುವುದು.

ಐವತ್ತು ವರ್ಷದವನೊಬ್ಬನು ಐದು ವರ್ಷದ ತನ್ನ ಬಾಲ್ಯದ ಕಥೆಯನ್ನು ಹೇಳುವಾಗ ಆ ನಡುವಿನ ನಲವತ್ತೈದು ವರ್ಷವೆಲ್ಲ ಹೋಯಿತು. ನಡೆದು ಹೋದರೆ ಒಂದು ವರ್ಷವಾಗುವ ದಾರಿಯನ್ನು ಪ್ಲೇನಿನಲ್ಲಿ ಕುಳಿತು ಒಂದು ದಿನದಲ್ಲಿ ದಾಟದರೆ, ಕಳೆದುಹೋದುದು ದಾರಿಯ ಉದ್ದವೋ? ೩೬೪ ದಿನವೋ?

ಹಾಗಾದರೆ, ಇದರ ಅರ್ಥವೇನು ಎಂದರೆ, ಮಾರ್ಗದ ದೈರ್ಘ್ಯ, ಅದನ್ನು ದಾಟುವುದಕ್ಕೆ ಬೇಕಾದ ಕಾಲದ ದೈರ್ಘ್ಯ, ಎರಡೂ ಸಾಧನಾರಹಿತವಾಗಿದ್ದಾಗ ಮಾತ್ರ ಉಂಟು. ಸಾಧನ ಸಂಪನ್ನನಿಗೆ ಎರಡೂ ಇಲ್ಲ ಎಂಬುದರಿಂದ, ಅದರ ಸತ್ಯತೆಯ ವಿಷಯದಲ್ಲಿಯೇ ಸಂದೇಹಪಡುವುದು ವೇದಾಂತದ ಸಂಪ್ರದಾಯ. ಯಾವುದು ಸತ್ಯವಲ್ಲವೋ ಅದು ಅಸತ್ಯವು. ಅಸತ್ಯವನ್ನು ಸತ್ಯವೆಂದುಕೊಳ್ಳುವುದು ಭ್ರಾಂತಿ. ಅದಿಲ್ಲದಿರುವುದು ಜೀವನ್ಮುಕ್ತಿ).

೧೩. ರಾಮ, ನೀನು ತಿಳಿಯಬೇಕಾದ ಅಂಶವು ಇನ್ನು ಒಂದುಂಟು. ಸಾಧುವಾದ ರಾಘವನೆ, ವಿಚಾರಶೀಲನಾದ ಪುರುಷನ ಹೃದಯದಲ್ಲಿ ಹುಟ್ಟುವ ನಿಶ್ಚಯವು ನಾಲ್ಕು ಪ್ರಕಾರವಾಗಿರುವುದು.

೧೪. "ನಾನು ಎಂಬುದು ತಲೆಯಿಂದ ಕಾಲುವರೆಗೆ ಇರುವ ಈ ದೇಹವು. ತಾಯಿತಂದೆಗಳ ದೇಹದಲ್ಲಿ ಹುಟ್ಟಿದ ಈ ದೇಹವೇ ನಾನು" ಎಂಬುದು ಮೊದಲನೆಯ ನಿಶ್ಚಯವು. ಇದು ಅಸತ್ತಾದರೂ ಸತ್ಯವೆಂಬ ಭ್ರಾಂತಿಯನ್ನು ಬಲಪಡಿಸುವುದು. ಅದರಿಂದ, ರಾಮ, ಈ ನಿಶ್ಚಯವು ಬಂಧಕವು.

ಅತೀತಃ ಸರ್ವಭಾವೇಭ್ಯೋ ವಾಲಾಗ್ರಾದಪ್ಯಹಂ ತನುಃ ।
ಇತಿ ದ್ವಿತೀಯೋ ಮೋಕ್ಷಾಯ ನಿಶ್ಚಯೋ ಜಾಯತೇ ಸತಾಂ ॥ ೧೫ ॥

ಜಗಜ್ಜಾಲ ಪದಾರ್ಥಾತ್ಮಾ ಸರ್ವಮೇವಾಹಮಕ್ಷಯಃ ।
ತೃತೀಯೋ ನಿಶ್ಚಯಶ್ಚೇತ್ಥಂ ಮೋಕ್ಷಾಯೈವ ರಘೂದ್ವಹ ॥ ೧೬ ॥

ಅಹಂ ಜಗದ್ವಾ ಸಕಲಂ ಶೂನ್ಯಂ ವ್ಯೋಮಸಮಂ ಸದಾ ।
ಏವಮೇಷ ಚತುರ್ಥೋಽನ್ಯೋ ನಿಶ್ಚಯೋ ಮೋಕ್ಷಸಿದ್ಧಯೇ ॥ ೧೭ ॥

ನಿಶ್ಚಯೇಷು ಚತುರ್ಷ್ವೇಷು ಬಂಧಾಯ ಪ್ರಥಮಃ ಸ್ಮೃತಃ ।
ತ್ರಯೋ ಮೋಕ್ಷಾಯ ಕಥಿತಾಃ ಶುದ್ಧಭಾವನಯೋತ್ಥಿತಾಃ ॥ ೧೮ ॥

---

೧೫. “ನಾನು ಸರ್ವಭಾವಾತೀತನು. ಕೂದಲಿನ ತುದಿಗಿಂತಲೂ ಸೂಕ್ಷ್ಮನಾದವನು” ಎಂಬುದು ಎರಡನೆಯ ನಿಶ್ಚಯವು. ಇದು ಸತ್ಪುರುಷರಿಗೆ ಮಾತ್ರ ಹುಟ್ಟುವ ನಿಶ್ಚಯವು. ಇದು ಮೋಕ್ಷಕಾರಿಯು.

೧೬. “ಇರುವ, ಇದ್ದ, ಬರುವ ಜಗದಾದಿ ಪದಾರ್ಥಜಾಲವೆಲ್ಲವೂ ನಾನೇ! ಎಲ್ಲವೂ ನಾನೇ! ನನ್ನನ್ನು ಬಿಟ್ಟು ಇನ್ನೇನೂ ಇಲ್ಲ. ಇಂತಹ ನಾನು ಯಾವ ಕ್ಷತಿಗೂ ಒಳಗಾಗದ ಅಕ್ಷಯನು” ಎಂಬುದು ಮೂರನೆಯ ನಿಶ್ಚಯವು ರಘುನಾಥ, ಇದೂ ಮೋಕ್ಷಕಾರಿಯು.

೧೭. “ನಾನೇ ಆಗಲಿ, ನನ್ನದೇ ರೂಪವಾದ ಈ ಜಗತ್ತೇ ಆಗಲಿ, ಆಕಾಶದಂತೆ ಬಟ್ಟಬಯಲು. ಯಾವಾಗಲೂ ಹೀಗೆಯೇ ಇರುವುದು” ಎಂಬುದು ನಾಲ್ಕನೆಯ ನಿಶ್ಚಯವು. ಇದರಿಂದ ಮೋಕ್ಷವು ಸಿದ್ಧಿಯಾಗುವುದು.

೧೮. ಈ ನಾಲ್ಕು ನಿಶ್ಚಯಗಳಲ್ಲಿ ಮೊದಲನೆಯದು ಮಾತ್ರ ಬಂಧಕವು. ಉಳಿದ ಮೂರೂ ಮೋಕ್ಷದಾಯಕಗಳು. ಶುದ್ಧಭಾವನೆಯಿಂದ ಹುಟ್ಟಿದವು.

ಏತೇಷಾಂ ಪ್ರಥಮಃ ಪ್ರೋಕ್ತಸ್ತೃಷ್ಣಾ ಯಾ ಬಂಧಯೋಗ್ಯತಾ ।
ಶುದ್ಧತೃಷ್ಣಾಸ್ತ್ರಯಃ ಸ್ವಚ್ಛಾ ಜೀವನ್ಮುಕ್ತವಿಲಾಸಿನಃ ॥ ೧೯ ॥

ಸರ್ವಮಾತ್ಮಾಹಮೇವೇತಿ ನಿಶ್ಚಯೋ ಯೋ ಮಹಾಮತೇ ।
ತಮಾದಾಯ ವಿಷಾದಾಯ ನ ಭೂಯೋ ಯಾತಿ ಮೇ ಮತಿಃ ॥ ೨೦ ॥

ತಿರ್ಯಗೂರ್ಧ್ವಮಧಸ್ತಾಚ್ಚ ವ್ಯಾಪಕೋ ಮಹಿಮಾತ್ಮನಃ ।
ಸರ್ವಮಾತ್ಮೇತಿ ತೇನಾಂತರ್ನಿಶ್ಚಯೇನ ನ ಬಧ್ಯತೇ ॥ ೨೧ ॥

ಶೂನ್ಯಂ ತತ್ಪ್ರಕೃತಿರ್ಮಾಯಾ ಬ್ರಹ್ಮವಿಜ್ಞಾನಮಿತ್ಯಪಿ ॥
ಶಿವಃ ಪುರುಷ ಈಶಾನೋ ನಿತ್ಯ ಆತ್ಮೈವ ಕಥ್ಯತೇ ॥ ೨೨ ॥

---

೧೯. ಈ ನಾಲ್ಕು ನಿಶ್ಚಯಗಳಲ್ಲಿ ಮೊದಲನೆಯ ನಿಶ್ಚಯವಿದ್ದರೆ ಮಾತ್ರ ತೃಷ್ಣೆಯು ಬಂಧಕವಾಗುವುದು. ಅವಲ್ಲದ ಇತರ ನಿಶ್ಚಯಗಳಿದ್ದಾಗ ತೃಷ್ಣೆಯು ಶುದ್ಧವಾಗಿರುವುದು. ಇಂತಹ ಶುದ್ಧ ತೃಷ್ಣೆಗಳು ಜೀವನ್ಮುಕ್ತರಲ್ಲಿ ಮಾತ್ರ ಕಂಡುಬರುವುವು.

೨೦. ಎಲೈ ಮಹಾಮತಿಯೆ, "ಸರ್ವವೂ ನಾನೇ ಹೊರತು ಇನ್ನು ಯಾವುದೂ ಅಲ್ಲ" ಎಂಬ ನಿಶ್ಚಯವು ಯಾವುದುಂಟೋ ಅದನ್ನು ಅಂಗೀಕರಿಸಿದರೆ, ಮತ್ತೆ ಬುದ್ಧಿಗೆ ಯಾವ ತೆರದ ವಿಷಾದವೂ ನನ್ನ ಬುದ್ಧಿಗೆ ಉಂಟಾಗುವುದಿಲ್ಲ.

೨೧. ಅಡ್ಡವಾಗಿ, ಮೇಲೆ, ಕೆಳಗೆ, ತಾನೇ ತಾನಾಗಿ ತುಂಬಿರುವ ಆತ್ಮನ ಮಹಿಮೆಯನ್ನು ಅರಿತು ಸರ್ವವೂ ಆತ್ಮವೇ ಎಂದು ನಿಶ್ಚಯಿಸಿದ ಮೇಲೆ ಎಂದಿಗೂ ಬಂಧನವು ಇಲ್ಲ.

೨೨. ನಿತ್ಯನಾದ ಆತ್ಮನನ್ನೇ ಶೂನ್ಯವೆಂದೂ ಪ್ರಕೃತಿಯೆಂದೂ, ಬ್ರಹ್ಮವೆಂದೂ, ವಿಜ್ಞಾನವೆಂದೂ, ಶಿವನೆಂದೂ, ಪುರುಷನೆಂದೂ, ಈಶಾನನೆಂದೂ ಕರೆಯುವರು.

(ಏಕಂ ಸತ್, ವಿಪ್ರಾ ಬಹುಧಾ ವದಂತಿ—ಶ್ರುತಿ)

ಸದಾ ಸರ್ವಂ ಸದೇವೇದಂ ನೇಹ ದ್ವಿತ್ವಾನ್ಯತೇ ಕ್ವಚಿತ್ ।
ವಿದ್ಯೇತೇ ವಿದ್ಯಯಾ ವ್ಯಾಪ್ತಂ ಜಗನ್ನೇತರಯಾ ಧಿಯಾ ॥ ೨೩ ॥

ಆಪಾತಾಲಮಂತಾತ್ಮಾ ಪೂರಿತೋಂಽಭೋಧಿರಂಬುಭಿಃ ।
ಆಬ್ರಹ್ಮಸ್ತಂಭಪರ್ಯಂತಂ ಜಗದಾಪೂರ್ಣಮಾತ್ಮನಾ ॥ ೨೪ ॥

ಅತಃ ಸತ್ಯಮೃತಂ ನಿತ್ಯಂ ನಾನೃತಂ ವಿದ್ಯತೇ ಕ್ವಚಿತ್ ।
ವಾರ್ಯೇವ ಸಕಲಾಂಭೋಧಿರ್ನ ತರಂಗಾದಯಃ ಕ್ವಚಿತ್ ॥ ೨೫ ॥

---

೨೩. ಯಾವಾಗಲೂ ಯಾವುದನ್ನೂ ಕಂಡರೂ ಅದೆಲ್ಲವೂ ಬ್ರಹ್ಮವೇ! (ಇದಂಪದ ವಾಚ್ಯವಾದ ಸರ್ವವೂ ಸದಾ ಸತ್ತೇ ಆಗಿರುವುದು.) ಇದರಲ್ಲಿ ದ್ವಿತ್ವ, (ಸಜಾತೀಯ ವಿಜಾತೀಯ ಸ್ವಪರಭೇದಗಳು) ಅನ್ಯತಾ (ಪದಾರ್ಥಾಂತರಗಳು) ಎಳ್ಳಷ್ಟೂ ಇಲ್ಲ. ಜಗತ್ತು ಎಂಬುದು ಯಾವುದುಂಟೋ ಅದನ್ನೆಲ್ಲ ವಿದ್ಯೆ (ಸರ್ವಂ ಖಲ್ವಿದಂ ಬ್ರಹ್ಮ ಎಂಬ ದೃಷ್ಟಿ) ಯೇ ಆವರಿಸಿರುವುದು. ಇದರಲ್ಲಿ ಬೇರೆ ದೃಷ್ಟಿಯೇ ಇಲ್ಲ.

೨೪. ಜಲಪೂರ್ಣವಾಗಿರುವ ಸಮುದ್ರದಲ್ಲಿ ಮೇಲಿನಿಂದ ತಳದವರೆಗೂ ನೀರೇ ನೀರಾಗಿರುವಂತೆ ಚತುರ್ಮುಖ ಬ್ರಹ್ಮನಿಂದ ಹಿಡಿದು ಸ್ತಂಭವೆಂಬ ಸಣ್ಣ ಕ್ರಿಮಿಯವರೆಗೂ ಎಲ್ಲವೂ ಆತ್ಮವೇ ಆತ್ಮವಾಗಿರುವುದು.

೨೫. ಸಮುದ್ರವೆಲ್ಲವೂ ನೀರೇ ನೀರಾಗಿರುವಂತೆ, ತರಂಗಾದಿಗಳು ಬೇರೆಯಾಗಿ ಇಲ್ಲವೇ ಇಲ್ಲದಿರುವಂತೆ, ಇರುವುದೆಲ್ಲ ಸತ್ಯವೂ ಋತವೂ ನಿತ್ಯವೂ ಆದ ಬ್ರಹ್ಮವೊಂದೇ ಅಲ್ಲದೇ ಅನೃತವೆಂಬುದು ಎಳ್ಳಷ್ಟೂ ಇಲ್ಲ.

ಪೃಥಕ್ಕಟಕಕೇಯೂರನೂಪುರಾದಿ ನ ಕಾಂಚನಾತ್ ।
ಭಿನ್ನಾಸ್ತರು ತೃಣಾಕಾರಕೋಟಯಶ್ಚೈವ ನಾತ್ಮನಃ ॥ ೨೬ ॥

ದ್ವೈತಾದ್ವೈತಸಮುದ್ಭೇದೈರ್ಜಗನ್ನಿರ್ಮಾಣ ಲೀಲಯಾ ।
ಪರಮಾತ್ಮಮಯೀಶಕ್ತಿರದ್ವೈತೈವ ವಿಜೃಂಭತೇ ॥ ೨೭ ॥

ಆತ್ಮೀಯೇ ಪರಕೀಯೇ ಚ ಸರ್ವಸ್ಮಿನ್ನೇವ ಸರ್ವದಾ ।
ನಷ್ಟೇ ವೋಪಚಿತೇ ಕಾರ್ಯೇ ಸುಖದುಃಖೇ ಗೃಹಾಣ ಮಾ ॥ ೨೮ ॥

ಭಾವಾದ್ವೈತಮುಪಾಶ್ರಿತ್ಯ ಸತ್ತಾದ್ವೈತಮಯಾತ್ಮಕಃ ।
ಕರ್ಮಾದ್ವೈತಮನಾದೃತ್ಯ ದ್ವೈತಾದ್ವೈತಮಯೋ ಭವ ॥ ೨೯ ॥

---

೨೬. ಚಿನ್ನವಲ್ಲದ ಕಟಕ, ಕೇಯೂರ, ನೂಪುರ ಮೊದಲಾದ ಆಭರಣಗಳು ಯಾವುದಾದರೂ ಉಂಟೆ? ಹಾಗೆಯೇ, ಆತ್ಮನಿಗಿಂತ ಪ್ರತ್ಯೇಕವಾದ ತರು, ತೃಣ, ಮೊದಲಾದವು ಯಾವವೂ ಇಲ್ಲವೇ ಇಲ್ಲ.

೨೭. ಅದ್ವೈತವಾಗಿ ತಾನೇ ತಾನಾಗಿರುವ ಪರಮಾತ್ಮ ಶಕ್ತಿಯೇ ಜಗತ್ತನ್ನು ನಿರ್ಮಾಣಮಾಡಬೇಕೆಂಬ ಲೀಲೆಯನ್ನು ವಹಿಸಿದಾಗ ದ್ವೈತ-ಅದ್ವೈತ ಭೇದಗಳನ್ನು ವಹಿಸಿ ವಿಜೃಂಭಿಸುವುದು.

೨೮. (ಆದರಿಂದ), ಕಾರ್ಯವು ತನ್ನದೇ ಆಗಲಿ, ಪರರದೇ ಆಗಲಿ, ಯಾವುದರಲ್ಲೇ ಆಗಲಿ, ಯಾವಾಗಲೇ ಆಗಲಿ, ನಷ್ಟವಾಗಲಿ, ಲಾಭವಾಗಲಿ, ಸುಖದುಃಖಗಳಿಗೆ ವಶನಾಗಬೇಡ.

೨೯. ಭಾವಾದ್ವೈತವನ್ನು ಆಶ್ರಯಿಸು. ಸತ್ತಾದ್ವೈತ ತಾನೇ ತಾನಾಗಿರಲಿ. ಕರ್ಮಾದ್ವೈತವನ್ನು ನಿರಾಕರಿಸು. ಹೀಗೆ ನೀನೂ ದ್ವೈತಾದ್ವೈತಮಯನಾಗಿರು.

ಭವಭೂಮಿಷು ಭೀಮಾಸು ಭಾವಭಾವನವಾತ್ಯಯಾ ।
ಮಾ ತಪೋತ್ಪಾತಪೂರ್ಣಾಸು ದರೀಷ್ವಂತಃ ಕರೀ ಯಥಾ　　॥ ೩೦ ॥

ದ್ವೈತಂ ನ ಸಂಭವತಿ ಚಿತ್ತಮಯಂ ಮಹಾತ್ಮ್ನ
ನಾತ್ಮನ್ಯಥೈಕ್ಯಮಪಿ ನ ದ್ವಿತಯೋದಿತಾತ್ಮ ॥
ಅದ್ವೈತಮೈಕ್ಯರಹಿತಂ ಸಮತೋದಿತಂ ಸತ್
ಸರ್ವಂ ನ ಕಿಂಚಿದಪಿ ಚಾಹುರತಃ ಸ್ವರೂಪಂ　　॥ ೩೧ ॥

(ಅಹಂಬ್ರಹ್ಮಾಸ್ಮಿ ಎಂಬ ಭಾವನೆಯು ತಾನೇತಾನಾಗಿರುವುದು ಭಾವಾದ್ವೈತವು. ಭಿನ್ನಭಿನ್ನವಾಗಿ ನಾನಾ ಆಗಿ ಕಾಣುತ್ತಿರ ವ ಈ ಸರ್ವವೂ ಏಕಾಶ್ರಯವು, ಏಕಾಧಾರವು ಎಂದು ಗೊತ್ತುಮಾಡಿಕೊಂಡಿರುವ ಸರ್ವಂ ಖಲ್ವಿದಂ ಬ್ರಹ್ಮ ಎಂಬುದು ಸತ್ತಾದ್ವೈತವು. ಕರ್ಮ ಮಾಡಿದರೂ ಒಂದೇ ಬಿಟ್ಟರೂ ಒಂದೇ ಎಂಬುದು ಕರ್ಮಾದ್ವೈತವು.)

೩೦. ಈ ಸಂಸಾರ ಭೂಮಿಯು ಯಾವಾಗಲೂ ಭಯಂಕರವು. ಇಲ್ಲಿ ಭೇದಭಾವನಗಳೆಂಬ ಬಿರುಗಾಳಿಗಳು ಬೀಸುತ್ತಲೇ ಇರುವವು. ಅವಕ್ಕೆ ನೀನು ಸಿಕ್ಕಿದರೆ, ಆನೆಯು ಹೋಗಿ ಕಪ್ಪದಲ್ಲಿ ಬೀಳುವಂತೆ, ನೀನೂ ಬಿದ್ದುಹೋಗುವೆ. ಹಾಗಾಗದಂತೆ ನೋಡಿಕೊ.

೩೧. ದ್ವೈತವೆಂಬುದು (ಭೇದಬುದ್ಧಿಯು) ಕೇವಲ ಚಿತ್ತದಿಂದ ಆದುದು. ಅದರಿಂದ, ಎಲೆ ಮಹಾತ್ಮನಾದ ರಾಮನೆ, ಅದು ಎಂದಿಗೂ ಸಂಭವಿಸುವುದೇ ಇಲ್ಲ. (ಹಾಗಾದರೆ ಎರಡಿದ್ದು ಒಂದಾಯಿತು, ಎನ್ನೋಣವೆಂದರೆ) ಆತ್ಮನನ್ನು ಬಿಟ್ಟು ಇನ್ನು ಎರಡನೆಯದು ಯಾವುದೂ ಇರಲೇ ಇರಲಿಲ್ಲವಾಗಿ, ಎಲೆ ಆತ್ಮಜ್ಞನೆ, ಐಕ್ಯವೆಂಬುದೂ ಸಲ್ಲುವುದಿಲ್ಲ. ಆದರಿಂದ, ಇರುವುದೆಲ್ಲ ಒಂದೇ ಆದುದರಿಂದ, ಅದು ಐಕ್ಯರಹಿತವಾದ (ಎರಡು ಸೇರಿ ಒಂದಾದುದಲ್ಲವಾದ) ಅದ್ವೈತವೇ, ಎಲ್ಲವೂ ಒಂದೇ ಬ್ರಹ್ಮವೇ ಎಂದು ತಿಳಿದವರು ಹೇಳುವರು.

ನೈವಾಹಮಸ್ತಿ ನ ಚ ನಾವು ಜಗಂತಿ ಸಂತಿ |
ಸರ್ವಂ ಚ ವಿದ್ಯತ ಇದಂ ನನು ನಿರ್ವಿಕಾರಂ ||
ವಿಜ್ಞಾನಮಾತ್ರಮವಭಾಸತ ಏವ ಶಾಂತಂ |
ನಾಸನ್ನ ಸಜ್ಜಗದಿದಂ ಚ ಸದೇತಿ ವಿದ್ಧಿ || ೩೨ ||

ಪರಮಮೃತಮನಾದ್ಯಂ ಭಾಸನಂ ಸರ್ವಭಾಸಾಂ |
ಅಜರಮಜಮಚಿಂತ್ಯಂ ನಿಷ್ಕಲಂ ನಿರ್ವಿಕಾರಂ ||
ವಿಗತಕರಣಜಾಲಂ ಜೀವನಂ ಜೀವಶಕ್ತೇಃ |
ಸಕಲ ಕಲನಹೀನಂ ಕಾರಣಂ ಕಾರಣಾನಾಂ || ೩೩ ||

---

೩೨. ನಾನು ಎಂಬುದು (ಪ್ರತ್ಯೇಕವಾಗಿ) ಇಲ್ಲ. ಜಗತ್ತುಗಳು ಎಂಬುದೂ ಇಲ್ಲ. ಇರುವುದೆಲ್ಲ ನಿರ್ವಿಕಾರವಾದ ಬ್ರಹ್ಮವೊಂದೇ! ಅದು ಕೇವಲ ವಿಜ್ಞಾನ ಮಾತ್ರವು (ಅನುಭವ ಸ್ವರೂಪವು) ಶಾಂತವಾಗಿ ಬೆಳಗುತ್ತಿರುವುದು. ಆದರಿಂದ ಈ ಜಗತ್ತೆಂಬುದು ಸತ್ ಅಲ್ಲ, ಅಸತ್ ಅಲ್ಲ, ಸತ್ತಾ ಸಾಮಾನ್ಯರೂಪವಾದ ಬ್ರಹ್ಮವೇ ಎಂದು ತಿಳಿ.

೩೩. ಆ ಪರಬ್ರಹ್ಮವು ಅಮೃತವು: ಅನಾದಿಯು. ಎಲ್ಲ ತೇಜಸ್ಸುಗಳಿಗೂ ಪ್ರಕಾಶವಾದುದು. ಅಜರವು: ಅಜವು: ಅಚಿಂತ್ಯವು: ನಿಷ್ಕಲವು: ನಿರ್ವಿಕಾರವು: ಇಂದ್ರಿಯಗಳಿಗೆ ಗೋಚರವಾಗದುದು. ಪ್ರಾಣಕ್ಕೂ ಪ್ರಾಣವು. ಯಾವುದೊಂದು ಭಾವನೆಗೂ ಎಟಕದುದು. ಸರ್ವಕಾರಣಗಳಿಗೂ ಕಾರಣವಾದುದು.

೩೪. ಅದು ಯಾವಾಗಲೂ ಅಸ್ತವಾಗದೆ ಉದಿತವಾಗಿಯೇ ಇರುವುದು. ಎಲ್ಲಕ್ಕೂ ಒಡೆಯನಾಗಿರುವುದು. ಎಲ್ಲೆಲ್ಲಿಯೂ ಇರುವ ಚಿತ್ಪ್ರಕಾಶದಲ್ಲಿ ಇರುವುದು. ಎಲ್ಲ ಅನುಭವಗಳಿಗೂ ತಾನೇ ಕಾರಣವಾಗಿರುವುದು. ಸ್ವಲಕ್ಷಣ ಮಾತ್ರದಿಂದ ಉಪದೇಶ್ಯವಾಗಿರುವುದು. ತನ್ನೊಳಗೆ ತಾನೇ ಆನಂದಪಡುವ ಸ್ವಾತ್ಮಾರಾಮವು. ನೀನು, ನಾನು, ಜಗತ್ತು, ಎಂಬ ಚೇತ್ಯವೆಲ್ಲವೂ ಯಾವಾಗಲೂ ಇಂತಹ ಬ್ರಹ್ಮವೇ ಎಂಬುದು ನಿನ್ನ ಹೃದಯದಲ್ಲಿ ಸರ್ವದಾ ಇರಲಿ.

ಸತತಮುದಿತಮೀಶಂ ವ್ಯಾತತೇ ಚಿತ್ಪ್ರಕಾಶೇ |
ಸ್ಥಿತಮನುಭವ ಬೀಜಂ ಸ್ವಾತ್ಮಭಾವೋಪದೇಶ್ಯಂ ||
ಸ್ವದನಮನುಚಿತೋಽಂತರ್ಬ್ರಹ್ಮ ಸರ್ವಂ ಸದೈವ |
ತಮಹಮಪಿ ಜಗಚ್ಚೇತ್ಯಸ್ತು ತೇ ನಿಶ್ಚಯೋಽಂತಃ || ೩೪ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
“ತೃಷ್ಣಾವಿಚ್ಛೇದೋಪದೇಶೋ” ನಾಮ ಸಪ್ತದಶಃ ಸರ್ಗಃ

(ಸತತಮುದಿತಂ ಎಂಬ ಪದದಿಂದ ಪರಬ್ರಹ್ಮದ ಸತ್ಸ್ವರೂಪವೂ, ವ್ಯಾತತೇ ಚಿತ್ಪ್ರಕಾಶೇ ಸ್ಥಿತಂ ಎಂಬುದರಿಂದ ಚಿತ್ಸ್ವರೂಪವೂ, ಅನುಭವಬೀಜಂ, ಸ್ವಾತ್ಮಭಾವೋಪದೇಶ್ಯಂ, ಸ್ವದನಂ, ಎಂಬುದರಿಂದ ಆನಂದಸ್ವರೂಪವೂ ಉಕ್ತವಾಗಿವೆ.

ವೈಭವವು ಸ್ವಾತ್ಮಭಾವೋಪದೇಶ್ಯಂ ಎಂಬಲ್ಲಿ ದಶಮನ್ಯಾಯವನ್ನು ಚಿಂತಿಸುತ್ತದೆ. ಅದರ ಸ್ವರೂಪವಿದು :—

ಹತ್ತು ಮಂದಿ ಒಟ್ಟಾಗಿ ಹೋಗುತ್ತಿರುವಾಗ, ಅವರಲ್ಲೊಬ್ಬನು ಎಲ್ಲರನ್ನೂ ಎಣಿಸುವುದಕ್ಕೆ ಹೋಗಿ ತನ್ನನ್ನು ಬಿಟ್ಟುಬಿಟ್ಟು ಉಳಿದ ಒಂಬತ್ತು ಮಂದಿಯನ್ನೇ ಲೆಕ್ಕಮಾಡಿಕೊಂಡು ‘ಒಂಬತ್ತು ಮಂದಿಯೇ ಇರುವರಲ್ಲ! ನಾವು ಹೊರಟಾಗ ಹತ್ತು ಮಂದಿ ಹೊರಟೆವಲ್ಲ! ಇನ್ನೊಬ್ಬನೇನಾದನು ?’ ಎಂದು ಕಳವಳಪಡುತ್ತಿರುವಾಗ, ಆ ಮಾರ್ಗದಲ್ಲಿ ಹೋಗುತಿರುವ ಮತ್ತೊಬ್ಬನು ಬಂದು, ನೀನೇ ಹತ್ತನೆಯವನು’ ಎಂದು ಹೇಳಿದರೆ, ಅವನು ತಾನು ಹತ್ತನೆಯವನೆಂದು ತಿಳಿದುಕೊಂಡು ಸಂತೋಷಪಡುವನಲ್ಲವೆ! ಈ ಸಂದರ್ಭದಲ್ಲಿ ಅವನು ಸಂಕಟಪಡುವುದಕ್ಕೆ ಕಾರಣ ವಾವುದು? ಅವನ ಅಜ್ಞಾನವೇ. ಅವನು ನಾನೇ ಹತ್ತನೆಯವನೆಂದು ತಿಳಿದುಕೊಂಡು ತನ್ನನ್ನು ಸೇರಿಸಿಕೊಂಡು ಲೆಕ್ಕಮಾಡಿದರೆ ಹಾಗೆಂದಿಗೂ ವ್ಯಸನಪಡುವುದಿಲ್ಲ. ಮತ್ತೊಬ್ಬನು ಬಂದು ಹೇಳಿದಮೇಲೆ ಅವನಿಗೆ ಜ್ಞಾನವುಂಟಾಗುವುದು. ಇದರಂತೆಯೇ, ಆತ್ಮನು ತಾನು ಸಚ್ಚಿದಾನಂದ ಸ್ವರೂಪನೆಂಬುದನ್ನು ಮರೆತು ತಾನು ದುಃಖಿಯೆಂದು ತಿಳಿದುಕೊಂಡಿರುವನು; ಶ್ರವಣಾದಿಗಳಿಂದ ಅವನ ಅಜ್ಞಾನವು ತೊಲಗುವುದು. ಇದಕ್ಕಾಗಿಯೇ ಉಪದೇಶವಾವಶ್ಯಕವೆಂದು ಭಾವವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
“ತೃಷ್ಣಾವಿಚ್ಛೇದೋಪದೇಶ” ಎಂಬ ಹದಿನೇಳನೆಯ ಸರ್ಗವು.

ಅಷ್ಟಾದಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಯುಕ್ತಾಶಯಾನಾಂ ಮಹತಾಮಹತಾನಾಂ ಕುದೃಷ್ಟಿಭಿಃ |
ಸ್ವಭಾವೋಯಂ ಮಹಾಬಾಹೋ ಲೀಲಯಾ ಚರತಾಮಿಹ ‖ ೧ ‖

ವಿಹರನ್ನಪಿ ಸಂಸಾರೇ ಜೀವನ್ಮುಕ್ತಮನಾ ಮುನಿಃ |
ಆದಿಮಧ್ಯಾಂತವಿರಸಾ ವಿಹಸೇ ಜ್ಜಾಗತೀರ್ಗತಿಃ ‖ ೨ ‖

ಸರ್ವಪ್ರಕೃತಕಾರ್ಯಸ್ಥೋ ಮಧ್ಯಸ್ಥಃ ಸರ್ವದೃಷ್ಟಿಷು |
ಧ್ಯೇಯಂ ತಂ ವಾಸನಾತ್ಯಾಗಮವಲಂಬ್ಯ ವ್ಯವಸ್ಥಿತಃ ‖ ೩ ‖

ಹದಿನೆಂಟನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಪರಬ್ರಹ್ಮದಲ್ಲಿ ನೆಲಸಿದ ಮನಸ್ಸುಳ್ಳವರಾಗಿಯೂ, ರಾಗದ್ವೇಷಾದಿ ಕುದೃಷ್ಟಿಗಳಿಂದ ಅಹತರಾಗಿಯೂ ಲೋಕದಲ್ಲಿ ಲೀಲಾಮೂರ್ತಿಗಳಾಗಿಯೂ ಇರುವ ಮಹಾತ್ಮರು ಹೇಗಿರುವರೆಂಬುದನ್ನು, ಎಲೈ ಮಹಾಬಾಹುವೆ, ಹೇಳುವೆನು ಕೇಳು.

೨. ಜೀವನ್ಮುಕ್ತನಾದ ಮುನಿಯು ಸಂಸಾರದಲ್ಲಿ ವಿಹರಿಸುವನಾದರೂ, ಆದಿ, ಮಧ್ಯ, ಅಂತಗಳಲ್ಲಿ ದುಃಖದಿಂದ ವಿರಸವೇ ಆಗಿರುವ ಈ ಜಗತ್ತಿನ ವ್ಯಾಪಾರಗಳನ್ನು ಕೇವಲ ತುಚ್ಛವಾಗಿ ಕಂಡು ನಗುವನು.

೩. ಮಾಡಬೇಕಾದ ಸಮಸ್ತ ಕಾರ್ಯಗಳನ್ನೂ ಮಾಡುವನು. ಸಮಸ್ತರಲ್ಲಿಯೂ ಒಂದೇ ಸಮನಾಗಿ ಇರುವನು. ಹೀಗೆ ಧ್ಯೇಯವಾಸನಾತ್ಯಾಗವನ್ನು ಅವಲಂಬಿಸಿ ವ್ಯವಹಾರದಲ್ಲಿರುವನು.

ಸರ್ವತ್ರ ವಿಗತೋದ್ವೇಗಃ ಸರ್ವಾರ್ಥಪರಿಪೋಷಕಃ |
ವಿವೇಕೋದ್ಯೋತದೃಷ್ಟಾತ್ಮಾ ಪ್ರಬೋಧೋಪವನಸ್ಥಿತಿಃ || ೪ ||

ಸರ್ವಾತೀತಪದಾಲಂಬೀ ಪೂರ್ಣೇಂದು ಶಿಶಿರಾಶಯಃ ||
ನೋದ್ವೇಗೀ ನ ಚ ತುಷ್ಟಾತ್ಮಾ ಸಂಸಾರೇ ನಾವಸೀದತಿ || ೫ ||

ಸರ್ವಶತ್ರುಷು ಮಧ್ಯಸ್ಥೋ ದಯಾದಾಕ್ಷಿಣ್ಯಸಂಯುತಃ |
ಪ್ರಾಪ್ತಕರ್ಮಕರೋಽಗ್ರ್ಯಾಣಾಂ ಸಂಸಾರೇ ನಾವಸೀದತಿ || ೬ ||

ನಾಭಿನಂದತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ |
ಮೌನಸ್ಥಃ ಪ್ರಕೃತಾರಂಭೀ ಸಂಸಾರೇ ನಾವಸೀದತಿ || ೭ ||

---

೪. ಯಾವುದರಲ್ಲಿಯೂ ಯಾವ ರೀತಿಯಲ್ಲಿಯೂ ಉದ್ವೇಗವನ್ನು ವಹಿಸದೆ, ಸರ್ವರಿಗೂ ಅವರವರಿಗೆ ಬೇಕು ಬೇಕಾದವುಗಳನ್ನು ಕೊಡುವನಾಗಿ, ವಿವೇಕವನ್ನು ಆಶ್ರಯಿಸಿ ಬ್ರಹ್ಮದರ್ಶನಪಡೆದವನಾಗಿ, ಬ್ರಹ್ಮಜ್ಞಾನವೆಂಬ ಉಪವನದಲ್ಲಿ ಇರುವನು.

೫. ಎಲ್ಲವನ್ನೂ ಮೀರಿದ ಪದವನ್ನು ಆಶ್ರಯಿಸಿ, ಪೂರ್ಣ ಚಂದ್ರನಂತೆ ಶಾಂತವಾದ ಮನಸ್ಸುಳ್ಳವನಾಗಿ, ಉದ್ವೇಗವೂ ತೃಪ್ತಿಯೂ ಇಲ್ಲದೆ, ಸಂಸಾರದಲ್ಲಿದ್ದರೂ ದುಃಖಕ್ಕೆ ಸಿಕ್ಕದೆ ಇರುವನು.

೬. ಶತ್ರು ಮಿತ್ರರಲ್ಲಿ ಸಮನಾಗಿ, ದಯಾದಾಕ್ಷಿಣ್ಯಸಂಪನ್ನನಾಗಿ, ಗುರು ಹಿರಿಯರಲ್ಲಿ ಯಥಾವತ್ತಾಗಿ ನಡೆದುಕೊಳ್ಳುತ್ತ, ಸಂಸಾರದಲ್ಲಿದ್ದರೂ ದುಃಖಕ್ಕೆ ಸಿಕ್ಕದೆ ಇರುವನು.

೭. ಆತನು ಯಾರನ್ನೂ ಪ್ರೀತಿಸುವುದಿಲ್ಲ: ಯಾರನ್ನೂ ದ್ವೇಷಿಸುವುದಿಲ್ಲ. ದುಃಖವು ಬಂದಿತೆಂದು ಅಳುವುದಿಲ್ಲ. ಸುಖವು ಬರಲೆಂದು ಆಶಿಸುವುದಿಲ್ಲ. ಮೌನವಾಗಿ (ಅತಿ ಭಾಷಣವಿಲ್ಲದೆ) ಇರುತ್ತ, ಅಪ್ರಕೃತವಾದುದನ್ನು ಯಾವುದನ್ನೂ ಮಾಡದೆ, ಸಂಸಾರದಲ್ಲಿದ್ದರೂ ದುಃಖಕ್ಕೆ ಸಿಕ್ಕದೆ ಇರುವನು.

ಪೃಷ್ಟಃ ಸನ್ಪ್ರಕೃತಂ ವಕ್ತಿ ನ ಪೃಷ್ಟಃ ಸ್ಥಾಣುವತ್ಸ್ಥಿತಃ ।
ಈಹಿತಾನೀಹಿತೈರ್ಮುಕ್ತಃ ಸಂಸಾರೇ ನಾವಸೀದತಿ ॥ ೮ ॥

ಸರ್ವಸ್ಯಾಭಿಮತಂ ವಕ್ತಾ ಚೋದಿತಃ ಪೇಶಲೋಕ್ತಿಮಾನ್ ।
ಆಶಯಜ್ಞಶ್ಚ ಭೂತಾನಾಂ ಸಂಸಾರೇ ನಾವಸೀದತಿ ॥ ೯ ॥

ಯುಕ್ತಾಯುಕ್ತದೃಶಾ ಗ್ರಸ್ತಮಾಶೋಪಹತಚೇಷ್ಟಿತಂ ।
ಜಾನಾತಿ ಲೋಕದೃಷ್ಟಾಂತಂ ಕರಕೋಟರಬಿಲ್ವವತ್ ॥ ೧೦ ॥

ಪರಂ ಪದಮುಪಾರೂಢೋ ಭಂಗುರಾಂ ಜಾಗತೀಂ ಸ್ಥಿತಿಂ ।
ಅಂತಃಶೀತಲಯಾ ಬುದ್ಧ್ಯಾ ಹಸನ್ನಿವ ನಿರೀಕ್ಷತೇ ॥ ೧೧ ॥

---

೮. ಯಾರಾದರೂ ಕೇಳಿದರೆ ಪ್ರಕೃತವಾದಷ್ಟನ್ನು ಮಾತ್ರ ಹೇಳುವನು. ಯಾರೂ ಕೇಳದಿದ್ದಾಗ ಮೋಟುಮರದಂತೆ ಸುಮ್ಮನಿರುವನು. ಇಷ್ಟ ಅನಿಷ್ಟಗಳಿಗೆ ವಶನಾಗದಿರುವನು. ಇಂಥವನು ಸಂಸಾರದಲ್ಲಿ ಸಿಕ್ಕಿ ದುಃಖಪಡುವುದಿಲ್ಲ.

೯. ಆತನು ಹೇಳಿದುದು ಎಲ್ಲರಿಗೂ ಅಭಿಮತವಾಗಿರುವುದು. ಅಪೇಕ್ಷಿಸಿದಾಗ ಮುದ್ದಾದ ಮಾತುಗಳನ್ನಾಡುತ್ತ, ಸರ್ವ ಪ್ರಾಣಿಗಳ ಮನೋಗತವನ್ನೂ ತಿಳಿದು ನಡೆಯುವನಾದ ಜೀವನ್ಮುಕ್ತನು ಸಂಸಾರದಲ್ಲಿದ್ದರೂ ದುಃಖಕ್ಕೆ ಸಿಕ್ಕದಿರುವನು.

೧೦. ಅಂತಹವನಿಗೆ ಕೇವಲ ಲೋಭದಿಂದಲೇ ನಡೆಯುತ್ತಿರುವ ಈ ಲೋಕ ವ್ಯಾಪಾರಗಳೆಲ್ಲ ಅಂಗೈಯಲ್ಲಿರುವ ಬಿಲ್ವಪತ್ರೆಯ ಹಣ್ಣಿನಂತೆ ತಿಳಿಯುವುದಾದರೂ, ಆತನು ಯುಕ್ತ, ಅಯುಕ್ತವೆಂಬ ದ್ವಂದ್ವಭಾವನೆಯಿಲ್ಲದೆ ವ್ಯವಹಾರವನ್ನೆಲ್ಲ ಏಕರೂಪವಾಗಿ ಕಾಣುವನು.

೧೧. ತಾನು ಪರಮಪದದಲ್ಲಿದ್ದುಕೊಂಡು, ಕ್ಷಣಕ್ಕೊಂದು ಬಗೆಯಾಗುವ ಈ ಜಗತ್ತಿನ ಸ್ಥಿತಿಯನ್ನು ಪ್ರಶಾಂತನಾಗಿ ನೋಡುತ್ತ ನಗುವನಂತಿರುವನು.

ಜಿತಚಿತ್ತಾ ಮಹಾತ್ಮಾನೋ ಯೇ ಹಿ ದೃಷ್ಟಪರಾವರಾಃ ।
ಸ್ವಭಾವ ಈದೃಶಸ್ತೇಷಾಂ ಕಥಿತಸ್ತವ ರಾಘವ　　॥ ೧೨ ॥

ವಯಂ ತು ವಕ್ತುಂ ಮೂರ್ಖಾಣಾಮಜಿತಾತ್ಮೀಯಚೇತಸಾಂ ।
ಭೋಗಕರ್ದಮಮಗ್ನಾನಾಂ ನ ವಿದ್ಮೋऽಭಿಮತಂ ಮತಂ　　॥ ೧೩ ॥

ತೇಷಾಮಭಿಮತಾ ನಾರ್ಯೋ ಭಾವಾಭಾವವಿಭೂಷಿತಾಃ।
ಜ್ವಾಲಾ ನರಕವಹ್ನೀನಾಂ ಯಾಸ್ತಾಃ ಕನಕರೋಚಿಷಃ　　॥ ೧೪ ॥

ಅನರ್ಥಗಹನಾಶ್ಚಾರ್ಥಾ ವ್ಯರ್ಥಾನರ್ಥಕದರ್ಥನಾಃ ।
ದಿಶಂತೋ ದುಃಖಸಂರಂಭಮಭಿತಃ ಪ್ರಹಿತಾಪದಃ　　॥ ೧೫ ॥

---

೧೨. ಚಿತ್ತವನ್ನು ಗೆದ್ದು, ಪರದರ್ಶನ ಮಾಡಿ ಮಹಾತ್ಮರಾದವರ ಸ್ವಭಾವವು ಹೀಗಿರುವುದೆಂದು, ಎಲೈ ರಾಘವನೆ, ಹೇಳಿದೆನು.

೧೩. ಆದರೆ, (ಜೀವನ್ಮುಕ್ತನು ಹೀಗಿರುವುದೆಂದು ಹೇಳಿದ) ನಾವು, ಮೂರ್ಖರಾಗಿ, ತಮ್ಮ ಮನಸ್ಸನ್ನು ತಾವು ಗೆಲ್ಲದವರಾಗಿ, ಭೋಗವೆಂಬ ಕೆಸರಿನಲ್ಲಿ ಮುಳುಗಿರುವವರಿಗೆ ಏನು ಬೇಕು, ಅವರು ಹೇಗಿರುವರು ಎಂಬುದನ್ನು ಮಾತ್ರ ತಿಳಿಯಲೊಲ್ಲೆವು.

೧೪. ಜ್ವಾಲಾಮಯಗಳಾದ ನರಕಗಳ ಬೆಂಕಿಗಳ, ಚಿನ್ನದ ಬಣ್ಣದ ಜ್ವಾಲೆಗಳೋ ಎಂಬಂತಿರುವ, ಯಾವುದೊಂದು ಸದ್ಭಾವನೆಯೂ ಇಲ್ಲದಿರುವುದೇ ಭೂಷಣವೆಂದುಕೊಂಡಿರುವ, ಹೆಂಗುಸರು ಅಂತಹ ಮೂರ್ಖರಿಗೆ ಬಹು ಬೇಕಾದವರು.

೧೫. ಹಾಗೆಯೇ, ವಿಧವಿಧ ಅನರ್ಥಗಳಿಂದ ಕಠಿಣವಾಗಿ, ವ್ಯರ್ಥವೂ ಅನರ್ಥವೂ ಆದ ಅನೇಕ ದುರರ್ಥಗಳಿಂದ ಬಹು ದುಃಖಗಳನ್ನು ತರುವ, ಎತ್ತೆತ್ತಲೂ ಆಪತ್ತುಗಳನ್ನೇ ಉಂಟುಮಾಡುವ ಅರ್ಥವೂ ಅವರಿಗೆ ಬೇಕಾದುದು.

ಫಲಸಂಧೀನಿ ಕರ್ಮಾಣಿ ನಾನಾಚಾರ ಮಯಾನಿ ಚ |
ಸುಖದುಃಖಾವಪೂರ್ಣಾನಿ ತಾನಿ ವಕ್ತುಂ ನ ಶಕ್ನುಮಃ || ೧೬ ||

ಪೂರ್ಣಾಂ ದೃಷ್ಟಿಮವಷ್ಟಭ್ಯ ಧ್ಯೇಯತ್ಯಾಗವಿಲಾಸಿನೀಂ |
ಜೀವನ್ಮುಕ್ತತಯಾ ಸ್ವಸ್ಥೋ ಲೋಕೇ ವಿಹರ ರಾಘವ || ೧೭ ||

ಅಂತಃ ಸಂತ್ಯಕ್ತಸರ್ವಾಶೋ ವೀತರಾಗೋ ವಿವಾಸನಃ |
ಬಹಿಃ ಸರ್ವಸಮಾಚಾರೋ ಲೋಕೇ ವಿಹರ ರಾಘವ || ೧೮ ||

ಉದಾರಃ ಪೇಶಲಾಚಾರಃ ಸರ್ವಾಚಾರಾನುವೃತ್ತಿಮಾನ್ |
ಅಂತಃ ಸರ್ವಪರಿತ್ಯಾಗೀ ಲೋಕೇ ವಿಹರ ರಾಘವ || ೧೯ ||

---

೧೬. ಅವರು ಮಾಡುವ ಕರ್ಮಗಳೂ ನಾನಾವಿಧವಾದ ದುರಾಚಾರಮಯಗಳಾಗಿ, ಕೇವಲ ಫಲಾಭಿಸಂಧಿಯಿಂದಲೇ ಮಾಡತಕ್ಕವಾಗಿ, ಸುಖದುಃಖಗಳೆಂಬ ಫಲದಿಂದ ಪೂರ್ಣವಾಗಿ ಇರುವುವು. ಅವುಗಳನ್ನೆಲ್ಲ ವಿವರಿಸಲು ನಮಗೆ ಶಕ್ತಿಯಿಲ್ಲ.

೧೭. (ಆದರಿಂದ ಅಪೂರ್ಣವನ್ನೇ ಕಾಣುವ ಕುದೃಷ್ಟಿಗಳನ್ನು ಬಿಟ್ಟು,) ಬ್ರಹ್ಮದರ್ಶನವೇ ಫಲವಾಗುಳ್ಳ ಪೂರ್ಣ ದೃಷ್ಟಿಯನ್ನೇ ಹಿಡಿದು, ಧ್ಯೇಯತ್ಯಾಗದಿಂದ ಮೆರೆಯುವವನಾಗಿ, ಜೀವನ್ಮುಕ್ತತೆಯನ್ನು ಪಡೆದು, ರಾಘವನೆ, ಸ್ವಸ್ಥನಾಗಿ ಲೋಕದಲ್ಲಿ ವಿಹರಿಸುವವನಾಗು.

೧೮. ಹೃದಯದಲ್ಲಿರುವ ಸರ್ವಾಶೆಗಳನ್ನು ಬಿಟ್ಟು, ವೀತರಾಗನೂ ವಿವಾಸನನೂ ಆಗಿ, ಹೊರಗೆ ಎಲ್ಲದರಲ್ಲಿಯೂ ಅಭಿಲಾಷೆಯುಳ್ಳವನಾಗಿ, ರಾಘವನೆ, ಲೋಕದಲ್ಲಿ ವಿಹರಿಸುವನಾಗು.

೧೯. ಉದಾರನಾಗಿ, ಎಲ್ಲರ ಗೌರವಕ್ಕೂ ಪಾತ್ರವಾಗುವ ನಡತೆಯುಳ್ಳವನಾಗಿ, ಎಲ್ಲರ ಆಚಾರಗಳಿಗೂ ಒಪ್ಪಿಗೆಯನಾಗುವ ನಡನಳಿಕೆಯುಳ್ಳವನಾಗಿ, ಒಳಗೆ ಯಾವ ಬಂಧಕ್ಕೂ ಸಿಕ್ಕದವನಾಗಿ, ರಾಘವನೆ, ಲೋಕದಲ್ಲಿ ವಿಹರಿಸುವವನಾಗು.

ಪ್ರವಿಚಾರ್ಯ ದಶಾಃ ಸರ್ವಾ ಯದತುಚ್ಛಂ ಪರಂ ಪದಂ ।
ತದೇವ ಭಾವೇನಾಲಂಬ್ಯ ಲೋಕೇ ವಿಹರ ರಾಘವ ॥ ೨೦ ॥

ಅಂತರ್ನೈರಾಶ್ಯಮಾದಾಯ ಬಹಿರಾಶೋನ್ಮುಖೇಹಿತಃ ।
ಬಹಿಸ್ತಪ್ತೋಽಂತರಾ ಶೀತೋ ಲೋಕೇ ವಿಹರ ರಾಘವ ॥ ೨೧ ॥

ಬಹಿಃ ಕೃತ್ರಿಮಸಂರಂಭೋ ಹೃದಿ ಸಂರಂಭವರ್ಜಿತಃ ।
ಕರ್ತಾ ಬಹಿರಕರ್ತಾಂತರ್ಲೋಕೇ ವಿಹರ ರಾಘವ ॥ ೨೨ ॥

ಜ್ಞಾತವಾನಸಿ ಸರ್ವೇಷಾಂ ಭಾವಾನಾಂ ಸಮ್ಯಗಂತರಂ ।
ಯಥೇಚ್ಛಸಿ ತಥಾ ದೃಷ್ಟ್ಯಾ ಲೋಕೇ ವಿಹರ ರಾಘವ ॥ ೨೩ ॥

---

೨೦. ಸಂಸಾರದಲ್ಲಿರುವ ಸರ್ವದಶೆಗಳನ್ನೂ ಪರಮ ಪದವನ್ನೂ ಕುರಿತು ಚೆನ್ನಾಗಿ ವಿಮರ್ಶೆಮಾಡಿ, ಮನಸ್ಸಿನಿಂದ ಆ ಬ್ರಹ್ಮಪದವನ್ನೇ ಅವಲಂಬಿಸಿ, ರಾಘವನೆ, ಲೋಕದಲ್ಲಿ ವಿಹರಿಸುವವನಾಗು.

೨೧. ಒಳಗೆ ಯಾವದೊಂದು ಆಶೆಗೂ ಸಿಕ್ಕದಿದ್ದರೂ, ಹೊರಗೆ ಎಲ್ಲಾ ಆಶೆಗಳೂ ಉಳ್ಳವನಂತೆ ವ್ಯಾಪಾರಮಾಡುತ್ತ, ಒಳಗೆ ಶಾಂತನಾಗಿದ್ದರೂ ಹೊರಗೆ ತಹತಹಪಡುತ್ತಿರುವನಾಗಿ, ರಾಘವ, ಲೋಕದಲ್ಲಿ ವಿಹರಿಸಿಕೊಂಡಿರು.

೨೨. ಹೊರಗೆ ಕಾರ್ಯವ್ಯಗ್ರತೆಯನ್ನು ತೋರಿಸುತ್ತ ಒಳಗೆ ಯಾವದೊಂದು ರೀತಿಯ ಸಂಭ್ರಮವೂ ಇಲ್ಲದೆ, ಹೊರಗೆ ನೋಡುವವರಿಗೆ ಕರ್ತೃವಾಗಿ, ಒಳಗೆ ಕರ್ತೃತ್ವವೇನೇನೂ ಇಲ್ಲದೆ, ರಾಘವ, ಲೋಕದಲ್ಲಿ ವಿಹರಿಸಿಕೊಂಡಿರು.

೨೩. ಬದ್ಧಭಾವ, ಮುಕ್ತಭಾವ, ಮುಂತಾದ ಭಾವಭಾವಗಳಿಗೆ ಇರುವ ವ್ಯತ್ಯಾಸವನ್ನು ಬಲ್ಲೆಯಾಗಿ ಯಾವ ದೃಷ್ಟಿಯಿಂದ ಇರಬೇಕು ಎನ್ನುವೆಯೋ ಆ ದೃಷ್ಟಿಯನ್ನೇ ಹಿಡಿದು, ರಾಘವ, ಲೋಕದಲ್ಲಿ ವಿಹರಿಸಿಕೊಂಡಿರು.

ಕೃತ್ರಿಮೋಲ್ಲಾಸಹರ್ಷಸ್ಥಃ ಕೃತ್ರಿಮೋದ್ವೇಗಗರ್ಹಣಃ ।
ಕೃತ್ರಿಮಾರಂಭಸಂರಂಭೋ ಲೋಕೇ ವಿಹರ ರಾಘವ ॥ ೨೪ ॥

ತ್ಯಕ್ತ್ವಾಹಂಕೃತಿರಾಶ್ವಸ್ತಮತಿರಾಕಾಶಶೋಭನಃ ।
ಅಗೃಹೀತಕಲಂಕಾಂಕೋ ಲೋಕೇ ವಿಹರ ರಾಘವ ॥ ೨೫ ॥

ಆಶಾಪಾಶಶತೋನ್ಮುಕ್ತಃ ಸಮಃ ಸರ್ವಾಸು ವೃತ್ತಿಷು ।
ಬಹಿಃ ಪ್ರಕೃತಿಕಾರ್ಯಸ್ಥೋ ಲೋಕೇ ವಿಹರ ರಾಘವ ॥ ೨೬ ॥

ನ ಬಂಧೋಽಸ್ತಿ ನ ಮೋಕ್ಷೋಽಸ್ತಿ ದೇಹಿನಃ ಪರಮಾರ್ಥತಃ ।
ಮಿಥ್ಯೈವಮಿಂದ್ರಜಾಲಶ್ರೀಃ ಸಂಸಾರಪರಿವರ್ತಿನೀ ॥ ೨೭ ॥

---

೨೪. (ನಿನಗೆ ಬೇಕಿಲ್ಲವಾದರೂ, ವಾಸ್ತವ್ಯವಾಗಿಯೂ ನಿನಗೆ ಅವೊಂದೂ ಇಲ್ಲದಿದ್ದರೂ ಸಂದರ್ಭಾನುಸಾರವಾಗಿ) ಉಲ್ಲಾಸ, ಹರ್ಷಗಳನ್ನು ಪ್ರದರ್ಶಿಸುತ್ತ, ಕೋಪ ಭಯುಗಳನ್ನು ತೋರಿಸುತ್ತ, ಕಾರ್ಯಾರಂಭ ನಿರ್ವಾಹಗಳುಳ್ಳವನಾಗಿ, ರಾಘವ, ಲೋಕದಲ್ಲಿ ವಿಹರಿಸಿಕೊಂಡಿರು.

೨೫. ಅಹಂಭಾವವನ್ನು ಬಿಡು. ಮನಸ್ಸಿನಲ್ಲಿ ಸಮಾಧಾನವನ್ನು ಇಟ್ಟುಕೋ. ಯಾವಾಗಲೂ ಆಕಾಶದಂತೆ ಸ್ವಚ್ಛವಾಗಿರು. ಕಳಂಕದ ಸೋಂಕೂ ಇಲ್ಲದಂತೆ ಇದ್ದುಕೊಂಡು, ರಾಘವ, ಲೋಕದಲ್ಲಿ ವಿಹರಿಸಿಕೊಂಡಿರು.

೨೬. ನೂರಾರು ಆಶೆಗಳೆಂಬ ಪಾಶಗಳಿಂದ ಬಿಡಿಸಿಕೊಂಡು, ಯಾವ ಯಾವ ವ್ಯಾಪಾರಮಾಡುತ್ತಿದ್ದರೂ ಒಳಗೆ ಯಾವ ಹೆಚ್ಚು ಕಡಿಮೆಗಳನ್ನೂ ಹೊಂದದೆ, ಪ್ರಕೃತವಾದ ಕಾರ್ಯವನ್ನು ಮಾತ್ರ ಮಾಡುವವನಾಗಿ, ರಾಘವ, ಲೋಕದಲ್ಲಿ ವಿಹರಿಸಿಕೊಂಡಿರು.

೨೭ (ಪರಮಾರ್ಥ ದೃಷ್ಟಿಯಿಂದ ನೋಡಿದರೆ) ದೇಹವಿದ್ದರೂ ಕೂಡ, ಬಂಧವೂ ಇಲ್ಲ, ಮೋಕ್ಷವೂ ಇಲ್ಲ. ಸಂಸಾರ ರೂಪವಾಗಿ ಪರಿವರ್ತನವಾಗುತ್ತಿರುವ ಈ ಇಂದ್ರಜಾಲವೆಲ್ಲವೂ ಮಿಥ್ಯೆಯು. (ಮಿಥ್ಯೆಯೆಂದರೆ ಸ್ವಪ್ನದಂತೆ ತತ್ಕಾಲದಲ್ಲಿ ಇದ್ದರೂ ಕಾಲಾಂತರ, ಅವಸ್ಥಾಂತರಗಳಲ್ಲಿ ಇಲ್ಲವಾದುದು.)

ಭ್ರಾಂತಿಮಾತ್ರಮಿದಂ ಮೋಹಾಜ್ಜಗದ್ರಾಘವ ದೃಶ್ಯತೇ ।
ಜನಿತಪ್ರತ್ಯಯಂ ಸ್ಫಾರಂ ಜಲಂ ತೀವ್ರಾತಪೇ ಯಥಾ ॥ ೨೮ ॥

ಅಬದ್ಧಸ್ಯೈಕರೂಪಸ್ಯ ಸರ್ವಗಸ್ಯಾತ್ಮನಃ ಕಥಂ ।
ಬಂಧಃ ಸ್ಯಾತ್ತದಭಾವೇ ತು ಮೋಕ್ಷಃ ಕಸ್ಯ ವಿಧೀಯತೇ ॥ ೨೯ ॥

ಅತತ್ತ್ವಜ್ಞಾನಜಾತೇಯಂ ಸಂಸಾರಭ್ರಾಂತಿರಾತತಾ ।
ತತ್ತ್ವಜ್ಞಾನಾತ್ಕ್ಷಯಂ ಯಾತಿ ರಜ್ಜ್ವಾಮಿವ ಭುಜಂಗಧೀಃ ॥ ೩೦ ॥

ಜ್ಞಾತವಾನಸಿ ತತ್ತ್ವಂ ತ್ವಮೇಕಯಾ ಸೂಕ್ಷ್ಮಯಾ ಧಿಯಾ ।
ಜ್ಞಾತೋಽಸಿ ನಿರಹಂಕಾರೋ ವ್ಯೋಮವತ್ತಿಷ್ಠ ನಿರ್ಮಲಃ ॥ ೩೧ ॥

---

೨೮. ರಾಘವ, ಬಿಸಿಲು ಬಲವಾಗಿರುವಾಗ ನೀರು ಹರಡಿರುವಂತೆಯೂ, ಹರಿಯುತ್ತಿರುವಂತೆಯೂ, ನಂಬಿಕೆಯುಂಟಾಗುವಂತೆ, ಮೋಹ ಮಗ್ನನಾಗಿರುವಾಗ, ತತ್ವಜ್ಞಾನವಿಲ್ಲದಿರುವಾಗ, ಈ ಜಗತ್ತು ಭ್ರಾಂತಿಮಾತ್ರವೇ ಆದರೂ ಇರುವಂತೆಯೇ ನಂಬಿಕೆಯಾಗಿಯೇ ತೋರುವುದು.

೨೯. ಏಕರೂಪನಾಗಿ (ತಾನೇ ತಾನಾಗಿ) ಎಲ್ಲೆಲ್ಲಿಯೂ ಇರುವವನಾಗಿ, ಯಾವುದೊಂದು ಬಂಧಕ್ಕೂ ಸಿಕ್ಕದವನಾಗಿ ಇರುವ ಆತ್ಮನಿಗೆ ಬಂಧವು ಸಂಭವಿಸುವುದು ಹೇಗೆ? ಬಂಧವೇ ಇಲ್ಲದ ಮೇಲೆ ಮೋಕ್ಷವು ಬರುವುದು ಎನ್ನುವುದು ಯಾರಿಗೆ?

೩೦. ತತ್ವಜ್ಞಾನವಿಲ್ಲದಿರುವಿಕೆಯಿಂದ ಹುಟ್ಟಿದ, ಈ ಸಂಸಾರವೊಂದು ಉಂಟೆಂಬ ಭ್ರಾಂತಿಯು ತಾನೇ ತಾನಾಗಿ ಹರಡಿರುವುದು. ಹಗ್ಗವನ್ನು ಕಂಡು ಹಾವು ಎಂದುಕೊಂಡವನ ಭ್ರಾಂತಿಯು ನಿಜವನ್ನು ಅರಿತಾಗ ಇಲ್ಲವಾಗುವಂತೆ, ತತ್ವಜ್ಞಾನವು ಲಭಿಸಿದ ಕೂಡಲೇ ಈ ಸಂಸಾರ ಭ್ರಾಂತಿಯಳಿಯುವುದು.

೩೧. ನಿನ್ನ ಸೂಕ್ಷ್ಮವಾದ ಬುದ್ಧಿಯಿಂದ ನಿಜವಾದ ತತ್ವವೇನೆಂಬುದನ್ನು ಅರಿತವನಾಗಿರುವೆ. ನಿರಹಂಕಾರ ಸಂಪನ್ನನಾಗಿರುವೆ, ಅದರಿಂದ, ಆಕಾಶದಂತೆ ನಿರ್ಮಲನೂ ನಿಸ್ಸಂಗನೂ ಆಗಿರು.

ಜ್ಞೋಽಸಿ ತ್ವಿತ್ಥಂ ತದಖಿಲಾಃ ಸುಹೃದ್ಬಾಂಧವವಾಸನಾಃ ।
ಸಂತ್ಯಜಾಸತ್ಸ್ವಭಾವಸ್ಯ ಕಾ ನಾಮ ಕಿಲ ಭಾವನಾ ॥ ೩೨ ॥

ಅಪಿಚೇತ್ಥಂ ತದನ್ಯಸ್ತ್ವಂ ಸತ್ತ್ವವಾನನುಮೀಯಸೇ ।
ಇದಂ ಪ್ರಥಮತಃ ಪ್ರಾಪ್ತಂ ಪರಮಾದಪಿ ಕಾರಣಾತ್ ॥ ೩೩ ॥

ಭೋಗಬಂಧು ಜಗದ್ಭಾವೈಃ ಕರ್ಮಭಿಶ್ಚ ಶುಭಾಶುಭೈಃ ।
ಆತ್ಮನೋ ನಾಸ್ತಿ ಸಂಬಂಧಃ ಕಿಮೇತಾನನುಶೋಚಸಿ ॥ ೩೪ ॥

ಆತ್ಮತತ್ತ್ವೈಕಸಾರೋಽಹಮಿತಿ ಜಾತಧಿಯೋ ಭಯೈಃ ।
ನ ತೇ ರಾಮಾಸ್ತಿ ಸಂಬಂಧಃ ಕಿಂ ಬಿಭೇಷಿ ಜಗದ್ಭ್ರಮಾತ್ ॥ ೩೫ ॥

---

೩೨. ನೀನು ತತ್ವಜ್ಞನಾಗಿರುವೆಯಾಗಿ, ಇವರು ಸುಹೃತ್ತುಗಳು, ಇವರು ಬಾಂಧವರು, ಎಂಬ ಸಂಬಂಧವಾಸನೆಗಳನ್ನೆಲ್ಲ ಬಿಡು. ಸುತರಾಂ ಇಲ್ಲದಿರುವ ವಿಷಯದಲ್ಲಿ ಇದೆಯೆಂಬ ಭಾವನೆಯೆನ್ನುವುದೇನು ?

೩೩. ನಾನು ಹೇಳಿದಂತೆ ನೀನು ವಾಸನಾತ್ಯಾಗ ಮಾಡಿನೋಡು. ಆಗ ನೀನು ಈ ಜಗತ್ತಲ್ಲದ ಪರವಸ್ತುವೇ ನೀನೆಂದೂ, ನೀನೇ ಸತ್ಸ್ವರೂಪವೆಂದೂ ತಿಳಿಯುವೆ. ವಾಸನಾತ್ಯಾಗಕ್ಕಿಂತ ಮುಂಚೆ, ಸರ್ವಕಾರಣವಾದ ಪರಬ್ರಹ್ಮಕ್ಕಿಂತಲೂ ಈ ಜಗತ್ತೇ ಮುಖ್ಯವೆಂದು ತೋರುವುದು.

೩೪. ಈ ಪ್ರಾಪಂಚಿಕ ಭೋಗಗಳು, ಭೋಗಸಹಾಯಕರಾದ ಬಂಧುಗಳು, ಭೋಗಸಾಧನಗಳಾದ ವಿಷಯಸಮೂಹಗಳು, ಶುಭ ಅಶುಭರೂಪವಾದ ಭೋಗ ಕರ್ಮಗಳು, ಇವುಗಳು ಯಾವುದರೊಡನೆಯೂ ಆತ್ಮನಿಗೆ ಸಂಬಂಧವಿಲ್ಲದಿರಲು, ಇವುಗಳನ್ನು ಕುರಿತು ಶೋಚಿಸುವುದೇಕೆ ?

೩೫. ಸಾರಭೂತವಾದ ಆತ್ಮವೇ ನಾನೆಂಬ ತತ್ವವನ್ನು ಅರಿತ ನಿನಗೆ, ಯಾವ ಭಯವೂ ಏನೂ ಮಾಡಲಾರದು. ಆದರಿಂದ ಜಗದ್ಭ್ರಾಂತಿಗೇಕೆ ಹೆದರುವೆ ?

ಅಜಾತಸ್ಯ ಸತೋ ಬಂಧೋರ್ಬಂಧುದುಃಖಸುಖಭ್ರಮೈಃ ।
ಕಸ್ತೇ ರಾಘವ ಸಂಬಂಧೋ ಯದೇತಾನನುಶೋಚಸಿ ॥ ೩೬ ॥

ತ್ವಂ ಚೇದ್ಬಭೂವಿಥ ಪುರಾ ತಥೇದಾನೀಂ ಭವಿಷ್ಯಸಿ ।
ಅದ್ಯ ಚೇಹ ಸ್ಥಿತೋಽಸೀತಿ ಜ್ಞಾತವಾನಸಿ ನಿಶ್ಚಯಂ ॥ ೩೭॥

ತದಾನಂತರಗಾನನ್ಯಾನ್ ಪ್ರಾಣಾದೀನ್ನಿಕಟಸ್ಥಿತಾನ್ ।
ಬಂಧೂನತೀತಾನ್ ಸುಬಹೂನ್ ಕಸ್ಮಾತ್ತ್ವಂ ನಾನುಶೋಚಸಿ ॥ ೩೮ ॥

ಪೂರ್ವಮನನ್ಯಸ್ತಥೇದಾನೀಂ ಬಭೂವಿಥ ಭವಿಷ್ಯಸಿ ।
ಯದಿ ರಾಮ ತಥಾಪಿ ತ್ವಂ ಸದ್ರೂಪಂ ಕಿಂ ವಿಮುಹ್ಯಸಿ ॥ ೩೯ ॥

---

೩೬. (ನನಗಾಗಿ ಅಲ್ಲ, ನನ್ನವರಿಗಾಗಿ ಶೋಕಿಸಬೇಕಾಗಿದೆಯೆಂದರೆ) ಬಂಧುವೆಂಬುವನೇ ಒಬ್ಬನು ಇಲ್ಲದಿರಲು, ಬಂಧುಗಳ ಸುಖದುಃಖಗಳು ಎಂಬ ಭ್ರಾಂತಿಗೂ ನಿನಗೂ ಏನು ಸಂಬಂಧ? ರಾಘವ, ಅವರನ್ನು ಕುರಿತು ನೀನು ಅಳುವುದು ಎಂದರೇನು ?

೩೭. ನೀನು ಎಂದರೆ ಆತ್ಮನು. ಈ ಆತ್ಮನು ಹಿಂದೆ ಇದ್ದವನು, ಮುಂದೆ ಇರುವವನು, ಈಗಲೂ ಇರುವನು ಎಂದು ಬಲ್ಲವನಾದರೆ, ಹಾಗೆಂಬ ನಿಶ್ಚಯವು ನಿನಗೆ ಇರುವುದೇ ಆದರೆ,

೩೮. ಮುಂದೆ ಬರುವ, ಈಗ ಹತ್ತಿರವೇ ಇದ್ದು ಪ್ರಾಣದಂತೆ ಪ್ರಿಯರಾಗಿರುವ, ಹಿಂದೆ ಕಳೆದುಹೋಗಿರುವ, ಅಸಂಖ್ಯರಾದ ಬಂಧುಗಳನ್ನೆಲ್ಲ ಕುರಿತು ಏಕೆ ಅಳುವುದಿಲ್ಲ ?

೩೯. ಹಾಗಿಲ್ಲದೆ, ಮೊದಲಿದ್ದ ನಾನೇ ಬೇರೇ, ಈಗ ಇರುವ ನಾನೇ ಬೇರೆ, ಮುಂದೆ ಬರುವ ನಾನೇ ಬೇರೆ, ಎನ್ನುವುದಾದರೆ, (ನಿನ್ನಂತೆಯೇ ನಿನ್ನ ಬಂಧುವರ್ಗವೂ ಕ್ಷಣಕ್ಷಣವೂ ಬದಲಾಯಿಸುವಾಗ. ಹೋಗುವುದೇನು ?) ಏನು ಹೋಯಿತು ಎಂದು ಅಳಬೇಕು ?

ಪುರಾ ಭೂತ್ವಾದ್ಯ ಭೂತ್ವಾ ಚ ಭೂಯಶ್ಚೇನ್ನ ಭವಿಷ್ಯಸಿ |
ತಥಾಪಿ ಕ್ಷೀಣಸಂಸಾರಃ ಕಿಮರ್ಥಮನುಶೋಚಸಿ || ೪೦ ||

---

೪೦. ಅಲ್ಲದೆ, ನಾನು ಹಿಂದೆ ಇದ್ದು ಈಗ ಇರುವೆನಾದರೂ ಇನ್ನು ಮುಂದೆ ಇರುವುದಿಲ್ಲ ಎನ್ನುವ ಪಕ್ಷದಲ್ಲಿಯೂ ನೀನು ಸಂಸಾರರಹಿತನೇ ಆಗುವೆಯಲ್ಲ! ಹೀಗಿರಲು ಯಾರಿಗಾಗಿ, ಯಾತಕ್ಕಾಗಿ ಅಳುವೆ ?

(೩೪–೩೫ ರಲ್ಲಿ ಆತ್ಮನು ಬ್ರಹ್ಮನು, ಆದರಿಂದ ಅಹಂಭಾವಾಪನ್ನನಾಗಿ ದುಃಖಪಡಬೇಕಾಗಿಲ್ಲವೆಂದು ಹೇಳಿ, ೩೬ರಲ್ಲಿ ಮಮಭಾವಸಂಪನ್ನನಾಗಿಯೂ ದುಃಖ ಪಡಬೇಕಾಗಿಲ್ಲವೆಂದು ಹೇಳಿದೆ. ಅದೇ ಭಾವವನ್ನು ಹಿಡಿದು, ಮಮ ಎಂದು ಶೋಚ್ಯರಾದವರೂ ನಿನ್ನಂತೆಯೇ ಆತ್ಮರು ಎಂಬುದನ್ನು ಮನಗಾಣಿಸಲು, ಗುರುವು ಪಕ್ಷಾಂತರಗಳನ್ನು ಹಿಡಿದು ವಾದಮಾಡಿ ಸಿದ್ಧಾಂತವನ್ನು ಸ್ಪಷ್ಟಪಡಿಸುತ್ತಾನೆ.

ಆತ್ಮನು ನಿತ್ಯನು, ಅಥವಾ ನಿತ್ಯನಲ್ಲ ಕ್ಷಣಿಕನು, ಅಥವಾ ಒಂದು ಕಾಲ ದಲ್ಲಿದ್ದು ಇನ್ನೊಂದು ಕಾಲದಲ್ಲಿರುವುದಿಲ್ಲ ಎಂಬ ಮೂರು ಪಕ್ಷಗಳನ್ನು ಹಿಡಿದು ವಾದವು ಹೊರಟಿದೆ.

ಆತ್ಮನು ನಿತ್ಯನು ಎಂಬ ಮೊದಲನೆಯ ಪಕ್ಷವನ್ನು ಹಿಡಿದರೆ, ಈಗ ಮಮ ಎನ್ನಿಸಿಕೊಳ್ಳುವ ಬಂಧುವರ್ಗವು ಹಿಂದೆಯೂ ಇತ್ತು ; ಈಗಲೂ ಇದೆ : ಮುಂದೆಯೂ ಇರುತ್ತದೆಯಾಗಿ ಅವರನ್ನು ಎಂದರೆ ಗತಜನ್ಮದ ಬಂಧುಗಳನ್ನೂ ಆಗಾಮಿ ಜನ್ಮದ ಬಂಧುಗಳನ್ನೂ ಕುರಿತು ಅಳದೆ ಇರುವಂತೆ, ಈಗಿನ ಜನ್ಮದ ಬಂಧುಗಳನ್ನೂ ಕುರಿತು ಅಳಬೇಕಾಗಿಲ್ಲ. ಏಕೆಂದರೆ ಅವರೂ ನಿನ್ನಂತೆಯೇ ನಿತ್ಯರು. ನಿತ್ಯರನ್ನು ಕುರಿತು ನಿತ್ಯನು ಅಳುವುದು ಎಂದರೇನು ? ಶ್ಲೋ. ೩೭–೩೮.

ಆತ್ಮನು ನಿತ್ಯನಲ್ಲ : ಕ್ಷಣಿಕನು ಎನ್ನುವುದಾದರೆ, ನಿನ್ನ ಆತ್ಮನೂ ನಿತ್ಯನಲ್ಲ : ನಿನ್ನ ಬಂಧುವರ್ಗದ ಆತ್ಮವೂ ನಿತ್ಯನಲ್ಲ. ಹೀಗೆ ಅನಿತ್ಯನಾದ ನೀನು ಅನಿತ್ಯರಾದ ಬಂಧುಗಳಿಗೆ ಅಳುವುದೆಂದರೇನು ? ಶ್ಲೋ. ೩೯.

ಆತ್ಮನು ಕಾಲಾಂತರದಲ್ಲಿ ನಾಶವಾಗುವನು ಎಂದರೆ, ಎರಡನೆಯ ಪಕ್ಷದ ಉತ್ತರವೇ ಇಲ್ಲಿಯೂ ಅನ್ವಯಿಸುವುದು. ಶ್ಲೋ. ೪೦.

ತಸ್ಮಾನ್ನ ದುಃಖಿತಾ ಯುಕ್ತಾ ಪ್ರಾಕೃತೇ ಜಾಗತೇ ಕ್ರಮೇ ।
ತಥೈವ ಮುದಿತಾಽಯುಕ್ತಾ ಯುಕ್ತಂ ಕಾರ್ಯಾನುವರ್ತನಂ ॥ ೪೧ ॥

ಮಾ ಗಚ್ಛ ದುಃಖಿತಾಂ ರಾಮ ಸುಖಿತಾಮಪಿ ಮಾ ವ್ರಜ ।
ಸಮತಾಮೇಹಿ ಸರ್ವತ್ರ ಪರಮಾತ್ಮಾ ಹಿ ಸರ್ವಗಃ ॥ ೪೨ ॥

ಅನಂತಃ ಸತ್ಸ್ವರೂಪಸ್ತ್ವಂ ಖಮಿವಾತಿತತಾಂತರಂ ।
ಪ್ರಕಾಶೋ ನಿತ್ಯಶುದ್ಧಸ್ತ್ವಂ ಜ್ವಾಲಾನಾಮಿವ ಕೋಟರಂ ॥ ೪೩ ॥

ಜಾಗತಾನಾಂ ಪದಾರ್ಥಾನಾಮದೃಷ್ಟಾತ್ಮತನುಸ್ತನುಃ ।
ಹೃತ್ಸ್ಥೋಽಸಿ ಹಾರಮುಕ್ತಾನಾಮೇಕಸ್ತಂತುರಿವಾತತಃ ॥ ೪೪ ॥

ಅಂತೂ 'ಮನು' ಎಂಬುದೂ ಶೋಚ್ಯವಲ್ಲ ಎಂಬುದೇ ಸಿದ್ಧಾಂತವು. ಚಿಂತಿಸಿ. ಗೀತಾ–ಅಧ್ಯಾಯ ೨ ಶ್ಲೋ. ೧೧ ರಿಂದ ಮುಂದೆ).

೪೧. ಪ್ರಕೃತಿವಶವಾಗಿ ನಡೆಯುತ್ತಿರುವ ಈ ಪ್ರಪಂಚ ವ್ಯಾಪಾರದಲ್ಲಿ ದುಃಖಪಡುವುದೂ ಯುಕ್ತವಲ್ಲ. ಹಾಗೆಯೇ ಸಂತೋಷಪಡುವುದೂ ಯುಕ್ತವಲ್ಲ. ಯಾವ ಕಾರ್ಯವನ್ನು ಮಾಡುತ್ತಿರುವೆಯೋ ಆ ಕಾರ್ಯವನ್ನು ಮಾಡುವುದು ಮಾತ್ರ ಯುಕ್ತವು.

೪೨. ರಾಮ, ದುಃಖಿತ್ವವನ್ನು ಹೊಂದಬೇಡ, ಸುಖಿತ್ವವನ್ನೂ ಹೊಂದಬೇಡ. ಎರಡನ್ನೂ ಮೀರಿದ ಸಮತ್ವವನ್ನು ಹೊಂದು. ಪರಮಾತ್ಮನು ಎಲ್ಲೆಲ್ಲಿಯೂ ಇರುವನಲ್ಲವೆ ?

೪೩. ನೀನು (ಆತ್ಮನು) ಅನಂತನು, ಸತ್ಸ್ವರೂಪನು (ಕಾಲರೂಪಪರಿಚ್ಛೇದವಿಲ್ಲದವನು.) ಆಕಾಶದಂತೆ ವ್ಯಾಪಕನು (ದೇಶರೂಪಪರಿಚ್ಛೇದವಿಲ್ಲದವನು) ಪ್ರಕಾಶನು (ದೀಪದಂತೆ ಸ್ವಯಂಪ್ರಕಾಶಸಂಪನ್ನನು.) ಅಗ್ನಿಜ್ವಾಲೆಯ ಒಳಗಿನಂತೆ ನಿತ್ಯಶುದ್ಧನು.

೪೪. ಮುತ್ತಿನ ಮಾಲೆಯಲ್ಲಿರುವ ಮುತ್ತುಗಳೆಲ್ಲದರಲ್ಲಿಯೂ ಇರುವ ಒಂದೇ ತಂತುವಿನಂತೆ, ಈ ಜಗತ್ತಿನಲ್ಲಿರುವ ಎಲ್ಲಾ ಪದಾರ್ಥಗಳ ಒಳಗೂ ಅದೃಶ್ಯನಾಗಿ ಇರುವ ಸೂಕ್ಷ್ಮನಾದ ಆತ್ಮನು ನೀನೇ !

ಸಂಸಾರಸ್ಥಿತಿರೇವೇಯಂ ಯದ್ಭೂತ್ವಾ ಭೂಯಸೇ ಪುನಃ ।
ಅಜ್ಞೇನೈವ ನ ತಜ್ಞೇನ ಜ್ಞೋಽಸಿ ರಾಮ ಸುಖೀಭವ ॥ ೪೫ ॥

ಸ್ವರೂಪಮಿದಮಸ್ಯಾಸ್ತು ಸಂಸೃತೇಃ ಸತತಾಧಿಮತ್ ।
ಅಜ್ಞಾನಾತ್ ಸ್ಫಾರತಾಮೇತಿ ಜ್ಞಾತವಾನಸಿ ಸನ್ಮತೇ ॥ ೪೬ ॥

ರೂಪಂ ಕಿಮನ್ಯದ್ಭವತು ಭ್ರಮಮಾತ್ರಾದೃತೇ ಭ್ರಮೇ ।
ಸ್ವಪ್ನಮಾತ್ರಾದೃತೇ ಸ್ವಪ್ನೇ ಭವತ್ಯನ್ಯೋ ಹಿ ಕಃ ಕ್ರಮಃ ॥ ೪೭ ॥

ಸರ್ವಶಕ್ತೇರಿಯಂ ಶಕ್ತಿರ್ಭ್ರಮಮಾತ್ರಮಯಂ ತಥಾ ।
ರಾಮ ದೃಶ್ಯತ ಏವೇದಮಾಭಾನಮತಿಭಾಸ್ವರಂ ॥ ೪೮ ॥

---

೪೫. ಹುಟ್ಟಿ ಹುಟ್ಟಿ ಹುಟ್ಟುತ್ತಲೇ ಇರುವುದೇ ಈ ಸಂಸಾರದ ಸ್ಥಿತಿಯು. ಇದು ಅಜ್ಞರಿಗೆ ಅನ್ವಯಿಸುವುದೇ ಹೊರತು ಪ್ರಾಜ್ಞರಿಗಲ್ಲ. ನೀನು ಪ್ರಾಜ್ಞನು. ಅದರಿಂದ, ರಾಮ, ಸುಖಿಯಾಗು.

೪೬. ಯಾವಾಗಲೂ ಯಾವುದಾದರೂ ಒಂದು ಆಧಿ (ಮನಶ್ಚಿಂತೆ) ಯಿಂದ ಸಂತಾಪಪಡುತ್ತಿರುವುದೇ ಈ ಸಂಸಾರದ ಸ್ಥಿತಿಯು. ಇದು ಅಜ್ಞಾನದಿಂದ ವಿಜೃಂಭಿಸುವುದು. ನೀನು ಪ್ರಾಜ್ಞನು. (ಅದರಿಂದ) ಎಲೆ ಸನ್ಮತಿಯೆ, (ನಿನಗೆ ಇದರ ದಿಗಿಲಿಲ್ಲ.)

೪೭. ಭ್ರಮರೂಪವಾದ ಈ ಸಂಸಾರದಲ್ಲಿ ಭ್ರಮ ಮಾತ್ರವನ್ನು ಬಿಟ್ಟು ಇನ್ನೇನು ತಾನೇ ಇರುವುದು ? ಸ್ವಪ್ನದಲ್ಲಿ ಸ್ವಪ್ನವನ್ನು ಬಿಟ್ಟು ಮತ್ತೆ ಏನು ತಾನೇ ಉಂಟು ?

೪೮. ಹೀಗೆ ಜಗದ್ರೂಪವಾಗಿ ಪ್ರಕಾಶಿಸುವುದು ಯಾವುದುಂಟೋ ಅದೂ ಸರ್ವಶಕ್ತಿಮಯನಾದ ಬ್ರಹ್ಮನ ಶಕ್ತಿಯೇ! ಈ ಶಕ್ತಿ ಭ್ರಮಮಾತ್ರವಾದುದು. ರಾಮ, ಇದು ಕೇವಲ ಭ್ರಾಂತಿಯೇ ಆದರೂ (ಸತ್ಯವಾಗಿದ್ದಂತೆಯೇ) ಕಾಣಿಸುವುದು.

ಸುಬಂಧುಃ ಕಸ್ಯ ಚಿತ್ಕಃ ಸ್ಯಾದಿಹ ನೋ ಕಶ್ಚಿದಪ್ಯರಿಃ ।
ಸದಾ ಸರ್ವೇ ಚ ಸರ್ವಸ್ಯ ಸರ್ವಂ ಸರ್ವೇಶ್ವರೇಚ್ಛಯಾ ॥ ೪೯ ॥

ಆಲೂನಶೀರ್ಣಮಖಿಲಮಿದಮನ್ಯೋನ್ಯಸಂಶ್ರಿತಂ ।
ಅನಾರತಂ ಯಾತಿ ಜಗತ್ತರಂಗೌಘ ಇವಾಂಭಸಃ । ॥ ೫೦ ॥

ಅಧ ಊರ್ಧ್ವತ್ವಮಾಯಾತಿ ಯಾತ್ಯೂರ್ಧ್ವತ್ವಮಧಸ್ತಥಾ ।
ಸಂಸಾರಸ್ಯ ಚಲಸ್ಯಾಸ್ಯ ಚಕ್ರನೇಮಿರಿವಾಭಿತಃ ॥ ೫೧ ॥

ಸ್ವರ್ಗಸ್ಥಾ ನರಕಂ ಯಾಂತಿ ನಾರಕಾಶ್ಚ ತ್ರಿವಿಷ್ಟಪಂ ।
ಯೋನೇರ್ಯೋನ್ಯಂತರಂ ಯಾಂತಿ ದ್ವೀಪಾತ್ ದ್ವೀಪಾಂತರಂ ಜನಾಃ ॥೫೨॥

---

೪೯. ಈ ಜಗತ್ತಿನಲ್ಲಿ ಯಾವನಿಗೆ ಯಾರು ಸದ್ಬಂಧುವು? ಯಾರು ಯಾರಿಗೆ ಶತ್ರುವು? ಸರ್ವೇಶ್ವರನ ಇಚ್ಛೆಯಾದರೆ, ಈ ಜಗತ್ತಿನಲ್ಲಿ ಯಾರು ಯಾರಿಗೆ ಏನೇ ಆದರೂ ಆಗಬಹುದು. ಎಲ್ಲರೂ ಎಲ್ಲರಿಗೂ ಬಂಧುಗಳೇ! ಎಲ್ಲರೂ ಎಲ್ಲರಿಗೂ ದ್ವೇಷಿಗಳೇ!

೫೦. ಸಮುದ್ರದ ತರಂಗ ಪರಂಪರೆಯಂತೆ, ಈ ಜಗತ್ತು ಛಿನ್ನಭಿನ್ನವಾಗಿರುವುದು. ಒಂದರ ಹಿಂದೊಂದು ಯಾವಾಗಲೂ ಬರುತ್ತಲೇ ಇರುವುದು.

೫೧. ಕೆಳಗೆ ಇದ್ದುದು ಮೇಲಕ್ಕೆ ಬರುವುದು. ಮೇಲೆ ಇದ್ದುದು ಕೆಳಕ್ಕೆ ಇಳಿಯುವುದು. ಮೂರು ಹೊತ್ತೂ ಚಂಚಲವಾಗಿರುವ ಈ ಸಂಸಾರದಲ್ಲಿ, ಚಕ್ರದ ಆರೇಕಾಲುಗಳಂತೆ, ಎಲ್ಲವೂ ಮೇಲು ಕೆಳಗು ಆಗುತ್ತಲೇ ಇರುವುವು.

೫೨. ಸ್ವರ್ಗದಲ್ಲಿರುವವರು ನರಕಕ್ಕೆ ಹೋಗುವರು. ನರಕದಲ್ಲಿರುವವರು ಸ್ವರ್ಗಕ್ಕೆ ಹೋಗುವರು. ದ್ವೀಪದಿಂದ ದ್ವೀಪಕ್ಕೆ ಹೋಗುವ ಜನದಂತೆ, ಈ ಸಂಸಾರದಲ್ಲಿ ಜೀವರು ಜನ್ಮದಿಂದ ಜನ್ಮಕ್ಕೆ ಹೋಗುತ್ತಲೇ ಇರುವರು.

ಧೀರಾಃ ಕಾರ್ಪಣ್ಯಮಾಯಾಂತಿ ಕೃಪಣಾ ಯಾಂತಿ ಧೀರತಾಂ ।
ಪರಿಸ್ಫುರಂತಿ ಭೂತಾನಿ ಪಾತೋತ್ಪಾತಶತಭ್ರಮೈಃ || ೫೩ ||

ಏಕರೂಪಸ್ಥಿತಂ ಚಕ್ರಂ ಸ್ವಚ್ಛಂ ಸಂಸಾರವರ್ಜಿತಂ ।
ನೇಹ ಸಂಪ್ರಾಪ್ಯತೇ ಕಿಂಚಿದಗ್ನೌ ಹಿಮಕಣೋ ಯಥಾ || ೫೪ ||

ಯೇಯೇ ನಾಮ ಮಹಾಭಾಗಾ ಬಹವೋ ಬಾಂಧವಾಸ್ತಥಾ ।
ವಿನಷ್ಟಾ ಏವ ದೃಶ್ಯಂತೇ ತೇ ತೇ ಕತಿಪಯೈರ್ದಿನೈಃ || ೫೫ ||

---

೫೩. (ಯಾರನ್ನೂ ಏನನ್ನೂ ಯಾಚಿಸದಿರುವ) ಧೀರರು, (ದೀನರಾಗಿ ಎಲ್ಲಡಕ್ಕೂ ಇನ್ನೊಬ್ಬರನ್ನು ಯಾಚಿಸುವ) ಕೃಪಣರಾಗುವರು. ಕೃಪಣರಾಗಿದ್ದವರು ಧೀರರಾಗುವರು. ಹೀಗೆ ಭೂತಗಳು, ಬೀಳುವುದು, ಏಳುವುದು, ಮುಂತಾದ ನಾನಾ ಗತಿಗಳನ್ನು ಹೊಂದುತ್ತಿರುವರು.

೫೪. ಒಂದೇ ಒಂದು ರೂಪವಾಗಿದ್ದುಕೊಂಡು ಸ್ವಚ್ಛವಾಗಿ, ಸುಖವಾಗಿ ಎಂದರೆ ಸಂತಾಪಶೂನ್ಯವಾಗಿ ಇರುವ ವಸ್ತುವೊಂದಾದರೂ ಈ ಜಗತ್ತಿನಲ್ಲಿರುವುದೇ ಎಂದರೆ, ಅಂಥದು, ಅಗ್ನಿಯಲ್ಲಿ ಹಿಮಬಿಂದುವು ಎಷ್ಟು ದುರ್ಲಭವೋ ಅಷ್ಟು ದುರ್ಲಭವು.

(ಅಧಿಷ್ಠಾನವಾಗಿ ಎಲ್ಲವೂ ಇರುವುದಕ್ಕೆ ಆಧಾರವಾದ ಈ ಪ್ರಪಂಚವು ಜಗತ್ ಎಂದರೆ ನಿಲ್ಲದೆ ಓಡುತ್ತಿರುವುದು. ದೇಹದೇಹದಲ್ಲಿಯೂ ವೈಶ್ವಾನರನು ಕುಳಿತು ಪ್ರಾಣಾಪಾನ ಸಮಾಯುಕ್ತನಾಗಿ ಎಲ್ಲವನ್ನೂ ಪಾಕಮಾಡುತ್ತಿರುವನು. ಇಂದ್ರಿಯ, ಪ್ರಾಣ, ಮನೋ, ಬುದ್ಧಿಗಳೆಲ್ಲವೂ ತೇಜೋರಾಶಿಗಳಾಗಿ ಉರಿಯುತ್ತಲೇ ಇರುವುವು. ಹೀಗಿರಲು ಯಾವ ವಸ್ತುವಿಗೆ ತಾನೇ ಏಕರೂಪತೆಯುಂಟು ?)

೫೫. ಯಾರು ನಮಗೆ ಪರಮ ಪೂಜ್ಯರಾಗಿ ಆಪ್ತರಾಗಿದ್ದರೊ ಅಂತಹ ಬಂಧುಗಳನೇಕರು ನಾಶವಾಗಿಯೇ ಹೋದರು. ಅದೂ ಕೇವಲ ಕೆಲವು ದಿನಗಳಲ್ಲಿಯೇ !

ಪರತಾತ್ಮೀಯತಾನ್ಯತ್ವ ತ್ವತ್ತ್ವಮತ್ತ್ವಾದಿಭಾವನಾ ।
ನೇಹ ಸತ್ಯಾ ಮಹಾಬಾಹೋ ದ್ವಿಚಂದ್ರಾದಿದೃಶೋ ಯಥಾ ॥ ೫೬ ॥

ಅಯಂ ಬಂಧುಃ ಪರಶ್ಚಾಯಮಯಂ ಚಾಹಮಯಂ ಭವಾನ್ ।
ಇತಿ ಮಿಥ್ಯಾದೃಶೋ ರಾಮ ವಿಗಲಂತು ತವಾಧುನಾ ॥ ೫೭ ॥

ಕ್ರೀಡಾರ್ಥಂ ವ್ಯವಹಾರಸ್ಥ ಏತಾಭಿರ್ಹತದೃಷ್ಟಿಭಿಃ ।
ಆಮೂಲಮಂತಶ್ಛಿನ್ನಾಭಿರ್ಬಹಿರ್ವಿಹರ ಹೇಲಯಾ ॥ ೫೮ ॥

ಸಂಸಾರಸರಣಾವಸ್ಯಾಂ ತಥಾ ವಿಹರ ಸುವ್ರತ ।
ನ ಯಥೈವ ಶ್ರಮಶ್ರಾಂತೋ ವಾಸನಾಭಾರವಾನಿವ ॥ ೫೯ ॥

---

೫೬. ಅದರಿಂದ, ಎಲೈ ಮಹಾಬಾಹುವೆ, ‘ ಇದು ಪರರದು, ಇದು ನನ್ನದು, ಇದು ಅನ್ಯನದು, ಇದು ನಿನ್ನದು, ಇದು ನನ್ನದು, ಎಂದು, ಮುಂತಾದ ಭಾವನೆಗಳಿಲ್ಲ, ಚಂದ್ರದ್ವಯವನ್ನು ಕಾಣುವ ಕಣ್ಣಿನ ಭ್ರಾಂತಿಯಂತೆ ಭ್ರಾಂತಿಯು

೫೭. ಇವನು ಬಂಧುವು, ಇವನು ಬಂಧುವಲ್ಲ, ನಾನು, ನೀನು ಎಂಬ ಭಾವನೆಗಳೆಲ್ಲ, ರಾಮ, ನಿನಗೆ ಈಗಲೇ ಕಳಲಿಹೋಗಲಿ.

೫೮. ವ್ಯವಹಾರದಲ್ಲಿರುವವರೆಗೂ, ಈ ಕುದೃಷ್ಟಿಗಳನ್ನು ಇಟ್ಟುಕೊಂಡೇ ಇರಬೇಕು. ಅದರಿಂದ, ಅವುಗಳನ್ನು, ಒಳಗೆ ಆಮೂಲವಾಗಿ ಕತ್ತರಿಸಿ, ಹೊರಗೆ. ಇವುಗಳನ್ನು ಆಟಕ್ಕಾಗಿ ಇಟ್ಟುಕೊಂಡು, ಸುಖವಾಗಿ ವಿಹರಿಸು.

೫೯. ವಾಸನಾಬದ್ಧನಾದವನು ಎಷ್ಟು ಕಷ್ಟಪಡುತ್ತಿರುವನೋ, ಅಷ್ಟೇ ಕಷ್ಟವನ್ನು ನೀನೂ ಪಡುವನಂತೆ, ಎಲೆ ಸುವ್ರತ, ನೀನೂ ತೋರಿಸಿಕೊಳ್ಳುತ್ತ ವಿಹರಿಸಿಕೊಂಡಿರು.

ಯಥಾಯಥೈಷಾ ಕಾರ್ಯಾಣಿ ವಾಸನಾಕ್ಷಯಕಾರಿಣೀ |
ವಿಚಾರಣಾ ತವೋದೇತಿ ಸಂಶಾಮ್ಯಂತಿ ತಥಾ ತಥಾ ॥ ೬೦ ॥

ಅಯಂ ಬಂಧುರಯಂ ನೇತಿ ಗಣನಾ ಲಘುಚೇತಸಾಂ |
ಉದಾರಚರಿತಾನಾಂ ತು ವಿಗತಾವರಣೈವ ಧೀಃ ॥ ೬೧ ॥

ನ ತದಸ್ತಿ ನ ಯಾತ್ರಾಹಂ ನ ತದಸ್ತಿ ನ ಯನ್ಮಮ |
ಇತಿ ನಿರ್ಣೀಯ ಧೀರಾಣಾಂ ವಿಗತಾವರಣೈವ ಧೀಃ ॥ ೬೨ ॥

ನಾಸ್ತಮೇತಿ ನ ಚೋದೇತಿ ಯಶ್ಚಿದಾಕಾಶವನ್ಮಹಾನ್ |
ಸರ್ವಂ ಸಂಪಶ್ಯತಿ ಸ್ವಸ್ಥಃ ಖಸ್ಥೋ ಭೂಮಿತಲಂ ಯಥಾ ॥ ೬೩ ॥

---

೬೦. ವಾಸನಾಕ್ಷಯವನ್ನು ಮಾಡಬಲ್ಲ ವಿಚಾರಸರಣಿಯು ಬಲವಾದಂತೆಲ್ಲ ನಿನ್ನ ಕಾರ್ಯಜಾಲವು ಶಾಂತವಾಗುತ್ತ ಬರುವುದು.

೬೧. ಇವನು ಬಂಧುವು, ಇವನು ಬಂಧುವಲ್ಲ, ಎಂಬ ಭಾವನೆಯು ಅಲ್ಪ ಚಿತ್ತನಿಗೆ ಮಾತ್ರವೇ ಉಂಟಾಗುವುದು : ವಿಶಾಲಹೃದಯನಾದವನ ಬುದ್ಧಿಗೆ ತನ್ನದು ಪರರದು ಎಂಬ ಆವರಣವೇ ಕಳೆದುಹೋಗಿರುವುದು.

೬೨. "ನಾನು (ಆತ್ಮನು) ಇಲ್ಲದುದು ಯಾವುದೂ ಇಲ್ಲ. ನನ್ನದಲ್ಲದುದು ಯಾವುದೂ ಇಲ್ಲ" ಎಂಬ ನಿರ್ಣಯವನ್ನು ಬಲ್ಲ ಧೀರರ ಬುದ್ಧಿಗೆ ಆವರಣ ವಿರುವುದಿಲ್ಲ.

೬೩. ಯಾವನು ಚಿದಾಕಾಶದಂತೆ ಅಸ್ತ, ಉದಯಗಳಿಗೆ ವಶನಾಗುವುದಿಲ್ಲವೋ ಆವನು ಆಕಾಶದಲ್ಲಿರುವವನು ಭೂಮಿಯನ್ನೆಲ್ಲ ನೋಡುವಂತೆ ಎಲ್ಲವನ್ನೂ ಕಾಣುವನು.

ಸರ್ವಾ ಏವ ಹಿ ತೇ ಭೂತಜಾತಯೋ ರಾಮ ಬಂಧವಃ ।
ಅತ್ಯಂತಾಸಂಯುತಾ ಏತಾಸ್ತವ ರಾಮ ನ ಕಾಶ್ಚನ　　　॥ ೬೪ ॥

ವಿವಿಧಜನ್ಮಶತಾಹಿತಸಂಭ್ರಮೇ
ಜಗತಿ ಬಂಧುರಬಂಧುರಿತೀಕ್ಷಣಂ ॥
ಭ್ರಮದಶೈವ ವಿವಲ್ಗತಿ ವಸ್ತುತಃ
ತ್ರಿಭುವನಂ ಚಿರಬಂಧುರಬಂಧ್ವಪಿ　　　॥ ೬೫ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ಜೀವನ್ಮುಕ್ತವರ್ಣನಂ" ನಾಮಾಷ್ಟಾದಶಃ ಸರ್ಗಃ

---

೬೪. ರಾಮ, ಹುಟ್ಟಿದ್ದ, ಹುಟ್ಟಿರುವ, ಹುಟ್ಟುವ, ಎಲ್ಲಾ ಪ್ರಾಣಿಗಳೂ ನಿನಗೆ ಬಂಧುಗಳೇ! ಇವುಗಳಲ್ಲಿ ಯಾವುದೂ ಕೂಡ ಸಂಬಂಧವೇ ಇಲ್ಲದವು ಎನ್ನುವುದೇ ಇಲ್ಲ. (ಪ್ರತಿಯೊಂದೂ ಬಂದಿರುವುದು ಒಂದೇ ವಸ್ತುವಿನಿಂದ ಎಂದ ಮೇಲೆ ಒಂದಕ್ಕೊಂದಕ್ಕೆ ಸಂಬಂಧವಿಲ್ಲ ಎನ್ನುವುದೆಂತು?)

೬೫. ಸಂತತವಾಗಿ ಹುಟ್ಟಿ ಹುಟ್ಟಿ ಸಾಯುತ್ತಿರುವುದೇ ಸ್ವಭಾವವಾದ ಈ ಜಗತ್ತಿನಲ್ಲಿ ನೂರಾರು ಜನ್ಮಗಳನ್ನು ಎತ್ತಿರುವವರು, ಒಬ್ಬರನ್ನು ಬಂಧುವೆಂದೂ, ಇನ್ನೊಬ್ಬರನ್ನು ಬಂಧುವಲ್ಲವೆಂದೂ ಹೇಳುವುದಕ್ಕಿಂತ ಭ್ರಮೆಯು ಇನ್ನು ಯಾವುದು? ನಿಜವಾಗಿ ನೋಡಿದರೆ ಭುವನತ್ರಯದಲ್ಲಿರುವ ಜೀವರಾಶಿಗಳೆಲ್ಲವೂ ಚಿರಬಂಧುಗಳೂ ಆಹುದು: ಅಬಂಧುಗಳೂ ಹೌದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ಜೀವನ್ಮುಕ್ತವರ್ಣನ" ಎಂಬ ಹದಿನೆಂಟನೆಯ ಸರ್ಗವು.

ಏಕೋನವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

> ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
> ಭ್ರಾತ್ರೋಸ್ತ್ರಿಪಥಗಾತೀರೇ ಸಂವಾದಂ ಮುನಿಪುತ್ರಯೋಃ ॥ ೧ ॥
>
> ಅಯಂ ಬಂಧುರಯಂ ನೇತಿ ಕಥಾಪ್ರಸ್ತಾವತಃ ಸ್ಮೃತಂ ।
> ಇತಿಹಾಸಮಿಮಂ ಪುಣ್ಯಮಾಶ್ಚರ್ಯಂ ಶೃಣು ರಾಘವ ॥ ೨ ॥
>
> ಅಸ್ತ್ಯಸ್ಯ ಜಂಬೂದ್ವೀಪಸ್ಯ ಕಸ್ಮಿಂಶ್ಚಿದ್ಗಿರಿಕುಂಜಕೇ ।
> ವನವ್ಯೂಹಮಹೋತ್ತಂಸೋ ಮಹೇಂದ್ರೋ ನಾಮ ಪರ್ವತಃ ॥ ೩ ॥

ಹತ್ತೊಂಬತ್ತನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

ಇದೇ ವಿಚಾರವಾಗಿ ಪುರಾತನವಾದ ಇತಿಹಾಸವೊಂದನ್ನು ಹೇಳುವರು. ಅದು ಗಂಗಾತೀರದಲ್ಲಿ ಸಹೋದರರು ಇಬ್ಬರಿಗೆ ನಡೆದ ಸಂವಾದವು. ಅದನ್ನು ಕೇಳು.

೨. "ಇವನು ಬಂಧುವು, ಇವನು ಬಂಧುವಲ್ಲ" ಎಂಬ ಮಾತು ಬಂದಾಗ ಈ ಕಥೆಯೂ ನೆನೆಪಿಗೆ ಬಂತು. ರಾಘವ, ಪುಣ್ಯವೂ ಆಶ್ಚರ್ಯವೂ ಆದ ಈ ಇತಿಹಾಸವನ್ನು ಕೇಳು.

೩. ಈ ಜಂಬೂದ್ವೀಪದ ಒಂದಾನೊಂದು ಪರ್ವತಪ್ರಾಂತದಲ್ಲಿ ಸಾಲು ಸಾಲು ಕಾಡುಗಳಿಂದ ಸುಂದರವಾಗಿರುವ ಮಹೇಂದ್ರವೆಂಬ ಪರ್ವತವಿರುವುದು.

ಕಲ್ಪದ್ರುಮವನಚ್ಛಾಯಾವಿಶ್ರಾಂತಮುನಿಕಿನ್ನರಃ ।
ಶೃಂಗೈರಾತತಮಾಕಾಶಂ ಜಿತವಾ್ಞ ಯಃ ಸಮುನ್ನತೈಃ ॥ ೪ ॥

ಬ್ರಹ್ಮಲೋಕಾಂತರಪ್ರಾಪ್ತಶೃಂಗಕಂದರಚಾರಿಭಿಃ ।
ಸಾಮವೇದ ಪ್ರತಿಧ್ವಾನ ಘುಂಘುಮೈರ್ಗಾಯತೀವ ಯಃ ॥ ೫ ॥

ಯಃ ಪಯೋಮೇದುರೈರ್ಮೇಘೈರ್ಲಸಿತೈಃ ಶೃಂಗಕೋಟಿಷು ।
ಲತಾ ಕುಸುಮಸಂಪ್ರೋತೈಃ ಕುಂತಲೈರಿವ ರಾಜತೇ ॥ ೬ ॥

ಯಸ್ತದೋಡ್ಡಯನೋತ್ಕಾನಾಂ ಶರಭಾಣಾಂ ವಿಜೃಂಭಿತೈಃ ।
ವಿಸ್ಫೂರ್ಜತಿ ಗುಹಾವಕ್ತ್ರೈಃ ಕಲ್ಪಾಭ್ರಾಣಿ ಹಸನ್ನಿವ ॥ ೭ ॥

---

೪. ಅಲ್ಲಿ ಕಲ್ಪವೃಕ್ಷಗಳು ವನವಾಗಿ ಬೆಳೆದಿರುವುವು. ಅವುಗಳ ನೆಳಲಿನಲ್ಲಿ ಮುನಿಗಳೂ ಕಿನ್ನರಾದಿಗಳೂ ವಿಶ್ರಾಂತಿ ಪಡೆಯುವರು. ಅದರ ಎತ್ತರವಾದ ಶಿಖರಗಳು ಆಕಾಶವನ್ನೂ ಭೇದಿಸಿಕೊಂಡು ಹೋಗಿದ್ದುವು.

೫. ಆ ಶಿಖರಗಳು ಬ್ರಹ್ಮಲೋಕದವರೆಗೂ ಹೋಗಿದ್ದುವು. ಆ ಬ್ರಹ್ಮ ಸಭೆಯಲ್ಲಿ ನಡೆಯುವ ಸಾಮವೇದ ಘೋಷದ.ಪ್ರತಿಧ್ವನಿಯು ಆ ಶಿಖರಗಳ ಗುಹೆಗಳಲ್ಲಿ ತುಂಬಿಕೊಂಡು ಮೊಳಗುವುದು. ಆ ಮೊಳಗು ಯಾವಾಗಲೂ ಘುಂ ಘುಂ ಎಂದು ನಾದಮಾಡುತ್ತಿರಲು, ಆ ಪರ್ವತವೇ ಹಾಡುತ್ತಿದೆಯೋ ಎಂಬಂತೆ ಇರುವುದು.

೬. ಈ ಮಹೇಂದ್ರ ಪರ್ವತದ ಶಿಖರಾಗ್ರಗಳಲ್ಲಿ ನೀರು ತುಂಬಿದ ಮೇಘಗಳು ಮಿಂಚುಗಳನ್ನು ಮಿಂಚಿಸುತ್ತ ಕುಳಿತಿರಲು, ಈ ಪರ್ವತವು ತನ್ನ ಮುಡಿಯ ತುಂಬಾ ಹೂಗಳನ್ನು ಮುಡಿದಿರುವುದೋ ಎಂಬಂತಿರುವುದು.

೭. ಆ ಪರ್ವತದ ತಟಗಳಲ್ಲಿ ಶರಭಗಳು ಹಾರಾಡುತ್ತ ಗರ್ಜನೆಮಾಡುತ್ತಿರಲು, ಪ್ರಳಯ ಕಾಲದ ಮೇಘಗಳನ್ನು ಈ ಪರ್ವತವು ತನ್ನ ಗುಹೆಗಳೆಂಬ ಮುಖಗಳಿಂದ ಹಾಸ್ಯಮಾಡುತ್ತಿರುವುದೋ ಎಂಬಂತೆ ಇರುವುದು.

ಯೇನ ನಿರ್ಝರನಿರ್ಹ್ರಾದೈಃ ಕಂದರಾಂತರಚಾರಿಭಿಃ ।
ಸಮುದ್ರಜಲಕಲ್ಲೋಲವಿಲಾಸೋ ವಿಜಿತೋಽಭಿತಃ ॥ ೮ ॥

ತಸ್ಯೈಕದೇಶೇ ವಿತತೇ ರತ್ನಸಾನೌ ಮನೋರಮೇ ।
ಮುನಿಭಿಃ ಸ್ನಾನಪಾನಾರ್ಥಂ ವ್ಯೋಮಗಂಗಾವತಾರಿತಾ ॥ ೯ ॥

ತಸ್ಯಾಸ್ತ್ರಿಪಥಗಾಯಾಸ್ತು ತೀರೇ ವಿಕಸಿತದ್ರುಮೇ ।
ರತ್ನಾದ್ರಿತಟವಿದ್ಯೋತೇ ಕಚತ್ಕನಕಪಿಂಜರೇ ॥ ೧೦ ॥

ಆಸೀದಭ್ಯುದಿತಜ್ಞಾನಸ್ತಪೋರಾಶಿರುದಾರಧೀಃ ।
ಮುನಿರ್ದೀರ್ಘತಪಾ ನಾಮ ತಪೋ ಮೂರ್ತಮಿವಾಪರಂ ॥ ೧೧ ॥

---

೮. ತನ್ನ ಕಂದರಗಳೊಳಗೆ ನಿರ್ಝರಣಿಗಳು ಹಾರಾಡುತ್ತ ಇರಲು, ಆ ಪರ್ವತವು ಸಮುದ್ರ ತರಂಗಗಳ ವಿಲಾಸವನ್ನು ನಗುವಂತೆ ಇರುವುದು.

೯. ಆ ಪರ್ವತದ ವಿಸ್ತಾರವೂ ಮನೋಹರವೂ ಆದ ರತ್ನಮಯ ಸಾನು ಭೂಮಿಯೊಂದರಲ್ಲಿ ಮಹರ್ಷಿಗಳು ಸ್ನಾನಪಾನಾರ್ಥವಾಗಿ ಆಕಾಶಗಂಗೆಯನ್ನು ಬರಮಾಡಿಕೊಂಡಿದ್ದರು.

೧೦. ಆ ಆಕಾಶಗಂಗೆಯ ತೀರದಲ್ಲಿ ಮರಗಳು ಬೆಳೆದಿದ್ದುವು. ರತ್ನಮಯ ವಾದ ಭೂಮಿಯು ಥಳಥಳಿಸುತ್ತಿತ್ತು. ಚಿನ್ನದ ಮರಳಿನಿಂದ ಆ ಸುತ್ತಮುತ್ತೆಲ್ಲವೂ ಮೆರೆಯುತ್ತಿತ್ತು.

೧೧. ಆ ಪಾವನವಾದ ಭೂಮಿಯಲ್ಲಿ ಆತ್ಮಜ್ಞಾನಸಂಪನ್ನನೂ ತಪೋ ರಾಶಿಯೂ ವಿವೇಕಸಂಪನ್ನನೂ, ಮೈವೆತ್ತ ತಪಸ್ಸೋ ಎಂಬಂತಿರುವವನೂ ಆದ ದೀರ್ಘತಪಾ ಎಂಬ ಮುನೀಂದ್ರನಿದ್ದನು.

ಮುನೇರ್ಬಭೂವತುಸ್ತಸ್ಯ ಪುತ್ರೌ ದ್ವಾವಿಂದುಸುಂದರೌ ।
ಪುಣ್ಯಪಾವನನಾಮಾನೌ ದ್ವೌ ಕಚಾವಿವ ವಾಕ್ಪತೇಃ ॥ ೧೨ ॥

ಸ ತಾಭ್ಯಾಂ ಸಹಪುತ್ರಾಭ್ಯಾಂ ಭಾರ್ಯಯಾ ಚ ಸಹೈಕಯಾ ।
ಉವಾಸ ಸರಿತಸ್ತೀರೇ ತಸ್ಮಿನ್ ಸಫಲಪಾದಪೇ ॥ ೧೩ ॥

ಅಥ ಕಾಲೇ ತಯೋಸ್ತಸ್ಯ ಪುತ್ರಯೋರ್ಜ್ಞಾನವಾನಭೂತ್ ।
ಪುಣ್ಯೋ ನಾಮ ಚ ಯೋ ಜ್ಯೇಷ್ಠೋ ಗುಣಜ್ಯೇಷ್ಠಶ್ಚ ರಾಘವ ॥ ೧೪ ॥

ಪಾವನೋಽರ್ಧಪ್ರಬುದ್ಧೋಽಭೂತ್ಪೂರ್ವಸಂಧ್ಯಾಂಬುಜಂ ಯಥಾ ।
ಮೌರ್ಖ್ಯಾದಧಿಗತೋ ನಾಪ್ತಃ ಪದೇ ದೋಲಾಯಿತಃ ಸ್ಥಿತಃ ॥ ೧೫ ॥

---

೧೨. ಬೃಹಸ್ಪತಿಗೆ ಹುಟ್ಟಿದ ಇಬ್ಬರು ಕಚರೋ ಎಂಬಂತೆ, ಆ ಮುನೀಂದ್ರನಿಗೆ ಚಂದ್ರನಂತೆ ಸುಂದರರಾದ, ಪುಣ್ಯ, ಪಾವನ, ಎಂಬ ಹೆಸರಿನ ಇಬ್ಬರು ಮಕ್ಕಳು ಇದ್ದರು.

೧೩. ಆ ದೀರ್ಘತಪಾ ಮುನಿಯು ಆ ಗಂಗಾತೀರದಲ್ಲಿ ತನ್ನ ಹೆಂಡತಿ ಮಕ್ಕಳೊಡನೆ ವಾಸಮಾಡಿಕೊಂಡಿದ್ದನು.

೧೪. ಕೆಲವು ಕಾಲ ಕಳೆದ ಮೇಲೆ, ಆ ಇಬ್ಬರು ಮಕ್ಕಳಲ್ಲಿ ಹಿರಿಯನೂ ಗುಣಗಳಿಂದಲೂ ದೊಡ್ಡವನೂ ಆದ ಪುಣ್ಯನು ಜ್ಞಾನಸಂಪನ್ನನಾದನು.

೧೫. ಪಾವನನು ಪ್ರಭಾತಕಾಲದ ಕಮಲದಂತೆ ಅರ್ಧಮಾತ್ರ ಪ್ರಬುದ್ಧನಾದನು. ಮೌರ್ಖ್ಯವನ್ನು ದಾಟಿದ್ದರೂ ಪರಮ ಪದವನ್ನು ಹೊಂದದೆ, ಇನ್ನೂ ಹಾಗೂ ಹೀಗೂ ಅಲೆಯುತ್ತಿದ್ದನು.

ತತೋಽವಹತ್ಯಕಲಿತೇ ಕಾಲೇಽಕಲಿತಕಾರಣೇ ।
ಸಂವತ್ಸರಶತೇ ಜೀರ್ಣದೀರ್ಘದೇಹಲತಾಯುಷಿ ॥ ೧೬ ॥

ಅಸ್ಮಾದ್ಭಂಗುರಭೂತಾಢ್ಯಾದ್ವ್ಯತ್ತಾಂತಶತಭೀಷಣಾತ್ ।
ರತಿಮುತ್ಸೃಜ್ಯ ಸಂಸಾರಾಜ್ಜರಾಜರ್ಜರಜೀವಿತಃ ॥ ೧೭ ॥

ಕಲನಾಪಕ್ಷಿಣೀ ನೀಡಂ ದೇಹಂ ದೀರ್ಘತಪಾಮುನಿಃ ।
ಜಹೌ ಗಿರಿಗುಹಾಗೇಹೇ ಭಾರಂ ವೈವಧಿಕೋ ಯಥಾ ॥ ೧೮ ॥

ಪ್ರಶಾಂತಕಲನಾರಂಭಂ ಚೇತ್ಯರಿಕ್ತಚಿದಾಸ್ಪದಂ ।
ಪದಂ ಜಗಾಮ ನೀರಾಗಂ ಪುಷ್ಪಗಂಧ ಇವಾಂಬರಂ ॥ ೧೯ ॥

---

೧೬. ಹಾಗೆಯೇ ಕಾಲವು ಯಾರಿಗೂ ಗೊತ್ತೇ ಇಲ್ಲದೆ, ಯಾವ ಕಾರಣವೂ ಇಲ್ಲದೆ, ತಾನೇ ಮುಂದೆ ಮುಂದೆ ಹೋಗಿ ಆ ಮುನೀಂದ್ರನಿಗೆ ನೂರು ವರ್ಷಗಳು ತುಂಬಿದುವು. ಅವನ ದೇಹವೂ ಆಯುಸ್ಸೂ ಜೀರ್ಣವಾದುವು.

೧೭–೮. ಹೀಗೆ ಆತನು ಮುಪ್ಪಿಗೆ ಬಲಿಯಾಗಿ, ಕ್ಷಣಕ್ಷಣವೂ ಬೇರೆಯಾಗುತ್ತಿರುವ ಭೂತಗಳಿಂದ (ಪಂಚಭೂತಗಳು–ಪ್ರಾಣಿಗಳು) ಕೂಡಿ, ಭಯಂಕರವಾದ ನಾನಾವಿಧ ವ್ಯಾಪಾರಗಳುಳ್ಳದಾಗಿರುವ ಈ ಸಂಸಾರದಲ್ಲಿ ಆಸಕ್ತಿಯನ್ನು ತೊರೆದು, ಸಂಕಲ್ಪವೆಂಬ ಪಕ್ಷಿಗೆ ಗೂಡಾಗಿದ್ದ ದೇಹವನ್ನು, ಮೂಟೆ ಹೊರುವವನು ಮೂಟೆಯನ್ನು ಇಳುಹುವಂತೆ, ಗಿರಿಗುಹೆಯಲ್ಲಿ ಬಿಟ್ಟುಬಿಟ್ಟನು.

೧೯. ಕಲ್ಪನಾಶೂನ್ಯವಾಗಿ, ದೃಶ್ಯರಹಿತವಾಗಿ, ಕೇವಲ ಚಿನ್ಮಾತ್ರವಾಗಿ, ರಾಗದ್ವೇಷಾದಿ ವಿಮುಕ್ತವಾಗಿರುವ ಆ ಪರಮಪದವನ್ನು, ಪುಷ್ಪಗಂಧವು ಆಕಾಶವನ್ನು ಸೇರುವಂತೆ ಸೇರಿ (ಲೀನನಾಗಿ) ಹೋದನು.

ಅಥ ಭಾರ್ಯಾ ಮುನೇರ್ದೇಹಂ ಪ್ರಾಣಾಪಾನವಿವರ್ಜಿತಂ ।
ದೃಷ್ಟ್ವಾ ವಿಲುಲಿತಂ ಭೂಮೌ ವಿನಾಲಮಿವ ಪಂಕಜಂ ॥ ೨೦ ॥

ಚಿರಮಭ್ಯಸ್ತಯಾ ಯೋಗಯುಕ್ತ್ಯಾ ಪತಿವಿತೀರ್ಣಯಾ ।
ತತ್ಯಾಜ ತನುಮವ್ಲಾನಾಂ ಷಟ್ಪದೀ ಪದ್ಮಿನೀಮಿವ ॥ ೨೧ ॥

ಭರ್ತಾರಮೇವಾನುಯಯೌ ಜನಸ್ಯಾದೃಷ್ಟತಾಂ ಗತಾ ।
ಪ್ರಭಾಗಗನಕೋಸ್ಥಮಸ್ತಂ ಯಾತಮಿವೋಡುಪಂ ॥ ೨೨ ॥

ಮಾತಾಪಿತ್ರೋಸ್ತು ಗತಯೋರೌರ್ಧ್ವದೈಹಿಕಕರ್ಮಣಿ ।
ಪುಣ್ಯ ಏವ ಸ್ಥಿತೋಽವ್ಯಗ್ರಃ ಪಾವನೋ ದುಃಖಮಾಯಯೌ ॥ ೨೩ ॥

ಶೋಕೋಪಹತಚಿತ್ತೋಽಸೌ ಭ್ರಮತ್ಕಾನನವೀಥಿಷು ।
ಜ್ಯಾಯಾಂಸಮನವೇಕ್ಷ್ಯೈವ ಪಾವನೋ ವಿಲಲಾಪ ಹ ॥ ೨೪ ॥

೨೦–೨೧. ಆತನ ಹೆಂಡತಿಯು, ಹೀಗೆ ಪ್ರಾಣಾಪಾನಗಳಿಲ್ಲದೆ ಜಡವಾಗಿ ನಾಳವಿಲ್ಲದ ಕಮಲದಂತೆ ಭೂಮಿಯಲ್ಲಿ ಬಿದ್ದುಹೋಗಿದ್ದ ತನ್ನ ಗಂಡನ ದೇಹವನ್ನು ನೋಡಿ, ತನ್ನ ಪತಿಯು ತನಗೆ ಉಪದೇಶಿಸಿದ್ದ, ಚಿರಕಾಲದಿಂದ ತನಗೆ ಅಭ್ಯಾಸವಾಗಿದ್ದ, ಯೋಗಸಾಧನವನ್ನು ಆಶ್ರಯಿಸಿ, ಹೆಣ್ಣುದುಂಬಿಯು ಪದ್ಮಿನಿಯನ್ನು ಬಿಡುವಂತೆ, ತನ್ನ ದೇಹವನ್ನು ತ್ಯಾಗ ಮಾಡಿದಳು.

೨೨. ಅಸ್ತನಾದ ಚಂದ್ರನನ್ನು ಆಕಾಶದಲ್ಲಿ ಹರಡಿದ್ದ ಚಂದ್ರಿಕೆಯು ಹಿಂಬಾಲಿಸಿ ಹೋಗುವಂತೆ, ಆಕೆಯೂ ಗಂಡನ ಮಾರ್ಗವನ್ನೇ ಹಿಡಿದು, ಹೋಗಿ ಜನದ ಕಣ್ಣಿಗೆ ಕಾಣದಾದಳು.

೨೩. ಹೀಗೆ ತಾಯಿತಂದೆಗಳು ಹೋದ ಮೇಲೆ ಅವರಿಗೆ ಮಾಡಬೇಕಾದ ಕರ್ಮಗಳಲ್ಲಿ ಜ್ಞಾನಸಂಪನ್ನನಾದ ಪುಣ್ಯನು ಯಾವ ವಿಕಾರವೂ ಇಲ್ಲದೆ ಇದ್ದನು. ಇನ್ನೂ ಆರೂಢನಲ್ಲದ ಪಾವನನು ದುಃಖವನ್ನು ಹೊಂದಿದನು.

೨೪. ಪಾವನನು ಶೋಕಕ್ಕೆ ಸಿಕ್ಕಿಕೊಂಡಿರುವ ಚಿತ್ತದಿಂದ ಬಹು ಕ್ಲೇಶಪಡುತ್ತ, ಅರಣ್ಯವೀಥಿಗಳಲ್ಲಿ ದಿಕ್ಕು ಕೆಟ್ಟವನಂತೆ ಅಲೆಯುತ್ತಾ, ಅಣ್ಣನಾದ ಪುಣ್ಯನು ಹೇಗಿರುವನು ಎಂಬುದನ್ನೂ ಅರಿಯದೆ ಅಳುತ್ತಿದ್ದನು.

ಅಥೌರ್ಧ್ವದೈಹಿಕಂ ಕೃತ್ವಾ ಮಾತಾಪಿತ್ರೋರುದಾರಧೀಃ ।
ಆಯಯೌ ವಿಪಿನೇ ಪುಣ್ಯಃ ಪಾವನಂ ಶೋಕಲಾಲಸಂ ॥ ೨೫ ॥

ಪುಣ್ಯ ಉವಾಚ :—

ಕಿಂ ಪುತ್ರ ಘನತಾಂ ಶೋಕಂ ನಯಸ್ಯಾನ್ಧ್ಯೈಕಕಾರಣಂ ।
ಬಾಷ್ಪಧಾರಾಧರಂ ಘೋರಂ ಪ್ರಾವೃಟ್ಕಾಲ ಇವಾಂಬುದಂ ॥ ೨೬ ॥

ಪಿತಾ ತವ ಮಹಾಪ್ರಾಜ್ಞ ಗತಃ ಸಾರ್ಧಂ ತ್ವದಂಬಯಾ ।
ಸ್ವಾಮೇವ ಪರಮಾತ್ಮಾತ್ಮಪದವೀಂ ಮೋಕ್ಷನಾಮಿಕಾಂ ॥ ೨೭ ॥

---

೨೫. ಧೀರಮನಸ್ಕನಾದ ಪುಣ್ಯನು ತಾಯಿತಂದೆಗಳಿಗೆ ಮಾಡಬೇಕಾದ ಅಪರಕರ್ಮಗಳನ್ನೆಲ್ಲ ಮಾಡಿ ಮುಗಿಸಿ, ಅರಣ್ಯದಲ್ಲಿ ಅತ್ತು ಗೋಳಾಡುತ್ತಿದ್ದ ತಮ್ಮನಾದ ಪಾವನನನ್ನು ನೋಡಲು ಬಂದನು.

ಪುಣ್ಯನು ಹೇಳಿದನು :—

೨೬. ತಮ್ಮ! ಇದೇನು? ಮೋಹಕ್ಕೆ ಕಾರಣವಾದ ಶೋಕವನ್ನು ಇಷ್ಟು ಬೆಳೆಯಿಸುತ್ತಿರುವೆಯಲ್ಲ! ಕಣ್ಣೀರಿನ ಮಳೆಗರೆಯುತ್ತಿರುವ ಘೋರವಾದ ನಿನ್ನ ಶೋಕವನ್ನು, ಮಳೆಗಾಲವು ಮೋಡವನ್ನು ಬೆಳೆಯಿಸುವಂತೆ ಬೆಳೆಯಿಸುತ್ತಿರುವೆಯಲ್ಲ!

೨೭. ನೀನು ಚೆನ್ನಾಗಿ ಬಲ್ಲವನು. ನಿನ್ನ ತಂದೆಯು ತಾಯಿಯೊಡನೆ, ತನ್ನ ಸ್ಥಾನವಾದ ಮೋಕ್ಷವೆಂಬ ಪರಮಾತ್ಮ ಪದವಿಯನ್ನು ಪಡೆದನು.

(ಮೋಕ್ಷವು ನಿರತಿಶಯಾನಂದವು. ಸ್ವಪದವು. ಈ ಎರಡು ಕಾರಣಗಳಿಂದಲೂ, ಎಂದರೆ, ಎಲ್ಲ ಆನಂದಕ್ಕೂ ಮೀರಿದ ನಿಶ್ಶ್ರೇಯಸವನ್ನು ಪಡೆದವನನ್ನು ಕುರಿತು ಅವನ ಬಂಧುಗಳು ಸಂತೋಷಪಡಬೇಕಲ್ಲದೆ ದುಃಖಪಡಬೇಕಾಗಿಲ್ಲ; ಹಾಗೆಯೇ, ಸ್ವಪದವನ್ನು ಪಡೆದವರನ್ನು ಕುರಿತು ಶೋಕಿಸುವುದು ಎಂದರೇನು,– ದುಃಖಕ್ಕೆ ಅವಕಾಶವಿಲ್ಲವೆಂದು ಭಾವವು.)

ತತ್ಸ್ಥಾನಂ ಸರ್ವಜಂತೂನಾಂ ತದ್ರೂಪಂ ವಿಜಿತಾತ್ಮನಾಂ ।
ಸ್ವಭಾವಮಭಿಸಂಪನ್ನೇ ಕಿಂ ಪಿತರ್ಯನುಶೋಚಸಿ ॥ ೨೮ ॥

ಈದೃಶೀ ತು ತ್ವಯಾ ಬದ್ಧಾ ಭಾವನೇಹ ವಿಮೋಹಜಾ ।
ಸಂಸಾರೇ ಯದಶೋಚ್ಯೋಽಪಿ ತ್ವಯಾ ತಾತೋಽನುಶೋಚ್ಯತೇ ॥ ೨೯ ॥

ನ ಸೈವ ಭವತೋ ಮಾತಾ ನಾಸಾವೇವ ಪಿತಾ ತವ ।
ನ ಭವಾನೇಷ ತನಯಸ್ತಯೋರ್ನಿಃಸಂಖ್ಯಪುತ್ರಯೋಃ ॥ ೩೦ ॥

ಮಾತಾಪಿತೃಸಹಸ್ರಾಣಿ ಸಮತೀತಾನಿ ತೇ ಸುತ ।
ಬಹೂನ್ಯಂಬುಪ್ರವಾಹಸ್ಯ ನಿಮ್ನಾನೀವ ವನೇ ವನೇ ॥ ೩೧ ॥

---

೨೮. ಆ ಮೋಕ್ಷಪದವು ಸರ್ವಜಂತುಗಳಿಗೂ ಸ್ವಸ್ಥಾನವು. ಬ್ರಹ್ಮ ವಿಜ್ಞಾನಿಗಳು ಪಡೆಯುವ ರೂಪವೇ ಅದು. ಹೀಗೆ ತನ್ನ ಮೂಲಭಾವವನ್ನು ಹೊಂದಿದ ತಂದೆಯನ್ನು ಕುರಿತು ನೀನು ಶೋಕಿಸಬಹುದೇ ?

೨೯. ಆದರೆ, (ನೀನು ಅಳುತ್ತಿರುವುದು ಹೋದವರನ್ನು ಕುರಿತಲ್ಲ. ನಿನಗೆ ತಾಯಿತಂದೆಯರು ಇಲ್ಲವಾದರು ಎಂದು ಎನ್ನುವೆಯಾದರೆ) ನಿನ್ನ ಈ ಭಾವನೆಯು ವ್ಯಾಮೋಹದಿಂದ ಹುಟ್ಟಿದುದು. ಅದರಿಂದ ಅಶೋಚ್ಯರನ್ನು ಕುರಿತು ಕೂಡ, ಈ ಸಂಸಾರದಲ್ಲಿ ನೀನು ಶೋಕಿಸುತ್ತಿರುವೆ.

೩೦. (ಆದರೆ ನಿಜವಾಗಿ ನೋಡಿದರೆ) ಹೋದವಳು ನಿನ್ನ ತಾಯಿಯೂ ಅಲ್ಲ. ಹೋದವನು ನಿನ್ನ ತಂದೆಯೂ ಅಲ್ಲ. ನೀನೂ ಕೂಡ ಅವರ ಮಗನಲ್ಲ. ಏಕೆಂದರೆ, ಅವರಿಗೆ ಮಕ್ಕಳು ಒಬ್ಬರು ಇಬ್ಬರಲ್ಲ. ಎಷ್ಟೋ ಮಂದಿ ಲೆಕ್ಕವಿಲ್ಲದವರು.

೩೧. ವನವನದಲ್ಲಿಯೂ ಹರಿಯುವ ನೀರಿನಲ್ಲಿ ಎಷ್ಟೋ ಹಳ್ಳಗಳು ಇರುವಂತೆ, ತಮ್ಮ, ನಿನಗೆ ಎಷ್ಟೋ ಸಾವಿರ ಸಾವಿರ ತಾಯಿತಂದೆಗಳಾಗಿರುವರು.

ಅಸಂಖ್ಯಪುತ್ರಯೋರ್ನೈವ ಭವಾನೇವ ಸುತಸ್ತಯೋಃ |
ಸರಿತ್ತರಂಗವತ್ಪುತ್ರ ಗತಾಃ ಪುತ್ರಗಣಾ ನೃಣಾಂ || ೩೨ ||

ಅಸ್ಮತ್ಪಿತ್ರೋರತೀತಾನಿ ಪುತ್ರಲಕ್ಷಾಣ್ಯನೇಕಶಃ |
ಪತ್ರಕೋರಕವೃಂತಾನಿ ಲತಾವಿಟಪಯೋರಿವ || ೩೩ ||

ಮಿತ್ರಬಾಂಧವವೃಂದಾನಿ ಜಂತೋರ್ಜನ್ಮನಿ ಜನ್ಮನಿ |
ಋತಾವೃತಾವತೀತಾನಿ ಫಲಾನೀವ ಮಹಾತರೋಃ || ೩೪ ||

ಶೋಚನೀಯಾ ಯದಿ ಸ್ನೇಹಾನ್ಮಾತಾಪಿತೃಸುತಾಃ ಸುತ |
ತದತೀತಾ ನ ಶೋಚ್ಯಂತೇ ಕಿಮಜಸ್ರಂ ಸಹಸ್ರಶಃ || ೩೫ ||

---

೩೨. ಹಾಗೆಯೇ, ಅವರಿಗೂ ನೀನು ಒಬ್ಬನೇ ಮಗನಲ್ಲ. ಅವರಿಗೆ ಹರಿಯುವ ನೀರಿನಲ್ಲಿ ಹುಟ್ಟುವ ಅಲೆಗಳ ಹಾಗೆ ಲೆಕ್ಕವಿಲ್ಲದಷ್ಟು ಮಂದಿ ಮಕ್ಕಳಾಗಿರುವರು.

೩೩. ಬಳ್ಳಿಗಳಲ್ಲಿಯೂ ಪೊದೆಗಳಲ್ಲಿಯೂ ಎಲೆಗಳೂ ಮೊಗ್ಗುಗಳೂ ಗೊಂಚಲುಗಳೂ ಆಗುವ ಹಾಗೆ ಲಕ್ಷ ಲಕ್ಷ ಮಂದಿ ಮಕ್ಕಳು ನಮ್ಮ ತಾಯಿತಂದೆಗಳಿಗೆ ಆಗಿರುವರು.

೩೪. ಮಹಾವೃಕ್ಷದಲ್ಲಿ ಋತುಕಾಲವು ಬಂದಾಗಲೆಲ್ಲ ಫಲಗಳು ಆಗಿ ಹೋಗುವಂತೆ, ಜಂತುಜಂತುವಿಗೂ ಜನ್ಮಜನ್ಮಕ್ಕೂ ಮಿತ್ರ, ಬಾಂಧವರ ಬಳಗಗಳು ಆಗಿ ಆಗಿ ಹೋಗುತ್ತಲೇ ಇರುವುವು.

೩೫. ತಾಯಿ, ತಂದೆ, ಮಕ್ಕಳು ಮೊದಲಾದವರನ್ನು ಕುರಿತು ಸ್ನೇಹದಿಂದ ಅಳಲೇಬೇಕು ಎನ್ನುವುದಾದರೆ, ಜನ್ಮಜನ್ಮಾಂತರಗಳಲ್ಲಿ ಆಗಿ ಹೋದವರನ್ನೆಲ್ಲ ಕುರಿತು ಏಕೆ ಅಳುವುದಿಲ್ಲ ತಮ್ಮ ?

ಪ್ರಪಂಚೋದಯಂ ಮಹಾಭಾಗಾ ದೃಶ್ಯತೇ ಜಾಗತೇ ಭ್ರಮೇ ।
ಪರಮಾರ್ಥೇನ ತೇ ಪ್ರಾಜ್ಞ ನಾಸ್ತಿ ಮಿತ್ರಂ ನ ಬಾಂಧವಾಃ ॥ ೩೬ ॥

ನ ನಾಶ ಇವ ಹಿ ಭ್ರಾತಃ ಪರಮಾರ್ಥೇನ ವಿದ್ಯತೇ ।
ಮಹತ್ಯಪಿ ಚಿರಾತಪ್ತೇ ಮರಾವಿವ ಪಯೋಲವಾಃ ॥ ೩೭ ॥

ಏತಾ ಯಾಃ ಪ್ರೇಕ್ಷಸೇ ಲಕ್ಷ್ಮೀಶ್ಛತ್ರಚಾಮರಚಂಚಲಾಃ ।
ಸ್ವಪ್ನ ಏವ ಮಹಾಬುದ್ಧೇ ದಿನಾನಿ ತ್ರೀಣಿ ಪಂಚ ವಾ ॥ ೩೮ ॥

---

೩೬. ಜಗತ್ತು ಸತ್ಯವೆಂಬ ಭ್ರಾಂತಿಯುಂಟಾದಾಗ ಮಾತ್ರ, ಮಹಾಭಾಗನೆ, ಈ ಮಾತಾಪಿತಾಪುತ್ರ ಪ್ರಪಂಚವು ಕಾಣುವುದು. ಪರಮಾರ್ಥವಾಗಿ ನೋಡಿದರೆ, ಮಿತ್ರನಿಲ್ಲ, ಬಂಧುವಿಲ್ಲ, ಬಾಂಧವರಿಲ್ಲ.

೩೭. ಪರಮಾರ್ಥ ದೃಷ್ಟಿಯಿಂದ ನಾಶವೆಂಬುದು ಇಲ್ಲವೇ ಇಲ್ಲ. ಮರುಭೂಮಿಗಳು ಎಷ್ಟು ಕಾಲ ಬಿಸಿಲಿನಲ್ಲಿ ಬೆಂದರೇನು, ಅಲ್ಲಿ ನೀರು ಕಿಂಚಿತ್ತಾದರೂ ಬರುವುದೇ ?

೩೮. ಛತ್ರಚಾಮರಾದಿಗಳಿಂದ ವಿರಾಜಿಸುತ್ತಿರುವ ಈ ಭೋಗಲಕ್ಷ್ಮಿಯರನ್ನು ನೋಡುತ್ತಿರುವುದು ಉಂಟಲ್ಲಾ ಎಂದರೆ, ಮಹಾಬುದ್ಧಿಯೇ, ಇದೆಲ್ಲವೂ ಒಂದು ಸ್ವಪ್ನವೇ! (ಸ್ವಪ್ನವು ಕೆಲವು ಕಾಲ ಮಾತ್ರವಾದರೆ,) ಇದು ಕೆಲವು ದಿನಗಳು ನಡೆಯುವ ಸ್ವಪ್ನವು.

(ಕಾಲಭ್ರಾಂತಿಯನ್ನು ಸ್ವಪ್ನದಲ್ಲಿ ಚೆನ್ನಾಗಿ ಅರಿಯಬಹುದು. ಒಂದು ಸಲ ರೆಪ್ಪೆ ಹೊಡೆದುಬಿಡುವಷ್ಟು ಕಾಲ ತೂಕಡಿಸುವುದರೊಳಗಾಗಿ ದೀರ್ಘಕಾಲಾನುಷಂಗಿಯಾದ ಸ್ವಪ್ನವಾಗುವುದು ಎಲ್ಲರಿಗೂ ಅನುಭವದಲ್ಲುಂಟು. ಹಾಗೆಯೇ, ತಿರ್ಯಕ್, ಮಾನುಷ, ದೈವ ಪ್ರಮಾಣಗಳಿಂದ ಕಾಲವು ವ್ಯತ್ಯಾಸವಾಗುವುದು. ದೇವತೆಗಳ ಒಂದು ಅಹೋರಾತ್ರಿಯೇ ಮನುಷ್ಯರಿಗೆ ವರ್ಷವು. ಪಿತೃಗಳಿಗೆ ಹನ್ನೆರಡು ದಿನವು— ಹೀಗೆ.)

ದೃಷ್ಟ್ಯಾ ತು ಪಾರಮಾರ್ಥಿಕ್ಯಾ ಪುತ್ರ ಸತ್ಯಂ ವಿಚಾರಯ ।
ನೈವ ತ್ವಂ ನ ವಯಂ ಚೈವ ಭ್ರಾಂತಿಮಂತಃ ಪರಿತ್ಯಜ ॥ ೩೯ ॥

ಅಯಂ ಗತೋ ಮೃತಶ್ಚಾಯಮಿತಿ ದುರ್ದೃಷ್ಟಯಃ ಪುರಃ ।
ಸ್ವಸಂಕಲ್ಪೋಪತಾಪೋತ್ಥಾ ದೃಶ್ಯಂತೇ ನತು ಸತ್ಯತಃ ॥ ೪೦ ॥

ಅಜ್ಞಾನವಿಸ್ತೀರ್ಣಮರೌ ವಿಲೋಲಂ
ಶುಭಾಶುಭಸ್ಯಂದಮಯೈಸ್ತರಂಗೈಃ ॥
ಸ್ವವಾಸನಾ ನಾಮ ಮರೀಚಿವಾರಿ
ಪರಿಸ್ಫುರತ್ಯೇತದನಂತರೂಪಂ ॥ ೪೧ ॥

ಇತ್ಯಾರ್ಷೇ ಶ್ರೀ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷು ಉಪಶಮಪ್ರಕರಣೇ
“ ಪಾವನಬೋಧನಂ ” ನಾಮೈಕೋನವಿಂಶಃ ಸರ್ಗಃ

---

೩೯. ಪಾರಮಾರ್ಥಿಕವಾಗಿ ವಿಚಾರಮಾಡಿನೋಡಿದರೆ, ಸತ್ಯವಾಗಿ ನೀನೂ ಇಲ್ಲ. ನಾವೂ ಇಲ್ಲ. ಅದರಿಂದ ಹೃದಯದಲ್ಲಿ ಮೂಡಿರುವ ಭ್ರಾಂತಿಯನ್ನು ದೂರಮಾಡು.

೪೦. ಇವನು ಹೋದನು, ಇವನು ಸತ್ತನು ಎಂಬ ಕುದೃಷ್ಟಿಗಳೆಲ್ಲವೂ ನಮ್ಮ ನಮ್ಮ ಸಂಕಲ್ಪಗಳಿಂದಲೇ ಹುಟ್ಟಿದವು. ನಿಜವಾಗಿಯೂ ನೋಡಿದರೆ, ವಾಸ್ತವಗಳಲ್ಲ.

೪೧. ಅಜ್ಞಾನವೆಂಬ ಒಂದು ದೊಡ್ಡ ಮರುಭೂಮಿಯುಂಟು. ಅಲ್ಲಿ ಸ್ವವಾಸನಾ ಎಂಬ ಒಂದು ಮರೀಚಿಕಾ ಜಲತರಂಗಿಣಿಯು ನಾನಾರೂಪಗಳಿಂದ ಪ್ರವಹಿಸುತ್ತಿರುವುದು. ಅದು ಶುಭ–ಅಶುಭಗಳೆಂಬ ಅಲೆಗಳನ್ನು ಎಸೆಯುತ್ತಲೇ ಇರುವುದು..

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
“ ಪಾವನಬೋಧನ ” ಎಂಬ ಹತ್ತೊಂಬತ್ತನೆಯ ಸರ್ಗವು.

ವಿಂಶಃ ಸರ್ಗಃ

ಪುಣ್ಯ ಉವಾಚ:—

ಕಃ ಪಿತಾ ಕಿಂಚ ವಾ ಮಿತ್ರಂ ಕಾ ಮಾತಾ ಕೇಚ ಬಾಂಧವಾಃ ।
ಸ್ವಬುದ್ಧ್ಯೈಲವಾವಧೂಯಂತೇ ವಾತ್ಯಯಾ ಜನಪಾಂಸವಃ ॥ ೧ ॥

ಬಂಧು ಮಿತ್ರ ಸುತ ಸ್ನೇಹ ದ್ವೇಷ ಮೋಹ ದಶಾಮಯಃ ।
ಸ್ವಸಂಜ್ಞಾಮಾತ್ರಕೇಣೈವ ಪ್ರಪಂಚೋಽಯಂ ವಿತನ್ಯತೇ ॥ ೨ ॥

ಇಪ್ಪತ್ತನೆಯ ಸರ್ಗವು

ಪುಣ್ಯನು ಹೇಳಿದನು :—

೧. ತಂದೆ ಯಾರು ? ಗೆಳೆಯನಾರು ? ತಾಯಿ ಯಾರು ? ನೆಂಟರು ಯಾರು ? (ಇದನ್ನೆಲ್ಲ ವಿಚಾರಮಾಡಿದರೆ) ವಿವೇಕವು (ತಲೆದೋರುವುದು. ಆ ವಿವೇಕವೆಂಬ) ಬಿರುಗಾಳಿಯು ಈ ಬಂಧುಬಳಗಗಳೆಂಬ ಧೂಳಿಗಳನ್ನು ಹಾರಿಸುವುದು.

೨. ಈ ಪ್ರಪಂಚವು ಬಂಧು, ಮಿತ್ರ, ಸುತ, ಇವರುಗಳ ಮೇಲಿನ ಸ್ನೇಹ, ದ್ವೇಷ, ಮೋಹ, ಇವುಗಳಿಂದ ತುಂಬಿರುವುದು. ಇಂತಹ ಪ್ರಪಂಚವು ನಾವು ನಾವು ಕಲ್ಪಿಸಿಕೊಳ್ಳುವ ಸಂಜ್ಞೆಗಳಿಂದಲೇ ಹೀಗೆ ವಿಸ್ತೃತವಾಗಿರುವುದು.

ಬಂಧುತ್ವೇ ಭಾವಿತೋ ಬಂಧುಃ ಪರತ್ವೇ ಭಾವಿತಃ ಪರಃ ।
ವಿಷಾಮೃತದಶೇವೇಹ ಸ್ಥಿತಿರ್ಭಾವನಿಬಂಧನೀ ॥ ೩ ॥

ಏಕತ್ವೇ ವಿದ್ಯಮಾನಸ್ಯ ಸರ್ವಗಸ್ಯ ಕಿಲಾತ್ಮನಃ ।
ಅಯಂ ಬಂಧುಃ ಪರಶ್ಚಾಯಮಿತ್ಯಸೌ ಕಲನಾ ಕುತಃ ॥ ೪ ॥

ರಕ್ತಮಾಂಸಾಸ್ಥಿಸಂಘಾತಾದ್ದೇಹಾದೇವಾಸ್ಥಿಪಂಜರಾತ್ ।
ಕೋಽಹಂ ಸ್ಯಾಮಿತಿ ಚಿತ್ತೇನ ಸ್ವಯಂ ಪುತ್ರ ವಿಚಾರಯ ॥ ೫ ॥

ದೃಷ್ಟ್ಯಾ ತು ಪಾರಮಾರ್ಥಿಕ್ಯಾ ನ ಕಶ್ಚಿತ್ತ್ವಂ ನ ವಾಸ್ಮ್ಯಹಂ ।
ಮಿಥ್ಯಾಜ್ಞಾನಮಿದಂ ಪುಣ್ಯಃ ಪಾವನಶ್ಚೇತಿ ವಲ್ಗತಿ ॥ ೬ ॥

---

೩. ಈ ಪ್ರಪಂಚದಲ್ಲಿ ವಿಷ (ದುಃಖ) ಅಮೃತ (ಸುಖ) ಭಾವನೆಗಳು ನಮ್ಮ ನಮ್ಮ ಮನಸ್ಸಿನಿಂದಲೇ ಕಲ್ಪಿತವಾದವು. (ವಿಷಕ್ರಿಮಿಗಳಿಗೆ ವಿಷವು ಆಹಾರವಾಗಿರುವದರಿಂದ ಅಮೃತವಾಗಿದ್ದರೂ ಅದೇ ವಿಷವು ಇತರರಿಗೆ ವಿಷವೇ ಆಗುವುದು.) ಹಾಗೆಯೇ, ಬಂಧುವೆಂದು ಭಾವಿಸಿದರೆ ಬಂಧುವಾಗುವನು. ಬೇರೆಯವನು ಎಂದುಕೊಂಡರೆ ಬೇರೆಯವನೇ ಆಗುವನು. ಅದರಿಂದ ಶತ್ರುಮಿತ್ರಭಾವವು ಅವರವರ ಭಾವನೆಗೆ ಅನುಸಾರವಾಗಿರುವುದು.

೪. ಒಂದೇ ಒಂದಾಗಿ ಎಲ್ಲೆಲ್ಲಿಯೂ ತಾನೇ ತಾನಾಗಿ ತುಂಬಿರುವ ಆತ್ಮನಿಗೆ ಇವನು ಬಂಧು, ಇವನು ಬಂಧುವಲ್ಲ, ಎಂಬ ಕಲ್ಪನೆಯು ಎಲ್ಲಿಯದು ?

೫. ರಕ್ತ, ಮಾಂಸ, ಅಸ್ಥಿಗಳ ಸಂಘವಾಗಿರುವ ಈ ದೇಹಕ್ಕಿಂತ ಬೇರೆಯಾದ 'ನಾನು' ಎಂಬುದು ಯಾವುದಾದರೂ ಉಂಟೆ? ಎಂಬುದನ್ನು ಮೊದಲು ನೀನೇ ನಿನ್ನ ಚಿತ್ತದಲ್ಲಿಯೇ ವಿಚಾರ ಮಾಡಿ ನೋಡು.

೬. ಪರಮಾರ್ಥ ದೃಷ್ಟಿಯಿಂದ ವಿಚಾರಮಾಡಿ ನೋಡಿದತೆ, ನೀನೂ ಇಲ್ಲ, ನಾನೂ ಇಲ್ಲ. ಪುಣ್ಯನೆಂಬ ನಾನು, ಪಾವನನೆಂಬ ನೀನು, ಇಬ್ಬರೂ ಇರುವೆವೆಂಬ ಮಿಥ್ಯಾಜ್ಞಾನವು ಕುಣಿಯುತ್ತಿರುವುದು.

ಕಸ್ತೇ ಪಿತಾ ಕಶ್ಚ ಸುಹೃತ್ಕಾ ಮಾತಾ ಕಶ್ಚ ವಾ ಪರಃ ।
ಸ್ವಸ್ಯಾನಂತವಿಲಾಸಸ್ಯ ಕಿಮಸ್ವಂ ಕಿಂ ಸ್ವಮುಚ್ಯತಾಂ ॥ ೭ ॥

ಅಪಿ ಚೇತ್ತ್ವಂ ತದನ್ಯೇಷು ಯಾತೇಷು ಬಹುಜನ್ಮಸು ।
ಯೇ ಬಂಧವೋ ಯೇ ವಿಭವಾಃ ಕಿಂ ತಾನಪಿ ನ ಶೋಚಸಿ ॥ ೮ ॥

ಬಭೂವುಸ್ತೇ ಸುಪುಷ್ಪಾಸು ಸ್ಥಲೀಷು ಮೃಗಯೋನಿಷು ।
ಬಹವೋ ಬಂಧವೋ ಮಾರ್ಗಾಸ್ತಾನ್ಕಥಂ ನಾನುಶೋಚಸಿ ॥ ೯ ॥

ಬಭೂವುಸ್ತೇ ಸಪದ್ಮಾಸು ತಟೀಷ್ವಂಭೋಜಿನೀಷು ತೇ ।
ಹಂಸಸ್ಯ ಬಂಧವೋ ಹಂಸಾಸ್ತಾನ್ಕಥಂ ನಾನುಶೋಚಸಿ ॥ ೧೦ ॥

---

೭. ನಿನ್ನ ತಂದೆ ಯಾರು ? ಮಿತ್ರನಾರು ? ತಾಯಿ ಯಾರು ? ಅನ್ಯರು ಯಾರು ? ಕೊನೆಯಿಲ್ಲದ ಆಟವಾಡುತ್ತಿರುವ ಚಿದಾಕಾಶಕ್ಕೆ ತನ್ನದು ಎನ್ನುವುದು ಯಾವುದು ? ತನ್ನದಲ್ಲದುದು ಯಾವುದು ?

೮. ನಾನು ಎನ್ನುವುದು ಒಂದು ಪ್ರತ್ಯೇಕವಾಗಿ ಉಂಟೇ ಉಂಟು ಎನ್ನುವುದಾದರೆ, ಇದುವರೆಗೂ ಕಳೆದುಹೋಗಿರುವ ಅನೇಕಾನೇಕ ಜನ್ಮಗಳಲ್ಲಿ ಯಾರು ಯಾರು ಬಂಧುಗಳಾಗಿದ್ದರೋ, ಯಾವ ಯಾವ ವಿಭವಗಳಿದ್ದು ಕಳೆದುಹೋದುವೋ ಅವರನ್ನೂ ಅವುಗಳನ್ನೂ ಕುರಿತು ಏಕೆ ಶೋಕಿಸುವುದಿಲ್ಲ ?

೯. (ನಿನ್ನ ಹಿಂದಿನ ಜನ್ಮಗಳನ್ನು ಕೇಳು) ಪುಷ್ಪಭರಿತವಾಗಿದ್ದ ಅರಣ್ಯಗಳಲ್ಲಿ ಎಷ್ಟೋ ಸಲ ಮೃಗವಾಗಿ ಜನಿಸಿದ್ದೆ. ಆಗ ನಿನಗೆ ಎಷ್ಟೋ ಮಂದಿ ಬಂಧುಗಳಾಗಿದ್ದರಲ್ಲ ! ಅವರನ್ನೆಲ್ಲ ಕುರಿತೇಕೆ ದುಃಖಿಸುವುದಿಲ್ಲ ?

೧೦. ತಾವರೆಗಳು ತುಂಬಿದ್ದ ನದಿಗಳಲ್ಲಿಯೂ ಸರೋವರಗಳಲ್ಲಿಯೂ ಹಂಸವಾಗಿದ್ದೆ. ಆಗ ನಿನಗೆ ಎಷ್ಟೋ ಜನ ಹಂಸಗಳು ಬಂಧುಗಳಾಗಿದ್ದರು. ಅವರನ್ನೆಲ್ಲ ಕುರಿತೇಕೆ ಅಳುವುದಿಲ್ಲ ?

ಬಭೂವುಸ್ತೇಽಲಮನ್ಯತ್ರ ಚಿತ್ರಾಸು ವನರಾಜಿಸು |
ಬಹವೋ ಬಂಧವೋ ವೃಕ್ಷಾಸ್ತಾನ್ಕಥಂ ನಾನುಶೋಚಸಿ || ೧೧ ||

ಬಭೂವುಸ್ತೇ ಮಹೋಗ್ರೇಷು ಶಿಖರೇಷು ಮಹೀಭೃತಾಂ |
ಬಹವೋ ಬಾಂಧವಾಃ ಸಿಂಹಾಸ್ತಾನ್ಕಥಂ ನಾನುಶೋಚಸಿ || ೧೨ ||

ಬಭೂವುಸ್ತೇ ಸ್ರವಂತೀಷು ಸರಃಸ್ವಂಭೋಜಿನೀಷು ಚ |
ಬಹವೋ ಬಂಧವೋ ಮತ್ಸ್ಯಾಸ್ತಾನ್ಕಥಂ ನಾನುಶೋಚಸಿ || ೧೩ ||

ಬಭೂವಿಥ ದಶಾರ್ಣೇಷು ಕಪಿಲೋ ವನವಾನರಃ |
ರಾಜಪುತ್ರಸ್ತುಷಾರೇಷು ಪುಂಡ್ರೇಷು ವನವಾಯಸಃ || ೧೪ ||

---

೧೧. ಚಿತ್ರವಿಚಿತ್ರಗಳಾದ ಅರಣ್ಯಗಳಲ್ಲಿ ನೀನು ಮರವಾಗಿದ್ದಾಗ ನಿನಗೆ ಎಷ್ಟೋ ಮರಗಳು ಬಂಧುಗಳಾಗಿದ್ದರು. ಅವುಗಳನ್ನೆಲ್ಲ ಕುರಿತೇಕೆ ಅಳುವುದಿಲ್ಲ?

೧೨. ಭಯಂಕರವಾದ ಪರ್ವತಶಿಖರಗಳಲ್ಲಿ ಸಿಂಹವಾಗಿದ್ದ ನಿನಗೆ, ಎಷ್ಟೋ ಸಿಂಹಬಂಧುಗಳು ಇದ್ದರಲ್ಲ! ಅವರನ್ನೆಲ್ಲ ಕುರಿತೇಕೆ ನೀನು ಅಳುವುದಿಲ್ಲ?

೧೩. ನದಿಗಳಲ್ಲಿಯೂ ಸರೋವರಗಳಲ್ಲಿಯೂ ಕಮಲದ ಕೊಳಗಳಲ್ಲಿಯೂ ನೀನು ಮೀನಾಗಿದ್ದಾಗ, ನಿನಗೆ ಎಷ್ಟೋ ಮಂದಿ ಮತ್ಸ್ಯಗಳು ಬಂಧುಗಳಾಗಿದ್ದರು. ಅವರನ್ನೆಲ್ಲ ಕುರಿತು ನೀನೇಕೆ ಅಳುವುದಿಲ್ಲ?

೧೪. ದಶಾರ್ಣವೆಂಬ ದೇಶದಲ್ಲಿ ನೀನು ಕರಿಯಬಣ್ಣದ ಕಾಡುಕಪಿಯಾಗಿದ್ದೆ. ತುಷಾರದೇಶದಲ್ಲಿ ರಾಜಪುತ್ರನಾಗಿದ್ದೆ. ಪುಂಡ್ರದೇಶದಲ್ಲಿ ಕಾಡುಕಾಗೆಯಾಗಿದ್ದೆ.

ಹೈಹಯೇಷು ಚ ಮಾತಂಗಸ್ತ್ರಿಗರ್ತೇಷು ಚ ಗರ್ದಭಃ ।
ಶಾಲ್ವೇಷು ಸರಮಾಪುತ್ರಃ ಪತತ್ರೀ ಸರಲದ್ರುಮೇ ॥ ೧೫ ॥

ವಿಂಧ್ಯಾದ್ರೌ ಪಿಪ್ಪಲೋ ಭೂತ್ವಾ ಘುಣೋ ಭೂತ್ವಾ ಮಹಾವಟೇ ।
ಮಂದರೇ ಕುಕ್ಕುಟೋ ಭೂತ್ವಾ ವಿಪ್ರೋ ಜಾತೋಽಪಿ ಕಂದರೇ ॥ ೧೬ ॥

ಕೋಸಲೇಷು ದ್ವಿಜೋ ಭೂತ್ವಾ ಭೂತ್ವಾ ವಂಗೇಷು ತಿತ್ತಿರಿಃ ।
ಅಶ್ವೋ ಭೂತ್ವಾ ತುಷಾರೇಷು ಜಾತಸ್ತ್ವಂ ಬ್ರಹ್ಮಣೋಽಧ್ವರೇ ॥ ೧೭ ॥

ಯಃ ಕೀಟಸ್ತಾಲಕಂದಾಂತರ್ಮಶಕೋ ಯ ಉದುಂಬರೇ ।
ಯಃ ಪ್ರಾಗ್ಬಕೋ ವಿಂಧ್ಯವನೇ ಸ ತ್ವಂ ಪುತ್ರ ಮಮಾನುಜಃ ॥ ೧೮ ॥

---

೧೫. ಹೈಹಯ ದೇಶದಲ್ಲಿ ಆನೆಯಾಗಿದ್ದೆ. ತ್ರಿಗರ್ತ ದೇಶದಲ್ಲಿ ಕತ್ತೆಯಾಗಿದ್ದೆ. ಸಾಲ್ವದೇಶದಲ್ಲಿ ನಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದೆ. ಸರಳದ್ರುಮದಲ್ಲಿ ಪಕ್ಷಿಯಾಗಿದ್ದೆ.

೧೬. ವಿಂಧ್ಯಪರ್ವತದ ತಪ್ಪಲಲ್ಲಿ ಅರಳಿಯ ಮರವಾಗಿದ್ದೆ. ಮಹಾವಟದಲ್ಲಿ ಮರವನ್ನು ಕೊರೆಯುವ ಹುಳುವಾಗಿದ್ದೆ. ಮಂದರ ಪರ್ವತದಲ್ಲಿ ಕುಕ್ಕುಟವಾಗಿದ್ದು ಅದೇ ಪರ್ವತದ ಕಂದರದಲ್ಲಿ ಬ್ರಾಹ್ಮಣನಾಗಿದ್ದೆ.

೧೭. ಕೋಸಲದೇಶದಲ್ಲಿ ಬ್ರಾಹ್ಮಣನಾಗಿದ್ದೆ. ವಂಗದೇಶದಲ್ಲಿ ತಿತ್ತಿರಿ ಪಕ್ಷಿಯಾದೆ. ಪುಷ್ಕರದೇಶದಲ್ಲಿ ಕುದುರೆಯಾಗಿದ್ದು ಚತುರ್ಮುಖಬ್ರಹ್ಮನು ಮಾಡಿದ ಅಶ್ವಮೇಧದಲ್ಲಿ ನೀನು ಪಶುವಾಗಿದ್ದೆ.

೧೮. ಹಿಂದೆ ತಾಲವೃಕ್ಷದ ಬುಡದಲ್ಲಿ ಹುಳುವಾಗಿದ್ದು, ಅತ್ತಿಯ ಮರದಲ್ಲಿ ಸೊಳ್ಳೆಯಾಗಿದ್ದು, ವಿಂಧ್ಯವನದಲ್ಲಿ ಬಕವಾಗಿದ್ದವನು, ಈಗ ನನ್ನ ತಮ್ಮನಾಗಿ ಹುಟ್ಟಿರುವೆ.

ಹಿಮವತ್ಕಂದರೇ ಭೂರ್ಜತನುತ್ವಗ್ಗ್ರಂಥಿಕೋಟರೇ ।
ಪಿಪೀಲಿಕೋ ಯಃ ಷಣ್ಮಾಸಾ೯ ಸೋಽಯಂ ತ್ವಮನುಜೋ ಮಮ ॥ ೧೯ ॥

ಸ್ಥಿತಃ ಸೀಮಾಂತಕುಗ್ರಾಮಗೋಮಯೇ ಯಶ್ಚ ವೃಶ್ಚಿಕಃ ।
ಸಾರ್ಧಸಂವತ್ಸರಂ ಸಾಧೋ ಸೋಽಯಂ ತ್ವಮನುಜೋ ಮಮ ॥ ೨೦ ॥

ಪುಲಿಂದೀಸ್ತನಪೀಠೇಷು ನಿಲೀನಂ ಯೇನ ಕಾನನೇ ।
ಷಟ್ಪದೇನೇವ ಪದ್ಮೇಷು ಸೋಽಯಂ ತ್ವಮನುಜೋ ಮಮ ॥ ೨೧ ॥

ಏತಾಸ್ವನ್ಯಾಸು ಬಹ್ವೀಷು ಜನಯೋನಿಷು ಪುತ್ರಕ ।
ಜಾತೋಽಸಿ ಜಂಬೂದ್ವೀಪೇಽಸ್ಮಿನ್ಪುರಾ ಶತಸಹಸ್ರಶಃ ॥ ೨೨ ॥

---

೧೯. ಹಿಂದೆ ಹಿಮವತ್ಪರ್ವತದ ತಪ್ಪಲಿನಲ್ಲಿ ಭೂರ್ಜವೃಕ್ಷದ ತೊಗಟೆಯ ಗಂಟಿನೊಳಗೆ ಇರುವೆಯಾಗಿ ಆರು ತಿಂಗಳು ಇದ್ದವನೇ ಈಗ ನನ್ನ ತಮ್ಮನಾಗಿ ಹುಟ್ಟಿರುವೆ.

೨೦. ಈ ದೇಶದ ಗಡಿಯಲ್ಲಿರುವ ಒಂದು ಕುಗ್ರಾಮದಲ್ಲಿ ಸಗಣಿಯ ಗುಂಡಿಯೊಳಗೆ ಚೇಳಾಗಿ ಆರು ತಿಂಗಳಿದ್ದ ನೀನೇ, ಎಲೆ ಸಾಧುವೆ, ಇಂದು ನನ್ನ ತಮ್ಮನಾಗಿರುವೆ.

೨೧. ಕಮಲದಲ್ಲಿ ಅಡಗಿದ ತುಂಬಿಯಂತೆ, ಅರಣ್ಯದ ವ್ಯಾಧಸ್ತ್ರೀಯ ಸ್ತನಮಂಡಲದಲ್ಲಿ ಅಡಗಿಕೊಂಡು ಇದ್ದ ನೀನೇ ಇಂದು ನನ್ನ ತಮ್ಮನಾಗಿರುವೆ.

೨೨. ಹೀಗೆಯೇ, ವತ್ಸ, ನೀನು ಈ ಜಂಬೂದ್ವೀಪದಲ್ಲಿ ಎಷ್ಟೋ ಸಲ ಮನುಷ್ಯ ಜನ್ಮಗಳನ್ನೂ ಇತರ ಜನ್ಮಗಳನ್ನೂ ಎತ್ತಿರುವೆ.

ಇತ್ಥಂ ತವಾತ್ಮನಶ್ಚೈವ ಪ್ರಾಕ್ತನಂ ವಾಸನಾಕ್ರಮಂ ।
ಪಶ್ಯಾಮಿ ಸೂಕ್ಷ್ಮಯಾ ಬುದ್ಧ್ಯಾ ಸಮ್ಯಗ್ದರ್ಶನಶುದ್ಧಯಾ ॥ ೨೩ ॥

ಮಮಾಪಿ ಬಹ್ವ್ಯೋ ಬಹುಧಾ ಯೋನಯೋ ಮೋಹಮಂಥರಾಃ ।
ಸಮತೀತಾಃ ಸ್ಮರಾಮ್ಯದ್ಯ ತಾ ಜ್ಞಾನೋದಿತಯಾ ದೃಶಾ ॥ ೨೪ ॥

ತ್ರಿಗರ್ತೇಷು ಶುಕೋ ಭೂತ್ವಾ ಭೇಕೋ ಭೂತ್ವಾ ಸರಿತ್ತಟೇ ।
ವನೇಷು ಲಾವಕೋ ಭೂತ್ವಾ ಜಾತೋಽಹಮಿಹ ಕಾನನೇ ॥ ೨೫ ॥

ಭುಕ್ತ್ವಾ ಪುಲಿಂದತಾಂ ವಿಂಧ್ಯೇ ಕೃತ್ವಾ ವಂಗೇಷು ವೃಕ್ಷತಾಂ ।
ಉಷ್ಟ್ರತ್ವಮಪಿ ವಿಂಧ್ಯಾದ್ರೌ ಜಾತೋಽಹಮಿಹ ಕಾನನೇ ॥ ೨೬ ॥

---

೨೩. ಹೀಗೆ ನಿನಗೂ ನನಗೂ ಹಿಂದೆ ಆಗಿದ್ದ ಜನ್ಮಗಳನ್ನೆಲ್ಲ ಈಗ ಸೂಕ್ಷ್ಮವಾಗಿ ಸಮ್ಯಗ್ದರ್ಶನದಿಂದ ಶುದ್ಧವಾಗಿರುವ ಬುದ್ಧಿಯಿಂದ ನೋಡುತ್ತಿರುವೆನು.

೨೪. (ನಿನ್ನ ಹಾಗೆಯೇ) ನನಗೂ ಅಜ್ಞಾನಪೂರ್ಣವಾದ ಅನೇಕಾನೇಕ ಜನ್ಮಗಳು ಆಗಿರುವುವು. ಕಳೆದುಹೋದ ಅವೆಲ್ಲ ಜ್ಞಾನದೃಷ್ಟಿಗೆ ಇಂದು ಕಾಣಿಸುತ್ತಿರುವುವು.

೨೫. ತ್ರಿಗರ್ತದೇಶದಲ್ಲಿ ಗಿಣಿಯಾಗಿಯೂ ಒಂದು ನದಿಯ ತೀರದಲ್ಲಿ ಕಪ್ಪೆಯಾಗಿಯೂ ವನದಲ್ಲಿ ಲಾವುಗನ ಹಕ್ಕಿಯಾಗಿಯೂ ಇದ್ದು ಈ ಕಾಡಿನಲ್ಲಿ ಹುಟ್ಟಿದೆನು.

೨೬. ವಿಂಧ್ಯಾರಣ್ಯದಲ್ಲಿ ಪುಳಿಂದನಾಗಿದ್ದು, ವಂಗದೇಶದಲ್ಲಿ ಮರವಾಗಿದ್ದು, ಮತ್ತೆ ವಿಂಧ್ಯಾರಣ್ಯದಲ್ಲಿಯೇ ಒಂಟೆಯಾಗಿದ್ದು ಈ ಕಾಡಿನಲ್ಲಿ ಹುಟ್ಟಿದೆನು.

ಯಶ್ಚಾತಕೋ ಹಿಮಗಿರೌ ಯೋ ರಾಜಾ ಪೌಂಡ್ರಮಂಡಲೇ ।
ವ್ಯಾಘ್ರೋ ಯಃ ಸಹ್ಯಕುಂಜೇಷು ಸ ಏವಾಽಹಂ ತವಾಗ್ರಜಃ ॥ ೨೭ ॥

ಯೋ ಗೃಧ್ರೋ ದಶವರ್ಷಾಣಿ ಯೋ ಗ್ರಾಹೋ ಮಾಸಪಂಚಕಂ ।
ಯಃ ಸಮಾನಾಂ ಶತಂ ಸಿಂಹಃ ಸಏವೇಹ ತವಾಗ್ರಜಃ ॥ ೨೮ ॥

ಆಂಧ್ರಗ್ರಾಮಚಕೋರೇಣ ತುಷಾರನೃಪರಾಜಿನಾ ।
ಶ್ರೀಶೈಲಾಚಾರ್ಯಪುತ್ರೇಣ ಮಯೇದಂ ಕಥ್ಯತೇ ತವ ॥ ೨೯ ॥

ಸರ್ವೇ ವಿವಿಧಸಂಸಾರಾ ವಿವಿಧಾಚಾರಚೇಷ್ಟಿತಾಃ ।
ವಿಲಾಸಾ ಜನ್ಮನೋ ಭ್ರಾಂತೇಃ ಸ್ಮರ್ಯಂತೇ ಪ್ರಾಕ್ತನಾ ಮಯಾ ॥ ೩೦ ॥

---

೨೭. ಹಿಮವತ್ಪರ್ವತದಲ್ಲಿ ಚಾತಕಪಕ್ಷಿಯಾಗಿದ್ದು, ಪೌಂಡ್ರದೇಶದಲ್ಲಿ ರಾಜನಾಗಿದ್ದು, ಸಹ್ಯಪರ್ವತಶ್ರೇಣಿಯಲ್ಲಿ ಹುಲಿಯಾಗಿದ್ದು, ಈಗ ನಿಮ್ಮ ಅಣ್ಣನಾಗಿರುವೆನು.

೨೮. ಹದ್ದಾಗಿ ಹತ್ತು ವರ್ಷವಿದ್ದು, ಮೊಸಳೆಯಾಗಿ ಐದು ತಿಂಗಳಿದ್ದು, ನೂರು ವರ್ಷ ಸಿಂಹವಾಗಿದ್ದು, ಈಗ ನಿಮ್ಮ ಅಣ್ಣನಾಗಿರುವೆನು.

೨೯. ಆಂಧ್ರದೇಶದ ಗ್ರಾಮವೊಂದರಲ್ಲಿ ಚಕೋರದ ಹಕ್ಕಿಯಾಗಿದ್ದು, ಹಿಮವತ್ಪರ್ವತದಲ್ಲಿ ಸಾಮಂತನಾಗಿದ್ದು, ಶ್ರೀಶೈಲದಲ್ಲಿ ಆಚಾರ್ಯಪುತ್ರನಾಗಿದ್ದು (ಈಗ ನಿಮ್ಮ ಅಣ್ಣನಾಗಿ) ಇದೆಲ್ಲವನ್ನೂ ಹೇಳುತ್ತಿರುವೆನು.

೩೦. ಭ್ರಾಂತಿಯ ವಿಲಾಸಗಳಾದ ನಾನಾವಿಧ ಆಚಾರಚೇಷ್ಟೆಗಳಿಂದ ಕೂಡಿದ ಬಹುವಿಧ ಸಂಸಾರಗಳನ್ನು ಕಳೆದಿರುವೆನು ಅವೆಲ್ಲವೂ ಈಗ ನೆನಪಿಗೆ ಬರುತ್ತಿರುವುವು.

ಏವಂ ಸ್ಥಿತೇ ಜಗಜ್ಜಾತಾ ಬಾಂಧವಾಃ ಶತಶೋ ಗತಾಃ ।
ಪಿತರೋ ಮಾತರಶ್ಚೈವ ಭ್ರಾತರಃ ಸುಹೃದಸ್ತಥಾ ॥ ೩೧ ॥

ಕಾಂಸ್ತಾನ್ಸಮನುಶೋಚಾವೋ ನ ಶೋಚಾವಶ್ಚ ಕಾನಪಿ ।
ಬಂಧೂನಿಹಾತಿಶೋಚಾವ ಈದೃಶ್ಯೇವ ಜಗದ್ಗತಿಃ ॥ ೩೨ ॥

ಅನಂತಾಃ ಪಿತರೋ ಯಾಂತಿ ಯಾಂತ್ಯನಂತಾಶ್ಚ ಮಾತರಃ ।
ಇಹ ಸಂಸಾರಿಣಾಂ ಪುಂಸಾಂ ವನಪಾದಪಪರ್ಣವತ್ ॥ ೩೩ ॥

ಕಿಂ ಪ್ರಮಾಣಮತಃ ಪುತ್ರ ದುಃಖಸ್ಯಾತ್ರ ಸುಖಸ್ಯ ಚ ।
ತಸ್ಮಾತ್ಸರ್ವಂ ಪರಿತ್ಯಜ್ಯ ತಿಷ್ಠಾವಃ ಸ್ವಚ್ಛತಾಂ ಗತೌ ॥ ೩೪ ॥

---

೩೧. ಹೀಗಿರುವುದರಿಂದ, ಈ ಜಗತ್ತಿನಲ್ಲಿ ಎಷ್ಟೋ ಲೆಕ್ಕವಿಲ್ಲದಷ್ಟು ಮಂದಿ ಬಾಂಧವರು, ತಂದೆಗಳು, ತಾಯಂದಿರು, ಒಡಹುಟ್ಟಿಗಳು, ಸ್ನೇಹಿತರು, ಎಷ್ಟೆಷ್ಟೋ ಸಲ ಆಗಿಹೋದರು.

೩೨. ಹೀಗೆ ಹಿಂದೆ ಕಳೆದುಹೋಗಿರುವ ಬಂಧುಗಳಲ್ಲಿ ಯಾರನ್ನು ತಾನೇ ಕುರಿತು ಅಳುತ್ತಿರುವೆವು? ಯಾರನ್ನೂ ಕುರಿತು ಅಳದೆಯೂ ಇರುವುದಂತೂ ಉಂಟಾದರೂ ಈಗಿನ ಜನ್ಮದ ಬಂಧುಗಳನ್ನು ಮಾತ್ರ ಕುರಿತು ಅಳುತ್ತಿರುವೆವಲ್ಲ! ಜಗತ್ತಿನ ಸ್ಥಿತಿಯೇ ಇಂತಹುದು!

೩೩. ತಂದೆಗಳು ಲೆಕ್ಕವಿಲ್ಲದಷ್ಟು ಆಗಿಹೋದರು. ತಾಯಿಯರೂ ಲೆಕ್ಕವಿಲ್ಲದಷ್ಟು ಆಗಿಹೋದರು. ಕಾಡಿನಲ್ಲಿರುವ ಮರಕ್ಕೆ ಎಲೆಗಳು ಆಗಿ ಆಗಿ ಹೋಗುವಂತೆ ಸಂಸಾರದಲ್ಲಿರುವ ಪ್ರತಿಯೊಬ್ಬನಿಗೂ ಹೀಗೆಯೇ ಆಗಿರುವುದು.

(ಇಲ್ಲಿ ಗ್ರಂಥಪಾತವಾಗಿದೆಯೋ ?)

೩೪. ಅದರಿಂದ, ತಮ್ಮ, ಸುಖ, ದುಃಖ, ಎಂಬುದನ್ನು ಯಾವ ಪ್ರಮಾಣದಿಂದ ನಿರ್ಧರಿಸುವುದು ? ಅದರಿಂದ, ಎಲ್ಲವನ್ನೂ ಬಿಟ್ಟು, ನಿರ್ಮಲಹೃದಯರಾಗಿ ಇರೋಣ.

ಪ್ರಪಂಚಭಾವನಾಂ ತ್ಯಕ್ತ್ವಾ ಮನಸ್ಯಹಮಿತಿಸ್ಥಿತಾಂ |
ತಾಂ ಗತಿಂ ಗಚ್ಛ ಭದ್ರಂ ತೇ ಯಾಂ ಯಾಂತಿ ಗತಿಕೋವಿದಾಃ || ೩೫ ||

ಇಹಾಜವಂ ಜವೀಭಾವಂ ಪತನೋತ್ಪಾತನಾತ್ಮಕಂ |
ನ ಚ ಶೋಚಂತಿ ಸುಧಿಯಶ್ಚಿರಂ ವಲ್ಗಂತಿ ಕೇವಲಂ || ೩೬ ||

ಭಾವಾಭಾವವಿನಿರ್ಮುಕ್ತಂ ಜರಾಮರಣವರ್ಜಿತಂ |
ಸಂಸ್ಮರಾತ್ಮಾನಮವ್ಯಗ್ರೋ ಮಾ ವಿಮೂಢಮನಾ ಭವ || ೩೭ ||

ನ ತೇ ದುಃಖಂ ನ ತೇ ಜನ್ಮ ನ ತೇ ಮಾತಾ ನ ತೇ ಪಿತಾ |
ಆತ್ಮೈವಾಸಿ ನ ಸದ್ಬುದ್ಧೇ ತ್ವಮನ್ಯಃ ಕಶ್ಚಿದೇವ ಹಿ || ೩೮ ||

---

೩೫. ಮನಸ್ಸಿನಲ್ಲಿ "ಅಹಂ" ರೂಪವಾಗಿ ಕುಳಿತಿರುವ ಈ ಪ್ರಪಂಚ ಭಾವನೆಯನ್ನು ದೂರಮಾಡಿ, ಆತ್ಮಜ್ಞಾನಸಂಪನ್ನರಾದವರು ಪಡೆಯುವ ಉತ್ತಮ ಗತಿಯನ್ನು ಹೊಂದೋಣ.

೩೬. ಈ ಪ್ರಪಂಚವೆಂಬುದೇ ಹೀಗೆ ನೀಚ–ಉಚ್ಚಭಾವ ಪ್ರಾಪ್ತಿರೂಪವಾದುದು. ಒಂದೇ ಸಮನಾಗಿ ನಿಲ್ಲದೆ ಮೇಲೆ ಕೆಳಗೆ ಆಗುತ್ತ ಹೋಗುತ್ತಲೇ ಇರುವುದು. ಇದನ್ನು ಕುರಿತು ಪ್ರಾಜ್ಞರಾದವರು ಶೋಕಪಡುವುದಿಲ್ಲ. ಅಷ್ಟೇ ಅಲ್ಲ. ಈ ಜಗತ್ಸ್ವಭಾವವೇ ಹೀಗೆಂಬುದನ್ನು ಮನಗಂಡು, ಅದರಲ್ಲಿ ವಿಹರಿಸುತ್ತಿರುವರು.

೩೭. ಅದರಿಂದ, ಭಾವ–ಅಭಾವಗಳೆಂಬುದರ ಆಚೆಯಿರುವ, ಜರಾಮರಣಗಳಿಗೆ ಸಿಕ್ಕದೆ ಇರುವ, ಆತ್ಮನನ್ನು ಕುರಿತು ಒಂದೇ ಮನಸ್ಸಿನಿಂದ ಧ್ಯಾನಿಸು. ಮನಸ್ಸನ್ನು ಮೋಹದಲ್ಲಿ ಕೆಡವಬೇಡ.

೩೮. ಎಲೆ ಸದ್ಬುದ್ಧಿಯೇ, ನಿನಗೆ ದುಃಖವಿಲ್ಲ: ನಿನಗೆ ಜನ್ಮವಿಲ್ಲ: ನಿನಗೆ ತಂದೆಯಿಲ್ಲ: ತಾಯಿಯಿಲ್ಲ: ನೀನು ಆತ್ಮನೇ ಆತ್ಮನು. ಆತ್ಮನಲ್ಲದ್ದು ಇನ್ನೇನೂ ಅಲ್ಲ.

ಆಸ್ಯಾಂ ಸಂಸಾರಯಾತ್ರಾಯಾಂ ನಾನಾಭಿನಯದಾಯಿನಃ |
ಅಜ್ಞಾ ಏವ ನರಾಃ ಸಾಧು ರಸಭಾವಸಮನ್ವಿತಾಃ　|| ೩೯ ||

ಮಧ್ಯಸ್ಥದೃಷ್ಟಯಃ ಸ್ವಸ್ಥಾ ಯಥಾಪ್ರಾಪ್ತಾರ್ಥದರ್ಶಿನಃ |
ತಜ್ಜ್ಞಾಸ್ತು ಪ್ರೇಕ್ಷಕಾ ಏವ ಸಾಕ್ಷಿಧರ್ಮೇ ವ್ಯವಸ್ಥಿತಾಃ　|| ೪೦ ||

ಕರ್ತಾರೋಽಪಿ ನ ಕರ್ತಾರೋ ಯಥಾ ದೀಪಾ ನಿಶಾಗಮೇ |
ಆಲೋಕಕರ್ಮಣಾಮೇವಂ ತಜ್ಜ್ಞಾ ಲೋಕಸ್ಥಿತಾವಿಹ　|| ೪೧ ||

ಪ್ರತಿಬಿಂಬೇ ನ ದೃಶ್ಯಂತೇ ಸ್ವಾತ್ಮಬಿಂಬಗತೈರಪಿ |
ಯಥಾ ದರ್ಪಣರತ್ನಾದ್ಯಾಸ್ತಥಾ ಕಾರ್ಯೇ ಮಹಾಧಿಯಃ　|| ೪೨ ||

---

೩೯. ಈ ಸಂಸಾರಯಾತ್ರೆಯಲ್ಲಿ ಇದೇ ಉತ್ತಮವಾದುದೆಂಬ ನಂಬಿಕೆಯಿಂದ ನಾನಾವಿಧವಾದ ಕ್ರೀಡೆಗಳನ್ನು ಆಡುತ್ತ ಇರುವವರು ಅಜ್ಞರೆಂದು ತಿಳಿ.

೪೦. ಯಾವುದೊಂದು ಹೆಚ್ಚುಕಡಿಮೆಗಳಿಗೂ ವಶವಾಗದೆ, ಆತ್ಮನಲ್ಲಿಯೇ ನಿಂತು, ಬಂದುದನ್ನು ಅನುಭವಿಸುತ್ತ, ಸಾಕ್ಷಿಮಾತ್ರದಿಂದ ನಿಂತಿರುವವರು ಯಾರೋ ಅವರು ಬ್ರಹ್ಮಜ್ಞರು.

೪೧. ಅಂತಹವರು ರಾತ್ರಿಕಾಲದಲ್ಲಿ ದೀಪಗಳು ಬೆಳಕು ಕೊಟ್ಟರೂ ಯಾವ ಕರ್ಮಕ್ಕೂ ಕರ್ತೃವಾಗಿಲ್ಲದಿರುವಂತೆ, ಲೋಕಸ್ಥಿತಿಯಲ್ಲಿದ್ದರೂ, ಕಾರ್ಯಕರ್ತರಾಗಿರುವಂತೆ ಇತರರಿಗೆ ಕಂಡರೂ, ತಾವು ಮಾತ್ರ ಕರ್ತೃತ್ವವಿಲ್ಲದವರಾಗಿಯೇ ಇರುವರು.

೪೨. ಕನ್ನಡಿಯಲ್ಲಿ ರತ್ನಾದಿಗಳು ಪ್ರತಿಬಿಂಬಿಸಿದಾಗ, ರತ್ನಾದಿಗಳ ಆಕಾರವು ಕಾಣುತ್ತಿದ್ದರೂ ಆ ಪ್ರತಿಬಿಂಬಗಳಲ್ಲಿ (ಬಿಂಬಭೂತವಾದ) ರತ್ನಾದಿಗಳ ಗುಣಾದಿಗಳು ಹೇಗೆ ಇರುವುದಿಲ್ಲವೋ ಹಾಗೆಯೇ ತತ್ವಜ್ಞರಾದವರು ದೇಹಧಾರಿಗಳಾಗಿದ್ದರೂ (ಅಜ್ಞರಲ್ಲಿ ಕಾಣುವ) ಕರ್ತೃತ್ವಾದಿಗಳು ಅವರಲ್ಲಿ ಇರುವುದಿಲ್ಲ.

ಸರ್ವೈಷಣಾಮಯಕಲಂಕವಿವರ್ಜಿತೇನ
ಸ್ವಸ್ಥಾತ್ಮಭಾವಕಲಿತೇನ ಹೃದಬ್ಜಮಧ್ಯೇ ||
ಪುತ್ರಾತ್ಮನಾತ್ಮನಿ ಮಹಾಮುನಿನಾಮುನೈವ
ಸಂತ್ಯಜ್ಯ ಸಂಭ್ರಮಮಲಂ ಪರಿತೋಷಮೇಹಿ || ೪೩ ||

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
" ಪಾವನಬೋಧೋ " ನಾಮ ವಿಂಶಃ ಸರ್ಗಃ

---

೪೩. ಬೇಕು ಎನ್ನುವ ಆಶೆಯು ಯಾವ ರೀತಿಯಲ್ಲೂ ಸೋಂಕದೆ ನಿರ್ಮಲವಾಗಿರುವ ಆತ್ಮವು ಇನ್ನು ಯಾವ ಭಾವಗಳಿಗೂ ಒಳಪಡದೆ ಶುದ್ಧವಾಗಿ ಹೃದಯಮಧ್ಯದಲ್ಲಿ ಪ್ರತಿಷ್ಠಿತವಾಗಿರುವುದು. ಯಾವಾಗಲೂ ಮಹಾಮೌನದಲ್ಲಿರುವುದು. ವತ್ಸ, ಇಂತಹ ಆತ್ಮನಿಂದಲೇ, ಆತ್ಮನಲ್ಲಿಯೇ ಸಂಸಾರಸಂಭ್ರಮವನ್ನೆಲ್ಲ ತ್ಯಾಗಮಾಡಿ ಶಾಶ್ವತವಾದ ಸಂತೋಷವನ್ನು ಪಡೆ.

(ವಿಜ್ಞಾನಮಯಕೋಶವನ್ನು ದಾಟಿ ಆನಂದಮಯದಲ್ಲಿ ಇರುವ ಆರೂಢರಿಗೆ ದೇಶಕಾಲ ಪರಿಚ್ಛೇದವು ಕಳೆದುಹೋಗಿ ಜನ್ಮಾಂತರಗಳೆಲ್ಲವೂ ಕರತಲಾಮಲಕದಂತೆ ಗೋಚರಿಸುವುವು ಎಂದು ತಜ್ಜ್ಞರ ಮತವು.)

ಇಂತಿದು ಆರ್ಷವೂ ವಾಲ್ಮೀಕಿಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
" ಪಾವನಬೋಧ " ಎಂಬ ಇಪ್ಪತ್ತನೆಯ ಸರ್ಗವು.

ಏಕವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:

ಏವಂ ಪ್ರಬೋಧಿತಸ್ತೇನ ತದಾ ಪುಣ್ಯೇನ ಪಾವನಃ ।
ಪ್ರಬೋಧಮಾಪ ಪ್ರಾಕಾಶ್ಯಂ ಪ್ರಭಾತ ಇವ ಭೂತಲಂ ॥ ೧ ॥

ಉಭಾವಪಿ ತತಃ ಸಿದ್ಧೌ ಜ್ಞಾನವಿಜ್ಞಾನಪಾರಗೌ ।
ವಿಜೇರತುರ್ವನೇ ತಸ್ಮಿನ್ಯಾವದಿಚ್ಛಮನಿಂದಿತೌ ॥ ೨ ॥

ತತಃ ಕದಾಚಿತ್ಕಾಲೇನ ನಿರ್ವಾಣಪದಮಾಗತೌ ।
ತೌ ವಿದೇಹೌ ಗತಸ್ನೇಹೌ ದೀಪಾವಿವ ಶಮಂ ಗತೌ ॥ ॥ ೩ ॥

ಇಪ್ಪತ್ತೊಂದನೆಯ ಸರ್ಗವು

ಶ್ರೀ ವಸಿಷ್ಠನು ಹೇಳಿದನು :—

೧. ಹೀಗೆ ಪುಣ್ಯನು ತನ್ನನ್ನು ಕುರಿತು ಬೋಧಮಾಡಲು ಪಾವನನು ಭೂಮಿಯು ಪ್ರಭಾತಕಾಲದಲ್ಲಿ ಪ್ರಕಾಶವನ್ನು ಪಡೆಯುವಂತೆ, ಪ್ರಬೋಧವನ್ನು ಹೊಂದಿದನು.

೨. ಆಗ ಇಬ್ಬರೂ ಸಿದ್ಧಿ ಹೊಂದಿದರು. ಇಬ್ಬರೂ ಜ್ಞಾನ, ವಿಜ್ಞಾನ ಪಾರಂಗತರಾದರು: ಯಾವುದೊಂದು ಕುಂದೂ ಇಲ್ಲದವರಾಗಿ, ತಮಗೆ ಸಾಕೆನ್ನಿಸುವವರೆಗೂ ಆ ವನದಲ್ಲಿಯೇ ಸಂಚರಿಸಿಕೊಂಡಿದ್ದರು.

೩. ದೀಪವಿಲ್ಲದ ದೀಪಗಳೆರಡು ಶಾಂತವಾಗುವಂತೆ, ಅವರು ಕಾಲಾಂತರದಲ್ಲಿ, ದೇಹತ್ಯಾಗಮಾಡಿ ನಿರ್ವಾಣಪದವಿ (ಮುಕ್ತಿ) ಯನ್ನು ಪಡೆದರು.

ಏವಂ ಪ್ರಾಗ್ಭುಕ್ತದೇಹಾನಾಮನಂತಾ ಜನಬಂಧುತಾ ।
ಆಃ ಕೈಃ ಕಿಂ ಗೃಹ್ಯತೇ ತಾಭ್ಯಃ ಕಿಂ ವಾ ಸಂತ್ಯಜ್ಯತೇಽನಘ ॥ ೪ ॥

ತಸ್ಮಾದಾಸಾಮನಂತಾನಾಂ ತೃಷ್ಣಾನಾಂ ರಘುನಂದನ ।
ಉಪಾಯಸ್ತ್ಯಾಗ ಏವೈಕೋ ನ ನಾಮ ಪರಿಪಾಲನಂ ॥ ೫ ॥

ಚಿಂತನೇನೈಧತೇ ಚಿಂತಾ ತ್ವಿಂಧನೇನೇವ ಪಾವಕಃ ।
ನಶ್ಯತ್ಯಚಿಂತನೇನೈವ ವಿನೇಂಧನಮಿವಾನಲಃ ॥ ೬ ॥

ಧ್ಯೇಯತ್ಯಾಗರಥಾರೂಢಃ ಕರುಣೋದಾರಯಾದೃಶಾ ।
ಲೋಕಮಾಲೋಕಯರ್ದೀನಮಾತಿಷ್ಠೋತ್ತಿಷ್ಠ ರಾಘವ ॥ ೭ ॥

---

೪. ಅದರಿಂದ, ಎಲೆ ಪಾಪರಹಿತನೆ, ಹೀಗೆ ಅನೇಕಾನೇಕ ಜನ್ಮಗಳನ್ನು ಎತ್ತಿದವರಿಗೆ, ಅಸಂಖ್ಯವಾಗಿ ಬಂಧು ಸಮೂಹಗಳು ಉಂಟಾಗಿಯೇ ಇರುವುವು. ಅವರಿಂದ ಯಾರು ತಾನೇ ಏನು ಪಡೆಯಬಹುದು ? ಅವರಿಗಾಗಿ ಏನು ಕೊಡಬಹುದು ?

೫. ಅದರಿಂದ, ರಘುನಂದನ, ಅನಂತಾನಂತವಾದ ತೃಷ್ಣೆಗಳಿಗೆಲ್ಲ ಸಮಾಧಾನವು ತ್ಯಾಗವೊಂದೇ ! ಅವುಗಳನ್ನು ಗೌರವಿಸುವುದಲ್ಲ.
(ಹೋಲಿಸಿ :—ನಜಾತು ಕಾಮಃ ಕಾಮೇನ ಉಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯಏವಾಭಿವರ್ಧತೇ ॥
—ಯಯಾತಿ-ಮಹಾಭಾರತ)

೬. ಕಟ್ಟಿಗೆಗಳನ್ನು ಹಾಕುತ್ತಿದ್ದರೆ ಬೆಳೆಯುತ್ತಲೇ ಹೋಗುವ ಬೆಂಕಿಯಂತೆ, ವಿಷಯಗಳನ್ನು ಚಿಂತಿಸುವುದರಿಂದ ಚಿಂತೆಯು ಅಭಿವೃದ್ಧಿಯಾಗುತ್ತಲೇ ಇರುವುದು. ಕಟ್ಟಿಗೆಯಿಲ್ಲದಾಗ ಬೆಂಕಿಯು ಶಾಂತವಾಗುವಂತೆ ವಿಷಯಚಿಂತನವಿಲ್ಲದಾಗ ಚಿಂತೆಯು ತಾನೂ ಶಾಂತವಾಗುವುದು.

೭. ರಾಘವ, ಧ್ಯೇಯತ್ಯಾಗ ಎಂಬ ರಥವನ್ನು ಹತ್ತಿಕೊಂಡು, (ದುಃಖ) ದೀನವಾದ ಈ ಲೋಕವನ್ನು ಕೃಪಾಪೂರ್ಣವಾದ ದೃಷ್ಟಿಯಿಂದ ನೋಡುತ್ತ, ಪ್ರಕೃತ ವ್ಯವಹಾರವನ್ನು ಮಾಡುವುದಕ್ಕೆ ಏಳು.

ಏಷಾ ಬ್ರಾಹ್ಮೀಸ್ಥಿತಿಃ ಸ್ವಚ್ಛಾ ನಿಷ್ಕಾಮಾ ವಿಗತಾಮಯ ।
ಏನಾಂ ಪ್ರಾಪ್ಯ ಮಹಾಬಾಹೋ ವಿಮೂಢ್ಯೋऽಪಿ ನ ಮುಹ್ಯತಿ　　　　॥ ೮ ॥

ಏಕಂ ವಿವೇಕಂ ಸುಹೃದಮೇಕಾಂ ಪ್ರೌಢಸಖೀಂ ಧಿಯಂ ।
ಆದಾಯ ವಿಹರನ್ನೇವಂ ಸಂಕಟೇಷು ನ ಮುಹ್ಯತಿ　　　　॥ ೯ ॥

ವಿನಿವಾರಿತಸರ್ವಾರ್ಥಾದಪಹಸ್ತಿತಬಾಂಧವಾತ್ ।
ನ ಸ್ವಧೈರ್ಯಾದೃತೇ ಕಶ್ಚಿದಭ್ಯುದ್ಧರತಿ ಸಂಕಟಾತ್　　　　॥ ೧೦ ॥

---

೮. ಇದೇ ಬ್ರಾಹ್ಮೀಸ್ಥಿತಿಯೆಂಬುದು. ಇದು ಶುದ್ಧವಾದುದು. ಕಾಮರಹಿತವಾದುದು. ಯಾವುದೊಂದು ಆತಂಕವೂ ಇಲ್ಲದುದು. ಇದನ್ನು ಪಡೆದವನು ಯಾರೂ ಎಂತಹ ವಿಮೂಢನಾದರೂ ಮೋಹಗೊಳ್ಳುವುದಿಲ್ಲ.

ಹೋಲಿಸಿ:—ಏಷಾ ಬ್ರಾಹ್ಮೀಸ್ಥಿತಿಃ ಪಾರ್ಥ ।
　　ನೈನಾಂ ಪ್ರಾಪ್ಯ ವಿಮುಹ್ಯತಿ ॥　ಗೀತಾ–ಅ. ೨, ಶ್ಲೋ. ೭೨.
ಏಷಾ ಯಥೋಕ್ತಾ ಬ್ರಾಹ್ಮೀ ಬ್ರಹ್ಮಣೀಭವಾ ಇಯಂ ಸ್ಥಿತಿಃ ।
ಸರ್ವಂ ಕರ್ಮ ಸಂನ್ಯಸ್ಯ ಬ್ರಹ್ಮಸ್ವರೂಪೇಣೈವ ಅವಸ್ಥಾನಂ ಇತ್ಯೇತತ್ ।
ನ ಏನಾಂ ಸ್ಥಿತಿಂ ಪ್ರಾಪ್ಯ ಲಬ್ಧ್ವಾ ನ ವಿಮುಹ್ಯತಿ ನ ಮೋಹಂ ಪ್ರಾಪ್ನೋತಿ
—ಶಾಂಕರಭಾಷ್ಯ

ಬ್ರಹ್ಮಸೂತ್ರ–ಅಧ್ಯಾಯ ೪, ಪಾದ ೪ ರಲ್ಲಿರುವ ಬ್ರಾಹ್ಮಾಧಿಕರಣವನ್ನು ಇಲ್ಲಿ ಚಿಂತಿಸಿ.

ಈ ಶ್ಲೋಕವೂ ಈ ಸರ್ಗದಲ್ಲಿರುವ ೧೧, ೧೫ನೆಯ ಶ್ಲೋಕಗಳೂ ಮಹೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ ಬಂದಿವೆ.

೯. ವಿವೇಕವೆಂಬ ಮಿತ್ರನೊಬ್ಬನು, ಬುದ್ಧಿಯೆಂಬ ಪ್ರೌಢ ಸಖಿಯೊಬ್ಬಳು ಇವರಿಬ್ಬರನ್ನೂ ಸಂಪಾದಿಸಿಕೊ. ಸಾಕು. ಈ ಪ್ರಾಪಂಚಿಕ ವ್ಯವಹಾರವೆಲ್ಲವೂ ವಿಹಾರವಾಗುವುದು. ಎಂಥಹ ಸಂಕಟ ಬಂದರೂ ನಿನಗೆ ಅದರಿಂದ ಮೋಹ ವುಂಟಾಗುವುದಿಲ್ಲ.

೧೦. ಸರ್ವಾರ್ಥಗಳನ್ನೂ ನಿವಾರಿಸಿಕೊಂಡು, ಸಮಸ್ತ ಬಾಂಧವರನ್ನೂ ದೂರಮಾಡಿ, ಧೈರ್ಯವಾಗಿ ಇರುವುದು ಒಂದೇ ದಾರಿ ಅಲ್ಲದೆ, ಸಂಕಟದಿಂದ, ಪಾರಾಗಲು ಬೇರೆ ದಾರಿಯೇ ಇಲ್ಲ.

ವೈರಾಗ್ಯೇಣಾಥ ಶಾಸ್ತ್ರೇಣ ಮಹತ್ವಾದಿಗುಣೈರಪಿ ।
ಯತ್ನೇನಾಪದ್ವಿಘಾತಾರ್ಥಂ ಸ್ವಯಮೇವೋನ್ನಯೇನ್ಮನಃ ॥ ೧೧ ॥

ನ ತತ್ ತ್ರಿಭುವನೈಶ್ವರ್ಯಾನ್ನ ಕೋಶಾದ್ರತ್ನಧಾರಿಣಃ ।
ಫಲಮಾಸಾದ್ಯತೇ ಚಿತ್ತಾದ್ಯನ್ಮಹತ್ವೋಪಬೃಂಹಿತಾತ್ ॥ ೧೨ ॥

ತದೇತಸ್ಮಿಂಜಗತ್ಕುಕ್ಷೌ ಪಾತೋತ್ಪತನದೋಲನೈಃ ।
ಪತಂತಿ ಪುರುಷಾ ಯೇ ನ ಮನಸ್ತೇಷಾಂ ಗತಜ್ವರಂ ॥ ೧೩ ॥

---

೧೧. ವೈರಾಗ್ಯದಿಂದಲೂ, ಶಾಸ್ತ್ರದಿಂದಲೂ, ಮಹತ್ವಾದಿ ಗುಣಗಳನ್ನು ಕಲಿಯುವುದರಿಂದಲೂ, ಯತ್ನಪೂರ್ವಕವಾಗಿ, ಆಪತ್ತನ್ನು ಕಳೆದುಕೊಳ್ಳುವುದಕ್ಕೋಸ್ಕರವಾಗಿ, ತಾನೇ ತನ್ನ ಮನವನ್ನು ಉದ್ಧರಿಸಿಕೊಳ್ಳಬೇಕು.

೧೨. ತ್ರಿಭುವನಗಳಲ್ಲಿಯೂ ಇರುವ ಐಶ್ವರ್ಯವನ್ನೆಲ್ಲ ಸಂಪಾದಿಸಿದರೂ, ರತ್ನಪರಿಪೂರ್ಣವಾದ ಭಂಡಾರವನ್ನೇ ಪಡೆದರೂ, ಮನಸ್ಸನ್ನು ಉಪಬೃಂಹಣ ಮಾಡಿ ಬ್ರಹ್ಮತ್ವವನ್ನು ಪಡೆಯುವುದರಷ್ಟು ಉತ್ತಮ ಫಲವು ಸಿಕ್ಕುವುದಿಲ್ಲ.

(ಸೂಕ್ಷ್ಮವಾಗಿ ಅತೀಂದ್ರಿಯ ಗೋಚರವಾಗಿರುವ ದೇವತಾದಿಗಳನ್ನು ಧ್ಯಾನಬಲದಿಂದ ಬೆಳೆಸಿ ನಮಗೆ ಬೇಕಾದ ಕೆಲಸವನ್ನು ಮಾಡಿಕೊಡುವಷ್ಟು ದೊಡ್ಡದು ಮಾಡಿಕೊಳ್ಳುವುದು ಉಪಬೃಂಹಣ)

(ಇದುವರೆಗೂ ಮನೋನಾಶವನ್ನು ಪ್ರಧಾನವಾಗಿ ಹೇಳಿದೆ. ಉಪಬೃಂಹಣ ಮಾಡಿ ಮನಸ್ಸು ಬ್ರಹ್ಮಧ್ಯಾನಪರಾಯಣವಾಗುವಂತೆ ಮಾಡುವುದು ಎಂದರೆ, ತನ್ನಿಷ್ಟ, ತತ್ಪರಾಯಣ ಆಗುವಂತೆ ಮಾಡುವುದೂ ಮನೋನಾಶದ ಉಪಾಯಗಳಲ್ಲಿ ಒಂದು. ಆದರೆ, ವಸಿಷ್ಠರು ಇದನ್ನು ಅಷ್ಟಾಗಿ ಹೇಳಿದಂತಿಲ್ಲ.)

೧೩. ಆದರಿಂದ ಯಾರು ಈ ಜಗತ್ಕುಕ್ಷಿಯಲ್ಲಿ ಸಿಕ್ಕಿಕೊಂಡು, ಬೀಳುವುದು, ಏಳುವುದು, ಒದ್ದಾಡುವುದು, ಇವುಗಳು ಇಲ್ಲದಿರುವರೋ ಅವರ ಮನಸ್ಸು ವಿಗತ ಜ್ವರವಾದುದು.

ಪೂರ್ಣೇ ಮನಸಿ ಸಂಪೂರ್ಣಂ ಜಗತ್ಸರ್ವಂ ಸುಧಾದ್ರವೈಃ |
ಉಪಾನದ್ಗೂಢಪಾದಸ್ಯ ನನು ಚರ್ಮಾಸ್ತೃತೈವ ಭೂಃ ‖ ೧೪ ‖

ವೈರಾಗ್ಯಾತ್ಪೂರ್ಣತಾಮೇತಿ ಮನೋನಾಶಾವಶಾನುಗಂ |
ಆಶಯಾ ರಿಕ್ತತಾಮೇತಿ ಶರದೇವ ಸರೋಽಮಲಂ ‖ ೧೫ ‖

ಹೃದಯಂ ಶೂನ್ಯತಾಮೇತಿ ಪ್ರಕಟೀಕೃತ ಕೋಟರಂ |
ಅಗಸ್ತಿಪೀತಾರ್ಣವವದಾಶಾವಿವಶಚೇತಸಾಂ ‖ ೧೬ ‖

---

೧೪. ಮನಸ್ಸು ಪೂರ್ಣವಾಗಿದ್ದರೆ ಜಗತ್ತೆಲ್ಲವೂ ಅಮೃತಪೂರ್ಣವಾಗಿ ತೋರುವುದು. ಪಾದರಕ್ಷೆಯನ್ನು ತೊಟ್ಟಿರುವ ಪಾದಕ್ಕೆ ಜಗತ್ತೆಲ್ಲವೂ ಚರ್ಮದಿಂದ ಮುಚ್ಚಿದಂತೆಯೇ ಇರುವುದಲ್ಲವೆ?

೧೫. ಈ ಮನಸ್ಸು ಪೂರ್ಣವಾಗುವುದು ವೈರಾಗ್ಯದಿಂದಲೇ ಹೊರತು ಆಶೆಯ ವಶವಾಗಿ ತೊಳಲುವುದರಿಂದಲ್ಲ. ಶರತ್ಕಾಲದಲ್ಲಿ ನಿರ್ಮಲವಾಗಿದ್ದ ಸರೋವರವೂ ಬಗ್ಗಡವಾಗುವಂತೆ, ಆಶೆಯಿಂದ ಮನಸ್ಸು ಕಲುಷಿತವಾಗುವುದು.

(ಈ ಶ್ಲೋಕವು ಮಹೋಪನಿಷತ್ತಿನಲ್ಲಿ "ವೈರಾಗ್ಯಾತ್ ಪೂರ್ಣತಾಮೇತಿ ಮನೋನಾಶವಶಾನುಗಂ | ಆಶಯಾ ರಕ್ತತಾಮೇತಿ ಶರದೀವ ಸರೋಽಮಲಂ" ಎಂದಿದೆ. ವೈಭವದಲ್ಲಿ "ಆಶಾಯಾ ರಿಕ್ತತಾಮೇತಿ ಶರದೇವ ಸರೋಽಮಲಂ" ಎಂದು ಮೂಲವನ್ನು ಬರೆದು "ಆಶಾ ಪರವಶವಾದರೋ ಶರತ್ಕಾಲದಲ್ಲಿ ಸರಸ್ಸಿನ ಕೊಳೆಯು ಶೂನ್ಯವಾಗುವಂತೆ ಪುರುಷನ ಮನಸ್ಸು ವಿಶುಷ್ಕವಾಗುವುದು" ಎಂದು ಅರ್ಥ ಬರೆಯಲಾಗಿದೆ.)

೧೬. ಆಶೆಯಿಂದ ವಿವಶವಾಗಿರುವವರ ಮನಸ್ಸು, ಅಗಸ್ತ್ಯರು ಕುಡಿದ ಸಮುದ್ರದಂತೆ, ತನ್ನ ಟೊಳ್ಳುಗಳನ್ನೆಲ್ಲ ತೋರಿಸಿಕೊಂಡು ಕೇವಲ ಶೂನ್ಯವಾಗಿ ಕಾಣುವುದು.

ಯಸ್ಯ ಚಿತ್ತತರೌ ಸ್ಫಾರೇ ತೃಷ್ಣಾ ಚಪಲ ಮರ್ಕಟೀ ।
ನ ವಲ್ಗತಿ ಮಹತ್ತಸ್ಯ ರಾಜತೇ ಹೃದ್ವನಂ ತತಂ ॥ ೧೭ ॥

ಪದ್ಮಾಕ್ಷಕೋಶಂ ತ್ರಿಜಗದ್ಗೋಷ್ಪದಂ ಯೋಜನವ್ರಜಂ ।
ನಿಮೇಷಾರ್ಧಂ ಮಹಾಕಲ್ಪಃ ಸ್ಪೃಹಾರಹಿತಚೇತಸಾಂ ॥ ೧೮ ॥

ಶೀತತಾ ಸಾ ನ ಶೀತಾಂಶೋರ್ನಹಿಮಾಚಲಕಂದರೇ ।
ನ ರಂಭಾ ಚಂದನಾವಲ್ಯಾಂ ನಿಃಸ್ಪೃಹೇಷು ಮನಃಸು ಯಾ ॥ ೧೯ ॥

ನ ತಥಾ ಭಾತಿ ಪೂರ್ಣೇಂದುರ್ನ ಪೂರ್ಣಃ ಕ್ಷೀರಸಾಗರಃ ।
ನ ಲಕ್ಷ್ಮೀವದನಂ ಕಾಂತಂ ಸ್ಪೃಹಾಹೀನಂ ಯಥಾ ಮನಃ ॥ ೨೦ ॥

---

೧೭. ಯಾವ ಪುರುಷನ ಹೃದಯವೆಂಬ ವಿಶಾಲವೃಕ್ಷದಲ್ಲಿ ತೃಷ್ಣೆಯೆಂಬ ಹೆಣ್ಣು ಕಪಿಯು ಕುಣಿಯುವುದಿಲ್ಲವೋ ಆ ವೃಕ್ಷವು ವನದಂತೆ ವಿರಾಜಿಸುವುದು.

೧೮. ತೃಷ್ಣಾರಹಿತರಾದವರಿಗೆ ತ್ರಿಜಗತ್ತೂ ಒಂದು ತಾವರೆ ಮಣಿಯಷ್ಟು, ನೂರಾರು ಗಾವುದಗಳೂ ಒಂದು ಗೋಷ್ಪದದಷ್ಟು, ಮಹಾಕಲ್ಪವೂ ಒಂದು ನಿಮಿಷಾರ್ಧದಷ್ಟು.

೧೯. ನಿಸ್ಪೃಹವಾದ ಮನಸ್ಸಿನಲ್ಲಿ ಯಾವ ಶೀತತೆಯುಂಟೋ ಅದು ಚಂದ್ರನಲ್ಲಿಯಾಗಲಿ, ಹಿಮಾಚಲ ಕಂದರದಲ್ಲಿಯಾಗಲಿ, ಬಾಳೆಯ ಕಂಬ, ಚಂದನಗಳಲ್ಲಿಯಾಗಲಿ ಇರುವುದಿಲ್ಲ.

೨೦. ನಿಸ್ಪೃಹವಾದ ಮನಸ್ಸಿನ ಮುಂದೆ ಪೂರ್ಣಚಂದ್ರನ ಕಾಂತಿಯಿಲ್ಲ, ಕ್ಷೀರಸಾಗರದ ತುಂಬೂ ಇಲ್ಲ. ಲಕ್ಷ್ಮೀದೇವಿಯ ಮುಖದ ಸೌಭಾಗ್ಯವೂ ಇಲ್ಲ.

ಯಥಾಬ್ದಲೇಖಾ ಶಶಿನಂ ಸುಧಾಲೇಪಂ ಮಷೀ ಯಥಾ ।
ದೂಷಯತ್ಯೇವಮೇವಾಂತರ್ನರಮಾಶಾಪಿಶಾಚಿಕಾ ॥ ೨೧ ॥

ಆಶಾಖ್ಯಾಶ್ಚಿತ್ತವೃಕ್ಷಸ್ಯ ಶಾಖಾಃ ಸ್ಥಗಿತದಿಕ್ತಟಾಃ ।
ತಾಸು ಚ್ಛಿನ್ನಸ್ವರೂಪತ್ವಂ ಯಾತಿ ಚಿತ್ತಮಹಾದ್ರುಮಃ ॥ ೨೨ ॥

ಛಿನ್ನತೃಷ್ಣಾಮಹಾಶಾಖೇ ಚಿತ್ತಸ್ಥಾಣೌ ಸ್ಥಿತಿಂ ಗತೇ ।
ಏಕರೂಪತಯಾ ಧೈರ್ಯಂ ಪ್ರಯಾತಿ ಶತಶಾಖತಾಂ ॥ ೨೩ ॥

ಅನಸ್ತಮಿತಧೈರ್ಯೇಣ ತೇನ ಚಿತ್ತೇ ಕ್ಷಯಂ ಗತೇ ।
ತತ್ಪದಂ ಪ್ರಾಪ್ಯತೇ ರಾಮ ಯತ್ರ ನಾಶೋ ನ ವಿದ್ಯತೇ ॥ ೨೪ ॥

---

೨೧. ಚಂದ್ರನನ್ನು ಮೋಡಗಳೂ, ಗೋಡೆಗೆ ಬೋಳಿದ ಸುಣ್ಣವನ್ನು ಮಸಿಯೂ ಕೆಡಿಸುವಂತೆ, ಆಶೆಯೆಂಬ ಪಿಶಾಚಿಯು ಮನುಷ್ಯನನ್ನು ಮಲಿನ ಮಾಡುವುದು.

೨೨. ಚಿತ್ತವೆಂಬ ವೃಕ್ಷಕ್ಕೆ ಆಶೆಗಳೇ ಶಾಖೆಗಳು. ಇವು ದಿಕ್ಕುದಿಕ್ಕುಗಳನ್ನೆಲ್ಲ ತುಂಬಿರುವುವು. ಆ ಶಾಖೆಗಳನ್ನು ಕತ್ತರಿಸಿದರೆ ಆ ಗಿಡವೇ ಇಲ್ಲವಾಗುವುದು.

೨೩. ತೃಷ್ಣೆ ಎಂಬ ಕೊಂಬೆಗಳನ್ನು ಕಡಿದು ಚಿತ್ತವೃಕ್ಷವೊಂದೇ ಉಳಿಯುವಂತೆ ಮಾಡಿದರೆ, ಅದು ಏಕರೂಪವಾಗಿ ನಿಂತುದೇ ಆದರೆ, ಧೈರ್ಯವು ಶತಶಾಖವಾಗಿ ಹರಡುವುದು.

೨೪. ರಾಮ, ಯಾವನ ಹೃದಯದಲ್ಲಿ ಧೈರ್ಯವು ಕ್ಷಯವಾಗದೆ ಸ್ಥಿರವಾಗಿದ್ದು ಚಿತ್ತವು ಕ್ಷಯವಾಗುವುದೋ ಅವನು ಅಕ್ಷಯವಾದ ಪದವನ್ನು ಹೊಂದುವನು. ಅಲ್ಲಿ ನಾಶವೆಂಬುದೇ ಇಲ್ಲ.

ಏತಾಸಾಂ ಚಿತ್ತವೃತ್ತೀನಾಮಾಶಾನಾಮುತ್ತಮಾಶಯಃ ।
ನ ದದಾಸಿ ಪ್ರರೋಹಂ ಚೇತ್ತದ್ಭಯಂ ನಾಸ್ತಿ ರಾಘವ ॥ ೨೫ ॥

ಚಿತ್ತಂ ವೃತ್ತಿವಿಹೀನಂ ತೇ ಯದಾ ಯಾತಮಚಿತ್ತತಾಂ ।
ತದಾ ಮೋಕ್ಷಮಯೀಮಂತಃ ಸತ್ತಾಮಾಪ್ನೋಷಿ ತಾಂ ತತಾಂ ॥ ೨೬ ॥

ಚಿತ್ತಕೌಶಿಕಪಕ್ಷಿಣ್ಯಾ ತೃಷ್ಣಯಾ ಕ್ಷುಬ್ಧಯಾಂತರೇ ।
ಅಮಂಗಲಾನಿ ವಿಸ್ತಾರಮಲಮಾಯಾಂತಿ ರಾಘವ ॥ ೨೭ ॥

ಚಿಂತನಂ ವೃತ್ತಿರಿತ್ಯುಕ್ತಂ ವರ್ತತೇ ಚಿತ್ತಮಾಶಯಾ ।
ಚಿತ್ತವೃತ್ತಿಮತೋ ಹ್ಯಾಶಾಂ ತ್ಯಕ್ತ್ವಾ ನಿಶ್ಚಿತ್ತತಾಂ ವ್ರಜ ॥ ೨೮ ॥

---

೨೫. ರಾಘವ, ಅದರಿಂದ ನೀನು ಸ್ಥಿರ ಹೃದಯನಾಗಿ ಈ ಚಿತ್ತವೃತ್ತಿಗಳು ಚಿಗುರದಂತೆ ನೋಡಿಕೊಂಡೆಯಾದರೆ, ನಿನಗೆ (ಜನನ ಮರಣಾದಿ) ಭಯವೇ ಇರುವುದಿಲ್ಲ.

೨೬. ಯಾವಾಗ ನಿನ್ನ ಚಿತ್ತವು ವೃತ್ತಿವಿಹೀನವಾಗಿ ಅಚಿತ್ತತೆಯನ್ನು ಪಡೆಯುವುದೋ ಆಗ ಮೋಕ್ಷಮಯವಾದ ಪರಿಪೂರ್ಣವಾದ ಅಂತಸ್ಸತ್ತತೆಯನ್ನು ಪಡೆಯುವೆ.

೨೭. ರಾಘವ, ಚಿತ್ತವೆಂಬ ಗೂಡಿನ ಗೂಬೆಯಾದ ತೃಷ್ಣೆಯು ನಾನಾವಿಧವಾಗಿ ಚೇಷ್ಟೆಮಾಡುತ್ತಿದ್ದರೆ ಅಮಂಗಳಗಳೇ ಬೇಕಾದ ಹಾಗೆ ಬೆಳೆಯುವುವು.

೨೮. ವಿಷಯ ಚಿಂತನವು ಯಾವುದುಂಟೋ ಅದೇ ವೃತ್ತಿಯು. ಆದರಿಂದ ಚಿತ್ತವಿರುವುದು ಎಂದರೆ ಆಶೆಯಿರುವುದು ಎಂದು ಅರ್ಥವು. ವೃತ್ತಿಪೂರ್ಣವಾದ ಚಿತ್ತದ ಸ್ವರೂಪವಾಗಿರುವ ಆಶೆಯನ್ನು ಬಿಟ್ಟು ನಿಶ್ಚಿತ್ತನಾಗು.

ಯೋ ಯಯಾ ವರ್ತತೇ ವೃತ್ತ್ಯಾ ಸ ತಯೈವ ವಿನಾ ಕ್ಷಯೀ ।
ಅತಶ್ಚಿತ್ತೋಪಶಾಂತ್ಯರ್ಥಂ ತದ್ವೃತ್ತಿಂ ಕ್ಷಯಂ ನಯ ॥ ೨೯ ॥

ಪ್ರಶಮಿತಸಕಲೈಷಣೋ ಮಹಾತ್ಮನ್
ಭವ ಭವಬಂಧಮಪಾಸ್ಯ ಮುಕ್ತಚಿತ್ತಃ ॥
ಮನಸಿ ನಿಗಡರಜ್ಜವಃ ಕದಾಶಾಃ ।
ಪರಿಗಲಿತಾಸು ಚ ತಾಸು ಕೋ ನ ಮುಕ್ತಃ ॥ ೩೦ ॥

ಇತ್ಯಾರ್ಷೇ ಶ್ರೀ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮಪ್ರಕರಣೇ
"ತೃಷ್ಣಾವಿಚಿಕಿತ್ಸಾಯೋಗೋತ್ಪತ್ತಿಃ" ನಾಮ್ಯೈಕವಿಂಶಃ ಸರ್ಗಃ

---

೨೯. ಯಾರು ಯಾವ ವೃತ್ತಿಯನ್ನು ಆಶ್ರಯಿಸಿ ಇರುವರೋ ಆ ವೃತ್ತಿಯಿಲ್ಲದಿದ್ದರೆ ಅವರೂ ಇಲ್ಲದಂತೆಯೇ ಸರಿ. ಅದರಿಂದ, ಚಿತ್ತದ ಉಪಶಾಂತಿಯಾಗಲೆಂದು, ಆ ಚಿತ್ತದಲ್ಲಿ ಯಾವ ವೃತ್ತಿಯು ತಲೆದೋರಿದರೆ ಆ ವೃತ್ತಿಯನ್ನು ಶಾಂತಿ ಹೊಂದಿಸುವನಾಗು.

೩೦. ಎಲೆ ಮಹಾತ್ಮನೆ, ಮನಸ್ಸಿನಲ್ಲಿರುವ ಸರ್ವವಿಧವಾದ ಈಷಣಗಳನ್ನು ಬಿಟ್ಟು ಮುಕ್ತಚಿತ್ತನಾಗು. ಭವಬಂಧವನ್ನು ಬಿಡಿಸಿಕೊ. ಕೆಟ್ಟ ಆಶೆಗಳು ಮನಸ್ಸಿನಲ್ಲಿ ಸೇರಿಕೊಂಡು ಸಂಕಲೆಗಳಂತೆ ಅದನ್ನು ಹಿಡಿದಿರುವುವು. ಅವು ತಪ್ಪಿದರೆ ಯಾರು ತಾನೇ ಮುಕ್ತರಾಗುವುದಿಲ್ಲ?

ಇಂತಿದು ಆರ್ಷವೂ ವಾಲ್ಮೀಕಿಪ್ರೋಕ್ತವೂ ಆದ
ಶ್ರೀ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ
"ತೃಷ್ಣಾವಿಚಿಕಿತ್ಸಾಯೋಗೋತ್ಪತ್ತಿ" ಎಂಬ ಇಪ್ಪತ್ತೊಂದನೆಯ ಸರ್ಗವು.

ಮುದ್ರಕರು :
ಹೆಚ್. ವೆಂಕಟೇಶಯ್ಯ
ಶ್ರೀ ಶ್ರೀನಿವಾಸ ಪ್ರೆಸ್,
ಕಳಾಸಿಪಾಳ್ಯ, ಬೆಂಗಳೂರು ನಗರ.